ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಉತ್ತರ ಭಾರತದ ಇತಿಹಾಸ
# ಕಾನಿಷ್ಕ, ಸಮುದ್ರಗುಪ್ತ, ಅಶೋಕ,
# ಹರ್ಷವರ್ಧನ, ಕಾಳಿದಾಸ,
# ಆರ್ಯಭಟ,
# ವರಾಹ ಮೀಹಿರ

ಕೋರ್ಸ್ – 2

ಬ್ಲಾಕ್ – 6

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ) ಇತಿಹಾಸ
ಕೋರ್ಸ್ -2

ಬ್ಲಾಕ್
# 6

ಘಟಕ - 53
ಗುಪ್ತರ ಯುಗ - ರಾಜಕೀಯ ಇತಿಹಾಸ 1-16

ಘಟಕ - 54
ಗುಪ್ತರ ಕಾಲದಲ್ಲಿ ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು 17-32

ಘಟಕ - 55
ಗುಪ್ತರ ಕಾಲದ ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ 33-48

ಘಟಕ - 56
ಥಾನೇಶ್ವರದ ವರ್ಧನ ಸಂತತಿ - ಹರ್ಷವರ್ಧನ ಮತ್ತು ಅವನ ಕಾಲ 49-64

ಘಟಕ - 57
ಪ್ರಾಚೀನ ಭಾರತದಲ್ಲಿ ಶಿಕ್ಷಣ ಪದ್ಧತಿ -ಪ್ರಸಿದ್ಧ ವಿಶ್ವವಿದ್ಯಾನಿಲಯಗಳು 65-80

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

***ವಿಷಯ ಸಂಯೋಜಕರು***

## ಪಠ್ಯಕ್ರಮ ನಿರೂಪಕರು

**ಡಾ. ಮಹಾದೇವಿ ಎಂ.ಎ., ಪಿ.ಹೆಚ್.ಡಿ**
ಅಧ್ಯಾಪಕರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು

**ಘಟಕಗಳು 53,54,55,56 ಮತ್ತು 57**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

# ಕೋರ್ಸ್ - 2

# ಬ್ಲಾಕ್ - 6

## ಪೀಠಿಕೆ

ಪ್ರಿಯ ವಿದ್ಯಾರ್ಥಿಗಳೇ,

ಕೋರ್ಸ್ -2 ರ ಬ್ಲಾಕ್ -7, ಘಟಕ 53 ರಿಂದ 57 ರವರೆಗೆ ಒಟ್ಟು ಐದು ಘಟಕಗಳನ್ನು ಒಳಗೊಂಡಿದೆ. ಘಟಕ - 53 ರಿಂದ 55 ರವರೆಗೆ ಗುಪ್ತರ ಕಾಲಕ್ಕೆ ಸಂಬಂಧಿಸಿದುದಾಗಿದೆ. ಘಟಕ - 56 ಹರ್ಷವರ್ಧನನ ಆಳ್ವಿಕೆಯನ್ನು ಕುರಿತುದಾಗಿದೆ. ಘಟಕ - 57, ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸ ಕ್ರಮವನ್ನು ಒಳಗೊಂಡಿದೆ.

ಘಟಕ - 53 ರಲ್ಲಿ ಗುಪ್ತರ ರಾಜಕೀಯ ಇತಿಹಾಸ, ಸಮುದ್ರ ಗುಪ್ತ ಹಾಗೂ ವಿಕ್ರಮಾದಿತ್ಯನೆಂದು ಹೆಸರುವಾಸಿಯಾಗಿದ್ದ ಎರಡನೇ ಚಂದ್ರಗುಪ್ತನ ಪರಾಕ್ರಮಗಳು, ದಿಗ್ವಿಜಯಗಳು, ಅವರ ಆಳ್ವಿಕೆಯಲ್ಲಿ ಸ್ಥಾಪಿಸಿದ ಸ್ತಂಭಶಾಸನ, ಮುದ್ರಿಸಿದ ನಾಣ್ಯಗಳು ಹಾಗೂ ರಾಜಕೀಯ ರಂಗದಿಂದ ಗುಪ್ತರ ನಿರ್ಗಮನಕ್ಕೆ ಕಾರಣ ಇತ್ಯಾದಿಗಳ ಬಗೆಗೆ ವಿವರಣೆಗಳನ್ನು ಒಳಗೊಂಡಿದೆ.

ಘಟಕ - 54, ರಲ್ಲಿ ಗುಪ್ತರ ಆಳ್ವಿಕೆಯಲ್ಲಿ ಆಚರಣೆಗೆ ತರಲಾಗಿದ್ದ ಆಡಳಿತ ಪದ್ಧತಿ, ಅವರ ಕಾಲದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಮತ್ತು ಪರಿಸ್ಥಿತಿಯನ್ನು ಕುರಿತು ವಿವರಿಸಲಾಗಿದೆ.

ಘಟಕ -55 ರಲ್ಲಿ ಗುಪ್ತರ ಕಾಲದಲ್ಲಿ ಹಿಂದೂ ಧರ್ಮದ ಪುನರ್ಏಳಿಗೆ, ಬೌದ್ಧ ಮತ್ತು ಜೈನಧರ್ಮಗಳ ಪರಿಸ್ಥಿತಿ, ಗುಪ್ತರ ಕಾಲದಲ್ಲಿ ನಡೆದ ಸಾಹಿತ್ಯಾಭಿವೃದ್ಧಿ, ಶಿಕ್ಷಣದ ಬೆಳವಣಿಗೆ, ವಿಶ್ವವಿದ್ಯಾನಿಲಯಗಳ ಏಳಿಗೆ, ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗಳನ್ನು ಕುರಿತು ಚರ್ಚಿಸಲಾಗಿದೆ.

ಘಟಕ -56 ಪ್ರಾಚೀನ ಭಾರತದ ಕೊನೆಯ ಹಿಂದೂ ಸಾಮ್ರಾಜ್ಯವೆಂದು ಗುರುತಿಸಲ್ಪಟ್ಟಿರುವ ಥಾಣೇಶ್ವರದ ವರ್ಧನ ವಂಶದ ಏಳಿಗೆ, ಅದರ ಪ್ರಖ್ಯಾತ ದೊರೆ ಹರ್ಷವರ್ಧನನ ಸಿಂಹಾಸನರೋಹಣ, ಅವನ ಯುದ್ಧಗಳು, ಅವನ ಕಾಲದ ಧಾರ್ಮಿಕ ಪರಿಸ್ಥಿತಿ, ಬೌದ್ಧ ಧರ್ಮಕ್ಕೆ ಅವನ ಕೊಡುಗೆಗಳು, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು, ಸಾಹಿತ್ಯ ಮತ್ತು ಶಿಕ್ಷಣದ ಪ್ರಗತಿ ಇತ್ಯಾದಿಗಳ ಬಗೆಗೆ ವಿವರಣೆಗಳನ್ನೊಳಗೊಂಡಿದೆ.

ಘಟಕ-57, ವಿಶೇಷವಾಗಿದ್ದು ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸ ಪದ್ಧತಿಯನ್ನು ಕುರಿತುದಾಗಿದೆ. ಪ್ರಾಚೀನ ಭಾರತದಲ್ಲಿದ್ದ ಹಿಂದೂ ವಿದ್ಯಾಭ್ಯಾಸ ಪದ್ಧತಿ, ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡುತ್ತಿದ್ದ 'ಗುರು' ಗಳ ಪ್ರಾಮುಖ್ಯತೆ, ಬೌದ್ಧರ ಶಿಕ್ಷಣ ವ್ಯವಸ್ಥೆ, ಪ್ರಾಚೀನ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಮುಖ ವಿಶ್ವವಿದ್ಯಾನಿಲಯಗಳು, ನಳಂದ ವಿಶ್ವವಿದ್ಯಾನಿಲಯದ ಪ್ರಾಮುಖ್ಯತೆ, ಅಲ್ಲಿ ಬೋಧಿಸುತ್ತಿದ್ದ ವಿಷಯಗಳು, ನಳಂದದಲ್ಲಿದ್ದ ಅಧ್ಯಾಪಕ ವೃಂದ, ವಿದ್ಯಾರ್ಥಿಗಳ ನಡವಳಿಕೆ, ಗ್ರಂಥಾಲಯ, ನಳಂದದ ಅಭಿವೃದ್ಧಿಗೆ ಗುಪ್ತ ದೊರೆಗಳು, ಹರ್ಷವರ್ಧನ ಮತ್ತು ಇತರ ದಾನಿಗಳ ಕೊಡುಗೆಗಳು ಇತ್ಯಾದಿ ವಿವರಣೆಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಇವುಗಳೊಂದಿಗೆ ಇತರ ಕೆಲವು ಹೆಚ್ಚುವರಿ ಗ್ರಂಥಗಳನ್ನು ಅಭ್ಯಾಸಿಸಿ, ಪರೀಕ್ಷೆಯನ್ನು ಉತ್ತಮವಾಗಿ ಬರೆದು, ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರೆಂದು ಈ ಮೂಲಕ ನಿಮ್ಮನ್ನು ಹಾರೈಸುತ್ತೇನೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 53

# ಗುಪ್ತರ ಯುಗ - ರಾಜಕೀಯ ಇತಿಹಾಸ

*ರಚನೆ*


**53.0** ಉದ್ದೇಶ

**53.1** ಪೀಠಿಕೆ

**53.2** ಆಧಾರಗಳು

53.2.1 ಶಾಸನಗಳು

53.2.2 ನಾಣ್ಯಗಳು

53.2.3 ಸ್ಮಾರಕಗಳು ಮತ್ತು ಮುದ್ರಿಕೆಗಳು

53.2.4 ಸಾಹಿತ್ಯ ಆಧಾರಗಳು

**53.3** ಗುಪ್ತ ವಂಶದ ಮೂಲ ಮತ್ತು ಸ್ಥಾಪನೆ

**53.4** ಪ್ರಾರಂಭಿಕ ಗುಪ್ತ ದೊರೆಗಳು

53.4.1 ಶ್ರೀಗುಪ್ತ

53.4.2 ಘಟೋತ್ಕಚಗುಪ್ತ

**53.4.3** ಒಂದನೇ ಚಂದ್ರಗುಪ್ತ

**53.5** ಸಮುದ್ರಗುಪ್ತ

53.5.1 ಅಲಹಾಬಾದ್ ಸ್ತಂಭಶಾಸನ

53.5.2 ಸಮುದ್ರಗುಪ್ತನ ದಿಗ್ವಿಜಯಗಳು

53.5.3 ಅರಣ್ಯ ರಾಜ್ಯಗಳ ವಶ

53.5.4 ಗಡಿರಾಜ್ಯಗಳು ಮತ್ತು ವಿದೇಶಿ ರಾಜ್ಯಗಳು

53.5.5 ಸಮುದ್ರ ಗುಪ್ತನ ಸಾಮ್ರಾಜ್ಯ ವಿಸ್ತಾರ

**53.6** ಎರಡನೇ ಚಂದ್ರಗುಪ್ತ

**53.6.1** ಎರಡನೇ ಚಂದ್ರಗುಪ್ತನ ದಿಗ್ವಿಜಯಗಳು

**53.6.2** ಫಾಹಿಯಾನ

**53.7** ಕೊನೆಯ ಗುಪ್ತ ದೊರೆಗಳು

**53.8** ಗುಪ್ತ ಸಾಮ್ರಾಜ್ಯದ ಪತನ

**53.9** ಘಟಕದ ಸಾರಾಂಶ

**53.10** ಅಭ್ಯಾಸನೀಯ ಗ್ರಂಥಗಳು

## 53.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕೆಳಗಿನ ಈ ಅಂಶಗಳನ್ನು ತಿಳಿದುಕೊಳ್ಳಲು ನೀವು ಶಕ್ತರಾಗುವಿರಿ.

* ಗುಪ್ತರ ಸಾಮ್ರಾಜ್ಯ ಸ್ಥಾಪನೆಯ ಮೊದಲು ಭಾರತದಲ್ಲಿದ್ದ ರಾಜಕೀಯ ಪರಿಸ್ಥಿತಿಯನ್ನು ಗ್ರಹಿಸಲು
* ಗುಪ್ತ ಸಾಮ್ರಾಜ್ಯದ ಇತಿಹಾಸ ಅಧ್ಯಯನ ಮಾಡಲು ಇರುವ ಪ್ರಮುಖ ಆಧಾರಗಳನ್ನು ಅರಿಯಲು
* ಗುಪ್ತ ಸಾಮ್ರಾಜ್ಯ ಸ್ಥಾಪಕರ ಬಗೆಗೆ ವಿದ್ವಾಂಸರಲ್ಲಿರುವ ವಿವಿಧ ದೃಷ್ಟಿ ಕೋನಗಳನ್ನು ತುಲನೆ ಮಾಡಲು
* ಸಮುದ್ರ ಗುಪ್ತ ಮತ್ತು ಎರಡನೇ ಚಂದ್ರಗುಪ್ತರ ಸಾಧನೆಗಳನ್ನು ತಿಳಿಯಲು
* ಗುಪ್ತ ಸಾಮ್ರಾಜ್ಯದ ಅವನತಿಗೆ ಕಾರಣಗಳನ್ನು ಅರಿಯಲು ನೆರವಾಗುತ್ತದೆ.

## 53.1 ಪೀಠಿಕೆ

ಭಾರತದಲ್ಲಿ ಪ್ರಥಮವಾಗಿ ಸ್ಥಾಪಿತವಾಗಿದ್ದ ಮೌರ್ಯ ಸಾಮ್ರಾಜ್ಯ ಪತನವಾದ ನಂತರ, ಉತ್ತರ ಭಾರತದಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳು ಏಳಿಗೆ ಹೊಂದಿದ್ದು, ಅವುಗಳ ನಡುವೆ ಏರ್ಪಟ್ಟಿದ್ದ ಅನೈಕ್ಯ ರಾಜಕೀಯ ಘಟನೆಗಳು ವಿದೇಶಿ ಧಾಳಿಗಳಿಗೆ ಕಾರಣ ಆಗಿತ್ತು. ಇದರಿಂದ ಭಾರತದ ರಾಜಕೀಯದಲ್ಲಿ ಒಂದು ಬಗೆಯ ಅಭದ್ರತೆ ಮತ್ತು ಅಸ್ತವ್ಯಸ್ಥತೆ ಉಂಟಾಗಿತ್ತು. ಭಾರತೀಯರ ಕ್ರಿಯಾತ್ಮಕ ಚೈತನ್ಯಗಳು ಮಂಕಾಗಿ ಕಲೆ, ಸಾಹಿತ್ಯ, ವಿಜ್ಞಾನ ಇತ್ಯಾದಿ ವಲಯಗಳ ಏಳಿಗೆ ಕುಂಟಿತಗೊಂಡಿತ್ತು. ಇಂತಹ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದ ಗುಪ್ತ ಸಾಮ್ರಾಟರು ಕಳೆದು ಹೋಗಿದ್ದ ರಾಜಕೀಯ ಐಕ್ಯತೆಯನ್ನು ಸಾಧಿಸಿ, ಭಾರತದ ವಿಶಾಲ ಪ್ರದೇಶವನ್ನು ಕ್ರಿ.ಶ. 300-500 ರವರೆಗೆ ಆಳಿದರಲ್ಲದೆ ಎರಡನೆಯ ಸಲ ಭಾರತೀಯ ಇತಿಹಾಸದಲ್ಲಿ ರಾಜಕೀಯ ಒಕ್ಕೂಟವನ್ನು ಸಾಧಿಸಿದರು. ಹೀಗೆ ಕೆಲ ಕಾಲ ಸುಪ್ತವಾಗಿದ್ದ ಭಾರತೀಯ ಸಂಸ್ಕೃತಿ, ಗುಪ್ತರ ಪರಿಶ್ರಮದಿಂದ ಸರ್ವತೋಮುಖ ಪ್ರಗತಿಯನ್ನು ಸಾಧಿಸಿತು. ಗುಪ್ತ ಸಾಮ್ರಾಟರಾದ ಸಮುದ್ರಗುಪ್ತ ಹಾಗೂ ಎರಡನೆ ಚಂದ್ರಗುಪ್ತನು ಸಾಹಿತ್ಯ, ಸಂಸ್ಕೃತಿ, ಕಲೆ, ವಿಜ್ಞಾನಗಳಿಗೆ ಆಶ್ರಯ ಪೋಷಣೆ ನೀಡಿದುದರಿಂದ ಅವುಗಳು ಸಾಗರೋಪಾದಿಯಲ್ಲಿ ಬೆಳವಣಿಗೆ ಹೊಂದಿದವು. ಆದುದರಿಂದ ಈ ಯುಗವನ್ನು ಭಾರತೀಯ ಇತಿಹಾಸದಲ್ಲಿನ "ಸ್ವರ್ಣಯುಗ" ಎಂದು ಕರೆಯಲಾಗಿದೆ. ಆ ಕಾಲದಲ್ಲಿ ರಚಿತವಾದ ವಿಪುಲ ಗ್ರಂಥಗಳೂ ಚಲಾವಣೆಗೆ ತಂದ ನಾಣ್ಯಗಳೂ, ಕೆತ್ತಿಸಿದ ಶಾಸನಗಳೂ, ಕಟ್ಟಿಸಿದ ಕಲಾಸ್ಮಾರಕಗಳೂ ಗುಪ್ತರ ರಾಜಕೀಯ ಇತಿಹಾಸವನ್ನು ತಿಳಿಯಲು ಮುಖ್ಯ ಆಧಾರಗಳಾಗಿವೆ. ಗುಪ್ತರ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಚೀಣಾದ ಯಾತ್ರಿಕನಾದ ಫಾಹಿಯಾನನ ಬರವಣಿಗೆಯು ಗುಪ್ತರ ಇತಿಹಾಸ ಅಧ್ಯಯನ ಮಾಡಲು ಅತ್ಯಮೂಲ್ಯ ಮಾಹಿತಿಯಾಗಿದೆ.

## 53.2 ಆಧಾರಗಳು

ಸುಮಾರು ಎರಡು ಶತಮಾನಗಳ ಕಾಲ (ಕ್ರಿ.ಶ. 300-500) ವಿದೇಶಿ ದಾಳಿಕಾರರಿಂದ ಭಾರತಕ್ಕೆ ರಕ್ಷಣೆ ಕೊಟ್ಟು ಭಾರತದಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿಸಿ ಭಾರತೀಯ ಸಂಸ್ಕೃತಿ ದೇಶ ವಿದೇಶಗಳಲ್ಲಿ ಹರಡುವಂತೆ ಮಾಡಿದ ಗುಪ್ತರ ಕಾಲದ ಇತಿಹಾಸವನ್ನು ತಿಳಿಯಲು ನಮಗೆ ಸಾಕಷ್ಟು ಪ್ರಾಕ್ತನ ಹಾಗೂ ಸಾಹಿತ್ಯ ಆಧಾರಗಳು ದೊರಕುತ್ತವೆ. ಪ್ರಾಕ್ತನ ಆಧಾರಗಳು ಯಾವುವು ಎಂದರೆ ಶಾಸನಗಳು, ನಾಣ್ಯಗಳು, ಮುದ್ರಿಕೆಗಳು ಮತ್ತು ಸ್ಮಾರಕಗಳಾಗಿವೆ. ಸಾಹಿತ್ಯ ಆಧಾರಗಳಲ್ಲಿ ದೇಶಿಯ ಮತ್ತು ವಿದೇಶಿಯ ಬರವಣಿಗೆಗಳು ಗುಪ್ತರ ಇತಿಹಾಸವನ್ನು ತಿಳಿಯಲು ಇರುವ ಪ್ರಮುಖವಾದುವುಗಳಾಗಿವೆ.

### 53.2.1 *ಶಾಸನಗಳು*

ಗುಪ್ತರ ಇತಿಹಾಸವನ್ನು ತಿಳಿಯಲು ಸಾಹಿತ್ಯ ಕೃತಿಗಳಷ್ಟೇ ಅನೇಕ ಶಾಸನಗಳು ಸಹಾಯಕವಾಗಿವೆ. ಅವುಗಳಲ್ಲಿ ಸಮುದ್ರಗುಪ್ತನ **ಅಲಹಾಬಾದ್ ಸ್ತಂಭ ಶಾಸನ** ಹಾಗೂ ಎರಡನೇ ಚಂದ್ರಗುಪ್ತನ **ಉದಯಗಿರಿ ಶಾಸನಗಳು** ಪ್ರಮುಖವಾದವು. ಗುಪ್ತರಿಗೆ ಸಂಬಂಧಿಸಿದ

ಶಾಸನಗಳನ್ನು ಡಾ. ಫ್ಲೀಟರು ಕ್ರಿ.ಶ. 1888 ರಲ್ಲಿ **'ಕಾರ್ಪಸ್ ಇನ್‌ಸ್ಕ್ರಿಪ್ಷನ್ಸ್ ಆನ್ ಇಂಡಿಕೇರಂ'** ಎಂಬ ತಮ್ಮ ಮೂರನೇ ಸಂಪುಟದಲ್ಲಿ ಕ್ರೋಡಿಕರಿಸಿ, ಇತಿಹಾಸ ರಚನೆ ಮಾಡುವವರಿಗೆ ಮಹದುಪಕಾರ ಮಾಡಿದ್ದಾರೆ. ಫ್ಲೀಟರ ಈ ಕೃತಿಯಲ್ಲಿ ಪೂರ್ವ ಗುಪ್ತರ ಇತಿಹಾಸ ಮತ್ತು ಅವರ ಉತ್ತರಾಧಿಕಾರಿಗಳ ಆಡಳಿತದ ಬಗೆಗೆ ವಿಶ್ಲೇಷಿಸಲಾಗಿದೆ. ಕ್ರಿ.ಶ. 360 ರಿಂದ 466 ರವರೆಗಿನ ಗುಪ್ತರ ಇತಿಹಾಸ ಫ್ಲೀಟರ ಮೊದಲ 16 ಶಾಸನಗಳಲ್ಲಿ ವರ್ಣಿಸಲಾಗಿದೆ.

**ಸಮುದ್ರಗುಪ್ತನ ಅಲಹಾಬಾದ್ ಸ್ತಂಭ ಶಾಸನವು** ಅವನ ದಿಗ್ವಿಜಯ ಮತ್ತು ಸಾಧನೆಗಳ ಬಗೆಗೆ ಮಹತ್ವವಾದ ಮಾಹಿತಿಗಳನ್ನು ನೀಡುತ್ತದೆ. ಸಮುದ್ರ ಗುಪ್ತನ ಆಡಳಿತ ಮತ್ತು ಸಾಧನೆಗಳ ಬಗ್ಗೆ ಎರನ್ ಕಲ್ಲು ಶಾಸನವು ಸಾಕಷ್ಟು ಬೆಳಕು ಚೆಲ್ಲುತ್ತವೆ.

2ನೇ ಚಂದ್ರಗುಪ್ತನ **ಉದಯಗಿರಿ ಶಾಸನ, ಮಥುರ ಕಲ್ಲು ಶಾಸನ** ಮತ್ತು **ಗದ್ವಾ ಕಲ್ಲು ಶಾಸನಗಳು** ಗುಪ್ತ ದೊರೆಗಳ ಧಾರ್ಮಿಕ ನೀತಿ ಮತ್ತಿತರ ಚಟುವಟಿಕೆಗಳ ಬಗ್ಗೆ ಬಹಳಷ್ಟು ಮಾಹಿತಿಗಳನ್ನು ನೀಡುತ್ತವೆ. ಮೊದಲನೇ ಚಂದ್ರಗುಪ್ತ ಮತ್ತು ಕುಮಾರಗುಪ್ತನ ಕಾಲದ ಬಗ್ಗೆ **ಗದ್ವಾ ಕಲ್ಲು** ಶಾಸನ, **ಬಿಲ್‌ಸಾದ್ ಕಲ್ಲು ಶಾಸನ** ಮತ್ತು **ಮನ್‌ಕ್ವಾರ ಕಲ್ಲು** ಶಾಸನಗಳು ಬೆಳಕು ಚೆಲ್ಲುತ್ತವೆ. ಇವುಗಳಲ್ಲದೆ ಎರಡು ಭಾಗಗಳಲ್ಲಿರುವ **ಬಿಹಾರ ಕಲ್ಲು ಶಾಸನ, ಬಿಟಾರಿ ಸ್ತಂಭ ಶಾಸನ** ಮತ್ತು **ಇಂಡೋರ್ ತಾಮ್ರ ಶಾಸನಗಳು** ಸ್ಕಾಂದ ಗುಪ್ತನು ಪುಷ್ಯಮಿತ್ರರೊಂದಿಗೆ ಮತ್ತು ಹೂಣರೊಂದಿಗೆ ಹೋರಾಡಿದುದನ್ನು ತಿಳಿಸುತ್ತವೆ ಹಾಗೂ ಈ ಶಾಸನಗಳಿಂದ ಸ್ಕಾಂದ ಗುಪ್ತನ ಸಾಧನೆಗಳೂ ತಿಳಿದು ಬರುತ್ತದೆ.

**ಮೆಹ್ರಾಲಿ ಸ್ತಂಭ** ಶಾಸನವು ರಾಜ ಚಂದ್ರನ ಸಾಹಸ ಕಾರ್ಯಗಳನ್ನು ವಿವರಿಸುತ್ತದೆ (ರಾಜ ಚಂದ್ರ ಅಥವಾ ಚಂಡನನ್ನು ಎರಡನೇ ಚಂದ್ರಗುಪ್ತನೆಂದು ಗುರುತಿಸಲಾಗಿದೆ). ಹೀಗೆ ಗುಪ್ತರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಅವರ ಇತಿಹಾಸ ರಚಿಸುವವರಿಗೆ ಬಹು ಉಪಕಾರಿಯಾಗಿವೆ.

## *53.2.2 ನಾಣ್ಯಗಳು*

ಗುಪ್ತರು ಚಲಾವಣೆಗೆ ತಂದ ವಿವಿಧ ಬಗೆಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಗುಪ್ತರ ಇತಿಹಾಸದ ಮೇಲೆ ಹಾಗೂ ಅವರ ಕಲಾಭಿರುಚಿಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ. ಕ್ರಿ.ಶ. 1914 ರಲ್ಲಿ ಅಲಾನ್ ಎಂಬ ವಿದ್ವಂಸರು **'ಕ್ಯಾಟಲಾಗ್ ಆಫ್ ದಿ ಕಾಯ್ನ್ಸ್ ಆಫ್ ದಿ ಗುಪ್ತ ಡೈನಾಸ್ಟೀಸ್'** ಎಂಬ ಕೃತಿಯನ್ನು ಹೊರ ತಂದಿದ್ದು, ಗುಪ್ತರ ನಾಣ್ಯಗಳ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಬಹುದಾಗಿದೆ. ಒಂದನೇ ಚಂದ್ರಗುಪ್ತ ಮತ್ತು ಅವನ ರಾಣಿ ಕುಮಾರದೇವಿಯರ ನಾಣ್ಯಗಳು ಪೂರ್ವ ಗುಪ್ತರ ಬಗ್ಗೆ ಮಾಹಿತಿ ನೀಡುತ್ತವೆ. ಇವುಗಳನ್ನು ಅವರ ಮಗ ಸಮುದ್ರ ಗುಪ್ತನು ತಂದೆ ತಾಯಿಯರ ನೆನಪಿಗಾಗಿ ಮುದ್ರಿಸಿದವುಗಳಾಗಿವೆ. ಸಮುದ್ರ ಗುಪ್ತನ ಕಾಲಕ್ಕೆ ಸಂಬಂಧಿಸಿದಂತೆ ಅನೇಕ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ನಾವು ಕಾಣಬಹುದಾಗಿದೆ. ಸಮುದ್ರ ಗುಪ್ತನಿಗೆ ಸಂಬಂಧಿಸಿದ **ಹುಲಿ, ಅಶ್ವಮೇಧ. ಬಿಲ್ಲುಗಾರ, ಸಂಗೀತಜ್ಞನ** ಚಿತ್ರವಿರುವ ನಾಣ್ಯಗಳು ಸಿಕ್ಕಿವೆ. ಎರಡನೆ ಚಂದ್ರಗುಪ್ತನ ಕಾಲದ ಅನೇಕ ಬಗೆಯ ನಾಣ್ಯಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವು **ಬಿಲ್ಲುಗಾರನ, ಛತ್ರಿಯ, ಹುಲಿಯನ್ನು ಕೊಲ್ಲುವ, ಕುದುರೆ ಸವಾರನ** ಚಿತ್ರವಿರುವ ನಾಣ್ಯಗಳು. ಕುಮಾರಗುಪ್ತನ ಕಾಲದ **ಬಿಲ್ಲುಗಾರನ, ಅಶ್ವಮೇಧದ, ಕುದುರೆ ಸವಾರನ, ಆನೆ ಸವಾರನ, ಹುಲಿಯ ಬೇಟೆಗಾರನ ಚಿತ್ರ**ವಿರುವ ಬಂಗಾರದ ನಾಣ್ಯಗಳು ಮಾತ್ರ ದೊರೆತಿವೆ. ನಾಣ್ಯಗಳು ರಾಜರ ಹೆಸರುಗಳನ್ನು ರಾಜ್ಯದ ವಿಸ್ತಾರವನ್ನು, ಆರ್ಥಿಕ ಸಮೃದ್ಧಿಯನ್ನು, ಕಲಾ ಕೌಶಲ್ಯವನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ಸಮುದ್ರ ಗುಪ್ತನ **ಅಶ್ವ ಮೇಧ** ಚಿತ್ರದ ನಾಣ್ಯವು ದಿಗ್ವಿಜಯವನ್ನು ಸೂಚಿಸಿದರೆ. ಅವನ **ವೀಣಾಪಾಣಿ ಚಿತ್ರವು** ಅವನ ಅಭಿರುಚಿ ಮತ್ತು ಸಂಗೀತ ಜ್ಞಾನದ ಬಗ್ಗೆ ತಿಳಿಸುತ್ತವೆ. ನಾಣ್ಯಗಳ ಮೇಲೆ ಚಿತ್ರಿಸಿರುವ ಕಾಲ್ಪನಿಕ ಚಿತ್ರಗಳು ಅವರ ಕಲೆ ಮತ್ತು ಲೋಹ ಜ್ಞಾನದ ಬಗ್ಗೆ ತಿಳಿಸುತ್ತವೆ. ಎರಡನೇ ಚಂದ್ರಗುಪ್ತನು ಹಿಂದೆ ಪಶ್ಚಿಮ ಕ್ಷತ್ರಿಪರ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಬೆಳ್ಳಿಯ ನಾಣ್ಯಗಳನ್ನು ಮೊದಲು ಚಲಾವಣೆಯಲ್ಲಿ ತಂದು ನಂತರ ತನ್ನ ಸಾಮ್ರಾಜ್ಯದ ಭಾಗಗಳಲ್ಲಿ ಚಲಾವಣೆಗೆ ತಂದನು. ಹೀಗೆ ಗುಪ್ತರ ನಾಣ್ಯಗಳು ಅವರ ಇತಿಹಾಸವನ್ನು ರಚಿಸುವವರಿಗೆ ಮತ್ತು ಅಧ್ಯಯನ ಮಾಡುವವರಿಗೆ ಅಮೂಲಾಗ್ರ ಮಾಹಿತಿಗಳನ್ನು ನೀಡುತ್ತವೆ.

## 53.2.3 ಸ್ಮಾರಕಗಳು ಮತ್ತು ಮುದ್ರಿಕೆಗಳು

ಗುಪ್ತರ ಕಾಲದ ನಾನಾ ಬಗೆಯ ಸ್ಮಾರಕಗಳು ಮತ್ತು ಮುದ್ರಿಕೆಗಳು ಕೂಡ ಅವರ ಕಾಲದ ಇತಿಹಾಸ ಮತ್ತು ಸಂಸ್ಕೃತಿಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಗುಪ್ತರ ಕಾಲದ ದೇವಾಲಯಗಳು, ವಿಹಾರಗಳು, ಚೈತ್ಯಗಳು, ಗುಹಾಂತರ್ದೇವಾಲಯಗಳು, ಶಿಲ್ಪಗಳು ಮತ್ತು ಚಿತ್ರಕಲೆಗಳು ಭಾರತೀಯ ಕಲೆಯ ಅಪೂರ್ವ ಸೃಷ್ಟಿಯಾಗಿದ್ದು, ಗುಪ್ತರ ಕಾಲದ ವೈವಿಧ್ಯಮಯವಾದ ಮತ್ತು ವೈಶಿಷ್ಟ್ಯ ಪೂರ್ಣವಾದ ಜೀವನವನ್ನು ಅರಿಯಲು ಸಹಾಯ ನೀಡುತ್ತವೆ. ಅವುಗಳಲ್ಲಿನ ಶಿಲ್ಪಕಲೆ, ಚಿತ್ರಕಲೆಗಳು ಆಗಿನ ಕಾಲದ ಕಲಾ ಪ್ರೌಢಿಮೆಯನ್ನು ಸೂಚಿಸುತ್ತವೆ. ಹಾಗೆಯೇ ಗುಪ್ತರ ಕಾಲದ ಶಿಲ್ಪಕಲೆಯು ವಿದೇಶಿ ಪ್ರಭಾವದಿಂದ ಮುಕ್ತವಾಗಿ ದೇಶಿಯ ಲಕ್ಷಣಗಳನ್ನು ಒಳಗೊಂಡು ಆ ಕಾಲದ ಧಾರ್ಮಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ. ಬನಾರಸ್ ಚಿತ್ರಶಾಲೆಯಲ್ಲಿ ನಿರ್ಮಿತಗೊಂಡು ಈಗ ಸಾರನಾಥ ಮ್ಯೂಸಿಯಂನಲ್ಲಿ ಕುಳಿತ ಭಂಗಿಯಲ್ಲಿರುವ ಬುದ್ಧನ ಮೂರ್ತಿಯು ಭಾರತೀಯ ಕಲಾ ವೈಭವದ ಒಂದು ಮಹತ್ವದ ಕೊಡುಗೆಯಾಗಿದೆ.

ಗುಪ್ತರ ಕಾಲದ ಮುದ್ರಿಕೆಗಳು ವೈಶಾಲಿಯ ಸುತ್ತ ಮುತ್ತ ಬಹು ಸಂಖ್ಯೆಯಲ್ಲಿ ದೊರೆತಿವೆ. ಅಂತಹ ಮುದ್ರೆಕೆಗಳಲ್ಲಿ ಎರಡನೇ ಚಂದ್ರಗುಪ್ತನ ರಾಣಿಯಾದ **ಮಹಾದೇವಿ ಧ್ರುವಸ್ವಾಮಿನಿಯ** ಮುದ್ರಿಕೆಯು ಮುಖ್ಯವಾದುದು. ಇದು ಒಂದನೇ ಕುಮಾರಗುಪ್ತನ ಸೋದರನಾದ ಗೋವಿಂದ ಗುಪ್ತನು ವೈಶಾಲಿಯ 'ವಿಷಯಪತಿ' ಯಾಗಿದ್ದನೆಂದು ತಿಳಿಸುತ್ತಾ ಪ್ರಾಂತೀಯ ಹಾಗೂ ಸ್ಥಳೀಯ ಸರ್ಕಾರಗಳ ಆಡಳಿತದ ಬಗ್ಗೆ ತಿಳಿಸುತ್ತವೆ. ಗುಪ್ತರ ಕಾಲದ ಇಂತಹ ಅಗಾಧ ಸ್ಮಾರಕಗಳು ಮತ್ತು ಮುದ್ರಿಕೆಗಳು ಉತ್ತರ ಭಾರತದ ಹಲವಾರು ಕಡೆ ನಮಗೆ ಕಾಣಸಿಗಲಿದ್ದು ಅವು ಅದರ ಇತಿಹಾಸ ರಚಿಸುವವರಿಗೆ ಹೊಸ ಬೆಳಕನ್ನು ನೀಡುತ್ತವೆ.

## 53.2.4 ಸಾಹಿತ್ಯ ಆಧಾರಗಳು

ಗುಪ್ತರ ಕಾಲವನ್ನು ಅಧ್ಯಯನ ಮಾಡಲು ನಮಗೆ ದೊರಕುವ ಸಾಹಿತ್ಯಕ ಆಧಾರಗಳೆಂದರೆ ಪುರಾಣಗಳು, ಧರ್ಮಶಾಸ್ತ್ರಗಳು ಹಾಗೂ ಆ ಕಾಲದಲ್ಲಿ ರಚನೆಯಾದ ಕೃತಿಗಳು ಪ್ರಮುಖವಾದ ಆಧಾರಗಳಾಗಿವೆ. **ಫರ್ಗಿಟರ್, ಕೆ.ಪಿ. ಜಯಸ್ವಾಲ್, ಕಿರ್ಫೆಲ್** ಮುಂತಾದವರು ಪುರಾಣಗಳನ್ನು ವೈಜ್ಞಾನಿಕವಾಗಿ ಸಂಶೋಧಿಸಿ ಪುರಾಣಗಳು ಗುಪ್ತರ ರಾಜಕೀಯ ಇತಿಹಾಸವನ್ನು ತಿಳಿಯಲು ಪ್ರಮುಖ ಆಧಾರಗಳಾಗಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಗುಪ್ತರ ಕಾಲಕ್ಕೆ ಸಂಬಂಧಿಸಿದ ಸಾಹಿತ್ಯ ಆಧಾರಗಳಲ್ಲಿ ಪುರಾಣಗಳು ಮುಖ್ಯವಾದವು. ಪುರಾಣಗಳು 18 ಇದ್ದರೂ ವಾಯುಪುರಾಣ, **ಬ್ರಹ್ಮಾಂಡ ಪುರಾಣ, ಮತ್ಸಪುರಾಣ, ವಿಷ್ಣುಪುರಾಣ** ಮತ್ತು **ಭಾಗವತಿ ಪುರಾಣಗಳು** ಗುಪ್ತರ ವಂಶಾವಳಿಯನ್ನು, ಸಾಮ್ರಾಜ್ಯದ ವಿಸ್ತಾರವನ್ನು ಸಮಕಾಲೀನ ರಾಜ್ಯಗಳ ಮತ್ತು ರಾಜರ ಇತಿಹಾಸವನ್ನು ತಿಳಿಯಲು ನೆರವಾಗುತ್ತವೆ. ಧರ್ಮ ಶಾಸ್ತ್ರಗಳು ಗುಪ್ತರ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ತಿಳಿಸುತ್ತವೆ. ಎರಡನೆ ಚಂದ್ರಗುಪ್ತನ ಪ್ರಧಾನಮಂತ್ರಿ ಶಿಖರನಿಂದ ವಿರಚಿತವಾದ "ಕಮಾಂಡಕ ನೀತಿಸಾರ", ರಾಜನೀತಿಯನ್ನು ಒಳಗೊಂಡಿದೆ. ಗುಪ್ತರ ಕಾಲದ ಕಾವ್ಯ ಮತ್ತು ನಾಟಕ ಸಾಹಿತ್ಯ ಕೃತಿಗಳು ಇತಿಹಾಸಕಾರನ ನೆರವಿಗೆ ಬರುತ್ತವೆ. ಇವುಗಳಲ್ಲಿ ಮುಖ್ಯವಾದವು **ಸೇತುಬಂಧ ಕಾವ್ಯ, ಕೌಮುದಿ ಮಹೋತ್ಸವ, ದೇವಿಚಂದ್ರಗುಪ್ತಂ** ಮತ್ತು **ಮುದ್ರಾರಾಕ್ಷಸ.** ಸೇತುಬಂಧ ಕಾವ್ಯ ಪ್ರಸ್ತುತದಲ್ಲಿದ್ದು ವಾಕಾಟಕರಾಜ ಪ್ರವರಸೇನನಿಂದ ರಚಿತವಾಯಿತು. ಕೌಮುದಿ ಮಹೋತ್ಸವ ನಾಟಕದ ಕರ್ತೃವಿನ ಬಗ್ಗೆ ವಾದ ವಿವಾದಗಳಿವೆ. ಇದರ ಕರ್ತೃ ಕಿಶೋರಿಕನೆಂದು ಅಭಿಪ್ರಾಯ ಪಟ್ಟರೆ; ಕೆಲವರು ವಿಜ್ಜಿಕಾನೆಂದು ಅಭಿಪ್ರಾಯ ಪಟ್ಟಿದ್ದಾರೆ. ಕೆ.ಪಿ. ಜಯಸ್ವಾಲ್ಲರ ಪ್ರಕಾರ ಇದು ಕ್ರಿ.ಶ. 340 ರಲ್ಲಿ ರಚಿತವಾಗಿದ್ದು ಆಗಿನ ಕಾಲದ ಮಗಧ ರಾಜ್ಯದ ರಾಜಕೀಯ ಸ್ಥಿತಿಗತಿಗಳನ್ನು ವರ್ಣಿಸುತ್ತದೆ. ದೇವಿಚಂದ್ರಗುಪ್ತಂ ನಾಟಕದ ಕರ್ತೃ ವಿಶಾಖದತ್ತ. ದುರಾದೃಷ್ಟವಶದಿಂದ ಈ ನಾಟಕವು ಪೂರ್ಣವಾಗಿ ಉಪಲಬ್ಧವಾಗಿಲ್ಲ. ಇದು ಎರಡನೆ ಚಂದ್ರಗುಪ್ತನ ಹಿರಿಯ ಸಹೋದರ ರಾಮಗುಪ್ತನಿಗೆ ಸಂಬಂಧಿಸಿದ ಘಟನೆಯನ್ನು ವಿವರಿಸುತ್ತದೆ. ವಿಶಾಖದತ್ತನ ಇನ್ನೊಂದು ನಾಟಕ 'ಮುದ್ರರಾಕ್ಷಸ'ವೂ ಸಹ ಗುಪ್ತರ ಇತಿಹಾಸ ರಚನೆಗೆ ಸಹಾಯಕವಾಗಿದೆ. ಇದರ ಮುಖ್ಯ ಕತೆಯು ಚಂದ್ರಗುಪ್ತ ಮೌರ್ಯ ಮತ್ತು ಕೌಟಿಲ್ಯರು ಹೇಗೆ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದರು ಎಂಬುದರ ಬಗೆಗಿದ್ದರೂ ಇದು ಗುಪ್ತರ ಕಾಲದ ರಾಜನೀತಿ, ಧಾರ್ಮಿಕ ಮತ್ತು ಸಾಮಾಜಿಕ ಜೀವನಗಳ ಮೇಲೆ ಬೆಳಕು ಚೆಲ್ಲುತ್ತದೆ.

ಚೀಣಿ ಯಾತ್ರಿಕರಾದ ಫಾಹಿಯಾನ ಮತ್ತು ಇತ್ಸಿಂಗರ ಬರವಣಿಗೆಗಳು ಗುಪ್ತರ ಇತಿಹಾಸ ರಚನೆಗೆ ಸಾಕಷ್ಟು ನೆರವು ನೀಡುತ್ತವೆ. ಫಾಹಿಯಾನನು ಭಾರತಕ್ಕೆ ಭೇಟಿಯಿತ್ತ ಚೀಣಿ ಯಾತ್ರಿಕರಲ್ಲಿ ಮೊದಲ ಸುಪ್ರಸಿದ್ಧ ಯಾತ್ರಿಕ. ಇವನು ಭೇಟಿಯಿತ್ತುದು ಎರಡನೆ ಚಂದ್ರಗುಪ್ತನ ಕಾಲದಲ್ಲಿ. ಇವನು ಭಾರತದಲ್ಲಿ ಒಂಬತ್ತು ವರ್ಷವಿದ್ದು ಉತ್ತರ ಭಾರತದಲ್ಲಿ ಸಾಕಷ್ಟು ಸಂಚರಿಸಿದನು. ತಾಯ್ನಾಡಿಗೆ ಮರಳಿದ ಮೇಲೆ ಫಾಹಿಯಾನನು ತನ್ನ ಪ್ರವಾಸದ ಅನುಭವಗಳನ್ನು ಗ್ರಂಥ ರೂಪದಲ್ಲಿ ಬರೆದಿಟ್ಟನು. ಇವನ ಗ್ರಂಥ "ಫೊ-ಕ್ಯು-ಕಿ" (ಬೌದ್ಧ ರಾಜ್ಯಗಳ ದಾಖಲೆಗಳು) ಗುಪ್ತರ ಸುವರ್ಣಯುಗದ ಸಂವೃದ್ಧಿ ಮತ್ತು ಪ್ರಗತಿಯನ್ನು ಅರಿಯಲು ನೆರವಾಗುತ್ತದೆ.

ಫಾಹಿಯಾನನು ಬರೆದ ಕೃತಿ ಫೋ-ಕೋ-ಕಿಯನ್ನು ಬೇಲ್, ಲೆಗ್ಗಿ ಮತ್ತು ಗೈಲ್ಸ್ ಎಂಬ ವಿದ್ವಾಂಸರು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿರುವರು. ಆದಾಗ್ಯೂ ಫಾಹಿಯಾನನು ಭಾರತಕ್ಕೆ ಬಂದಿದ್ದ ಉದ್ದೇಶ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಮತ್ತು ಬೌದ್ಧ ಸನ್ಯಾಸಿಗಳ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವ ಸಲುವಾಗಿ, ಹಾಗೆಯೇ ಅವನು ಗುಪ್ತರ ಕಾಲದ ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಸುತ್ತಾನೆ. ಗುಪ್ತರ ಕಾಲದ ನಗರಗಳ ವೈಭವ ಹಾಗೂ ಶ್ರೀಮಂತಿಕೆಯನ್ನು ತಿಳಿಸುತ್ತಾ ರಾಜ್ಯ ಹಾಗೂ ಧಾರ್ಮಿಕ ಸಂಸ್ಥೆಗಳಿಂದ ನಡೆಯುತ್ತಿದ್ದ ಉಚಿತ ಆಸ್ಪತ್ರೆಗಳ ಬಗ್ಗೆಯೂ, ಫಾಹಿಯಾನನ ಗ್ರಂಥವು ತಿಳಿಸುತ್ತದೆ.

ಮತ್ತೊಬ್ಬ ಚೀನಿ ಪ್ರವಾಸಿಗನಾದ ಇತ್ಸಿಂಗ್‌ನು ಹರ್ಷನ ನಿಧನಾನಂತರ ಭಾರತದ ಪ್ರಯಾಣ ಮಾಡಿದನು. ಇವನು ಮಹಾರಾಜ ಶ್ರೀ ಗುಪ್ತನು ಚೀನಿ ಪ್ರವಾಸಿಗರಿಗಾಗಿ 'ಮೃಗಶಿಕವನ' ಎಂಬಲ್ಲಿ ಒಂದು ಧಾರ್ಮಿಕ ಕಟ್ಟಡವನ್ನು ತನಗಿಂತ 500 ವರ್ಷಗಳ ಹಿಂದೆಯೇ ಕಟ್ಟಿಸಿದನೆಂದು ತಿಳಿಸುತ್ತಾನೆ.

## 53.3 ಗುಪ್ತರ ವಂಶದ ಮೂಲ ಮತ್ತು ಸ್ಥಾಪನೆ

ಭಾರತದ ಇತಿಹಾಸದಲ್ಲಿ ಎಲ್ಲಾ ರಾಜವಂಶಗಳ ಮೂಲದ ಬಗೆಗೆ ಕಂಡು ಬರುವ ಅಸ್ಪಷ್ಟತೆ ಗುಪ್ತರ ಮೂಲದ ಬಗೆಗೂ ಉಂಟಾಗಿದೆ. ಅನೇಕ ಇತಿಹಾಸಜ್ಞರು ವಿವಿಧ ಬಗೆಯಲ್ಲಿ ಗುಪ್ತರ ಮೂಲದ ಬಗೆಗೆ ತಮ್ಮ ವಿವರಣೆಗಳನ್ನು ನೀಡಿರುವರು. ಕೆ.ಪಿ. ಜಯಸ್ವಾಲ್‌ರವರು ಇವರನ್ನು ಜಾಟರೆಂದೂ, ಮೊದಲು ಇವರು ಪಂಜಾಬಿನಲ್ಲಿ ನೆಲೆಸಿದ್ದು ಆಮೇಲೆ ಮಗಧಕ್ಕೆ ಬಂದರೆಂದು ತಿಳಿಸುತ್ತಾರೆ. ಡಾ. ಎಚ್. ಸಿ. ರಾಯಚೌದರಿಯವರು ಎರಡನೇ ಚಂದ್ರಗುಪ್ತನ ಮಗಳಾದ ಪ್ರಭಾವತಿ ಗುಪ್ತಳು ತಾನು ಧರಣ ಗೋತ್ರದವಳೆಂದು ಹೇಳಿಕೊಂಡಿರುವುದರಿಂದ ಗುಪ್ತರು ಧರಣ ಗೋತ್ರದವರೆಂದು ಕರೆದಿದ್ದಾರೆ ಹಾಗೂ ಗುಪ್ತರು ಅಗ್ನಿಮಿತ್ರನ ಮುಖ್ಯ ರಾಣಿಯಾದ ಧರಿಣಿದೇವಿಯ ಸಂಬಂಧಿಕರಿರಬಹುದೆಂದೂ ಅಭಿಪ್ರಾಯ ಪಟ್ಟಿದ್ದಾರೆ.

ಡಾ: ಡಿ.ಸಿ. ಗಂಗುಲಿಯವರು ಚೀನಿ ಪ್ರವಾಸಿಗ ಇತ್ಸಿಂಗನ ಬರವಣಿಗೆಯಲ್ಲಿ ಮಹಾರಾಜ ಶ್ರೀ ಗುಪ್ತನು ಚೀನಿ ಪ್ರವಾಸಿಗರಿಗಾಗಿ "ಮೃಗಶಿಕವನ" ಎಂಬಲ್ಲಿ ಒಂದು ಸಂಘರಾಮವನ್ನು ಕಟ್ಟಿಸಿದ್ದಾನೆಂಬ ಅಂಶದ ಆಧಾರದ ಮೇಲೆ ಗುಪ್ತರ ಮೂಲ ಸ್ಥಾಪಕ, ಈ ಶ್ರೀ ಗುಪ್ತನೆಂಬುದಾಗಿಯೂ ಹಾಗೂ ಗುಪ್ತರು ಮಗಧಕ್ಕೆ ಬರುವ ಮೊದಲು ಬಂಗಾಳದ ಮುರ್ಷಿದಾಬಾದ್ ಪ್ರವೇಶದಲ್ಲಿದ್ದರೆಂದು ತಿಳಿಸುತ್ತಾರೆ.

'ವಿಷ್ಣುಪುರಾಣ' 'ವಾಯುಪುರಾಣ' ಮತ್ತು 'ಭಾಗವತಃ ಪುರಾಣಗಳು' ಗುಪ್ತ ಸಾಮ್ರಾಜ್ಯವು ಮೂಲವಾಗಿ ಗಂಗಾನದಿ ಬಯಲಿನ ಪ್ರದೇಶವನ್ನೊಳಗೊಂಡ ಮಗಧವನ್ನು ಮತ್ತು ಬಂಗಾಳದ ವಾಯುವ್ಯ ಭಾಗಗಳನ್ನು ಒಳಗೊಂಡಿತ್ತೆಂದು ತಿಳಿಸುತ್ತವೆ.

## 53.4 ಪ್ರಾರಂಭಿಕ ಗುಪ್ತ ದೊರೆಗಳು

ಮೌರ್ಯ ಸಾಮ್ರಾಜ್ಯ ಪತನದ ತರುವಾಯ ಉತ್ತರ ಭಾರತದಲ್ಲಿ ಏಳಿಗೆಗೆ ಬಂದ ಸಣ್ಣ ಪುಟ್ಟ ರಾಜ್ಯಗಳಲ್ಲಿ ಕುಶಾನರ ರಾಜ್ಯವು ಒಂದು. ಕುಶಾನರ ಪತನ ಮತ್ತು ಗುಪ್ತ ಸಾಮ್ರಾಜ್ಯದ ಏಳಿಗೆಯ ಮಧ್ಯ ಕಾಲದಲ್ಲಿ ಉತ್ತರ ಭಾರತದಲ್ಲಿ ಹಲವಾರು ರಾಜಪ್ರಭುತ್ವಗಳು ಮತ್ತು ಗಣರಾಜ್ಯಗಳು ಅಸ್ತಿತ್ವಕ್ಕೆ ಬಂದವು. **ಅಚ್ಛಿತ್ರ, ಅಯೋಧ್ಯ, ಮಥುರ, ವಾಕಟಕ, ಕೌಸಂಬಿ, ನಾಗರಾಜ್ಯಗಳು, ಮೌಖರಿ, ಯುದೇಯ, ಲಿಚ್ಛವಿ** ರಾಜ್ಯಗಳು ಮುಖ್ಯವಾದವುಗಳು. ಇವುಗಳಲ್ಲಿ ಐಕ್ಯಮತ್ಯವಿಲ್ಲದೆ ಭಾರತದಲ್ಲಿ ಒಂದು ರೀತಿಯ ರಾಜಕೀಯ ಗೊಂದಲಮಯವಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಕ್ರಿ.ಶ. ಮೂರನೆಯ ಶತಮಾನದಲ್ಲಿ

ಮಗಧ ಪ್ರಾಂತ್ಯದ ಆಸುಪಾಸಿನಲ್ಲಿ ಗುಪ್ತರು ತಮ್ಮ ರಾಜ್ಯವನ್ನು ಸ್ಥಾಪಿಸಿದ್ದು ಹಂತಹಂತವಾಗಿ ಪ್ರವರ್ಧಮಾನಕ್ಕೆ ಬಂದರು. ನಾಲ್ಕನೇ ಶತಮಾನದ ಪ್ರಾರಂಭದಲ್ಲಿ ಗುಪ್ತ ಸಂತತಿ ಹಾಗೂ ಲಿಚ್ಛವಿ ರಾಜವಂಶದವರು ವೈವಾಹಿಕ ಸಂಬಂಧಗಳ ಮೂಲಕ ಒಂದಾದುದರ ಪರಿಣಾಮವಾಗಿ ಮುಂದೆ ಗುಪ್ತರು ಸಾಮ್ರಾಜ್ಯ ಸ್ಥಾಪಿಸುವುದಕ್ಕೆ ನಾಂದಿಯಾಯಿತು. ಪ್ರಾಚೀನ ಭಾರತದಲ್ಲಿ ಮೌರ್ಯ ಸಾಮ್ರಾಜ್ಯದಂತೆ ಗುಪ್ತ ಸಾಮ್ರಾಜ್ಯವು ಅತ್ಯಂತ ಪ್ರಸಿದ್ಧಿ ಪಡೆದು ಭಾರತದ ಹೆಚ್ಚು ಭಾಗಗಳಲ್ಲಿ ತಮ್ಮ ಅಧಿಕಾರ ಸ್ಥಾಪಿಸಿ, ಸುಭದ್ರ ಆಡಳಿತವನ್ನು ರೂಪಿಸಿದರು. ಶಿಲಾಶಾಸನಗಳಲ್ಲಿ ವ್ಯಕ್ತವಾಗಿರುವಂತೆ ಶ್ರೀ **ಗುಪ್ತನು** ಗುಪ್ತ ಸಂತತಿಯ ಸ್ಥಾಪಕನೆಂದು ನಂಬಲಾಗಿದೆ.

## 53.4.1 ಶ್ರೀಗುಪ್ತ

ಎರಡನೇ ಚಂದ್ರಗುಪ್ತನ ಮಗಳಾದ ಪ್ರಭಾವತಿ ಗುಪ್ತಳ ಪೂನಾ ತಾಮ್ರಶಾಸನದಲ್ಲಿ ಶ್ರೀಗುಪ್ತನನ್ನು ಗುಪ್ತವಂಶದ **'ಆದಿರಾಜ'** ನೆಂದು ಕರೆಯಲಾಗಿದೆ. ರಿದ್ಧಾಪುರ ತಾಮ್ರ ಶಾಸನದಲ್ಲಿ ಶ್ರೀಗುಪ್ತನು ಧರಣಿಗೋತ್ರದವನೆಂದು ಹೇಳಲಾಗಿದೆ. ಹೀಗೆ ಗುಪ್ತರ ಕಾಲದ ಅನೇಕ ದಾಖಲೆಗಳಲ್ಲಿ 'ಮಹಾರಾಜ ಶ್ರೀಗುಪ್ತ' ನೆಂದು ಕರೆದಿರುವುದರಿಂದ ಶ್ರೀಗುಪ್ತನು ಗುಪ್ತ ವಂಶದ ಮೂಲ ಸ್ಥಾಪಕನೆಂದು ಹೆಚ್ಚು ಮಂದಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮಹಾರಾಜ ಶ್ರೀಗುಪ್ತ ಕ್ರಿ.ಶ. 3ನೇ ಶತಮಾನದ ಕೊನೆಯಲ್ಲಿ ಆಳುತ್ತಿದ್ದಿರಬೇಕೆಂದು ನಂಬಲಾಗಿದೆ. ಇವನನ್ನು ಶಿಲಾಶಾಸನದಲ್ಲಿ 'ಮಹಾರಾಜ' ನೆಂದು ವರ್ಣಿಸಲಾಗಿದ್ದರೂ, ಇವನ ಮುಂದಿನ ಆಡಳಿತದ ಬಗೆಗೆ ಯಾವುದೇ ದಾಖಲೆಗಳಲ್ಲಿ ವಿವರಗಳು ಲಭ್ಯವಾಗಿಲ್ಲ.

## 53.4.2 ಘಟೋತ್ಕಚಗುಪ್ತ

ಶ್ರೀಗುಪ್ತನ ಮರಣಾ ನಂತರ ಅವನ ಮಗ ಘಟೋತ್ಕಚ ಗುಪ್ತ ಉತ್ತರಾಧಿಕಾರಿಯಾದನು. ಇದಕ್ಕೆ ಪೂರಕವಾಗಿ ಗುಪ್ತರ ದಾಖಲೆಗಳಲ್ಲಿ 'ಶ್ರೀ ಗುಪ್ತನ ಮಗ ಮಹಾರಾಜ ಶ್ರೀ ಘಟೋತ್ಕಚಗುಪ್ತ' ಎಂದು ಉಲ್ಲೇಖವಿದೆ. ವೈಶಾಲಿಯಲ್ಲಿ ದೊರೆತ ಗುಪ್ತರ ಕಾಲದ ಮುದ್ರೆಯೊಂದರ ಮೇಲೆ 'ಘಟೋತ್ಕಚಗುಪ್ತ' ಎಂಬ ಅಂಕಿತವಿದೆಯಾದುದರಿಂದ ಶ್ರೀಗುಪ್ತನ ನಂತರ ಘಟೋತ್ಕಚಗುಪ್ತ ಆಡಳಿತವನ್ನು ಮುಂದುವರಿಸಿರುವನೆಂದು ನಂಬಲಾಗಿದೆ. ಪೂನಾ ತಾಮ್ರ ಶಾಸನದಲ್ಲಿ ಘಟೋತ್ಕಚ ಗುಪ್ತನನ್ನೂ 'ಮಹಾರಾಜ' ನೆಂದು ವರ್ಣಿಸಿರುವುದರಿಂದ ಈ ದೊರೆಗಳು ಸಮಕಾಲೀನ ಪ್ರಬಲ ರಾಜನ ಮಾಂಡಲಿಕರಾಗಿದ್ದಿರಬಹುದೆಂದೂ ಇತಿಹಾಸಕಾರರು ಭಾವಿಸಿದ್ದಾರೆ.

## 53.4.3 ಒಂದನೇ ಚಂದ್ರಗುಪ್ತ ( ಕ್ರಿ.ಶ. 320-335)

ಘಟೋತ್ಕಚ ಗುಪ್ತನ ಮರಣದ ನಂತರ ಅವನ ಮಗ ಒಂದನೇ ಚಂದ್ರಗುಪ್ತನು ಪಟ್ಟಕ್ಕೆ ಬಂದನು. ಒಂದನೇ ಚಂದ್ರಗುಪ್ತನು ಗುಪ್ತರಲ್ಲಿ ಮೊದಲ ಪ್ರಬಲ ರಾಜನೆಂದು ಕರೆಯಲಾಗಿದೆ. ಗುಪ್ತರ ದಾಖಲೆಗಳಲ್ಲಿ **ಶ್ರೀಗುಪ್ತ** ಮತ್ತು **ಘಟೋತ್ಕಚ** ಗುಪ್ತನನ್ನು **'ಮಹಾರಾಜ'** ಎಂದು ಉಲ್ಲೇಖಿಸಿದ್ದರೆ, **ಒಂದನೇ ಚಂದ್ರಗುಪ್ತ**ನನ್ನು **'ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತ'** ಎಂದು ಉಲ್ಲೇಖಿಸಲಾಗಿದೆ. ಚಂದ್ರಗುಪ್ತನನ್ನು ಅವನ ತಂದೆ ಮತ್ತು ತಾತರಿಗೆ ಕೊಟ್ಟಿದ್ದ 'ಮಹಾರಾಜ' ಎಂಬ ಬಿರುದಿಗೆ ಬದಲು 'ಮಹಾರಾಜಾಧಿರಾಜ' ಎಂದು ಕರೆದಿರುವುದು ಮಹತ್ವಪೂರ್ಣವಾಗಿದೆ. ಒಂದನೇ ಚಂದ್ರಗುಪ್ತನು ತನ್ನ ಹಿಂದಿನವರಿಗಿಂತ ಹೆಚ್ಚು ಸಮರ್ಥ ಅರಸನಾಗಿದ್ದು ಪಿತ್ರಾರ್ಜಿತವಾಗಿ ಬಂದಿದ್ದ ರಾಜ್ಯವನ್ನು ವಿಸ್ತರಿಸಿದನು. ಅವನು ಹೊರಡಿಸಿದ ಅನೇಕ ಚಿನ್ನದ ನಾಣ್ಯಗಳು ಮತ್ತು ಶಾಸನಗಳು ಇದಕ್ಕೆ ಹೆಚ್ಚಿನ ಪುರಾವೆ ನೀಡುತ್ತವೆ.

ಒಂದನೇ ಚಂದ್ರಗುಪ್ತ ಲಿಚ್ಛವೀ ರಾಜಕುಮಾರಿ ಕುಮಾರದೇವಿಯನ್ನು ವಿವಾಹವಾದನು. ಈ ವಿವಾಹ ಸಂಬಂಧ ಗುಪ್ತ ವಂಶದ ಶ್ರೇಯಸ್ಸಿಗೆ ಬಹುಮಟ್ಟಿಗೆ ಕಾರಣವಾಯಿತು. ಲಿಚ್ಛವೀಯರ ನೆರವಿನಿಂದ ಚಂದ್ರಗುಪ್ತನ ಬಲವೃದ್ಧಿಗೊಂಡಿತು. ಈ ಅಂಶವನ್ನು ಸೂಚಿಸಲು ಸ್ಮಾರಕ ನಾಣ್ಯಗಳನ್ನು ಚಂದ್ರಗುಪ್ತನು ಟಂಕಿಸಿದನು. ಈ ನಾಣ್ಯಗಳಲ್ಲಿ ತನ್ನನ್ನು 'ಮಹಾರಾಜಾಧಿರಾಜ' ಎಂದು ಕುಮಾರಿದೇವಿಯನ್ನು 'ಮಹಾದೇವಿ' ಯೆಂದೂ ಸಂಭೋಧಿಸಿರುವುದಲ್ಲದೆ ನಾಣ್ಯದ ಒಂದು ಪಕ್ಕದಲ್ಲಿ ತಮ್ಮಿಬ್ಬರ ಪ್ರತಿಮೆಗಳನ್ನು ಕೆತ್ತಿಸಿರುವನು. ನಾಣ್ಯದ ತಳಭಾಗದಲ್ಲಿ 'ಲಚ್ಛಿವೀಯ' ಎಂಬ ಅಂಕಿತವಿದೆ. ಡಾ. ವಿ.ಎ. ಸ್ಮಿತ್‌ರವರು ಲಿಚ್ಛಿವಿಗಳು ಪಾಟಲಿಪುತ್ರದಲ್ಲಿ ಕುಶಾನರ ಸಾಮಂತರಾಗಿ ಆಳುತ್ತಿದ್ದರೆಂದೂ ಚಂದ್ರಗುಪ್ತನು ಲಿಚ್ಛವಿ ರಾಜಕುಮಾರಿಯನ್ನು ವಿವಾಹವಾಗುವುದರ ಮೂಲಕ ತನ್ನ ಪತ್ನಿಯ ಸಂಬಂಧಿಗಳ ರಾಜ್ಯಕ್ಕೆ ಅಧಿಪತಿಯಾಗಿ ಮಾರ್ಪಟ್ಟನೆಂದು ಹೇಳುತ್ತಾರೆ. ಹೀಗೆ ಕ್ರಿ.ಶ. 320 ರಲ್ಲಿ ಗುಪ್ತ ಯುಗವು ಮೊದಲನೇ

ಚಂದ್ರಗುಪ್ತನಿಂದ ಆರಂಭವಾಯಿತು. ಡಾ. ಫ್ಲೀಟ್‌ರವರು ಕೂಡ ಮೊದಲನೇ ಚಂದ್ರಗುಪ್ತನು ಗುಪ್ತವಂಶ ಸ್ಥಾಪಕನಾಗಿದ್ದು, ಅವನ ಆಳ್ವಿಕೆಯು ಕ್ರಿ.ಶ. 320 ರಿಂದ ಆರಂಭವಾಗುತ್ತದೆ ಎಂದಿದ್ದಾರೆ. ಚಂದ್ರಗುಪ್ತನು ಲಿಚ್ಛವಿಗಳ ಸಹಾಯದಿಂದ ತನ್ನ ರಾಜ್ಯದ ಸುತ್ತ ಮುತ್ತಲ ಪ್ರದೇಶಗಳನ್ನು ಜಯಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಇವನ ಆಳ್ವಿಕೆಯ ಕೊನೆಯ ವೇಳೆಗೆ ಗುಪ್ತ ಸಾಮ್ರಾಜ್ಯವು ಅಲಹಾಬಾದ್, ಔದ್ ಮತ್ತು ದಕ್ಷಿಣ ಬಿಹಾರ ಪ್ರಾಂತ್ಯಗಳವರೆಗೆ ವ್ಯಾಪಿಸಿದ್ದಿತು. ಚಂದ್ರಗುಪ್ತನ ಮರಣಾನಂತರ ಸಮುದ್ರಗುಪ್ತ ಅಧಿಕಾರಕ್ಕೆ ಬಂದನು.

## 53.5 ಸಮುದ್ರಗುಪ್ತ ( ಕ್ರಿ.ಶ. 335 ರಿಂದ 380)

ಒಂದನೇ ಚಂದ್ರಗುಪ್ತನ ನಂತರ ಅವನ ಮಗ ಸಮುದ್ರಗುಪ್ತನು ಕ್ರಿ.ಶ. 335 ರಲ್ಲಿ ಅಧಿಕಾರಕ್ಕೆ ಬಂದನು. ಮೊದಲನೇ ಚಂದ್ರಗುಪ್ತನು ತನ್ನ ಅಂತ್ಯದ ಕಾಲದಲ್ಲಿ ತನ್ನ ಮಕ್ಕಳಲ್ಲೇ ಪರಾಕ್ರಮಿಯಾದ ಸಮುದ್ರಗುಪ್ತನನ್ನು ಹಿರಿಯ ಮಗನಾಗಿಲ್ಲದಿದ್ದರೂ ರಾಜಸಭೆಯ ಮಂತ್ರಾಲೋಚಕರ ಹಾಗೂ ರಾಜಮನೆತನದ ಸದಸ್ಯರ ಸಭೆಯಲ್ಲಿ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದನು. ಈ ವಿಚಾರವು ಹರಿಸೇನನಿಂದ ರಚಿಸಲ್ಪಟ್ಟ ಅಲಹಾಬಾದ್ ಸ್ತಂಭ ಶಾಸನದಲ್ಲಿ ಉಲ್ಲೇಖಗೊಂಡಿದೆ. ತುಂಬಿದ ಸಭೆಯಲ್ಲಿ ಒಂದನೆಯ ಚಂದ್ರಗುಪ್ತನು ತನ್ನ ಮಗ ಸಮುದ್ರಗುಪ್ತನನ್ನು ಆಲಂಗಿಸಿಕೊಂಡು **"ನೀನು ಅರ್ಹನಾಗಿದ್ದೀಯ ಬಾ ಈ ಇಡೀ ಭೂಮಿಯನ್ನು ಆಳು"** ಎಂದು ಘೋಷಿಸಿದನೆಂದು ಈ ಶಾಸನದ ಮೊದಲನೇ ಸಾಲಿನಲ್ಲಿ ದಾಖಲಿಸಲಾಗಿದೆ. ರಾಜನ ಈ ಘೋಷಣೆಯನ್ನು ಅಲ್ಲಿ ನೆರೆದಿದ್ದ ಜನರು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಹೀಗೆ ಒಂದನೇ ಚಂದ್ರಗುಪ್ತನು ತನ್ನ ಮಗ ಸಮುದ್ರಗುಪ್ತನನ್ನು ತುಂಬಿದ ಸಭೆಯಲ್ಲಿ ಸಿಂಹಾಸನಕ್ಕೆ ತಂದನು.

### *53.5.1 ಅಲಹಾಬಾದ್ ಸ್ತಂಭಶಾಸನ*

ಸಮುದ್ರಗುಪ್ತನ ಇತಿಹಾಸಕ್ಕೆ ಸಂಬಂಧಿಸಿದಂತೆ ದೊರಕಿರುವ ಅಪಾರ ನಾಣ್ಯಗಳ ಜೊತೆಯಲ್ಲಿ ಅವನ ಅಲಹಾಬಾದ್ ಸ್ತಂಭ ಶಾಸನವು ಅತ್ಯಂತ ಪ್ರಮುಖವಾದ ಶಾಸನಾದಾರವಾಗಿದೆ. ಇಂದಿನ ಅಲಹಾಬಾದ್ ಕೋಟೆಯೊಳಗೆ ನಿಲ್ಲಿಸಿರುವ ಅಲಹಾಬಾದ್ ಸ್ತಂಭ ಶಾಸನವು ಮೂಲವಾಗಿ ಕೌಸಾಂಬಿಯಲ್ಲಿ ಅಶೋಕನಿಂದ ಸ್ಥಾಪಿತವಾದ ಸ್ತಂಭ ಶಿಲಾಶಾಸನವಾಗಿತ್ತು. ಫಿರೋಜ್ ಷ ತೊಘಲಕನು ಈ ಶಾಸನವನ್ನು ಅಲಹಾಬಾದಿಗೆ ಸ್ಥಳಾಂತರಿಸಿದ್ದನು. ಸಮುದ್ರ ಗುಪ್ತನು ತನ್ನ ದಿಗ್ವಿಜಯಗಳ ಯಶಸ್ಸಿನ ನಂತರ ಅಶೋಕನ ಈ ಶಾಸನದ ಮತ್ತೊಂದು ಭಾಗದ ಮೇಲೆ ತನ್ನ ವಿಜಯಗಳನ್ನು ಕೆತ್ತಿಸಿದನು. ಈ ಶಿಲಾಶಾಸನವು ಸಮುದ್ರಗುಪ್ತನ ದಂಡನಾಯಕ (ಸಂಧಿ-ವಿಗ್ರಹಿಕ) ಮತ್ತು ಮಂತ್ರಿಯಾದ ಹರಿಸೇನನೆಂಬ ಮಹಾಸಂಸ್ಕೃತ ವಿದ್ವಾಂಸನಿಂದ ರಚಿಸಲ್ಪಟ್ಟಿತು. ಇದು ಉತ್ಕೃಷ್ಟ ಸಂಸ್ಕೃತ ಭಾಷೆಯಲ್ಲಿ ಗದ್ಯ ಮತ್ತು ಪದ್ಯಗಳಿಂದ ಕೂಡಿದ ಚಂಪೂ ಶೈಲಿಯಲ್ಲಿ ರಚಿತವಾಗಿದೆ. ಈ ಶಾಸನವು ಒಂದೇ ಬೃಹತ್ ವಾಕ್ಯವಾಗಿದ್ದು 33 ಸಾಲುಗಳಿಂದ ಕೂಡಿದೆ.

ಅಲಹಾಬಾದ್ ಸ್ತಂಭ ಶಾಸನದ ಕರ್ತೃವು ಸಮುದ್ರಗುಪ್ತನ ದಿಗ್ವಿಜಯಗಳನ್ನು ನಾಲ್ಕು ವಿಭಾಗಗಳಲ್ಲಿ ವಿವರಿಸಿದ್ದಾನೆ. ಮೊದಲ ಹಂತದ ದಿಗ್ವಿಜಯದಲ್ಲಿ ದಕ್ಷಿಣ ಭಾರತದ ದಂಡಯಾತ್ರೆಯನ್ನು ವಿವರಿಸಲಾಗಿದೆ. ಎರಡನೇ ವರ್ಗದಲ್ಲಿ ಆರ್ಯಾವರ್ತದ ದಂಡಯಾತ್ರೆಗಳನ್ನು ವಿವರಿಸಲಾಗಿದೆ. ಮೂರನೇ ವಿಭಾಗದಲ್ಲಿ ಅರಣ್ಯಗಳ ಬುಡಕಟ್ಟು ರಾಜರುಗಳನ್ನು ಸೋಲಿಸಿದ ಬಗ್ಗೆ ಕೊನೆಯ ವಿಭಾಗದಲ್ಲಿ ಗಡಿನಾಡಿನ ಮತ್ತು ಗಣರಾಜ್ಯಗಳ ಮೇಲಿನ ದಿಗ್ವಿಜಯಗಳನ್ನು ವಿವರಿಸಿದೆ. ಸಮುದ್ರಗುಪ್ತನ ದಿಗ್ವಿಜಯದ ಬಗೆಗಿನ ಈ ಶಾಸನದ ವರ್ಗೀಕರಣವು ಕಾಲಗಣನೆಗಿಂತ ಭೌಗೋಳಿಕ ಅಂಶಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ ಎಂದು ತಿಳಿದು ಬರುತ್ತದೆ. ಆದ್ದರಿಂದ ಸಮುದ್ರಗುಪ್ತನ ದಿಗ್ವಿಜಯಗಳನ್ನು ಕಾಲಗಣನೆಯ ಆಧಾರದ ಮೇಲೆ ಕ್ರಮವಾಗಿ ಈ ಕೆಳಕಂಡ ಶೀರ್ಷಿಕೆಗಳಡಿಯಲ್ಲಿ ತಿಳಿದುಕೊಳ್ಳಬಹುದು.

### *53.5.2 ಸಮುದ್ರ ಗುಪ್ತನ ದಿಗ್ವಿಜಯಗಳು*

ಸಮುದ್ರ ಗುಪ್ತನು ಗುಪ್ತ ಸಂತತಿಯ ಅತ್ಯಂತ ಪ್ರಸಿದ್ಧ ಸಾಮ್ರಾಟ. ಮಹಾದಂಡನಾಯಕನಾಗಿ ದಿಗ್ವಿಜಯಿಯಾಗಿ ಸಾಮ್ರಾಜ್ಯ ನಿರ್ಮಾಪಕನಾಗಿ ಮತ್ತು ಶ್ರೇಷ್ಠ ಆಡಳಿತಗಾರನಾಗಿ ಗುಪ್ತರ ಇತಿಹಾಸದಲ್ಲಿ ಇವನ ಹೆಸರು ಅದ್ವಿತೀಯ. ಸಮುದ್ರಗುಪ್ತನು ಮಹಾಪದ್ಮನಂದ ಮತ್ತು ಚಂದ್ರಗುಪ್ತರಂತೆ ಭಾರತದ ರಾಜಕೀಯ ಐಕ್ಯತೆಯ ಕನಸನ್ನು ಕಂಡಿದ್ದ ಮಹಾಸಾಮ್ರಾಟ. ಸಮುದ್ರ ಗುಪ್ತನು

ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಯುದ್ಧಗಳು ಮತ್ತು ದಿಗ್ವಿಜಯಗಳನ್ನು ಕೈಗೊಂಡು ಅಪಾರ ಯಶಸ್ಸು ಗಳಿಸಿದನು. ಸಮುದ್ರ ಗುಪ್ತನ ದಂಡಯಾತ್ರೆಗಳನ್ನು ನಾಲ್ಕು ವಿಭಾಗವಾಗಿ ವರ್ಗೀಕರಿಸಬಹುದು. ಡಾ. ವಿ.ಏ. ಸ್ಮಿತ್‌ರವರು ಸಮುದ್ರಗುಪ್ತನ ಈ ದಿಗ್ವಿಜಯಗಳನ್ನು ಪ್ರಶಂಶಿಸಿ "ಭಾರತದ ನೆಪೋಲಿಯನ್"ಎಂದು ಕರೆದಿದ್ದಾರೆ. ಸಮುದ್ರ ಗುಪ್ತನ ದಂಡೆಯಾತ್ರೆಯಲ್ಲಿ ಕೆಲವು ಸೈನಿಕ ಕಾರ್ಯಚರಣೆಗಳಾಗಿದ್ದರೇ, ಮತ್ತೆ ಕೆಲವು ಧರ್ಮ ವಿಜಯಗಳಾಗಿದ್ದವು.

ಸಮುದ್ರಗುಪ್ತನು ತನ್ನ ಉತ್ತರಭಾರತದ ದಂಡಯಾತ್ರೆಯಲ್ಲಿ ಕೆಲವು ದೊರೆಗಳನ್ನು ಸಿಂಹಾಸನದಿಂದ ತೆಗೆದು ಹಾಕಿ ಉತ್ತಮ ದೊರೆಗಳಿಗೆ ಅವಕಾಶ ಕಲ್ಪಿಸಿದನು. ಹಾಗೂ ಕೆಲವು ರಾಜರನ್ನು ಸೋಲಿಸಿ, ಆ ರಾಜ್ಯಗಳನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದನು. ತನ್ನ ಉತ್ತರ ಭಾರತದ ದಂಡೆಯಾತ್ರೆಯಲ್ಲಿ ಒಂಭತ್ತು ರಾಜರನ್ನು ಸೋಲಿಸಿದನು. ಅವರಲ್ಲಿ ಪ್ರಮುಖರಾದವರೆಂದರೆ ಅಚ್ಚುತ ಮತ್ತು ನಾಗಸೇನ. ಅಚ್ಯುತನು ಅಹಿಚ್ಛತ್ರ ರಾಜ್ಯದ ರಾಜನಾಗಿದ್ದನು. ನಾಗಸೇನನು ಪದ್ಮಾವತಿ ರಾಜ್ಯದ ದೊರೆಯಾಗಿದ್ದನು. ತನ್ನ ಉತ್ತರ ಭಾರತದ ದಂಡಯಾತ್ರೆಯ ಸಮಯದಲ್ಲಿ ಅಡ್ಡ ಬಂದ ಇನ್ನಿತರ ರಾಜರನ್ನು ಸಹ ಸೋಲಿಸಿದನು. ಈ ರೀತಿ ಸಮುದ್ರ ಗುಪ್ತನಿಂದ ಸೋಲಿಸಲ್ಪಟ್ಟ ರಾಜರೆಂದರೆ, **ಮಥುರ ರಾಜ್ಯದ ಗಣಪತಿ ನಾಗ, ನಾಗರ ದೊರೆ ನಾಗದತ್ತ, ಉತ್ತರ ಪ್ರದೇಶದ ಬುಲಂದರ್ ಷಹರ್ ರಾಜ್ಯದ ದೊರೆ ಮಾತಿಲ, ವಾಕಟಕ ದೊರೆ ರುದ್ರದೇವಿ, ಮತ್ತೊಬ್ಬ ನಾಗದೊರೆ ನಂದಿನ್‌ರಾಜ ಹಾಗೂ ಅಸ್ಸಾಮಿನ ದೊರೆ ಬಲವರ್ಮನ್** ಮೊದಲಾದ ದೊರೆಗಳನ್ನು ಉತ್ತರ ಭಾರತದ ದಂಡಯಾತ್ರೆಯ ಸಂದರ್ಭದಲ್ಲಿ ಸಮುದ್ರಗುಪ್ತನು ಸೋಲಿಸಿದನೆಂದು ಅಲಹಾಬಾದಿನ ಶಾಸನದಿಂದ ತಿಳಿದುಬರುತ್ತದೆ.

ಉತ್ತರ ಭಾರತದಲ್ಲಿನ ರಾಜರನ್ನು ಸೋಲಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಸಮುದ್ರಗುಪ್ತನು ದಕ್ಷಿಣ ಭಾರತದತ್ತ ತನ್ನ ಗಮನ ಹರಿಸಿದನು. ಅಲಹಬಾದ್ ಶಾಸನದ ಪ್ರಕಾರ ಇವನು ದಕ್ಷಿಣ ಭಾರತದ 12 ರಾಜರನ್ನು ಸೋಲಿಸಿದನು. ಆದುದರಿಂದ ಇವನು **'ದಕ್ಷಿಣಪಥೇಶ್ವರ'** ಎಂಬ ಬಿರುದನ್ನು ಧರಿಸಿದನು. ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ದಕ್ಷಿಣದ ರಾಜರು ಅವನ ಪ್ರಭುತ್ವವನ್ನು ಒಪ್ಪಿಕೊಂಡಿದ್ದಲ್ಲದೆ, ವಾರ್ಷಿಕ ಕಪ್ಪ ಕಾಣಿಕೆಗಳನ್ನು ನೀಡಲು ಸಹ ಒಪ್ಪಿದರು.

ಅಲಹಾಬಾದ್ ಸ್ತಂಭ ಶಾಸನದಲ್ಲಿ ಉಲ್ಲೇಖವಾಗಿರುವಂತೆ ದಕ್ಷಿಣ ಭಾರತದ 12 ರಾಜರುಗಳೆಂದರೆ, ಇಂದಿನ ಬಿಲಾಸ್‌ಪುರ, ರಾಯ್‌ಪುರ ಮತ್ತು ಸಂಬಾಲ್ ಪುರಗಳನ್ನು ಒಳಗೊಂಡಿದ್ದ ಕೋಸಲ ರಾಜ್ಯದ ರಾಜನಾದ **ಮಹೇಂದ್ರ;** ಒರಿಸ್ಸಾದ ಜೈಪುರ ಅರಣ್ಯ ಪ್ರದೇಶಗಳನ್ನೊಳಗೊಂಡಿದ್ದ ಮಹಾಕಾಂತಾರ ರಾಜ್ಯದ ರಾಜನಾದ **ವ್ಯಾಘ್ರರಾಜ** (ಇವನನ್ನು ವ್ಯಾಸರಾಜನೆಂದೂ ಕರೆಯಲಾಗುತ್ತದೆ); ಇಂದಿನ ಚಂದಾ ಜಿಲ್ಲೆಯನ್ನು ಒಳಗೊಂಡಿದ್ದ ಕೊರಾಲ ರಾಜ್ಯದ **ಮಾಂತರಾಜ;** ಇಂದಿನ ವಿಶಾಖಪಟ್ಟಣಂ ಜಿಲ್ಲೆಯ ಬೆಟ್ಟ ಪ್ರದೇಶಗಳನ್ನು ಒಳಗೊಂಡಿದ್ದ ಕೊಟ್ಟೂರು ರಾಜ್ಯದ ದೊರೆ **ಸ್ವಾಮಿದಾಸ** (ಸ್ವಾಮಿದತ್ತ); ರಂಡಪಲ್ಲಿಯ **ದಮನರಾಜ,** ಕಾಂಚಿಯ **ವಿಷ್ಣುಗೋಪ,** ಅವಮುಕ್ತದ **ನೀಲರಾಜ,** ವೆಂಗಿಯ **ಹಸ್ತಿವರ್ಮನ್,** ಪಲ್ಲಕ್ಕಾದ **ಉಗ್ರಸೇನ,** ದೇವರಾಷ್ಟ್ರದ **ಕುಬೇರ,** ಕೊಸ್ಥಲಪುರದ **ಧನಂಜಯ** ಹಾಗೂ ಇನ್ನಿತರ ಸಣ್ಣ ಪುಟ್ಟ ದಕ್ಷಿಣ ಭಾರತದ ದೊರೆಗಳನ್ನು ಸಮುದ್ರ ಗುಪ್ತನು ಸೋಲಿಸಿದನೆಂದು ಅಲಹಾಬಾದ್ ಸ್ತಂಭ ಶಾಸನದಿಂದ ತಿಳಿದು ಬರುತ್ತದೆ.

ದೂರದ ಪ್ರದೇಶಗಳನ್ನು ಸಾಮ್ರಾಜ್ಯದಲ್ಲಿ ಸೇರ್ಪಡಿಸಿಕೊಂಡು ಆಡಳಿತ ನಿರ್ವಹಿಸುವುದು ಕಷ್ಟವೆಂಬುದನ್ನು ಅರಿತಿದ್ದ ಸಮುದ್ರ ಗುಪ್ತನು ಆ ರಾಜ್ಯಗಳನ್ನು ಆಯಾ ರಾಜರಿಗೆ ಹಿಂತಿರುಗಿಸಿ ಅವರು ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದುದಲ್ಲದೆ ಅವುಗಳನ್ನು ಅಲ್ಲಿಯವರೆಗೂ ತನ್ನ ಸಾಮ್ರಾಜ್ಯದ ಗಡಿಯನ್ನಾಗಿ ಮಾಡಿಕೊಂಡನು.

ದಕ್ಷಿಣದ ದಂಡಯಾತ್ರೆಯ ನಂತರ ಸಮುದ್ರ ಗುಪ್ತನು ಎರಡನೇ ಬಾರಿಗೆ ಉತ್ತರ ಭಾರತದಲ್ಲಿ ದಂಡಯಾತ್ರೆಯನ್ನು ಕೈಗೊಂಡನು. ತನ್ನ ಸಾಮ್ರಾಜ್ಯದ ಸುತ್ತಲೂ ಇರುವ ಶತ್ರು ರಾಷ್ಟ್ರಗಳು ತನ್ನ ಸಾರ್ವಭೌಮತ್ವಕ್ಕೆ ಬೆದರಿಕೆಯನ್ನೊಡ್ಡುವಂತಿರುವುದನ್ನು ಗಮನಿಸಿ ಅವುಗಳನ್ನು ಪುನಃ ಸೋಲಿಸಿ ತನ್ನ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲು ತೀರ್ಮಾನಿಸಿದನು. ಎರಡನೇ ಬಾರಿಯ ಈ ದಂಡಯಾತ್ರೆಯಲ್ಲಿ ಆತ **ರುದ್ರದೇವ, ಚಂದ್ರವರ್ಮನ್, ಬಾಲವರ್ಮನ್, ನಾಗದತ್ತ** ಮತ್ತು **ನಂದಿನ್** ಎಂಬ ಮೊದಲಾದ ರಾಜರನ್ನು ರಣರಂಗದಲ್ಲಿ ಮಣಿಸಿದನು.

ಅಲಹಾಬಾದ್ ಸ್ತಂಭ ಶಾಸನದ ಪ್ರಕಾರ ಮೇಲ್ಕಂಡ ರಾಜರಲ್ಲದೆ ಇನ್ನೂ ಅನೇಕ ರಾಜರನ್ನು ಮೂಲೋಚ್ಛಾಟನೆ ಮಾಡಿ ಆರ್ಯವರ್ತದ ಚಿಕ್ಕ ಪುಟ್ಟ ರಾಜ್ಯಗಳನ್ನು ತನ್ನ ಸಾಮ್ರಾಜ್ಯದ ಅಧೀನಕ್ಕೆ ತಂದನು. ಈ ದಂಡಯಾತ್ರೆಯ ಮೂಲಕ ಸಮುದ್ರ ಗುಪ್ತನು ಆರ್ಯಾವರ್ತದಲ್ಲಿ ರಾಜಕೀಯ ಐಕ್ಯತೆಯನ್ನು ಸ್ಥಾಪಿಸಿದನು.

## 53.5.3 ಅಡವಿ ರಾಜ್ಯಗಳ ಮೇಲೆ ಯುದ್ಧ

ಅಲಹಾಬಾದ್ ಸ್ತಂಭ ಶಾಸನವು ಸಮುದ್ರಗುಪ್ತನು ಅಡವಿ ರಾಜ್ಯಗಳ ಎಲ್ಲ ರಾಜರನ್ನು ಸೋಲಿಸಿದನೆಂದು ತಿಳಿಸುತ್ತದೆ. ಬಸ್ತಿಯ ದೊರೆ ಪರಿವ್ರಾಜಕನ ತಾಮ್ರ ಶಾಸನವು ಸಮುದ್ರಗುಪ್ತನು 18 ಅಡವಿ ರಾಜ್ಯಗಳ ರಾಜರನ್ನು ಸೋಲಿಸಿದನೆಂದು ತಿಳಿಸುತ್ತದೆ. ಅಂತಹ ರಾಜರುಗಳಲ್ಲಿ ಪ್ರಮುಖವಾದುವೆಂದರೆ ದಭಾಲರಾಜ್ಯ (ಜಬ್ಬಲ್‌ಪುರದ ಸುತ್ತ ಮುತ್ತಲಿನ ಪ್ರದೇಶ ) ಈ ರಾಜ್ಯವನ್ನು ಹಸ್ತಿನ್ ಎಂಬುವವನು 18 ಅಡವಿ ರಾಜ್ಯಗಳನ್ನು ಒಗ್ಗೂಡಿಸಿ ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಇನ್ನುಳಿದ ರಾಜ್ಯಗಳು ಚೋಟ ನಾಗಪುರದ ಪ್ರದೇಶದಲ್ಲಿದ್ದವು.

## 53.5.4 ಗಡಿರಾಜ್ಯಗಳು ಮತ್ತು ವಿದೇಶಿ ರಾಜ್ಯಗಳು

ಸಮುದ್ರ ಗುಪ್ತನ ಯಶಸ್ವಿ ದಿಗ್ವಿಜಯಗಳನ್ನು ಗಮನಿಸದ ಗಡಿ ರಾಜ್ಯಗಳು ಮತ್ತು ಗಣ ರಾಜ್ಯಗಳು ಅವನೊಂದಿಗೆ ಸ್ನೇಹದಿಂದಿರಲೂ ಶರಣಾಗಿ ಕಪ್ಪ ಕಾಣಿಕೆಗಳನ್ನು ಅರ್ಪಿಸಿದವು. ಹಾಗೂ ಅವು ಸಮುದ್ರ ಗುಪ್ತನ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಗೌರವ ಸಲ್ಲಿಸಬೇಕಾಗಿತ್ತು. ಹೀಗೆ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಪೂರ್ವ ಭಾರತದ ರಾಜ್ಯಗಳೆಂದರೆ **ಸಮತಾಟ, ಕಾಮರೂಪ, ನೇಪಾಳ, ದೇವಕ, ಕರ್ತ್ರಿಪುರ.** ಗುಪ್ತ ಸಾಮ್ರಾಜ್ಯದ ಗಡಿಭಾಗಗಳಲ್ಲಿದ್ದ ಬುಡಕಟ್ಟು ರಾಜರೆಂದರೆ, **ಮಾಳವರು, ಅರ್ಜುನಾಯನರು, ಯೌದೇಯರು, ಮುದ್ರಕರು** ಮೊದಲಾದವರು. ಇವರು ಸಮುದ್ರ ಗುಪ್ತನಿಗೆ ಉಗ್ರವಾದ ಹೋರಾಟ ನೀಡಿ ಕೊನೆಗೆ ಅವನಿಂದಲೇ ಸೋಲಿಸಲ್ಪಟ್ಟರು. ತದನಂತರ ಇವುಗಳಲ್ಲಿ ಕೆಲವನ್ನು ಸಮುದ್ರ ಗುಪ್ತನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಎರಡನೇ ಗುಂಪಿನ ಬುಡಕಟ್ಟು ರಾಜ್ಯಗಳಾದ ಅಬೀರರು. ಪುರ್ಜನರು, ಸನಕನಿಕರು, ಕಾಕರು ಮತ್ತು ಖರಪರಿಕರು ಸಮುದ್ರ ಗುಪ್ತನಿಂದ ಸೋಲಿಸಲ್ಪಟ್ಟು ಗುಪ್ತ ಸಾಮ್ರಾಜ್ಯದಲ್ಲಿ ಸೇರಿ ಹೋದರು.

ಅಲಹಾಬಾದ್ ಶಾಸನದಲ್ಲಿ ಕಂಡು ಬರುವಂತೆ ಸಮುದ್ರ ಗುಪ್ತನೊಂದಿಗೆ ಅನೇಕ ನೆರೆ ರಾಜ್ಯಗಳು ಉತ್ತಮ ಸಂಬಂಧ ಹೊಂದಿದ್ದವು. ಅಂತಹ ರಾಜ್ಯಗಳಲ್ಲಿ ದೈವಪುತ್ರ -ಷಾಹಿ-ಷಹಾನು-ಶಾಹಿಗಳೆಂದು ಕರೆದುಕೊಳ್ಳುತ್ತಿದ್ದ **ಶಕಮುರುಂಡರು, ಷತ್ರಪರು, ಸಿಂಹಳದೇಶ, ಮಲಯ, ಜಾವಾ, ಸುಮಾತ್ರ** ಮತ್ತಿತರ ರಾಜರುಗಳು ಸಮುದ್ರ ಗುಪ್ತನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು.

ಸಿಂಹಳ ದ್ವೀಪದೊಂದಿಗೆ ಸಮುದ್ರ ಗುಪ್ತನು ಉತ್ತಮ ಸಂಬಂಧ ಹೊಂದಿದ್ದನು. ಚೀನಿ ಬರಹಗಳ ಪ್ರಕಾರ ಸಿಂಹಳ ದ್ವೀಪದ ರಾಜನಾದ ಮೇಘವರ್ಮನು ಇಬ್ಬರು ಬೌದ್ಧ ಭಿಕ್ಷುಗಳನ್ನು ಭಾರತದ ಯಾತ್ರ ಸ್ಥಳವಾದ ಬೋದ-ಗಯಾಕ್ಕೆ ಕಳುಹಿಸಿದನು. ಆದರೆ ಅವರಿಗೆ ವಾಸ್ತವ್ಯಕ್ಕೆ ಮತ್ತು ಇತರ ಸೌಲಭ್ಯಗಳಿಗೆ ತೊಂದರೆಯಾಯಿತು. ಆದ್ದರಿಂದ ಮೇಘವರ್ಣನು ಸಿಂಹಳದಿಂದ ಬೌದ್ಧ ಯಾತ್ರಾ ಸ್ಥಳಗಳಿಗೆ ಭಾರತಕ್ಕೆ ಹೋಗುವ ಬೌದ್ಧ ಪ್ರವಾಸಿಗರಿಗೆ ತೊಂದರೆಯಾಗುವುದನ್ನು ತಪ್ಪಿಸಲು ತನ್ನ ರಾಯಭಾರಿಗಳನ್ನು ಅಮೂಲ್ಯವಾದ ಕಾಣಿಕೆ ಸಮೇತ ಸಮುದ್ರಗುಪ್ತನ ಆಸ್ಥಾನಕ್ಕೆ ಕಳುಹಿಸಿ ಬೋದ-ಗಯಾದಲ್ಲಿ ಒಂದು ವಿಹಾರವನ್ನು ಕಟ್ಟಿಸಲು ಅಪ್ಪಣೆ ಕೋರಿದನು. ಸಮುದ್ರ ಗುಪ್ತನು ಸಿಂಹಳದ ರಾಜನ ಕೋರಿಕೆಯನ್ನು ಮನ್ನಿಸಿ ವಿಹಾರ ಕಟ್ಟಿಸಲು ಅನುಮತಿ ನೀಡಿದನು. ಅದರಂತೆ ಸಿಂಹಳದ ರಾಜನು ಬೋದಿವೃಕ್ಷದ ಉತ್ತರಕ್ಕೆ ಬಹು ಸುಂದರವಾದ ವಿಹಾರವನ್ನು ತನ್ನ ದೇಶದ ಪ್ರವಾಸಿಗರಿಗಾಗಿ ನಿರ್ಮಿಸಿದನು. ಹೂಯನ್‌ತ್ಸಾಂಗನು ತಿಳಿಸುವಂತೆ ಸಿಂಹಳದ ರಾಜನು "ತನ್ನ ದೇಶದ ಎಲ್ಲ ಆಭರಣಗಳನ್ನು ಕಾಣಿಕೆಯಾಗಿ ಭಾರತಕ್ಕೆ ಸಲ್ಲಿಸುತ್ತಾನೆಂದು" ತಿಳಿಸಿದ್ದಾನೆ.

ಹೀಗೆ ಆಗ್ನೇಯ ಏಷ್ಯಾದ ದ್ವೀಪಗಳಲ್ಲಿದ್ದ ಹಿಂದೂ ವಸಾಹತುಗಳು ಮಾತೃ ದೇಶವಾದ ಭಾರತದೊಂದಿಗೆ ಮೊದಲಿನಿಂದಲೂ ಸಂಪರ್ಕ ಹೊಂದಿದ್ದು, ಅದು ಸಮುದ್ರ ಗುಪ್ತನ ಕಾಲದಲ್ಲೂ ಮುಂದುವರಿಯಿತು.

## 53.5.5 ಸಮುದ್ರ ಗುಪ್ತನ ಸಾಮ್ರಾಜ್ಯ ವಿಸ್ತಾರ

**ಡಾ. ಆರ್.ಸಿ. ಮಜುಂದಾರ್** ಅವರ ಪ್ರಕಾರ ಸಮುದ್ರ ಗುಪ್ತನು ತನ್ನ ಪ್ರಾಬಲ್ಯದ ಕಾಲದಲ್ಲಿ ಸಾಮ್ರಾಜ್ಯವನ್ನು ಉತ್ತರ ಭಾರತಾದ್ಯಂತ ವಿಸ್ತರಿಸಿದನು. **ಡಾ. ಆರ್. ಕೆ. ಮುಖರ್ಜಿ** ಅವರ ಪ್ರಕಾರ ಸಮುದ್ರ ಗುಪ್ತನ ಸಾಮ್ರಾಜ್ಯವು ಉತ್ತರ ಭಾರತದಲ್ಲಿ ಹಿಮಾಲಯದಿಂದ ಹಿಡಿದು ದಕ್ಷಿಣದಲ್ಲಿ ನರ್ಮದಾ ನದಿಯವರೆಗೆ ಮತ್ತು ಪಂಜಾಬಿನಿಂದ ಹಿಡಿದು ಬ್ರಹ್ಮಪುತ್ರಾ ನದಿಯವರೆಗೆ ಹರಡಿದ್ದಿತು. ಒಟ್ಟಿನಲ್ಲಿ ಉತ್ತರ ಭಾರತದ ಬಹುಭಾಗಗಳು ಸಮುದ್ರ ಗುಪ್ತನ ನೇರ ಆಡಳಿತಕ್ಕೆ ಒಳಗಾಗಿದ್ದವು. ಇದು ಭಾರತದಲ್ಲಿ ಅಶೋಕನ ಅನಂತರ ಕಾಣಿಸಿಕೊಂಡ ವಿಶಾಲ ಸಾಮ್ರಾಜ್ಯವಾಗಿದ್ದಿತು.

ಸಮುದ್ರಗುಪ್ತನು ತನ್ನ ದಿಗ್ವಿಜಯಗಳ ಕುರುಹಾಗಿ ಅಶ್ವಮೇಧ ಯಾಗವನ್ನು ಆಚರಿಸಿ **'ಅಶ್ವಮೇಧಪರಾಕ್ರಮ'** ಎಂಬ ಬಿರುದನ್ನು ಧರಿಸಿದನು. ಅಶ್ವಮೇಧ ಯಾಗದ ಸ್ಮರಣಾರ್ಥವಾಗಿ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಆ ಮೂಲಕ ಪರಕೀಯ ಪ್ರಭಾವಕ್ಕೊಳಗಾಗಿದ್ದ ನಾಣ್ಯ ಪದ್ಧತಿಯನ್ನು ಸುಧಾರಿಸಿದನು. ಛತ್ರ, ಕಾಚ, ವೀಣ, ಅಶ್ವಮೇಧ, ಶಂಕ ಮೊದಲಾದ 8 ಬಗೆಯ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಈ ರೀತಿಯಲ್ಲಿ ಸಮುದ್ರಗುಪ್ತನು ಆಡಳಿತ, ನಾಣ್ಯ ಪದ್ಧತಿ ಹಾಗೂ ಕಲೆ ಮೊದಲಾದವುಗಳ ಮೇಲೆ ಮೂಡಿದ್ದ ಪರಕೀಯ ಪ್ರಭಾವವನ್ನು ಹೋಗಲಾಡಿಸಿ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಬೆಳೆದಿದ್ದ ವಿಶಿಷ್ಟ ಸಂಪ್ರದಾಯಗಳನ್ನು ಆಚರಣೆಗೆ ತಂದನು. ಸಮುದ್ರಗುಪ್ತ ಯೋಧ ಧುರಂಧರನಾಗಿದ್ದಂತೆ ಸಾಂಸ್ಕೃತಿಕ ಪರಂಪರೆಯ ಸರ್ವ ಶ್ರೇಷ್ಠನೇತಾರನಾಗಿದ್ದನು. ಅವನು ಧರ್ಮಶಾಸ್ತ್ರ ಪಾರಂಗತನೂ ಕಲೆ ಸಾಹಿತ್ಯ ಹಾಗೂ ಸಂಗೀತ ಪ್ರಿಯನೂ ಆಗಿದ್ದನು. ಸಮುದ್ರಗುಪ್ತನಿಗೆ 'ಕವಿರಾಜ' ಎಂಬ ಬಿರುದಿದ್ದಿತು. ಅವನು ಸಂಸ್ಕೃತ ಭಾಷೆಯಲ್ಲಿ 'ಕೃಷ್ಣಚರಿತ' ಎಂಬ ಗ್ರಂಥ ಬರೆದಿರುವುದಲ್ಲದೆ ವಿಷ್ಣುವಿನ ಪರಮ ಆರಾಧಕನಾಗಿದ್ದನು. ಆದರೂ ಅವನು ಪರಮತ ಸಹಿಷ್ಣುವಾಗಿದ್ದನು. ಸಮುದ್ರಗುಪ್ತ ಕ್ರಿ.ಶ. 380 ರ ಸುಮಾರಿನಲ್ಲಿ ಮರಣ ಹೊಂದಿದನು. ಅವನು ಪ್ರಾಚೀನ ಭಾರತದ ಚರಿತ್ರೆಯಲ್ಲಿ ತನ್ನ ಸಾಹಸಮಯವಾದ ಹಾಗೂ ಸಾಂಸ್ಕೃತಿಕ ಸಾಧನೆಗಳಿಂದ ವಿಶಿಷ್ಟ ಸ್ಥಾನ ಗಳಿಸಿದ್ದಾನೆ.

## 53.6 ಎರಡನೇ ಚಂದ್ರಗುಪ್ತ (ಕ್ರಿ.ಶ. 380-414)

ಎರಡನೇ ಚಂದ್ರಗುಪ್ತ ಗುಪ್ತ ಸಾಮ್ರಾಟರಲ್ಲಿ ಮತ್ತೊಬ್ಬ ವಿಖ್ಯಾತ ಸಾಮ್ರಾಟ. ಸಮಕಾಲೀನ ಶಾಸನಗಳ ಪ್ರಕಾರ ಸಮುದ್ರಗುಪ್ತನ ನಂತರ ಅವನ ಮಗ ಎರಡನೇ ಚಂದ್ರಗುಪ್ತನು ಕ್ರಿ.ಶ. 380ರಲ್ಲಿ ಅಧಿಕಾರಕ್ಕೆ ಬಂದನು. ಚಂದ್ರಗುಪ್ತನನ್ನು 'ವಿಕ್ರಮಾದಿತ್ಯ'ನೆಂದೂ ಕರೆಯಲಾಗುತ್ತಿತ್ತು. ಇವನ ಆಳ್ವಿಕೆಯ ಕಾಲ ಭಾರತೀಯ ಸಂಸ್ಕೃತಿಯ ಅತ್ಯುನ್ನತಿಯ ಕಾಲ. ಆದರೆ ಕೆಲವು ವಿದ್ವಾಂಸರು ಚಂದ್ರಗುಪ್ತನು ಅಧಿಕಾರಕ್ಕೆ ಬರುವ ಮೊದಲು ಸಮುದ್ರಗುಪ್ತನ ಮಕ್ಕಳಲ್ಲಿ ಒಬ್ಬನಾದ ರಾಮಗುಪ್ತನು ಪಟ್ಟಕ್ಕೆ ಬಂದಿದ್ದನೆಂದು ವಿಶಾಕದತ್ತನ 'ದೇವಿಚಂದ್ರಗುಪ್ತಂ' ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ರಾಮಗುಪ್ತನು ಶತ್ರುಗಳನ್ನು ಸದೆಬಡಿದು ರಾಜ್ಯ ಕಟ್ಟಲು ಅಸಮರ್ಥನಾಗಿದ್ದುದರಿಂದ ಚಂದ್ರಗುಪ್ತನು ಅವನನ್ನು ಬದಿಗೊತ್ತಿ ಅಧಿಕಾರಕ್ಕೆ ಬಂದನೆಂದು ತಿಳಿದು ಬರುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಇತಿಹಾಸಜ್ಞರಲ್ಲಿ ಭಿನ್ನ ಅಭಿಪ್ರಾಯಗಳಿವೆಯಾದರೂ, ಎರಡನೇ ಚಂದ್ರಗುಪ್ತನು ಸಮುದ್ರಗುಪ್ತನ ನಿಜವಾದ ಉತ್ತರಾಧಿಕಾರಿ ಎಂದು ಸಾಮಾನ್ಯವಾಗಿ ನಂಬಲಾಗಿದೆ. ಈತನು ತಂದೆಯಂತೆ ವೀರಯೋಧ, ಮಹಾದಿಗ್ವಿಜಯಿ, ಶ್ರೇಷ್ಠ ಆಡಳಿತಗಾರ ಹಾಗೂ ಧರ್ಮ,ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಮಹಾಪೋಷಕ.

## 53.6.1 ಎರಡನೇ ಚಂದ್ರಗುಪ್ತನ ದಿಗ್ವಿಜಯಗಳು

ಎರಡನೇ ಚಂದ್ರಗುಪ್ತನು ಸಮುದ್ರಗುಪ್ತನ ರಾಣಿ ದತ್ತಾದೇವಿಯ ಪುತ್ರ. ಇವನು ಅಧಿಕಾರಕ್ಕೆ ಬಂದಾಗ ರಾಜ್ಯದಲ್ಲಿ ಸುಭಿಕ್ಷವಿದ್ದಿತು. ಶತ್ರುಗಳ ಭೀತಿಯಿರಲಿಲ್ಲ. ತನ್ನ ಸಾಮ್ರಾಜ್ಯದ ಪಶ್ಚಿಮ ಗಡಿಯಲ್ಲಿ ಆಳುತ್ತಿದ್ದ ಶಕರನ್ನು ನಿರ್ನಾಮ ಮಾಡಲು ಚಂದ್ರಗುಪ್ತನು ನಿರ್ಧರಿಸಿದನು. ಶ್ರೇಷ್ಠ ತಂದೆಗೆ ಶ್ರೇಷ್ಠ ಮಗನಾಗಿದ್ದ ಎರಡನೇ ಚಂದ್ರಗುಪ್ತ ತನ್ನ ತಂದೆ ಪಾಲಿಸಿದ್ದ ಆಕ್ರಮಣ ಮತ್ತು ವಿಸ್ತರಣಾ ನೀತಿಯನ್ನೇ ಪಾಲಿಸಿದ. ತನ್ನ ತಂದೆ ಆರಂಭಿಸಿದ ಕಾರ್ಯವನ್ನು ಪೂರೈಸಿದ ಮತ್ತು ಅದಕ್ಕೆ ಹೊಸ ಆಯಾಮ ಕೊಟ್ಟನು.

ಸಾಮ್ರಾಜ್ಯ ವಿಸ್ತರಣೆಗೆ ಚಂದ್ರಗುಪ್ತನು ಎರಡು ಬಗೆಯ ನೀತಿಯನ್ನು ಅನುಸರಿಸಿದನು. ಅವುಗಳೆಂದರೆ ರಾಜಕೀಯ ವೈವಾಹಿಕ ಮೈತ್ರಿ ಸಂಬಂಧಗಳು ಮತ್ತು ಆಕ್ರಮಣಕಾರಿ ಯುದ್ಧಗಳು. ಗುಪ್ತರ ಆಳ್ವಿಕೆಯಲ್ಲಿ ವೈವಾಹಿಕ ಮೈತ್ರಿಗಳು ಬಹುಮುಖ್ಯ ಪಾತ್ರ ವಹಿಸಿದ್ದವು. ಎರಡನೇ ಚಂದ್ರಗುಪ್ತ ನಾಗ ರಾಜಕುಮಾರಿ ಕುಬೇರನಾಗಳನ್ನು ವಿವಾಹವಾಗಿ ನಾಗರ ಬೆಂಬಲ ಗಳಿಸಿದನು. ನಂತರ ವಾಕಟಕರೊಡನೆ ಸ್ನೇಹವನ್ನು ಬಯಸಿ ತನ್ನ ಮಗಳಾದ ಪ್ರಭಾವತಿಯನ್ನು ವಾಕಟಕ ರಾಜ ಎರಡನೇ ರುದ್ರಸೇನನಿಗೆ ವಿವಾಹ ಮಾಡಿಕೊಟ್ಟನು. ಇದರಿಂದ ಅವನು ಮಧ್ಯ ಭಾರತ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಭಾವಶಾಲಿಯಾದ. ಇವು ಅವನಿಗೆ ಮುಂದಿನ ದಂಡಯಾತ್ರೆಗಳಿಗೆ ಆಯಕಟ್ಟಿನ ಸ್ಥಳಗಳನ್ನು ಮತ್ತು ಪ್ರಬಲ ರಾಜರ ಬೆಂಬಲಗಳಿಸಿಕೊಟ್ಟವು. ಬನವಾಸಿಯ ಕದಂಬ ಹಾಗೂ ತಲಕಾಡಿನ ಗಂಗ ಮನೆತನಗಳು ಮತ್ತು ಗುಪ್ತ ಸಂತತಿಯ ಮಧ್ಯೆ ಅವನ ಕಾಲದಲ್ಲಿ ವೈವಾಹಿಕ ಬಾಂಧವ್ಯವಿದ್ದಿತೆಂದು ತಿಳಿದು ಬರುತ್ತದೆ. ಕ್ರಿ.ಶ. 395 ರಲ್ಲಿ ಎರಡನೇ ಚಂದ್ರಗುಪ್ತನು ಶತಕ್ಷತ್ರಪರ ವಿರುದ್ಧ ದಂಡಯಾತ್ರೆ ಕೈಗೊಂಡಿದ್ದು, ಶಕರಾಜ ಮೂರನೇ ರುದ್ರಸಿಂಹನನ್ನು ಯುದ್ಧದಲ್ಲಿ ಕೊಂದು 'ಶಕಾರಿ' ಎಂಬ ಬಿರುದನ್ನು ಧರಿಸಿದನು. ನಾಗರ ಮತ್ತು ವಾಕಟಕರ ಬೆಂಬಲದಿಂದ ಮಾಳವ, ಗುಜರಾತ್ ಮತ್ತು ಸೌರಾಷ್ಟ್ರಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಈ ವಿಜಯದ ಸಂಕೇತವಾಗಿ ಚಂದ್ರಗುಪ್ತ 'ವಿಕ್ರಮಾಧಿತ್ಯ' ನೆಂಬ ಬಿರುದನ್ನು ಧರಿಸಿದುದಲ್ಲದೆ ಒಂದು ಅಶ್ವಮೇಧ ಯಾಗವನ್ನು ಮಾಡಿದನು.

ಶಕರ ಮೇಲಣ ದಿಗ್ವಿಜಯದ ಜ್ಞಾಪಕಾರ್ಥ ಎರಡನೇ ಚಂದ್ರಗುಪ್ತ ಬಂಗಾರದ ಹೊಸ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವುಗಳಲ್ಲಿ ರಾಜನು ಸಿಂಹವನ್ನು ಕೊಲ್ಲುವ ಚಿತ್ರವಿದೆ. ಹೀಗೆ ಎರಡನೇ ಚಂದ್ರಗುಪ್ತನ ಯಶಸ್ವಿ ದಿಗ್ವಿಜಯಗಳು ಉತ್ತರ ಭಾರತದಲ್ಲಿ ವಿದೇಶಿ ಪ್ರಭುತ್ವವನ್ನು ಕೊನೆಗಾಣಿಸಿದವು. ದೆಹಲಿಯ ಮೆಹರೂಲಿ ಶಾಸನದ ಪ್ರಕಾರ ಅವನ ಸಾಮ್ರಾಜ್ಯ ಬ್ಯಾಕ್ಟ್ರಿಯದವರೆಗೂ ವಿಸ್ತರಿಸಿತ್ತು.

ಎರಡನೇ ಚಂದ್ರಗುಪ್ತನ ಕಾಲದಲ್ಲಿ ಗುಪ್ತ ಸಾಮ್ರಾಜ್ಯ ಸಮುದ್ರದ ತೀರದವರೆಗೂ ವ್ಯಾಪಿಸಿದುದರಿಂದ ವಾಣಿಜ್ಯ ಮತ್ತು ವ್ಯಾಪಾರದಲ್ಲಿ ವಿಶೇಷ ಪ್ರಗತಿಯುಂಟಾಯಿತು. ಉಜ್ಜೈನಿ ನಗರ ವ್ಯಾಪಾರ ಮತ್ತು ಸಾಂಸ್ಕೃತಿಕ ಕೇಂದ್ರವಾಯಿತು. ಎರಡನೇ ಚಂದ್ರಗುಪ್ತನು 'ವಿಕ್ರಮಾದಿತ್ಯ' 'ವಿಕ್ರಮಾಂಕ' 'ಪರಮಭಾಗವತ' 'ಸಿಂಹವಿಕ್ರಮ' 'ಶಕಾರ' 'ದೇವರಾಜ' ಹಾಗೂ ಇನ್ನಿತರ ಬಿರುದುಗಳನ್ನು ಹೊಂದಿದ್ದನು. ಗುಪ್ತ ವಂಶದ ವೈಭವ ಈತನ ಕಾಲದಲ್ಲಿ ಶೃಂಗಕ್ಕೇರಿತು. ತನ್ನ ತಂದೆಯ ಹಾದಿಯಲ್ಲೇ ನಡೆದ ಚಂದ್ರಗುಪ್ತನು ತನ್ನ ಪ್ರಜೆಗಳ ಸಮಸ್ಯೆಗಳಿಗೆ ಸ್ಪಂದಿಸಿ, ಅವರಿಗೆ ಪ್ರಿಯನಾಗಿದ್ದನು. ಕಲೆ ಮತ್ತು ಸಾಹಿತ್ಯಕ್ಕೆ ರಾಜಾಶ್ರಯವನ್ನು ನೀಡಿದನು. ಚಂದ್ರಗುಪ್ತನು ತನ್ನ ತಂದೆಯಂತೆಯೇ ಹಲವು ರೀತಿಯ ಬೆಳ್ಳಿ ಮತ್ತು ಬಂಗಾರದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದನು. ಈತನ ಕಾಲದಲ್ಲಿ ಚೀನಾದ ಪ್ರಸಿದ್ಧ ಯಾತ್ರಿಕ ಫಾಹೀಯಾನನು ಇವನ ಆಸ್ಥಾನಕ್ಕೆ ಭೇಟಿ ನೀಡಿದ್ದನು.

## *53.6.2* ಫಾಹಿಯಾನ

ಎರಡನೇ ಚಂದ್ರಗುಪ್ತನ ಕಾಲದಲ್ಲಿ ಪ್ರಸಿದ್ಧ ಚೀನಾದೇಶದ ಯಾತ್ರಿಕ ಫಾಹಿಯಾನ (399-414) ಭಾರತಕ್ಕೆ ಭೇಟಿಯಿತ್ತಿದ್ದನು. ಈತನು ಗುಪ್ತ ಸಾಮ್ರಾಜ್ಯದ ಅನೇಕ ಭಾಗಗಳಿಗೆ ಭೇಟಿ ನೀಡಿ, ಸುಮಾರು ಒಂಬತ್ತು ವರ್ಷಗಳ ಕಾಲ ಭಾರತದಲ್ಲಿದ್ದನು. ಫಾಹಿಯಾನನು ತನ್ನ ಅನುಭವ ಹಾಗೂ ವಾಸಿಸಿದ ಅನೇಕ ಸ್ಥಳಗಳು ಹಾಗೂ ಘಟನೆಗಳ ಬಗೆಗೆ ವಿವರವಾದ ಸಂಗ್ರಹವೊಂದನ್ನು ರಚಿಸಿದನು. ಫಾಹಿಯಾನನು ಚೀಣಾದೇಶದಿಂದ ಹೊರಟು ಮರುಭೂಮಿಯನ್ನು ದಾಟಿ ಖೋಟಾನ್, ಕ್ಯಾಷ್‌ವರ್, ಉದಯ, ಆಫ್ಘಾನಿಸ್ಥಾನ, ಗಾಂಧಾರ ಮತ್ತು ಪಂಜಾಬ್‌ಗಳಲ್ಲಿ ಸಂಚರಿಸಿ ಮಥುರ ನಗರವನ್ನು ತಲುಪಿದನು.

ಚಂದ್ರಗುಪ್ತನು ವೈಷ್ಣವ ಮತವನ್ನು ಅನುಸರಿಸುತ್ತಿದ್ದರೂ ಪರಮತ ಸಹಿಷ್ಣುವಾಗಿದ್ದನೆಂದು ಫಾಹಿಯಾನ್ ತನ್ನ ಬರವಣಿಗೆಯಲ್ಲಿ ತಿಳಿಸುತ್ತಾನೆ. ಪವಿತ್ರ ಸ್ಥಳಗಳಾದ ಮಥುರ, ನಳಂದ, ಗಯಾ, ಕಪಿಲವಸ್ತು, ಕನೂಜ್, ಅಯೋಧ್ಯೆ, ಶ್ರಾವಸ್ತ, ಕುಶಿನಗರ, ವೈಶಾಲಿ ರಾಜಗೃಹ ಮುಂತಾದ ಕಡೆಗಳಿಗೆ ಭೇಟಿ ನೀಡಿ ಅಲ್ಲಿ ಬೌದ್ಧ ಸನ್ಯಾಸಿಗಳನ್ನು ಕಂಡನೆಂದು ಹೇಳುತ್ತಾನೆ. ಪಾಟಲಿಪುತ್ರದಲ್ಲಿ ಸುಮಾರು ಮೂರು ವರುಷಗಳ ಕಾಲ ನೆಲೆಸಿದ್ದು ಅಲ್ಲಿ ತಾನು ಕಂಡು ಕೇಳಿದ ಜನರ ಆಚಾರ ವಿಚಾರಗಳನ್ನು ವರ್ಣಿಸಿದ್ದಾನೆ. ಅಲ್ಲಿಯ ಜನರು ಸುಖಿಗಳಾಗಿದ್ದು ಅಪರಾಧಗಳು ಬಹು ಅಪರೂಪವೆಂದು ತಿಳಿಸುತ್ತಾನೆ. ರಾಜ್ಯಾದ್ಯಾಂತ ಜನರು ಜೀವಂತ ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಮಧ್ಯಪಾನ ಮಾಡುವುದಿಲ್ಲ, ಈರುಳ್ಳಿ, ಬೆಳ್ಳುಳ್ಳಿ ತಿನ್ನುವುದಿಲ್ಲ ಎಂದು ತಿಳಿಸುತ್ತಾನೆ. ಫಾಹಿಯಾನನು ಗುಪ್ತರ ಸಾಮ್ರಾಜ್ಯದಲ್ಲಿ

ತಾನು ಗಮನಿಸಿದ ಹಲವು ಸಾಮಾಜಿಕ ಸ್ಥಿತಿಗಳನ್ನು ವಿವರಿಸಿರುವನು. ಚಂಡಾಲರು ಬೇಟೆಯಾಡಿ ಮಾಂಸಾಹಾರ ಸೇವಿಸುತ್ತಿದ್ದರು ಎಂದು ಹೇಳುವ ಫಾಹಿಯಾನ್ ಅವರು ನಗರಗಳನ್ನು ಸಮೀಪಿಸುವಾಗ ತಮಟೆಗಳನ್ನು ಭಾರಿಸುವುದರ ಮೂಲಕ ತಮ್ಮ ಬರುವಿಕೆಯನ್ನು ಸೂಚಿಸಿ ಮೇಲಿನ ವರ್ಗದವರು ತಮ್ಮಿಂದ ದೂರವಿರುವಂತೆ ಎಚ್ಚರಿಕೆ ವಹಿಸಬೇಕಾಗಿತ್ತು ಎಂಬುದಾಗಿ ಫಾಹಿಯಾನ್ ವರ್ಣಿಸಿರುವನು. ಈ ವರ್ಣನೆ ಮೇಲ್ವರ್ಗದವರು ಅಸ್ಪೃಶ್ಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಸೂಚಿಸುತ್ತದೆ.

ಪಾಟಲಿಪುತ್ರದಲ್ಲಿನ ಭವ್ಯ ಅರಮನೆಗಳನ್ನು, ಧರ್ಮ ಛತ್ರಗಳನ್ನು, ವೈದ್ಯ ಶಾಲೆಗಳನ್ನು ಕಂಡು ಫಾಹಿಯಾನನು ಬೆರಗಾಗಿದ್ದನು. ಪಾಟಲಿ ಪುತ್ರದಲ್ಲಿ ಹಿಂದೆ ಅಶೋಕನಿಂದ ನಿರ್ಮಾಣಗೊಂಡಿದ್ದ ಅರಮನೆಯ ಭವ್ಯತೆ ಮತ್ತು ವೈಶಾಲ್ಯತೆಯನ್ನು ಗಮನಿಸಿ ಅದು ದೇವ ಶಿಲ್ಪಿಗಳಿಂದ ನಿರ್ಮಾಣಗೊಂಡಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾನೆ. ಪಾಟಲಿ ಪುತ್ರದಲ್ಲಿ ಧರ್ಮ ಛತ್ರಗಳು ದಾರಿಯ ಇಕ್ಕೆಡೆಗಳಲ್ಲಿದ್ದು ಪ್ರವಾಸಿಗರಿಗೆ, ಸನ್ಯಾಸಿಗಳಿಗೆ, ಬಡವರಿಗೆ, ಅನಾಥರಿಗೆ ಅನ್ನ, ನೀರು ವಸತಿಯನ್ನೊದಗಿಸುತ್ತಿದ್ದವೆಂದು ಹೇಳುತ್ತಾನೆ. ಪಾಟಲಿ ಪುತ್ರದ ಶ್ರೀಮಂತರು ಉಚಿತ ಆಸ್ಪತ್ರೆಗಳನ್ನು, ಬಡವರು, ಅನಾಥರು, ಮತ್ತು ರೋಗಿಗಳಿಗೆ ಚಿಕಿತ್ಸೆ ನೀಡಲು ಸ್ಥಾಪಿಸಿದ್ದರು. ಹೀಗೆ ಫಾಹಿಯಾನನ ಬರವಣಿಗೆಯು ಆ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಗಳನ್ನು ತಿಳಿಯಲು ಪ್ರಮುಖ ಆಧಾರವಾಗಿದೆ.

## 53.7 ಕೊನೆಯ ಗುಪ್ತ ದೊರೆಗಳು

ಎರಡನೇ ಚಂದ್ರಗುಪ್ತನ ನಂತರ ಅವನ ಮಗ ಮೊದಲನೇ ಕುಮಾರ ಗುಪ್ತನು ಕ್ರಿ.ಶ. 414 ರಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ. 455 ರವರೆಗೂ ಆಳ್ವಿಕೆ ನಡೆಸಿದನೆಂದು ಅವನ ಕಾಲದ ಹೆಚ್ಚು ಸಂಖ್ಯೆಯ ಶಾಸನಗಳು ಮತ್ತು ನಾಣ್ಯಗಳಿಂದ ತಿಳಿದು ಬರುತ್ತದೆ. ಕುಮಾರು ಗುಪ್ತನೂ ಒಂದು ಅಶ್ವಮೇಧ ಯಾಗವನ್ನು ಆಚರಿಸಿದುದಾಗಿ ಅವನು ಅಚ್ಚು ಹಾಕಿಸಿದ ನಾಣ್ಯಗಳಿಂದ ತಿಳಿದು ಬರುತ್ತದೆ. ಈತನು ಪೂರ್ವಜರಷ್ಟು ಶಕ್ತನಾಗಿರಲಿಲ್ಲ. ಆದುದರಿಂದ ಈತನ ಕಾಲದಲ್ಲಿ ಗುಪ್ತ ಸಾಮ್ರಾಜ್ಯದ ಅವನತಿಯು ಆರಂಭವಾಯಿತು.

ಐದನೇ ಶತಮಾನದ ಪ್ರಾರಂಭದಲ್ಲಿ ಮಧ್ಯ ಏಷ್ಯಾದಿಂದ ಬಂದ ಹೂಣರು ಬ್ಯಾಕ್ಟ್ರೀಯ ಪ್ರಾಂತ್ಯವನ್ನು ಆಕ್ರಮಿಸಿ, ಭಾರತಕ್ಕೆ ದಂಡೆತ್ತಿ ಬರಲು ಅವಕಾಶವನ್ನು ಕಲ್ಪಿಸಿಕೊಂಡರು. ಕುಮಾರ ಗುಪ್ತನ ಕಾಲದಲ್ಲಿ ಹೂಣರು ಹಿಂದೂಕುಷ್ ಪರ್ವತವನ್ನು ದಾಟಿ ಬಂದು ಗುಪ್ತ ಸಾಮ್ರಾಜ್ಯದ ಗಡಿ ಪ್ರದೇಶವನ್ನು ಆಕ್ರಮಿಸಲು ತೀವ್ರವಾದ ಪ್ರಯತ್ನವೇನು ಮಾಡಲಿಲ್ಲ. ಆದುದರಿಂದ ಯಾವುದೇ ಪ್ರಬಲ ಬಾಹ್ಯ ದುರಾಕ್ರಮಣವಿಲ್ಲದೆ ಕುಮಾರಗುಪ್ತನ ಆಳ್ವಿಕೆಯು ಕೊನೆಗೊಂಡಿತು.

ಒಂದನೇ ಕುಮಾರಗುಪ್ತನಿಗೆ ಅನಂತಾದೇವಿ ಎಂಬ ಪಟ್ಟದ ರಾಣಿಯೊಬ್ಬಳಿದ್ದಳೆಂದೂ, ಅವಳ ಮಗನಾದ ಪುರಗುಪ್ತನಿಗೂ ಕುಮಾರಗುಪ್ತನ ಮತ್ತೊಬ್ಬ ರಾಣಿಯ ಮಗನಾದ ಸ್ಕಾಂದ ಗುಪ್ತನಿಗೂ ಸಿಂಹಾಸನಕ್ಕೆ ಹೋರಾಟ ನಡೆದು ಸ್ಕಾಂದಗುಪ್ತ ಜಯಶಾಲಿಯಾಗಿ ಸಿಂಹಾಸನ ಪಡೆದನೆಂಬುದಾಗಿ ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ.

ಕುಮಾರಗುಪ್ತನ ನಂತರ ಗುಪ್ತ ಸಾಮ್ರಾಜ್ಯದ ಅಧಿಪತಿಯಾಗಿ ಆತನ ಮಗ ಸ್ಕಾಂದ ಗುಪ್ತನು ಅಧಿಕಾರಕ್ಕೆ ಬಂದನು. ಇವನು ಸುಮಾರು ಹನ್ನೆರಡು ವರ್ಷಗಳ ಕಾಲ (455-467) ರವರೆಗೆ ರಾಜ್ಯವಾಳಿದನು. ಅವನ ಆಳ್ವಿಕೆಯ ಕಾಲದಲ್ಲಿ ಹೂಣರು ಹಿಂದೂಕುಷ್ ಪರ್ವತ ಶ್ರೇಣಿಯನ್ನು ದಾಟಿ ಬಂದು ಗುಪ್ತರ್ ವಾಯುವ್ಯ ಗಡಿ ಪ್ರದೇಶದ ವಿರುದ್ಧ ದಾಳಿಯನ್ನು ಪ್ರಾರಂಭಿಸಿದನು. ಸ್ಕಾಂದಗುಪ್ತನು ಹೂಣರ ಧಾಳಿಯನ್ನು ಯಶಸ್ವಿಯಾಗಿ ತಡೆಗಟ್ಟಿದ್ದರೂ ತನ್ನ ಸಾಮ್ರಾಜ್ಯದ ಭದ್ರತೆಯನ್ನು ಸಂಪೂರ್ಣವಾಗಿ ಕಾಪಾಡಲು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿ ವಿಷಮವಾದದ್ದು, ಸಾಮ್ರಾಜ್ಯದಲ್ಲಿ ಉಂಟಾದ ಆರ್ಥಿಕ ಅವನತಿಯಿಂದಾಗಿ ಸ್ಕಾಂದಗುಪ್ತನ ಮರಣಾನಂತರ ಅವನ ಮಗ ಪುರುಗುಪ್ತನು ಕ್ರಿ.ಶ. 467 ರಲ್ಲಿ ಅಧಿಕಾರಕ್ಕೆ ಬಂದನು. ಇವನು ಅಂತಹ ಬಲಿಷ್ಠ ರಾಜನಾಗಿರದೇ ಇದ್ದುದರಿಂದ ಇವನ ಮರಣದ ನಂತರ ಗುಪ್ತ ರಾಜ್ಯವು ಅವನತಿಯ ಅಂಚಿಗೆ ಬಂದು ತಲುಪಿತು.

ಪುರುಗುಪ್ತನ ಮರಣಾನಂತರ ನರಸಿಂಹಗುಪ್ತ ಮತ್ತು ಎರಡನೇ ಕುಮಾರಗುಪ್ತ ಎಂಬುವವರು ಕ್ರಮವಾಗಿ ಸ್ವಲ್ಪ ಕಾಲ ಆಳಿದರೆಂದು ಭಿಶಾರಿ ಶಾಸನದಿಂದ ತಿಳಿದು ಬರುತ್ತದೆ. ಎರಡನೇ ಸ್ಕಾಂದಗುಪ್ತನ ನಂತರ ಪುರುಗುಪ್ತನ ಮಗನಾದ ಬುಧಗುಪ್ತನು ಕ್ರಿ.ಶ. 477 ರಿಂದ 495 ರವರೆಗೆ ಆಳಿದನು. ಇವನ ಶಾಸನಗಳು ದಾಮೋದರ, ಸಾರನಾಥ ಮತ್ತು ಈರಾನ್ ಮೊದಲಾದ ಕಡೆಗಳಲ್ಲಿ

ದೊರೆತ್ತಿರುವುದರಿಂದ ಗುಪ್ತ ಸಾಮ್ರಾಜ್ಯ ಇವನ ಕಾಲದಲ್ಲಿ ಇನ್ನೂ ಸ್ವಲ್ಪ ಪ್ರಬಲವಾಗಿತ್ತೆಂದು ನಂಬ ಬಹುದಾಗಿದೆ. ಒಟ್ಟಿನಲ್ಲಿ ಕ್ರಿ.ಶ. 500 ರ ಹೊತ್ತಿಗೆ ಗುಪ್ತರ ಸಾಮ್ರಾಜ್ಯ ಸಿಂಹಾಸನಕ್ಕಾಗಿ ನಡೆದ ಅಂತಃಕಲಹಗಳು ಸಾಮಂತ ವರ್ಗದ ಪ್ರತಿರೋಧ ಮತ್ತೂ ಹೂಣರ ದಾಳಿಗಳಿಂದ ನಾಶವಾಯಿತು.

## 53.8 ಗುಪ್ತ ಸಾಮ್ರಾಜ್ಯದ ಪತನ

ಸ್ಕಾಂದ ಗುಪ್ತನ ಮರಣಾನಂತರ ಪಟ್ಟಕ್ಕೆ ಬಂದ ಗುಪ್ತ ರಾಜರು ಅಸಮರ್ಥರಾಗಿದ್ದರು. ಹೂಣರ ದಾಳಿಗಳೂ, ಪ್ರಾಂತ್ಯಾಧಿಕಾರಿಗಳ ಅಸಹಕಾರವೂ, ಸಿಂಹಾಸನಕ್ಕಾಗಿ ನಡೆದ ಕಲಹಗಳೂ, ಸಾಮಂತ ರಾಜರ ಸ್ವಾತಂತ್ರಾಕಾಂಕ್ಷೆಯೂ ಗುಪ್ತ ಸಾಮ್ರಾಜ್ಯದ ವಿನಾಶಕ್ಕೆ ಮುಖ್ಯ ಕಾರಣಗಳಾಗಿ ಪರಿಣಮಿಸಿದವು. ಕುಮಾರಗುಪ್ತ ಮತ್ತು ಸ್ಕಾಂದ ಗುಪ್ತರು ಹೂಣರ ದಾಳಿಗಳಿಂದ ಸಾಮ್ರಾಜ್ಯವನ್ನು ಹಲಕಾಲ ರಕ್ಷಿಸಿದರು. ಅವರ ಅನಂತರ ಪಟ್ಟಕ್ಕೆ ಬಂದ ರಾಜರು ಹೂಣರನ್ನು ಅಡಗಿಸಲು ಸಮರ್ಥರಾಗಿರಲಿಲ್ಲ.

ಹೂಣರ ದಂಡನಾಯಕರಾದ ತೋರಮಾನ ಮತ್ತು ಮಿಹಿರಗುಲರು ಗಾಂಧಾರ, ಪಂಜಾಬ ಮತ್ತು ರಾಜಾಸ್ಥಾನ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಕ್ರಮೇಣ ಹೂಣರ ಪ್ರಾಬಲ್ಯ ನಾನಾ ಕಾರಣಗಳಿಂದ ಕುಂಠಿತವಾದರೂ ಅವರ ದಾಳಿಯಿಂದುಂಟಾದ ಗೊಂದಲಮಯ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಪ್ರಾಂತ್ಯಾಧಿಕಾರಿಗಳೂ ಸಾಮಂತ ರಾಜರೂ ಪ್ರಬಲರಾದರು. ಸ್ಕಾಂದ ಗುಪ್ತನ ಅನಂತರ ಉತ್ತರಾಧಿಕಾರಕ್ಕಾಗಿ ಅಂತಃ ಕಲಹಗಳು ತಲೆದೋರಿದವು. ಈ ಅಂತಃ ಕಲಹಗಳಿಂದ ಕೇಂದ್ರಾಡಳಿತದ ಪ್ರಭಾವ ಕುಂದಿತು. ಅಂತಹ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಪ್ರಾಂತ್ಯಾಧಿಕಾರಿಗಳೂ, ಸಾಮಂತರೂ ಕ್ರಮೇಣ ಸ್ವತಂತ್ರರಾದರು. ಅವರನ್ನು ಶಿಕ್ಷಿಸಿ ಹತೋಟಿಗೊಳಪಡಿಸಿಕೊಳ್ಳುವ ಸಾಮರ್ಥ್ಯವು ಆಳ್ವಿಕೆ ನಡೆಸುತ್ತಿದ್ದ ಅಂದಿನ ಗುಪ್ತ ಸಾಮ್ರಾಟರಿಗಿರಲಿಲ್ಲ.

ಕ್ರಿ.ಶ. 6ನೇ ಶತಮಾನದ ಪೂರ್ವಾರ್ಧದಲ್ಲಿ ಪಶ್ಚಿಮ ಮಾಳವದಲ್ಲಿ ಯಶೋವರ್ಮ ಪ್ರಬಲನಾಗಿ ಅನೇಕ ರಾಜರನ್ನೂ, ಮಿಹಿರಕುಲನನ್ನೂ ಸೋಲಿಸಿದನು. ಯಶೋವರ್ಮನ ಪ್ರಾಬಲ್ಯ ದೀರ್ಘಕಾಲದ್ದಾಗಿರದಿದ್ದರೂ ಅವನ ನೀತಿಯನ್ನು ಸಾಮ್ರಾಜ್ಯದ ಅನೇಕ ಸಾಮಂತ ಮನೆತನಗಳು ಅನುಸರಿಸಿದವು. ಕನ್ನಕುಬ್ಜದ ಮೌಖಾರಿ ಸಂತತಿ ಸ್ವತಂತ್ರವಾಯಿತು. ಮಾಳವ ಹಾಗೂ ಬಂಗಾಳದ ಪ್ರಾಂತ್ಯಾಧಿಕಾರಿಗಳೂ ಸ್ವತಂತ್ರರಾಗಿ 'ಮಹಾರಾಜ' ಎಂಬ ಬಿರುದನ್ನು ಹೊಂದಿ ಆಳತೊಡಗಿದರು. ಕ್ರಮೇಣ ಅನುವಂಶಿಕ ಪ್ರಮುಖ ಸ್ಥಾನಗಳಲ್ಲಿ ನಿಯಮಿತರಾಗಿದ್ದ ಅಧಿಕಾರಿಗಳೂ ಸ್ವತಂತ್ರವಾಗಿ ಆಡಳಿತ ಮುಂದುವರಿಸಿದರು. ಸಾಮ್ರಾಜ್ಯದ ಆಡಳಿತ ಪರಿಸ್ಥಿತಿ ಕುಸಿದಂತೆ ಆರ್ಥಿಕ ಪರಿಸ್ಥಿತಿಯೂ ಅಭದ್ರವಾಗುತ್ತಾ ಬಂದಿತು. ಗುಪ್ತ ಸಂತತಿಯ ಕೊನೆಗಾಲದಲ್ಲಿ ಆಳಿದ ರಾಜರು ಸಾಮ್ರಾಜ್ಯದಲ್ಲಿ ತಲೆದೋರಿದ ದುಸ್ಥಿತಿಗಳನ್ನು ನಿವಾರಿಸಲು ಸಮರ್ಥರಾಗಿರಲಿಲ್ಲ. ಮೇಲ್ಕಂಡ ಕಾರಣಗಳಿಂದ ಗುಪ್ತ ಸಾಮ್ರಾಜ್ಯ ಒಡೆದು ಹೋಯಿತು.

## 53.9 ಘಟಕದ ಸಾರಾಂಶ

ಇದುವರೆವಿಗೂ ನಾವು ಪ್ರಾಚೀನ ಭಾರತದ ರಾಜಕೀಯ ರಂಗದಲ್ಲಿ ಗುಪ್ತರ ಸಾಮ್ರಾಜ್ಯವು ಎಷ್ಟರ ಮಟ್ಟಿಗೆ ಯಶಸ್ವಿಯಾಯಿತು ಎಂಬುದನ್ನು ಅಭ್ಯಾಸ ಮಾಡಿದಂತಾಗಿದೆ. ಅವರ ಇತಿಹಾಸದ ಬಗೆಗೆ ತಿಳಿದುಕೊಳ್ಳಲು ವಿವಿಧ ಆಕಾರಗಳು ಲಭ್ಯವಿದೆ ಎಂಬುದನ್ನು ಗಮನಿಸಲಾಯಿತು. ಚಂದ್ರಗುಪ್ತ - I, ಗುಪ್ತರ ಪ್ರಥಮ ರಾಜನಾದರೂ, ಸಮುದ್ರ ಗುಪ್ತ ಹಾಗೂ ಎರಡನೇ ಚಂದ್ರಗುಪ್ತರ ಕಾಲದಲ್ಲಿ ಗುಪ್ತ ಸಾಮ್ರಾಜ್ಯ ತನ್ನ ಔನತ್ಯವನ್ನು ಕಂಡಿತ್ತು. ದೇಶವಿದೇಶಗಳಲ್ಲಿ ಅದರ ಪ್ರಭಾವ ಬೀರಿತ್ತು. ಉತ್ತರ ಮತ್ತು ದಕ್ಷಿಣ ಭಾರತಗಳೆರಡೂ ಏಕ ಸಾಮ್ರಾಜ್ಯದ ಪ್ರಭಾವಕ್ಕೆ ಒಳಗಾಗಿತ್ತು ಎಂಬುದನ್ನು ಅರಿತುಕೊಂಡಂತಾಗಿದೆ.

## 53.10 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು


1. ಪ್ರೊ. ರಂಗಸ್ವಾಮಯ್ಯ .ಜಿ.ಆರ್. : ಪ್ರಾಚೀನ ಭಾರತ
2. ಶಾರದಪ್ರಸಾದ್ (ಅನು) : ಪ್ರೌಢ ಭಾರತದ ಇತಿಹಾಸ
3. ಶಿವಣ್ಣ ಆರ್. ಜಿ. : ಉತ್ತರ ಭಾರತದ ಇತಿಹಾಸ
4. ಭಾರತೀಯ ವಿದ್ಯಾಭವನ ಕೃತಿಗಳು : ಅಭಿಜಾತಯುಗ (ಗುಪ್ತಯುಗ) ಭಾಗ 1& 2
5. Mujumdar .R.C. : **The Age of Imperial Unity, Bharatiya Vidya Bhavan Series**
6. Banerjee .R.D. : **The Age of the Imperial Gupta 1931.**


ಡಾ. ಮಹಾದೇವಿ

# ಟಿಪ್ಪಣಿ

ಘಟಕ - 54

# ಗುಪ್ತರ ಕಾಲದಲ್ಲಿ ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು

ರಚನೆ

**54.0.** ಉದ್ದೇಶ

**54.1.** ಪೀಠಿಕೆ

**54.2.** ಗುಪ್ತರ ಆಡಳಿತ ಪದ್ಧತಿ

- **54.2.1** ಗಣರಾಜ್ಯಗಳು
- **54.2.2.** ರಾಜಪ್ರಭುತ್ವ
- **54.2.3** ಮಂತ್ರಿ ಪರಿಷತ್
- **54.2.4** ನಾಗರಿಕ ಅಧಿಕಾರಿಗಳು
- **54.2.5.** ಕಂದಾಯ ಆಡಳಿತ
- **54.2.6.** ಸೈನ್ಯಾಡಳಿತ
- **54.2.7.** ನ್ಯಾಯಾಡಳಿತ

**54.3.** ಆಡಳಿತ ವಿಭಾಗಗಳು

- **54.3.1.** ಪ್ರಾಂತ್ಯಡಳಿತ
- **54.3.2.** ಜಿಲ್ಲಾಡಳಿತ
- **54.3.3.** ನಗರಾಡಳಿತ
- **54.3.4.** ಗ್ರಾಮಾಡಳಿತ

**54.4.** ಗುಪ್ತರ ಕಾಲದ ಆರ್ಥಿಕ ಪರಿಸ್ಥಿತಿ

- **54.4.1** ಕೃಷಿ
- **54.4.2** ಕೈಗಾರಿಕೆ
- **54.4.3** ವ್ಯಾಪಾರ ಮತ್ತು ವಾಣಿಜ್ಯ
- **54.4.4** ವೃತ್ತಿ ಸಂಘಗಳು
- **54.4.5** ನಾಣ್ಯಗಳು

**54.5.** ಗುಪ್ತರ ಕಾಲದ ಸಾಮಾಜಿಕ ಪರಿಸ್ಥಿತಿ

- **54.5.1** ಸಮಾಜ ಜೀವನ
- **54.5.2** ಸ್ತ್ರೀಯರ ಸ್ಥಾನಮಾನ

**54.6.** ಘಟಕದ ಸಾರಾಂಶ

**54.7** ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು.

## 54.0. ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕೆಳಗಿನ ಈ ಅಂಶಗಳನ್ನು ನೀವು ತಿಳಿದುಕೊಳ್ಳಲಿದ್ದೀರಿ.

* ಗುಪ್ತರ ಆಡಳಿತದ ಪ್ರಾಮುಖ್ಯತೆಯನ್ನು ಗ್ರಹಿಸಲು
* ಅವರ ಆಡಳಿತದ ಪದ್ಧತಿಯನ್ನು ನಿರೂಪಿಸಲು
* ಅವರ ಕಾಲದಲ್ಲಿನ ಜನರ ಸಾಮಾಜಿಕ ಜೀವನವನ್ನು ವರ್ಣಿಸಲು
* ಗುಪ್ತರ ಯುಗದಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಗುರುತಿಸಲು
* ಗುಪ್ತರ ಕಾಲದಲ್ಲಿನ ವ್ಯವಸಾಯ, ವ್ಯಾಪಾರ ವಾಣಿಜ್ಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ಶಕ್ತರಾಗುವಿರಿ.

## 54.1. ಪೀಠಿಕೆ

ಪ್ರಿಯ ವಿದ್ಯಾರ್ಥಿಗಳೇ, ಹಿಂದಿನ ಘಟಕದಲ್ಲಿ ಕುಶಾನರ ಪತನದ ನಂತರ ಭಾರತದಲ್ಲಿ ಉಂಟಾಗಿದ್ದ ರಾಜಕೀಯ ಅಸ್ಥಿರತೆಯನ್ನು ತೊಡೆದು ಹಾಕಿ, ಐಕ್ಯತೆಯನ್ನು ಸಾಧಿಸುವ ಮೂಲಕ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿ, ಸುಭದ್ರ ಸರ್ಕಾರವನ್ನು ರಚಿಸುವ ಮೂಲಕ ಸ್ಥಿರತೆಯನ್ನು ಕೆಲವು ಕಾಲ ಎತ್ತಿ ಹಿಡಿದ ಗುಪ್ತರ ರಾಜಕೀಯ ಇತಿಹಾಸವನ್ನು ತಿಳಿದುಕೊಂಡಿರುವಿರಿ. ಈ ಘಟಕದಲ್ಲಿ ಗುಪ್ತರು ತಮ್ಮ ವಿಸ್ತಾರವಾದ ಸಾಮ್ರಾಜ್ಯದಲ್ಲಿ ಮೌರ್ಯರು ಹಿಂದೆ ಅಳವಡಿಸಿಕೊಂಡಿದ್ದ ಆಡಳಿತ ಪದ್ಧತಿಯನ್ನು ಹಲವು ಸುಧಾರಣೆಗಳೊಡನೆ ದಕ್ಷ ಹಾಗೂ ಪರಿಣಾಮಕಾರಿಯಾಗಿ ರೂಪಿಸುವ ಮೂಲಕ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಮಾಡಿರುವ ಹಾಗೂ ಅಂದು ಆಚರಣೆಗೆ ಬಂದಿದ್ದ ಪರಕೀಯ ಅಂಶಗಳನ್ನು ಹೋಗಲಾಡಿಸಿ ಕೌಟಿಲ್ಯ ಹಾಗೂ ಇತರ ದಂಡನೀತಿಕರ್ತೃಗಳ ಆಧಾರದ ಮೇಲೆ ಗುಪ್ತರು ಹೇಗೆ ಆಡಳಿತ ವ್ಯವಸ್ಥೆಯನ್ನು ಆಚರಣೆಗೆ ತಂದರು ಎಂಬ ವಿಚಾರಗಳನ್ನು ತಿಳಿದುಕೊಳ್ಳಲಿದ್ದೀರಿ.

ಗುಪ್ತರ ಆಡಳಿತವು ಪ್ರಜೆಗಳ ಮೇಲ್ಮೆಯ ದೃಷ್ಟಿ ಹೊಂದಿದ್ದು ಜನಾನುರಾಗದಿಂದ ಕೂಡಿದ್ದಿತು. ವಿಶಾಲವಾದ ಸಾಮ್ರಾಜ್ಯದಲ್ಲಿ ಬೇರೆ ಬೇರೆ ಪ್ರದೇಶಗಳು ಸಕ್ರಮವಾಗಿ ಸೇರ್ಪಡೆಯಾಗಿದ್ದುದರಿಂದ ಅವುಗಳ ಭದ್ರತೆಗಾಗಿ ಹಾಗೂ ಉತ್ತಮ ಆಡಳಿತ ನೆಲೆಗೊಳಿಸುವ ಸಲುವಾಗಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನುರಿತ ಅಧಿಕಾರಿಗಳನ್ನು ಅವರು ನೇಮಿಸಿಕೊಂಡಿದ್ದರು. ಸಾಮ್ರಾಜ್ಯದ ಆಡಳಿತ ನಡೆಸುವ ಪ್ರಭು ದೈವಾಂಶ ಸಂಭೂತನೆಂಬ ಅರ್ಥ ಬರುವಂಥಹ ಬಿರುದುಗಳನ್ನು ಗುಪ್ತ ದೊರೆಗಳು ಹೊಂದಿದ್ದಾಗ್ಯೂ ಅಧಿಕಾರ ದೈವದತ್ತವಾದುದೆಂಬ ನಂಬಿಕೆಯನ್ನು ಅವರು ಹೊಂದಿರಲಿಲ್ಲ. ಅವರ ಆಡಳಿತ ದರ್ಪದಿಂದ ಕೂಡಿರಲಿಲ್ಲ. ಬದಲಾಗಿ ಪ್ರಜೆಗಳ ಕ್ಷೇಮಾಭಿವೃದ್ಧಿಯ ಪರವಾಗಿರುತ್ತಿತ್ತು. ರಾಜ ಎಷ್ಟೇ ಪರಮಾಧಿಕಾರಗಳನ್ನು ಹೊಂದಿದ್ದಾಗ್ಯೂ ರಾಜ್ಯದ ಹಿರಿಯರ ಮತ್ತು ಹಿರಿಯ ಅಧಿಕಾರಿಗಳ ಸಲಹೆಗಳನ್ನು ಗಮನಿಸಿ ರಾಷ್ಟ್ರಧರ್ಮಕ್ಕನುಗುಣವಾಗಿ ಆಡಳಿತ ನಿರ್ವಹಣೆ ಮಾಡುವ ಪದ್ಧತಿಯನ್ನು ಗುಪ್ತರು ಪಾಲಿಸಿದರು.

ಗುಪ್ತರ ಆಡಳಿತ ಕ್ರಮವು ಜನಸಾಮಾನ್ಯರ ನೈತಿಕ, ಆರ್ಥಿಕ , ಬೌದ್ಧಿಕ ಅಭಿವೃದ್ಧಿ ಹಾಗೂ ಪ್ರಜೆಗಳ ಸರ್ವತೋಮುಖ ಪ್ರಗತಿಯ ಗುರಿಯನ್ನೊಂದಿರುತ್ತಿತ್ತು. ಇದರ ಪರಿಣಾಮವಾಗಿ ಗುಪ್ತ ಸಾಮ್ರಾಜ್ಯದಲ್ಲಿ ಶಾಂತಿಸುವ್ಯವಸ್ಥೆ ಮತ್ತು ಭದ್ರತೆಗಳು ನೆಲೆಗೊಂಡು ಜನರು ಸುಖಸಂವೃದ್ಧಿ ಜೀವನ ನಡೆಸಲು ಸಾಧ್ಯವಾಯಿತು.

## 54.2 ಗುಪ್ತರ ಆಡಳಿತ ಕ್ರಮ

ಮೌರ್ಯಸಾಮ್ರಾಜ್ಯದ ನಂತರ ಗುಪ್ತರು ಭಾರತದಲ್ಲಿ ಬಹು ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮೌರ್ಯರ ಕಾಲದಲ್ಲಿದ್ದ ಆಡಳಿತ ಪದ್ಧತಿಯನ್ನೇ ಕೆಲವು ಸೂಕ್ತವಾದ ಬದಲಾವಣೆಗಳೊಂದಿಗೆ ಅನುಸರಿಸಿದರು. ಇದನ್ನು ಪುಷ್ಟೀಕರಿಸುತ್ತಾ ಡಾ. ಸಾಲತೊರೆಯವರು ಹೀಗೆ ಹೇಳುತ್ತಾರೆ. " ಗುಪ್ತರ ಆಡಳಿತವು ಹಿಂದಿನ ವ್ಯವಸ್ಥೆಯ ಅಡಿಪಾಯದ ಮೇಲೆ ಆಗಿನ ಸಂದರ್ಭಕ್ಕೆ ಅನುಗುಣವಾಗುವಂತಹ ಬದಲಾವಣೆ ಮತ್ತು ಸುಧಾರಣೆಗಳನ್ನು ತಂದಂತಹ ವ್ಯವಸ್ಥೆಯಾಗಿತ್ತು. ಮೌರ್ಯರು ಮತ್ತು ಕುಶಾನರ ಕಾಲದಲ್ಲಿದ್ದ ಆಡಳಿತ ಹುದ್ದೆಗಳನ್ನು ಮತ್ತು ಅದರ ಕಾರ್ಯ ವೈಖರಿಯನ್ನು ಗುಪ್ತರು ಉಳಿಸಿಕೊಂಡು ಬಂದಾಗ್ಯೂ ಕೆಲವು ಆಡಳಿತ ನೀತಿಯನ್ನು ಬದಲಾಯಿಸಿದರು"ಎಂಬುವ ಅವರ ಹೇಳಿಕೆ ಗುಪ್ತರ ಆಡಳಿತ ವೈಖರಿಯ ಲಕ್ಷಣವನ್ನು ಪ್ರತಿಬಿಂಬಿಸುತ್ತದೆ. ಒಟ್ಟಿನಲ್ಲಿ ಗುಪ್ತರು

ಅನೈಕ್ಯಗೊಂಡಿದ್ದ ರಾಜ್ಯಗಳನ್ನು ಐಕ್ಯಗೊಳಿಸಿ, ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟುವ ಮೂಲಕ, ವ್ಯವಸ್ಥಿತವಾದ ಆಡಳಿತವನ್ನು ರೂಪಿಸಿ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಾನ್ ಪ್ರಗತಿಯನ್ನುಂಟು ಮಾಡಿದರು. ಮೇಲೆ ಹೇಳಿದಂತೆ ಮೌರ್ಯರು ಮತ್ತು ಕುಶಾನರ ಕಾಲದ ಆಡಳಿತದ ರೂಪರೇಷೆಗಳ ತಳಹದಿಯ ಮೇಲೆ ತಮ್ಮ ಆಡಳಿತ ವ್ಯವಸ್ಥೆಯನ್ನು ಗುಪ್ತರು ರೂಪಿಸಿದ್ದರಾದರೂ ತಮ್ಮದೇ ಆದ ಕೆಲವು ವಿಶಿಷ್ಟತೆಗಳನ್ನು ಹೊಂದಿದ್ದರು. ರಾಜನು ಸ್ವೇಚ್ಛಾಧಿಕಾರದಿಂದ ಆಡಳಿತ ನಡೆಸದೆ ಧರ್ಮ, ಸನ್ನಡತೆ, ಕರ್ತವ್ಯ, ಶ್ರದ್ಧೆ, ಗುರುಹಿರಿಯರಿಗೆ ಮಾರ್ಯದೆ ರಾಜ್ಯದ ಸಮಸ್ಯೆಗಳನ್ನು ಸಚಿವ ಸಮಿತಿಯಲ್ಲಿ ನಿರ್ಧರಿಸುವುದು, ಪ್ರಜಾಹಿತಕಾರ್ಯಗಳಿಗೆ ಆದ್ಯ ಗಮನ ನೀಡುವುದು ಮೊದಲಾದ ಪರಂಪರಾನುಗತವಾಗಿ ಬಂದ ರಾಜ್ಯ ಧರ್ಮಗಳನ್ನು ಗಮನಿಸಿ ಅವರು ಆಡಳಿತ ನಡೆಸಿದರು.

ಗುಪ್ತರ ಆಡಳಿತ ಪದ್ಧತಿಗೆ ಸಂಬಂಧಿಸಿದಂತೆ ಸಮುದ್ರಗುಪ್ತನ **ಅಲಹಾಬಾದ್ ಸ್ತಂಭಶಾಸನ, ಎರಡನೇ ಚಂದ್ರಗುಪ್ತನ ಚಂದ್ರಗಿರಿಶಾಸನ, ಉದಯಗಿರಿ ಶಾಸನ, ಸಾಂಚಿ ಮಥುರ, ಗದ್ವಾ, ರಿದ್ವಾಪುರ, ಮಹ್ರೌಲಿ ಸ್ತಂಭಶಾಸನಗಳು, ಸ್ಮಾರಕಗಳು, ಮುದ್ರಿಕೆಗಳು** ಹಾಗೂ ಸಮಕಾಲೀನ ದೇಶಿಯ ಮತ್ತು ವಿದೇಶಿಯ ಬರವಣಿಗೆಗಳು ಅಗಾಧ ಬೆಳಕನ್ನು ಚೆಲ್ಲುತ್ತವೆ. ಈ ಆಧಾರಗಳಿಂದ ಗುಪ್ತರ ಆಡಳಿತ ವ್ಯವಸ್ಥೆಯು ಕೇಂದ್ರೀಕೃತ ಆಡಳಿತ ವ್ಯವಸ್ಥೆಯಾಗಿದ್ದು ರಾಜನು ಆಡಳಿತದ ಕೇಂದ್ರಬಿಂದುವಾಗಿದ್ದನೆಂದು ವ್ಯಕ್ತವಾಗುತ್ತದೆ. ಈ ದಿಸೆಯಲ್ಲಿ ಗುಪ್ತರ ಆಡಳಿತವನ್ನು ರಾಜತ್ವ, ಮಂತ್ರಿಮಂಡಲ, ಸೈನ್ಯಾಡಳಿತ, ನ್ಯಾಯಾಡಳಿತ, ಪ್ರಾಂತ್ಯಾಡಳಿತ, ಜಿಲ್ಲಾಡಳಿತ ಮತ್ತು ಗ್ರಾಮಾಡಳಿತಗಳಾಗಿ ವರ್ಗೀಕರಿಸಬಹುದು. ಗುಪ್ತರ ಕಾಲದಲ್ಲಿ ರಾಜಪ್ರಭುತ್ವ ಮತ್ತು ಗಣರಾಜ್ಯಗಳು ಅಸ್ತಿತ್ವದಲ್ಲಿದ್ದುದಾಗಿ ಕಂಡುಬರುತ್ತದೆ.

## 54.2.1. ಗಣರಾಜ್ಯಗಳು

ಗುಪ್ತರ ಕಾಲದ ಪ್ರಾಚೀನ ಭಾರತದಲ್ಲಿ ರಾಜತ್ವ ಆಡಳಿತಕ್ಕೆ ಹೆಚ್ಚು ಪ್ರಾಮುಖ್ಯತೆಯಿದ್ದರೂ ಕೆಲವು ಗಣರಾಜ್ಯಗಳೂ ಅಸ್ತಿತ್ವದಲ್ಲಿದ್ದುದ್ದು ಕಂಡು ಬರುತ್ತದೆ. ಗುಪ್ತರ ಕಾಲದಲ್ಲಿದ್ದ ಪ್ರಮುಖವಾದ ಗಣರಾಜ್ಯಗಳೆಂದರೆ **'ಮುದ್ರ' 'ಕುನಿಂದ' 'ಯೌಧೇಹ', 'ಅರ್ಜುನಾಯನ' ಮತ್ತು' ಮಾಲವ'**. ಇವು ಇಂದಿನ ಪಂಜಾಬ್ ಮತ್ತು ರಾಜಸ್ಥಾನದ ಪ್ರದೇಶಗಳಲ್ಲಿ ನೆಲೆಗೊಂಡಿದ್ದವು. ಪ್ರತಿಯೊಂದು ಗಣರಾಜ್ಯಕ್ಕೂ ಕೇಂದ್ರಿಯ ಚುನಾಯಾತ ಸಭೆ ಇದ್ದಿತು. ಗುಪ್ತರ ಕಾಲದಲ್ಲಿ ಈ ಸಭೆಯ ಸದಸ್ಯತ್ವವು ವಂಶಪಾರಂಪರ್ಯವಾಗುತ್ತಾ ಬಂದಿದ್ದಿತು. ಅಂತೆಯೇ ಈ ಸಭೆಗಳ ಅಧ್ಯಕ್ಷ ಪದವಿಯು ವಂಶಪಾರಂಪರ್ಯವಾಗಿ ಅವರು 'ಮಹಾರಾಜ'ರೆಂಬ ಅಭಿದಾನವನ್ನು ಹೊಂದಿದ್ದರು. ಗುಪ್ತ ಸಾಮ್ರಾಟರು ಈ ಗಣರಾಜ್ಯಗಳ ಮೇಲೆ ತಮ್ಮ ಸಾರ್ವಭೌಮತ್ವವನ್ನು ಏರ್ಪಡಿಸಿದ್ದರೂ ಅವುಗಳ ಸ್ವಯಮಾಡಳಿತ ವ್ಯವಸ್ಥೆಯಲ್ಲಿ ತಲೆಹಾಕುತ್ತಿರಲಿಲ್ಲ. ಕಾಲಕ್ರಮೇಣ ಈ ಗಣರಾಜ್ಯಗಳು ಕ್ರಿ.ಶ.ಸರಿ ಸುಮಾರು 400ರ ನಂತರ ಕಣ್ಮರೆಯಾದಂತೆ ತಿಳಿದುಬರುತ್ತದೆ.

## 54.2.2. ಕೇಂದ್ರಾಡಳಿತ (ರಾಜಪ್ರಭುತ್ವ)

ಗಣರಾಜ್ಯಗಳನ್ನು ಬಿಟ್ಟರೆ ಗುಪ್ತರ ಕಾಲದಲ್ಲಿ ಬಹುಪಾಲು ರಾಜ್ಯಗಳು ವಂಶಪಾರಂಪರ್ಯದ ರಾಜಪ್ರಭುತ್ವಗಳ ಆಳ್ವಿಕೆಗೆ ಒಳಪಟ್ಟಿದ್ದವು. ಈಗಾಗಲೇ ನಾವು ತಿಳಿದಿರುವಂತೆ ಗುಪ್ತರ ಆಡಳಿತವು ಕೇಂದ್ರಿಕೃತ ಆಡಳಿತ ವ್ಯವಸ್ಥೆಯಾಗಿದ್ದು ರಾಜನು ಅದರ ಕೇಂದ್ರಬಿಂದುವಾಗಿದ್ದನು. ಅವನು ಸಾಮ್ರಾಜ್ಯದ ಅತ್ಯುನತವಾದ ಸ್ಥಾನವನ್ನು ಹೊಂದಿದ್ದು ಅಪರಿಮಿತ ಅಧಿಕಾರವನ್ನು ತನ್ನಲ್ಲಿಯೇ ಕೇಂದ್ರಿಕರಿಸಿಕೊಂಡಿದ್ದನು. ರಾಜಾತ್ವವು ವಂಶಪಾರಂಪರ್ಯವಾಗಿತ್ತು. ಗುಪ್ತರ ಆಡಳಿತ ಪ್ರಜೆಗಳ ಮೇಲ್ಮೆಯ ದೃಷ್ಟಿ ಹೊಂದಿದ್ದು ಜನಾನುರಾಗದಿಂದ ಕೂಡಿದ್ದಿತು. ಗುಪ್ತ ಸಾರ್ವಭೌಮರು 'ಮಹಾರಾಜಾಧಿರಾಜ' 'ಪರಮಭಟ್ಟಾರಕ' 'ಪರಮದೈವ' 'ಸಾರ್ವಭೌಮ' 'ಸಾಮ್ರಾಟ' ಮೊದಲಾದ ಬಿರುದುಗಳನ್ನು ಹೊಂದಿದ್ದರು. ಅವರ ಕಾಲದಲ್ಲಿ ಬೇರೆ ಬೇರೆ ಪ್ರದೇಶಗಳು ಸಾಮ್ರಾಜ್ಯದ ಚೌಕಟ್ಟಿನೊಳಗೆ ಸಕ್ರಮವಾಗಿ ಅಡಕವಾಗಿದ್ದುದರಿಂದ ಆಡಳಿತ ಭದ್ರತೆಗಾಗಿ ಹೆಚ್ಚು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗಿತ್ತು.

ಗುಪ್ತರ ಆಡಳಿತ ಕೇಂದ್ರೀಕೃತವಾದುದಾಗಿದ್ದರೂ ಅದು ದರ್ಪಿಷ್ಟ ಪ್ರಭುತ್ವದಿಂದ ಕೂಡಿದುದಾಗಿರಲಿಲ್ಲ. ಪ್ರಭುದೈವಾಂಶ ಸಂಭೂತನೆಂಬ ಅರ್ಥ ಬರುವಂಥ ಬಿರುದುಗಳನ್ನು ಅವರು ಹೊಂದಿದ್ದಾಗ್ಯೂ ಅಧಿಕಾರ ದೈವದತ್ತವಾದುದೆಂಬ ನಂಬಿಕೆಯನ್ನು ಅವರು ಅವಲಂಬಿಸಿರಲಿಲ್ಲ. ರಾಜ್ಯದ ಹಿರಿಯರ ಸಲಹೆಗಳನ್ನು ಗಮನಿಸಿ ರಾಷ್ಟ್ರಧರ್ಮಕ್ಕನುಗುಣವಾಗಿ ಆಡಳಿತ ನಿರ್ವಹಣೆ ಮಾಡುವ

ಪದ್ಧತಿಯನ್ನು ಅವರು ಪಾಲಿಸಿದರು. ರಾಜ ಸ್ವೇಚ್ಛಾಧಿಕಾರ ಚಲಾಯಿಸದಂತೆ ಅನೇಕ ಸಂವಿಧಾನಾತ್ಮಕ ಅಡ್ಡಿಗಳಿದ್ದವು. ಅವುಗಳಲ್ಲಿ ಮುಖ್ಯವಾಗಿ ಧರ್ಮ, ಸನ್ನಡತೆ, ಕರ್ತವ್ಯ, ಶ್ರದ್ಧೆ, ಗುರುಹಿರಿಯರಿಗೆ ಮಾರ್ಯಾದೆ, ರಾಜ್ಯದ ಮುಖ್ಯ ಸಮಸ್ಯೆಗಳನ್ನು ಸಚಿವ ಸಮಿತಿಯಲ್ಲಿ ನಿರ್ಧರಿಸುವುದು, ಪ್ರಜಾಹಿತಕಾರ್ಯಗಳಿಗೆ ಆದ್ಯ ಗಮನ ನೀಡುವುದು, ಸಾಹಿತ್ಯ ಮತ್ತು ಕಲೆಯನ್ನು ಪ್ರೋತ್ಸಾಹಿಸುವುದು ಮೊದಲಾದ ಪರಂಪರಾನುಗತವಾಗಿ ಬಂದ ರಾಜ ಧರ್ಮವನ್ನು ಗಮನಿಸಿ ಗುಪ್ತ ರಾಜರು ಆಡಳಿತ ನಡೆಸಿದರು. ಆಸ್ಥಾನವು ಮಂತ್ರಿ ಪರಿಷತ್ತಿನಿಂದಲೂ, ವಿದ್ವಾಂಸರಿಂದಲೂ ರಾಜ್ಯದ ಹಿರಿಯ ಅಧಿಕಾರ ವರ್ಗದಿಂದಲೂ, ಮಾಂಡಲಿಕರಿಂದಲೂ ಕೂಡಿದುದಾಗಿತ್ತು. ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಗುಪ್ತ ವಂಶದ ರಾಜರು ತಮ್ಮದೇ ಆದ ಮಾರ್ಪಾಟನ್ನು ಅನುಸರಿಸಿದರು. ರಾಜಕುಮಾರರಲ್ಲಿ ಸರ್ವಶ್ರೇಷ್ಠನಾದವನನ್ನು ಉತ್ತರಾಧಿಕಾರಿಯಾಗಿ ಆರಿಸುವ ನೀತಿಯನ್ನು ಗುಪ್ತರು ಅನುಸರಿಸಿದರು. ಸಾಮ್ರಾಜ್ಯವನ್ನು ಪ್ರಾಂತಗಳನ್ನಾಗಿ ವಿಂಗಡಿಸಿ ಕ್ರಮಬದ್ಧವಾದ ಆರ್ಥಿಕ ಮತ್ತು ನ್ಯಾಯವಿತರಣೆಯ ಏರ್ಪಾಟನ್ನು ಗುಪ್ತರು ಆಚರಣೆಗೆ ತಂದರು. ಸಾಮ್ರಾಜ್ಯವನ್ನು ರಾಜ್ಯ, ರಾಷ್ಟ್ರ, ದೇಶ, ಮಂಡಲಗಳಾಗಿ ವಿಂಗಡಿಸಲಾಗಿತ್ತು.

ರಾಜನು ಸಾಮ್ರಾಜ್ಯದ ಸರ್ವೋತ್ಕೃಷ್ಟ ಅಧಿಕಾರಿಯಾಗಿದ್ದನು. ಆಡಳಿತ , ನ್ಯಾಯಾ ವಿತರಣೆ, ಸೈನ್ಯದ ಮೇಲ್ವಿಚಾರಣೆ ಇವುಗಳೆಲ್ಲದರಲ್ಲೂ ಅಂತಿಮ ತೀರ್ಮಾನ ಮತ್ತು ಅಧಿಕಾರ ರಾಜನಿಗೆ ಇದ್ದಿತು. ರಾಜನು ಮಂತ್ರಿಗಳನ್ನು, ನ್ಯಾಯಾಧಿಕಾರಿಗಳನ್ನು, ಪ್ರಾಂತ್ಯಗಳ ಮುಖ್ಯರನ್ನು ಇತರ ಹಿರಿಯ ಅಧಿಕಾರಿಗಳನ್ನು ಸ್ವತಃ ನೇಮಿಸಿಕೊಳ್ಳುತ್ತಿದ್ದನು. ಯುದ್ಧಕಾಲದಲ್ಲಿ ರಾಜನೇ ಸೈನ್ಯದ ಮುಖಂಡತ್ವ ವಹಿಸಿ ಸೈನಿಕರೊಂದಿಗೆ ರಣರಂಗದಲ್ಲಿ ಹೊರಾಡುತ್ತಿದ್ದನು. ಶಾಂತಿಕಾಲದಲ್ಲಿ ರಾಜ್ಯದಲ್ಲೆಲ್ಲ ಸಂಚರಿಸಿ ಪ್ರಜಾಹಿತಕಾರ್ಯವನ್ನು ನೇರವೇರಿಸುತ್ತಿದ್ದನು. ಉತ್ತಾರಾಧಿಕಾರಿಗಳನ್ನು ಆಯ್ಕೆ ಮಾಡುವುದು ವಿದ್ವಾಂಸರನ್ನು ಗೌರವಿಸುವುದು ಮೊದಲಾದ ಕರ್ತವ್ಯಗಳನ್ನು ಗುಪ್ತ ಸಾರ್ವಭೌಮರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಗುಪ್ತರ ಕಾಲದಲ್ಲಿ ಸಾಮ್ರಾಟನ ನಂತರ ಯುವರಾಜನು ಆಡಳಿತದ ಪ್ರಮುಖ ಅಧಿಕಾರಿಯಾಗಿರುತ್ತಿದ್ದನು. ಸಾಮಾನ್ಯವಾಗಿ ಹಿರಿಯ ಮಗನನ್ನು ಸಾಮ್ರಾಟನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡುತ್ತಿದ್ದನು. ರಾಜಕುಮಾರರಲ್ಲಿ ಸರ್ವಶ್ರೇಷ್ಠನಾದವನನ್ನು ಉತ್ತರಾಧಿಕಾರಿಯಾಗಿ ಆರಿಸುವ ನೀತಿಯನ್ನು ಗುಪ್ತರು ಅನುಸರಿಸಿದರು. ಸಾಮ್ರಾಟನು ದೈವಾಂಶಸಂಭೂ, ಅವನು ನಮ್ಮನ್ನು ಆಳಲು ಬಂದಿರುವ ದೇವರ ಪ್ರತಿನಿಧಿ ಎಂಬ ನಂಬಿಕೆ ಗುಪ್ತರ ಕಾಲದಲ್ಲಿ ಬಲವಾಗಿದ್ದಿತು. ಅಲಹಾಬಾದ್ ಸ್ತಂಭಶಾಸನದಲ್ಲಿ ಸಮುದ್ರ ಗುಪ್ತನನ್ನು "ಭೂಮಿಯ ಮೇಲೆ ವಾಸ ಮಾಡಲು ಬಂದಿರುವ ದೇವರೆಂದೂ ಮತ್ತು ಮಾನವರ ಸಂಸ್ಕಾರಗಳನ್ನು ಆಚರಿಸುವುದರಲ್ಲಿ ಮಾತ್ರ ಮಾನವನೆಂದೂ" ಉಲ್ಲೇಖಿಸಲಾಗಿದೆ. ಕೆಲವು ಶಾಸನಗಳಲ್ಲಿ ಗುಪ್ತ ಸಾಮ್ರಾಟರನ್ನು ಕುಬೇರ, ವರುಣ. ಇಂದ್ರರಿಗೆ ಸಮಾನರೆಂದು ಬಣ್ಣಿಸಲಾಗಿದೆ.

ಅವರು ಹೊಂದಿದ್ದ ಪರಮೇಶ್ವರ, ಪರಮದೇವ, ಪೃಥ್ವೀಪಾಲ ಇತ್ಯಾದಿಗಳು ಕೂಡ ಅದೇ ಅಂಶವನ್ನು ಸೂಚಿಸುತ್ತವೆ. ಎಲ್ಲ ಅಧಿಕಾರವೂ ಸಾಮ್ರಾಟನಲ್ಲೇ ಕೇಂದ್ರೀಕೃತವಾಗಿದ್ದರೂ ಸರ್ವಾಧಿಕಾರಿಯಾಗಿ ವರ್ತಿಸುತ್ತಿರಲಿಲ್ಲ. ಅಧಾರ್ಮಿಕನಾಗಿ ವರ್ತಿಸಿದರೆ ಅದು ಅವನನ್ನು ನಾಶ ಮಾಡುವುದೆಂಬ ನಂಬಿಕೆ ಇದ್ದಿತು. ಒಟ್ಟಿನಲ್ಲಿ ಪ್ರಜೆಗಳ ಕಲ್ಯಾಣ ಹಾಗೂ ರಕ್ಷಣೆ ರಾಜನ ಆದ್ಯ ಕರ್ತವ್ಯವಾಗಿದ್ದು, ಗುಪ್ತರ ದೊರೆಗಳು ಅದಕ್ಕನುಗುಣವಾದ ಆಡಳಿತ ವ್ಯವಸ್ಥೆ ರೂಪಿಸಿಕೊಂಡಿದ್ದರು.

## 54.2.3 ಮಂತ್ರಿ ಪರಿಷತ್

ಗುಪ್ತರ ಕಾಲದಲ್ಲಿ ಸಾಮ್ರಾಜ್ಯವು ವ್ಯಾಪಕವಾಗಿದ್ದುದ್ದರಿಂದ ಅವುಗಳ ನಿರ್ವಾಹಣೆ ಮಾಡುವುದು ರಾಜನೊಬ್ಬನಿಂದಲೇ ಸಾಧ್ಯವಿಗುತ್ತಿರಲಿಲ್ಲವಾದುದರಿಂದ ಗುಪ್ತ ದೊರೆಗಳು **'ಮಂತ್ರಿಮಂಡಲ'**ವನ್ನು ರಚಿಸಿಕೊಂಡಿದ್ದರು ಎಂಬುದಾಗಿ ಕಾಳಿದಾಸನ ಬರವಣಿಗೆಯಿಂದ ತಿಳಿದುಬರುತ್ತದೆ. ವಿಶಾಲವಾದ ಆಡಳಿತ ನಿರ್ವಹಣಾ ಕಾರ್ಯವು ರಾಜನೊಬ್ಬನಿಂದಲೇ ಕಷ್ಟಸಾಧ್ಯವಾದುದರಿಂದ ಅವರು **'ಮಂತ್ರಿಮಂಡಲ'** ವನ್ನುರಚಿಸಿಕೊಂಡಿದ್ದರು. ಈ **'ಮಂತ್ರಿ ಪರಿಷತ್ತಿ'**ನಲ್ಲಿ ಹಿರಿಯ ಅಧಿಕಾರಿಗಳು, ರಾಜಕುಮಾರರು ಮತ್ತು ರಾಜಸ್ಥಾನಕ್ಕೆ ನಂಬಿಕಸ್ತರಾದ ವರ್ಗದವಗಿದ್ದರು. ಇವರು ಪ್ರಮುಖ ವಿಷಯಗಳಲ್ಲಿ ರಾಜನಿಗೆ ನೆರವಾಗಿದ್ದು ಸಲಹೆಗಳನ್ನುನೀಡುತ್ತಿದ್ದರು. ಸಿಂಹಾಸನಕ್ಕೆ ಉತ್ತರಾಧಿಕಾರಿಯನ್ನು ನೇಮಿಸುವಾಗ ಈ **'ಮಂತ್ರಿಪರಿಷತ್'** ಪ್ರಮುಖ ಪಾತ್ರ ವಹಿಸುತ್ತಿತ್ತು. ಕಾಳಿದಾಸನು ಮಂತ್ರಿ ಪರಿಷತ್ತಿನ ಕಾರ್ಯಗಳ ಬಗ್ಗೆ ತಿಳಿಸುತ್ತಾ 'ಕಂಚುಕಿ' ಎಂಬುವವನು ರಾಜ ಮತ್ತು ಮಂತ್ರಿಪರಿಷತ್ತಿನ ನಡುವೆ ಏಜಂಟ್ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದನು. 'ಅಮಾತ್ಯ' ಇವನು ಮಂತ್ರಿ ಪರಿಷತ್ತಿನಲ್ಲಿ ಕೈಗೊಂಡ ತೀರ್ಮಾನಗಳನ್ನು ರಾಜನಿಗೆ ತಿಳಿಸುತ್ತಿದ್ದನು. ರಾಜನು ಈ **ಮಂತ್ರಿಪರಿಷತ್ತಿ**ನ ತೀರ್ಮಾನವನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ತಾನೇ ಹೊಂದಿದ್ದನು.ಹಾಗಿದ್ದರೂ

ಗುಪ್ತರ ಕಾಲದಲ್ಲಿ ಬೇರೆ ಬೇರೆ ಇಲಾಖೆಗಳನ್ನು ನೋಡಿಕೊಳ್ಳಲು ಮಂತ್ರಿಗಳಿರುತ್ತಿದ್ದರು. ಕಾಳಿದಾಸನು ಮೂರು ವಿವಿಧ ಮಂತ್ರಿಗಳನ್ನು ಸೂಚಿಸುತ್ತಾನೆ. ಅವರುಗಳಲ್ಲಿ ವಿದೇಶಾಂಗ ಮಂತ್ರಿ, ಹಣಕಾಸು ಮತ್ತು ನ್ಯಾಯಾಡಳಿತವನ್ನು ನೋಡಿಕೊಳ್ಳುವ ಮಂತ್ರಿಗಳು ಮುಖ್ಯರು. ಕಾಳಿದಾಸನ ಪ್ರಕಾರ ಈ ಇಲಾಖೆಗಳನ್ನು ನೋಡಿಕೊಳ್ಳುವ ಮಂತ್ರಿಗಳು ಆ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದವರಾಗಿದ್ದರು. ಈ ಹುದ್ದೆಗಳು ಕೆಲವು ವೇಳೆ ವಂಶ ಪಾರಂಪರ್ಯವಾಗಿದ್ದವು. ವಿವಿಧ ಶ್ರೇಣಿಯ ಅಧಿಕಾರಿಗಳಾದ ರಾಜ ಪುರುಷ, ರಾಜ ನಾಯಕತ್ವ ರಾಜಪುತ್ರ, ರಾಜಾಮಾತ್ಯ ಮೊದಲಾದವರಿದ್ದರು. ಮಂತ್ರಿ ಪರಿಷತ್ತಿನಲ್ಲಿ ಚರ್ಚಿಸುತ್ತಿದ್ದ ವಿಷಯಗಳನ್ನು ಬಹಳ ಗುಟ್ಟಾಗಿ ಇಡಲಾಗುತ್ತಿತ್ತು. ಒಟ್ಟಿನಲ್ಲಿ **'ಮಂತ್ರಿಪರಿಷತ್ '** ಅಥವಾ **'ಮಂತ್ರಿಮಂಡಲ'**ವು ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ರಾಜನಿಗೆ ಸಲಹೆ ಸಹಕಾರಗಳನ್ನು ನೀಡುತ್ತಾ ಸಾಮ್ರಾಜ್ಯದ ಏಳಿಗೆಗೆ ಕಾರಣವಾಗಿದ್ದಿತು .

## 54.2.4. ನಾಗರಿಕ ಅಧಿಕಾರಿಗಳು

ಗುಪ್ತರ ಕಾಲದಲ್ಲಿ ಸಾಮ್ರಾಜ್ಯದ ಆಡಳಿತವನ್ನು ನೋಡಿಕೊಳ್ಳಲು ಅನೇಕ ನಾಗರಿಕ ಅಧಿಕಾರಿಗಳು ನೇಮಕಗೊಂಡಿದ್ದುದಾಗಿ ಗುಪ್ತರ ಕಾಲದ ಶಾಸನಗಳಲ್ಲಿ ಉಲ್ಲೇಖಿಗೊಂಡಿದೆ. ಅವರಲ್ಲಿ ರಾಜಪುರುಷ, ರಾಜನಾಯಕ, ರಾಜಪುತ್ರ, ರಾಜಮಾತ್ಯ. ಮಹಾಸಾಮಂತ, ಮಹಾಕುಮಾರಾಮಾತ್ಯ, ಮಹಾಪ್ರತೀಹಾರ, ಕಂಚುಕಿ ಮೊದಲಾದವರು ಮುಖ್ಯರಾಗಿದ್ದರು, ರೆವಿನ್ಯೂ ಮತ್ತು ಪೋಲೀಸ್ ಕೆಲಸಗಳನ್ನು ನಿರ್ವಹಿಸಲು ಉಪ್ಪರಿಕೆ ದಂಡಿಕ ರಾಜುಕ ಎಂಬ ಅಧಿಕಾರಿಗಳೂ ಇದ್ದರು. ಸೇನಾಪತಿ, ಮಹಾ ಸೇನಾಪತಿ, ಬಾಲಾಧಿಕೃತ ದಂಡನಾಯಕ ಎಂಬ ಮಿಲಿಟರಿ ಅಧಿಕಾರಿಗಳೂ ಇದ್ದರು. ಆದರೆ ನಾಗರಿಕ ಹಾಗೂ ಸೈನಿಕ ಅಧಿಕಾರಿಗಳ ನಡುವೆ ನಿರ್ಧಿಷ್ಟ ವ್ಯತ್ಯಾಸಗಳೇನಿರಲಿಲ್ಲ. ಮಂತ್ರಿಯೊಬ್ಬ ಮಹಾಬಲಾಧಿಕೃತನಾಗಬಹುದಿತ್ತು ಮತ್ತು ಅಮಾತ್ಯನ ಹುದ್ದೆಯೊಡನೆ ಸಂಘಟಿಸಬಹುದಾಗಿತ್ತು. ಅರಸೊತ್ತಿಗೆಯಂತೆ ಮಂತ್ರಿ ಪದವಿಯೂ ಅನುವಂಶಿಕವಾಗತೊಡಗಿತ್ತು. ಉದಾಹರಣೆಗೆ ಸಮುದ್ರಗುಪ್ತನ ಕಾಲದಲ್ಲಿ ಅಧಿಕಾರಿಯಾಗಿದ್ದ ಹರಿಷೇಣ ಮತ್ತು ಕುಮಾರಗುಪ್ತನ ಮಂತ್ರಿಯಾಗಿದ್ದ ಪೃಥ್ವೀಷೇಣ ಮತ್ತು ಇವರ ಪೂರ್ವಜರು ತಲತಲಾಂತರದಿಂದ ಅಧಿಕಾರಿದಲ್ಲಿದ್ದರು. ಆದರೆ ಈ ಕಾಲದಲ್ಲಿ ಹೆಚ್ಚಾಗಿ ಕಂಡುಬರುವ ಇನ್ನೊಬ್ಬ ಅಧಿಕಾರಿಯೆಂದರೆ **'ಸಂಧಿವಿಗ್ರಹಕ'** ಅಥವಾ **'ಸಂಧಿವಿಗ್ರಹಾಧಿಕೃತ'**. ಇವನು ಬಹುಶಃ ಯುದ್ಧ ಒಪ್ಪಂದ ಮೊದಲಾದವುಗಳನ್ನನುಸರಿಸಿ ಇತರ ರಾಜ್ಯಗಳೊಡನೆ ಯೋಗ್ಯವಾದ ಸಂಬಂದಗಳನ್ನು ಏರ್ಪಡಿಸುವ ಅಧಿಕಾರಿಯಾಗಿದ್ದಿರಬಹುದೆಂದು ಕಂಡು ಬರುತ್ತದೆ. ಇವರಲ್ಲಿ ಕೆಲವರು ಸಾಮ್ರಾಟನ ಕೆಳಗೆ ಅಧಿಕಾರ ನಿರ್ವಹಿಸಿದರೆ ಮತ್ತೆ ಕೆಲವರು ರಾಜಕುಮಾರರ ಅಥವಾ ಪ್ರಾಂತ್ಯಧಿಕಾರಿಗಳ ಅಧೀನ ಸೇವೆಸಲ್ಲಿಸುತ್ತಿದ್ದರು.

## 54.2.5 ಕಂದಾಯ ಆಡಳಿತ

ಗುಪ್ತರ ಕಾಲದ ಶಾಸನಗಳು ಮತ್ತು ಬರವಣಿಗೆಗಳು ಸಾಮ್ರಾಜ್ಯದ ಅಥವಾ ಸರ್ಕಾರದ ವಿವಿಧ ಆದಾಯಗಳನ್ನು ಉಲ್ಲೇಖಿಸುತವೆ. ಭೂಕಂದಾಯವೇ ಸಾಮ್ರಾಜ್ಯದ ಬಹು ಮುಖ್ಯವಾದ ಆದಾಯವಾಗಿದ್ದೂದರಿಂದ ವಾತ, ಭೂತ, ಧಾನ್ಯ, ಹಿರಣ್ಯ, ಅಧೇಯ ಮತ್ತು ವೈಶಿಷ್ಠಿಕ ಮುಂತಾದ ಹದಿನೆಂಟು ರೀತಿಯ ತೆರಿಗೆಗಳನ್ನು ಗುಪ್ತರು ವಿಧಿಸುತ್ತಿದ್ಧರೆಂದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಭೂಮಿಯ ಫಲವತ್ತತೆಗನುಗುಣವಾಗಿ ಉತ್ಪನ್ನದ 1/6 ಅಥವಾ 1/4 ಭಾಗ ಭೂಕಂದಾಯವನ್ನು ವಿಧಿಸಲಾಗುತ್ತಿತ್ತು. ಇದಕ್ಕೆ 'ಭಾಗಕರ' ಮತ್ತೆ ಕೆಲವು ಕಡೆ 'ಉದ್ರಂಗ' ಎಂದು ಕರೆಯಲಾಗುತ್ತಿತ್ತು. ನಗರಗಳ ಮಾರುಕಟ್ಟೆಗಳಲ್ಲಿ ಮಾರಾಟಕ್ಕೆ ಹೋಗುವ ವಸ್ತುಗಳ ಮೇಲೆ 'ಭೋಗ' ಅಥವಾ 'ಟರ್ಮಿನಲ್' ಎಂಬ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಅರಣ್ಯ ಹುಲ್ಲುಗಾವಲುಗಳಿಂದಲೂ ಕೂಡ ಸರ್ಕಾರಕ್ಕೆ ವರಮಾನ ಪ್ರಾಪ್ತವಾಗುತ್ತಿದ್ದಿತು. ಸಾಮಾನ್ಯವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾದ ಭೂಕಂದಾಯವನ್ನು ಧಾನ್ಯದ ರೂಪದಲ್ಲಿ ಅಥವಾ ಧನದ ರೂಪದಲ್ಲಿ ಅಥವಾ ಎರಡೂ ರೀತಿಯಲ್ಲಿ ವಸೂಲಿ ಮಾಡಲಾಗುತ್ತಿತ್ತು. **ದಶಪರಾಧ** ಎಂಬ ಹತ್ತು ಅಪರಾಧಗಳ ಮೇಲಿನ ದಂಡದ ಹಣವೂ ಸರ್ಕಾರಕ್ಕೆ ಆದಾಯವಾಗಿ ಬರುತ್ತಿತ್ತು. ವ್ಯಾಪಾರ ವಾಣಿಜ್ಯಗಳ ಮೇಲೂ ತೆರಿಗೆಗಳನ್ನು ವಿಧಿಸುತ್ತಿದ್ದರು. ರಾಜ್ಯವು ಕಾಡಿನ ಉತ್ಪನ್ನಗಳು ಗಣಿಗಳು ಮತ್ತು ಭೂನಿಕ್ಷೇಪಗಳಿಂದಲೂ ಆದಾಯ ಪಡೆಯುತ್ತಿತ್ತು. ಇವುಗಳ ಜೊತೆಗೆ ಯುದ್ಧದಂತಹ ತುರ್ತು ಸಂದರ್ಭಗಳಲ್ಲಿ ವಿಶೇಷ ಸುಂಕವನ್ನು ವಿಧಿಸಲಾಗುತ್ತಿತ್ತು. ರಾಜ್ಯದ ಆದಾಯದ ಇತರ ಮೂಲಗಳೆಂದರೆ ಗ್ರಾಮಾಂತರ ಜನರ ಮೇಲೆ ವಿಧಿಸುತ್ತಿದ್ದ ಕೆಲವು ತೆರಿಗೆಗಳು-ಬಂದರುಗಳು ಮತ್ತು ಕೋಟೆಗಳ ಮೇಲೆ ವಿಧಿಸುತ್ತಿದ್ದ ವಿಶೇಷ ತೆರಿಗೆಗಳು ಸಹ ಸಾಮ್ರಾಜ್ಯದ ಮೂಲ ಆದಾಯಕ್ಕೆ ಸೇರಿದ್ದವು.ಯುದ್ಧ ಸಮಯದಲ್ಲಿ ಸಂಚರಿಸುವಾಗ ಸೇನೆಗೆ ಆಯಾ ಪ್ರದೇಷಗಳ ಜನ ಊಟ ಮೊದಲಾದ ಸೌಲಭ್ಯಗಳ ಹೊಣೆಯನ್ನು ನಿರ್ವಹಿಸಬೇಕಿದ್ದಿತು. ಕೆಲವು ಭಾಗಗಳಲ್ಲಿ ಗ್ರಾಮೀಣ ಜನರು ಸಾರ್ವಜನಿಕ ಹಿತ ಕಾರ್ಯಗಳಲ್ಲಿ ಸಲ್ಲಿಸಬೇಕಾಗಿದ್ದ 'ವಿಶ್ತಿ ' ಎಂಬ

ಉಜಿತ ಸೇನೆಯನ್ನು ಸಲ್ಲಿಸಬೇಕಾಗಿದ್ದಿತು. ಇದಲ್ಲದೆ ಸಾಮಾಂತರು ಕಪ್ಪಕಾಣಿಕೆಗಳನ್ನು ನೀಡುವ ಮೂಲಕವೂ ರಾಜ್ಯಕ್ಕೆ ಆದಾಯ ಬರುತ್ತಿತ್ತು. ಹೀಗೆ ಸರ್ಕಾರವು ವಿಧಿಸಿದ ತೆರಿಗೆಗಳನ್ನು ಉಪರಿಕ, ದಶಪುರ, ಧಿಕ, ದಂಡಪಸಿಕ, ಕ್ಷೇತ್ರಪ್ರಾಂತ್ಯಪಾಲ, ಕೊತ್ತಪಾಲ, ಅಂಗರಕ್ಷಕ ಮತ್ತು ಆಯುಕ್ತ ಹಾಗೂ ರಾಜುಕರೆಂಬ ಅಧಿಕಾರಿಗಳು ವಸೂಲಿ ಮಾಡುವ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು.

## 54.2.6. ಸೈನ್ಯಾಡಳಿತ

ಗುಪ್ತರ ಕಾಲದಲ್ಲಿ ಹೆಚ್ಚು ಕಡಿಮೆ ಕೇಂದ್ರೀಕೃತ ಸೈನಾಡಳಿತ ವ್ಯವಸ್ಥೆ ರೂಪಿತಗೊಂಡಿತ್ತು. ಶಾಸನಗಳಲ್ಲಿ ಈ ಸೈನ್ಯಾಡಳಿತ ವಿಭಾಗದಲ್ಲಿದ್ದ ಅಧಿಕಾರಿಗಳನ್ನು ಸೇನಾಪತಿ, ಮಹಾಸೇನಾಪತಿ, ಬಾಲಾಧಿಕೃತ, ಮಹಾಬಾಲಾಧಿಕೃತ, ದಂಡನಾಯಕ, ಗೋಪಕ ಮುಂತಾಗಿ ಕರೆಯಲಾಗಿದೆ. ಆದರೆ ಈ ಸೈನ್ಯಾಧಿಕಾರಿಗಳಿಗೆ ಯಾವ ವರ್ಗೀಕೃತ ಹುದ್ದೆಗಳನ್ನು ವಹಿಸಲಾಗಿತ್ತುಎಂಬುದರ ಬಗೆಗೆ ಸ್ಪಷ್ಟವಾದ ಹೇಳಿಕೆಗಳಿಲ್ಲ. ಕೆಲವು ಶಾಸನಗಳಲ್ಲಿ **ಚಿತ್ರವರ್ಮ** ಮತ್ತು ಬಪ್ಪದೇವ ಎಂಬ ಸೇನಾಪತಿಗಳ ಬಗೆಗೆ ಉಲ್ಲೇಖವಿದ್ದು ಇವರು ಕೆಲವು ಸೈನ್ಯ ತುಕಡಿಯ ಕಾಮಾಂಡರ್ಸ್‌ಗಳಾಗಿದ್ದರೆಂದು ವೇದ್ಯವಾಗುತ್ತದೆ. ದಂಡನಾಯಕನೆಂಬ ಮಿಲಿಟರಿ ನಾಯಕನು ಸೈನ್ಯಮತ್ತು ನ್ಯಾಯಾಂಗ ಕರ್ತವ್ಯಗಳೆರಡನ್ನೂ ನಿರ್ವಹಿಸುತ್ತಿದ್ದನು. ಅಲಹಾಬಾದ್ ಸ್ತಂಬಶಾಸನದ ಕತೃ ಹರಿಸೇಣನು ಮಹಾದಂಡ ನಾಯಕನಾಗಿದ್ದನೆಂದು ತಿಳಿದು ಬರುತ್ತದೆ. ಗುಪ್ತರ ಸೈನ್ಯವು ಅಶ್ವದಳ, ಕಾಲ್ದಳ ಮತ್ತು ಗಜಸೈನ್ಯಗಳನ್ನು ಹೊಂದಿದ್ದು ಮೇಲೆ ತಿಳಿಸಿದ ಸೈನಾಧಿಕಾರಿಗಳು ಸೈನ್ಯದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು.

ಈ ಸೈನಿಕ ವೃತ್ತಿಗೆ ಸೇರುವುದು ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿರದಿದ್ದರೂ, ಆ ಕಾಲದಲ್ಲಿ ಅನೇಕ ಸೈನಕರು ಬ್ರಾಹ್ಮಣರೇ ಆಗಿದ್ದುದು ವಿಶೇಷವಾಗಿತ್ತು. ರಾಜರು ಮತ್ತು ಮಂತ್ರಿಗಳಂತೆ ಸೈನಿಕ ವೃತ್ತಿಯೂ ವಂಶಪಾರಂಪರ್ಯವಾಗಿ ಬಂದಿತ್ತು. ಹೀಗೆ ಸಾಮ್ರಾಜ್ಯದ ಸೇನೆ ಚದುರಂಗ ಬಲದಿಂದ ಕೂಡಿದ್ದು, ರಾಜನು ಸೈನ್ಯದ ಸಮಸ್ತ ದಂಡನಾಯಕನಾಗಿದ್ದನು. ಕುಮಾರಾಮಾತ್ಯ ಮತ್ತು ಯುವರಾಜ ಕುಮಾರಮಾತ್ಯರೆಂಬ ಅಧಿಕಾರಿಗಳು ಸಾಮ್ರಾಟನ ಹಾಗೂ ಯುವರಾಜನ ಕಾರ್ಯದರ್ಶಿಗಳಾಗಿಯೂ ತಮ್ಮ ಸೇವೆ ಸಲ್ಲಿಸುತ್ತಿದ್ದರು. ಹಲವು ಸಂಧರ್ಭಗಳಲ್ಲಿ ಈ ಅಧಿಕಾರಿಗಳು ಜಿಲ್ಲೆಗಳ ಆಡಳಿತಾಧಿಕಾರಿಗಳಾಗಿಯು ಕಾರ್ಯನಿರ್ವಹಿಸುತ್ತಿದ್ದರು. ಸೈನ್ಯ ವಿಭಾಗದಲ್ಲಿ **'ರಣಭಂಡಾಗಾರಿಕ'** ಎಂಬ ಅಧಿಕಾರಿಯ ಉಲ್ಲೇಖವಿದ್ದು ಇವನು ಸೈನ್ಯದ ವೇತನ ಮತ್ತು ಇತರ ಹಣಕಾಸಿನ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಯಾಗಿದ್ದಿರಬಹುದೆಂದು ಕಾಣುತ್ತದೆ. ಸಾಮಾನ್ಯವಾಗಿ ಗುಪ್ತರ ಸೈನಿಕ ವಿಭಾಗಗಳನ್ನು, ಗಜದಳ, ಅಶ್ವದಳ ಹಾಗೂ ಕಾಲ್ದಳಗಳೆಂದು ವಿಭಾಗಿಸಲಾಗಿದ್ದಿತು. ಮರುಳುಗಾಡುಗಳಲ್ಲಿ ಒಂಟೆಗಳನ್ನು ಬಳಸಲಾಗುತ್ತಿತ್ತು. ಸೈನಿಕರು ಸಾಮಾನ್ಯವಾಗಿ ಶಿರಸ್ತ್ರಾಣ ಮತ್ತು ಕಬ್ಬಿಣದ ಕವಚಗಳನ್ನು ತೊಡುತ್ತಿದ್ದರು. ಗುಪ್ತರ ಸಾಮ್ರಾಜ್ಯದ ವಿಸ್ತಾರವನ್ನು ನೋಡಿದಾಗ ಮತ್ತು ಅವರ ಶಾಸನಗಳನ್ನು ಅಭ್ಯಾಸಿಸಿದಾಗ ಅವರ ಸೈನ್ಯಬಲವು, ಬಲಿಷ್ಠವೂ, ದಕ್ಷವೂ ಆಗಿದ್ದಿತ್ತೆಂಬುದು ಸ್ಪಷ್ಟವಾಗತ್ತದೆ.

## 54.2.7. ನ್ಯಾಯಾಡಳಿತ

ಗುಪ್ತರ ಕಾಲದ ನ್ಯಾಯಾಡಳಿತವು ಹಿಂದಿನ ಕಾಲಕಿಂತ ಹೆಚ್ಚು ಅಭಿವೃದ್ಧಿಯಾತ್ಮಕವಾಗಿತ್ತು. ಈ ಕಾಲದಲ್ಲಿ ಅನೇಕ ಕಾನೂನು ಗ್ರಂಥಗಳು ಸಂಯೋಜನೆಗೊಂಡಿದ್ದು ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳನ್ನು ನಿರ್ಧಿಷ್ಟ ರೂಪರೇಷೆಗಳೊಡನೆ ಪ್ರಥಮ ಬಾರಿಗೆ ಜಾರಿಮಾಡಲಾಗಿತ್ತು. ರಾಜನು ನ್ಯಾಯಾಧಾನದ ಉತ್ತುಂಗ ಅಧಿಕಾರವನ್ನು ಹೊಂದಿದ್ದನು. ನ್ಯಾಯ ತೀರ್ಮಾನದ ವಿಷಯದಲ್ಲಿ ರಾಜನೇ ಅಂತಿಮ ತೀರ್ಪುಗಾರನಾಗಿದ್ದನು. ವಿವಿಧ ಪ್ರಾಂತಗಳಲ್ಲಿ ಇವನ ಅಧೀನ ಅಧಿಕಾರಿಗಳ ಮೂಲಕ ನ್ಯಾಯ ವಿತರಣೆ ನಡೆಯುತ್ತಿತ್ತು. ವಿಶಾಲವಾದ ಸಾಮ್ರಾಜ್ಯದ ನ್ಯಾಯಾಡಳಿತವನ್ನು ನೋಡಿಕೊಳ್ಳಲು ರಾಜನೊಬ್ಬನಿಗೆ ಸಾಧ್ಯವಿಲ್ಲದ ಕಾರಣ ಅನೇಕ ಹಿರಿಯ ಅಧಿಕಾರಿಗಳು ನ್ಯಾಯಾಧೀಶರಾಗಿ ರಾಜನಿಂದ ನೇಮಕಗೊಂಡು ಅವನಿಗೆ ನೆರವಾಗುತ್ತಿದ್ದರು. ಇವರನ್ನು ಮಹಾದಂಡನಾಯಕರೆಂದೂ ಕರೆಯಲಾಗುತ್ತಿತ್ತು. ಸೈನ್ಯದ ಮೇಲ್ವಿಚಾರಣೆ ಹಾಗೂ ನ್ಯಾಯಾಂಗದ ವಿಚಾರಣೆ ಎರಡು ಕೆಲಸಗಳನ್ನು ಈ ಅಧಿಕಾರಿಗಳು ಸಮರ್ಥವಾಗಿ ನಿರ್ವಹಿಸುತ್ತಿದ್ದರು. **ನ್ಯಾಯಾಧಿಕರಣ, ಧರ್ಮಾಧಿಕರಣ, ಧರ್ಮಶಾಸನಧಿಕರಣ** ಎಂದು ಹೆಸರಿಸಲಾಗಿರುವ ಅಧಿಕಾರಿಗಳು ನ್ಯಾಯಾಧೀಶರ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ನ್ಯಾಯಾಲಯಗಳು ಸ್ಥಾಪಿತವಾಗಿರುತ್ತಿದ್ದವು. ಇಂತಹ ಅಧಿಕಾರಿಗಳು ಅವುಗಳ ಮುಖ್ಯಸ್ಥರಾಗಿರುತ್ತಿದ್ದರು. ಕಾಳಿದಾಸನು ರಾಜನ ರಾಜಧಾನಿಯ ನ್ಯಾಯಾಲಯವನ್ನು 'ಧರ್ಮಸ್ಥಾನ' ಎಂದು ಕರೆದಿದ್ದಾನೆ. ಹಾಗೆಯೇ ನ್ಯಾಯಾಧೀಶರನ್ನು **'ಧರ್ಮಧೀಕಾರರು'** ಎಂದೂ ಕರೆದಿರುವನು.

ಈ ಧರ್ಮಾಧಿಕಾರರು ನ್ಯಾಯಾಶಾಸ್ತ್ರಗಳಲ್ಲಿ ಪಂಡಿತರಾಗಿದ್ದು ನಗರದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಇಂತಹ ನ್ಯಾಯಾಲಯಗಳ ಜೊತೆಗೆ ಗ್ರಾಮಗಳಲ್ಲಿಯ ಹಿರಿಯರನ್ನೊಳಗೊಂಡಿದ್ದ ಸಭೆಗಳು ನ್ಯಾಯ ವಿವರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಪಿತ್ರಾರ್ಜಿತ ಆಸ್ತಿಪಾಸ್ತಿಗಳ ವಿಚಾರವಾಗಿ ಪ್ರತ್ಯೇಕ ಕಾಯಿದೆಗಳನ್ನು ವಿವರಣಾತ್ಮಕವಾಗಿ ರಚಿಸಲಾಯಿತು.

ಇಷ್ಟಾದರೂ ಗುಪ್ತರ ಕಾಲದಲ್ಲಿ ಕಾನೂನುಗಳು ಸರಳವಾಗಿದ್ದವು. ಫಾಹಿಯಾನನ ಪ್ರಕಾರ ಅಪರಾಧಿಗಳಿಗೆ ಪ್ರಮುಖ ಶಿಕ್ಷೆಯೆಂದರೆ ದಂಡವಿಧಿಸುವುದು, ಅಗಾಂಗಗಳನ್ನು ಕತ್ತರಿಸುವುದು, ಆನೆಗಳಿಂದ ತುಳಿಸುವುದು ಇವೇ ಮುಂತಾದವು ಕಠಿಣ ಶಿಕ್ಷೆಗಳಾಗಿದ್ದು ಸಾಮಾನ್ಯವಾಗಿ ದಂಗೆಕೋರರಿಗೆ ಮಾತ್ರ ವಿಧಿಸಲಾಗುತ್ತಿದ್ದಿತು. ಸ್ಕಾಂದ ಗುಪ್ತನ ಜುನಾಘಡ ಶಾಸನವು ಅಪರಾಧಿಗಳನ್ನು " ನೀರಿನಲ್ಲಿ ಮುಳುಗಿಸುವ, ಬೆಂಕಿಯಲ್ಲಾಕುವ ಮತ್ತು ವಿಷಕುಡಿಸುವಂತಹ ಶಿಕ್ಷೆಗಳಿದ್ದ"ವೆಂದು ತಿಳಿಸುತ್ತದೆ. ವಿಶಾಖದತ್ತನ 'ಮುದ್ರರಾಕ್ಷಸ' ಗ್ರಂಥವು ಅಪರಾದಿಗಳಿಗೆ ಕಣ್ಣುಕೀಳುವ, ಆನೆಯಿಂದ ತುಳಿಸುವಂತಹ ಉಗ್ರ ಶಿಕ್ಷೆಗಳು ಚಾರಿಯಲ್ಲಿದ್ದವು ಎಂಬುದಾಗಿ ತಿಳಿಸುತ್ತದೆ. ಇಂತಹ ಉಗ್ರ ಶಿಕ್ಷೆಗಳನ್ನು ನೀಡುವ ಮೂಲಕ ಜನರು ಅಪರಾಧಗಳನ್ನು ಮಾಡುವುದನ್ನು ನಿಯಂತ್ರಿಸುವ ದೃಷ್ಟಿಯಿಂದ ಜಾರಿಗೆ ತರಲಾಗಿದ್ದಿತು.

## 54.3 ಆಡಳಿತ ವಿಭಾಗಗಳು

ಸಮಕಾಲೀನ ಶಾಸನಗಳು ಮತ್ತು ಬರವಣಿಗೆಗಳ ಅಧ್ಯಯನದಿಂದ ಗುಪ್ತರ ಆಡಳಿತಾತ್ಮಕ ಅನುಕೂಲಕ್ಕಾಗಿ ವಿಶಾಲವಾದ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿದ್ದರು. ರಾಜಕುಮಾರರು ಈ ಪ್ರಾಂತ್ಯಗಳ ಆಡಳಿತವನ್ನು ನಿರ್ವಹಿಸುತ್ತಿದ್ದರು. ಪುನಃ ಪ್ರಾಂತ್ಯಗಳನ್ನು ಜಿಲ್ಲೆಗಳನ್ನಾಗಿಯೂ, ನಗರಗಳನ್ನಾಗಿಯೂ ವಿಂಗಡಿಸಿ ಅವುಗಳ ಆಡಳಿತವನ್ನು ನಿರ್ಧಿಷ್ಟ ಅಧಿಕಾರಿಗಳ ಜವಬ್ದಾರಿಯಲ್ಲಿರಿಸಲಾಗಿತ್ತು. ಗ್ರಾಮಾಡಳಿತವು ಪಂಚಾಯಿತಿಗಳ ನಿರ್ವಹಣೆಯಲ್ಲಿತ್ತು. ಈ ರೀತಿ ಗುಪ್ತ ಸಾಮ್ರಾಜ್ಯದಲ್ಲಿ ವಿಕೇಂದ್ರಿಕೃತ ಆಡಳಿತ ಜಾರಿಯಲ್ಲಿದ್ದರೂ ಅರಸನೇ ರಾಜ್ಯದ ಒಡೆಯನಾಗಿದ್ದನು. ಸಾಮ್ರಾಜ್ಯದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಆಡಳಿತದ ಅಂತಿಮ ತೀರ್ಪು ಸಾಮ್ರಾಟನದೇ ಆಗಿರುತ್ತಿತ್ತು.

### 54.3.1. ಪ್ರಾಂತ್ಯಡಳಿತ

ಮೇಲೆ ಹೇಳಿದಂತೆ ಗುಪ್ತರ ಕಾಲದಲ್ಲಿ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಅವುಗಳನ್ನು ಭುಕ್ತಿ ಎಂದು ಕರೆಯುತ್ತಿದ್ದರು. ತೀರಭುಕ್ತಿ, ನಾಗರಭುಕ್ತಿ, ಸ್ರಾವಸ್ತಿಭುಕ್ತಿ, ಅಚ್ಛಿಚತ್ರಭುಕ್ತಿ ಎಂಬುದಾಗಿ ಗುಪ್ತರ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಪ್ರಾಂತ್ಯ ಭುಕ್ತಿಗಳ ಆಡಳಿತ ನಿರ್ವಹಣೆಗೆ ರಾಜಕುಮಾರರನ್ನು ಹಾಗೂ ಸಾಮಂತ ರಾಜರನ್ನು ನೇಮಿಸಲಾಗಿತ್ತಿತ್ತು. ಎರಡನೇ ಚಂದ್ರಗುಪ್ತನ ಕಾಲದಲ್ಲಿ ರಾಜಕುಮಾರ ಗೋವಿಂದಗುಪ್ತ ತೀರಭುಕ್ತಿ ಎಂಬ ಪ್ರಾಂತ್ಯಕ್ಕೆ ಆಡಳಿತಾಧಿಕಾರಿಯಾಗಿ ನೇಮಕಗೋಂಡಿದ್ದನು. ಘಟೋತ್ಕಚ ಎಂಬ ಮತ್ತೊಬ್ಬ ರಾಜಕುಮಾರನು ಭುಕ್ತಿ ಅಥವಾ ಪ್ರಾಂತ್ಯವೊಂದರ ಅಧಿಕಾಯಾಗಿದ್ದನು. ಈ ಪ್ರಾಂತ್ಯದ ಉನ್ನತಾಧಿಕಾರಿಗಳಿಗೆ 'ಉಪರಿಕ' ಅಥವಾ 'ಭೋಗಪತಿ' ಎಂದು ಕರೆಯಲಾಗುತ್ತಿತ್ತು. ಪ್ರಾಂತ್ಯಾಧಿಕಾರಿಗಳ ಅನುಪಸ್ಥಿತಿಯಲ್ಲಿ ಅಥವಾ ತುರ್ತು ಸಂದರ್ಭಗಳಲ್ಲಿ 'ಗೋಪ್ತ್ರಿ' ಗಳೆಂಬ ವಿಶೇಷ ಅಧಿಕಾರಿ ಪ್ರಾಂತ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದನು. ಗುಪ್ತರ ಕಾಲದಲ್ಲಿ ಕೆಲವು ಪ್ರಾಂತ್ಯಗಳು ಸಾಮಂತ ಅರಸರ ಅಧೀನದಲ್ಲಿದ್ದವು. ಸಾಮಂತ ಅರಸರು ಗುಪ್ತಚಕ್ರವರ್ತಿಗಳಿಗೆ ವಿಧೇಯರಾಗಿದ್ದರೂ ತಮ್ಮ ಪ್ರಾಂತ್ಯಗಳ ಆಡಳಿತ ವಿಷಯದಲ್ಲಿ ಸ್ವತಂತ್ರರಾಗಿದ್ದರು. ಪ್ರಾಂತ್ಯಾಧಿಕಾರಿಗಳಿಗೆ ಆಡಳಿತದಲ್ಲಿ ಸೇನಾಮುಖಂಡ, ಬಲಾಧಿಕರಣಿಕ,ಪೊಲೀಸ್ ಮುಖ್ಯಸ್ಥ, ದಂಡಪಸದಿಕರಣಿಕ, ಸೇನಾ ಕೋಶಾಧಿಕಾರಿ, ರಣಭಂಡಾರಿಕ, ನ್ಯಾಯಾಧಿಕಾರಿ, ಮಹಾದಂಡನಾಯಕ, ಕಾನೂನು ಮತ್ತು ಶಾಂತಿ ಪರಿಪಾಲನಾಧಿಕಾರಿ ವಿನಯಸ್ಥಿತಸ್ಥಾಪಕ, ಕಾಲ್ದಳ ಮತ್ತು ಅಶ್ವದಳ ಮುಖಂಡ, ಭತವಸ್ಪತಿ, ಗಜದಳದ ಮುಖಂಡ, ಮಹಾಪಿಳ್ಳುಪತಿ ಮೊದಲಾದ ಅಧಿಕಾರಿಗಳು ನೆರವಾಗಿದ್ದರು.

### 54.3.2 ಜಿಲ್ಲಾಡಳಿತ

ಪ್ರಾಂತ್ಯ ಅಥವಾ ಭುಕ್ತಿಗಳನ್ನು ಪುನಃ ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿ ಅವುಗಳನ್ನು ಹಲವು ವಿಷಯ ಅಥವಾ ಜಿಲ್ಲೆಗಳನ್ನಾಗಿ ವಿಭಾಗಿಸಿದ್ದರು. ಇದರ ಉನ್ನತಾಧಿಕಾರಿ 'ವಿಷಯಪತಿ'. ದಕ್ಷಿಣ ಭಾರತದಲ್ಲಿ ಈ 'ವಿಷಯ'ಗಳನ್ನು 'ಮಂಡಲ' ಗಳಾಗಿಯೂ, ನಂತರ ಮಂಡಲಗಳನ್ನು ಕೊಹ್ಮಾಸ್‌ಗಳಾಗಿಯೂ ವಿಭಾಗಿಸಲಾಗಿದ್ದಿತು. ಜಿಲ್ಲೆಯ ಆಡಳಿತ ಕೇಂದ್ರಕ್ಕೆ ಅಧಿಷ್ಠಾನ ಎಂಬ ಹೆಸರಿದ್ದಿತ್ತು.

ಜಿಲ್ಲಾಧಿಕಾರಿ ಮುಖ್ಯನ್ಯಾಯಧೀಶನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದನು. ಅವನ ಸಹಾಯಕ್ಕಾಗಿ ಜಿಲ್ಲಾಕೇಂದ್ರದಲ್ಲಿ ಒಂದು ಸಭೆ ಇರುತ್ತಿತ್ತು. ಆ ಸಭೆಯಲ್ಲಿ ನಗರಸಭಾಧ್ಯಕ್ಷ **(ನಗರಶೇಷ್ಠಿ)**, ವಾಣಿಜ್ಯ ಪ್ರತಿನಿಧಿ **(ಸಾರ್ಥವಾಹ)** ಕೈಗಾರಿಕೋದ್ಯಮಿ **(ಪ್ರಥಮಕುಲಿಕ)** ಮುಖ್ಯಕರಣಿಕ **(ಪ್ರಥಮ ಕಾಯಸ್ಥ)** ಎಂಬ ಪ್ರತಿವಿದಗಳನ್ನೊಳಗೊಂಡಿದ್ದ ಸಭೆಯು ಜಿಲ್ಲಾಧಿಕಾರಿ ಅಥವಾ ಮುಖ್ಯನ್ಯಾಯಾಧಿಕಾರಿಗೆ ಆಡಳಿತದಲ್ಲಿ ನೆರವಾಗಿದ್ದರು.

## 54.3.3 ನಗರಾಡಳಿತ

ನಗರಗಳಲ್ಲಿ 'ಪುರಪಾಲ' ಅಥವಾ 'ನರಗರಕ್ಷಕ'ನೆಂಬ ಅಧಿಕಾರಿ ಪರಿಶತ್‌ನ ನೆರವಿನಿಂದ ಆಡಳಿತ ನಡೆಸುತ್ತಿದ್ದಿನು. ಅನೇಕ ನಗರಗಳನ್ನು ನೋಡಿಕೊಳ್ಳುವ ಪುರಪಾಲ ಉಪಾರಿಕ ಎಂಬ ಮುಖ್ಯಸ್ಥವಿದ್ದ ಬಗ್ಗೆ ಉಲ್ಲೇಖಗಳಿವೆ. ನಗರ ಪರಿಷತ್‌ನಲ್ಲಿ ನಗರ ಶ್ರೇಷ್ಠಿನ್, ಸ್ಥರವ್ರಾಹ (ಮುಖ್ಯವ್ಯಾಪಾರಿ) ಮುಂತಾದವರಿದ್ದರು.

ನಗರಗಳ ಸುವ್ಯವಸ್ಥೆ, ಕರಗಳ ಸಂಗ್ರಹಣೆ, ರಕ್ಷಣೆ ಮುಂತಾದವುಗಳಿಗಾಗಿ ಬೇರೆ ಬೇರೆ ಅಧಿಕಾರಿಗಳಿರುತ್ತಿದ್ದರು. ಕೆಲವು ವಿದ್ವಾಂಸರ ಅಭಿಪ್ರಾಯದಂತೆ ವಿವಿಧ ವರ್ಗಗಳ ಪ್ರತಿನಿಧಿಗಳನ್ನೊಳಗೊಂಡ ನಾಗರಿಕ ಮಂಡಳಿಯು ನಗರಾಡಳಿತ ಅಧಿಕಾರಿಗಳಿಗೆ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದವು.

## 54.3.4 ಗ್ರಾಮಾಡಳಿತ

ಪ್ರತಿಯೊಂದು 'ವಿಷಯ'ವು ಅಥವಾ ಜಿಲ್ಲೆಯು ಅನೇಕ ಗ್ರಾಮಗಳನ್ನು ಒಳಗೊಂಡಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಿರ್ಧಿಷ್ಟ ಸಂಖ್ಯೆಯ ಒಂದು ಗ್ರಾಮ ಸಮೂಹವನ್ನು ವಿಷಯ ವೆಂದು ಕರಯಲಾಗುತ್ತಿತ್ತು. ಗ್ರಾಮದ ಆಡಳಿತವನ್ನು ನಿರ್ವಹಿಸುತ್ತಿದ್ದ ಅಧಿಕಾರಿಯನ್ನು ಗ್ರಾಮಾಧ್ಯಕ್ಷನೆಂದು ಕರೆಯಲಾಗುತ್ತಿತ್ತು. ಗ್ರಾಮವು ಆಡಳಿತದ ಅತ್ಯಂತ ಚಿಕ್ಕ ಘಟಕವಾಗಿದ್ದು ಗ್ರಾಮಾಧ್ಯಕ್ಷನಿಗೆ ಸಲಹೆ ನೀಡಲು ಗ್ರಾಮದ ಹಿರಿಯರ ಒಂದು ಸಭೆಯು ಅಸ್ತಿತ್ವದಲ್ಲಿತು. ಈ ಸಭೆಯನ್ನು 'ಪಂಚಮಮಂಡಲ'ವೆಂದು ಗುಪ್ತರ ಕಾಲದಲ್ಲಿ ಕರೆಯಲಾಗುತ್ತಿತ್ತು.

ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ, ಕರಸಂಗ್ರಹ, ಅವಶ್ಯಕ ಲೆಕ್ಕ ಪತ್ರಗಳನ್ನಿಡುವುದು ಮೊದಲಾದವು ಇವರ ಕಾರ್ಯಾವ್ಯಾಪ್ತಿಯಲ್ಲಿ ಬರುತ್ತಿದ್ದವು. ಇವರ ಸಹಾಯಕ್ಕೆ ಇನ್ನೂ ಕೆಲವು ಚಿಕ್ಕಪುಟ್ಟ ಅಧಿಕಾರಿಗಳಿರುತ್ತಿದ್ದರು.

ಹೀಗೆ ಗುಪ್ತರ ಕಾಲದಲ್ಲಿ ಅರಸನಿಗೆ ಅತ್ಯುಚ್ಚಸ್ಥಾನ, ಅಧಿಕಾರಗಳಿದ್ದರೂ ಜನತೆಯ ಕಲ್ಯಾಣವೇ ಅವನ ಗುರಿಯಾಗಿತ್ತು. ಅವನ ಕರ್ತವ್ಯವೆಂಬ ತತ್ವಕ್ಕೆ ಎಂದೂ ಚ್ಯುತಿ ಬರಲಿಲ್ಲ. ಆಡಳಿತದ ಎಲ್ಲ ಹಂತಹಗಳಲ್ಲಿಯೂ ಜನ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದುದು ಗಮನಾರ್ಹವಾದ ಅಂಶವಾಗಿದೆ. ಭಾರತದ ಇತಿಹಾಸದಲ್ಲಿಯೇ ಗುಪ್ತರ ಕಾಲ ಒಂದು ಮಹತ್ವದ ಘಟ್ಟ. ಅವರ ರಾಜ್ಯದ ವಿಸ್ತಾರ, ಅವರು ಹೊರಡಿಸಿದ ಚಿನ್ನದ ನಾಣ್ಯಗಳು, ಅವರ ಕಾಲದಲ್ಲಿ ಅಭಿವೃದ್ಧಿ ಹೊಂದಿದ ಸಾಹಿತ್ಯ ಮತ್ತು ಕಲೆ ಇವೆಲ್ಲ ಗುಪ್ತ ಸಾಮ್ರಾಜ್ಯದ ಸುಭದ್ರ ಆಡಳಿತ ಪದ್ಧತಿಯ ಕುರುಹುಗಳಾಗಿವೆ. ಅರಸನಿಗಿದ್ದ ಪರಮಾಧಿಕಾರ ನಿರಂಕುಶ ಪ್ರಭುತ್ವವಾಗದೆ ದೇಶದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಯಿತೆಂದು ಅನೇಕ ಆಧಾರಗಳಿಂದ ಹೇಳಬಹುದಾಗಿದೆ. ಒಟ್ಟಿನಲ್ಲಿ ಗುಪ್ತರ ಕಾಲದ ಆಡಳಿತ ಸುಭದ್ರವಾಗಿತ್ತು. ಜನತೆಗೆ ನೆಮ್ಮದಿಯಿಂದರಲು ಅದು ಸಹಾಯಕವಾಗಿದ್ದಿತು. ನಂತರದ ಕಾಲದಲ್ಲೂ ಇವರ ಆಡಳಿತ ತನ್ನ ಪ್ರಭಾವ ಉಳಿಸಿಕೊಂಡು ಬಂದಿರುವುದನ್ನು ಚಾಲುಕ್ಯರು, ರಾಷ್ಟ್ರಕೂಟರು ಮೊದಲಾದವರ ಕಾಲದಲ್ಲಿ ಕಾಣಬಹುದು.

## 54.4 ಗುಪ್ತರ ಕಾಲದಲ್ಲಿ ಆರ್ಥಿಕ ಪರಿಸ್ಥಿತಿ

ಗುಪ್ತರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಲು ಅಂದಿನ ಅನೇಕ ಶಾಸನಗಳು, ನಾಣ್ಯಗಳು, ದೇಶಿಯ ಮತ್ತು ವಿದೇಶಿಯ ಬರವಣಿಗೆಗಳು ನೆರವಾಗುತ್ತವೆ. ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಗುಪ್ತರ ಕಾಲದ ಆರ್ಥಿಕ ವ್ಯವಸ್ಥೆಯ ಪ್ರಮುಖ ಅಂಗಗಳಾಗಿದ್ದವು. ಆದುದರಿಂದ ಸಹಜವಾಗಿಯೇ ಕೃಷಿ. ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಗುಪ್ತರ

ಕಾಲವು ಗಮನಾರ್ಹವಾದ ಅಭಿವೃದ್ಧಿ ಸಾಧಿಸಿತ್ತು ಇವುಗಳ ತುಲನಾತ್ಮಕ ಅಧ್ಯಯನದಿಂದ ಗುಪ್ತರ ಕಾಲದ ಅಭಿವೃದ್ಧಿಯಾತ್ಮಕ ಆರ್ಥಿಕ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ತಿಳಿಸುವ ಪ್ರಯತ್ನ ಈ ಘಟಕದಲ್ಲಿ ಮಾಡಲಾಗಿದೆ.

## 54.4.1 ಕೃಷಿ

ಸಹಜವಾಗಿಯೇ ಗುಪ್ತರ ಕಾಲದ ಆರ್ಥಿಕ ಪರಿಸ್ಥಿತಿಯ ಪ್ರಧಾನ ಅಂಗ ಕೃಷಿಯಾಗಿದ್ದಿತು. ಅಷ್ಟೇ ಸಹಜವಾಗಿ ಗುಪ್ತರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಕೃಷಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಬಹುಸಂಖ್ಯಾತರ ಕಸುಬು ಅಂದು ಕೃಷಿಯೇ ಆಗಿದ್ದುದರಿಂದ ಹೆಚ್ಚು ಹೆಚ್ಚು ಭೂಮಿಯನ್ನು ಕೃಷಿಗೆ ಒಳಪಡಿಸಲಾಯಿತು. ಗುಪ್ತ ದೊರೆಗಳು ಅದುವರೆವಿಗೂ ಸಾಗುವಳಿ ಮಾಡುವ ಭೂಮಿ ಮತ್ತು ಬರಡು ಭೂಮಿಗಳನ್ನು ಕೃಷಿಕರಿಗೆ ನೀಡಿ ಹೆಚ್ಚು ಹೆಚ್ಚು ಉತ್ಪಾದನೆ ಗಳಿಸಲು ಹುರಿದುಂಬಿಸಲಾಯಿತು. ಮುಂದೆ ಕೃಷಿಭೂಮಿ ಕುಟುಂಬಗಳ ವೈಯಕ್ತಿಕ ಆಸ್ತಿಯಾಯಿತು. ಗೋಧಿ ಮತ್ತು ಭತ್ತ ಈ ಕಾಲದ ಪ್ರಮುಖ ಕೃಷಿ ಬೆಳೆಗಳಾಗಿದ್ದವು. ಕೃಷಿಯು ಮಳೆಯನ್ನೇ ಅವಲಂಬಿಸಿದ್ದರೂ, ಅನೇಕ ಕಡೆಗಳಲ್ಲಿ ಕೃತಕ ನೀರಾವರಿ ವ್ಯವಸ್ಥೆಯನ್ನು ಮಾಡಿದ್ದರಿಂದ ಕೃಷಿ ಅಭಿವೃದ್ಧಿಗೊಂಡಿತು.

ಪರ್ಷಿಯಾದ ನೀರಿನ ಚಕ್ರಗಳನ್ನು ಉಪಯೋಗಿಸಿ ಬಾವಿ ಹಾಗೂ ಕಾಲುವೆಗಳಿಂದ ನೀರನ್ನು ಹಾಯಿಸಿ ಕೃಷಿ ಅಭಿವೃದ್ಧಿ ಪಡಿಸಲಾಗುತ್ತಿತ್ತು. ವಿವಿಧ ರೀತಿಯ ತರಕಾರಿ ಹಣ್ಣು ಹಾಗೂ ಕಬ್ಬನ್ನು ಸಹ ವಿಶೇಷವಾಗಿ ಈ ಕಾಲದಲ್ಲಿ ಉತ್ಪಾದಿಸಲಾಗುತ್ತಿತ್ತು. ಒಟ್ಟಿನಲ್ಲಿ ಸರ್ಕಾರ ಕೃಷಿ ಅಭಿವೃದ್ಧಿಗೆ ನೆರವು ನೀಡಲು ಸದಾ ಶ್ರಮಿಸುತ್ತಿದ್ದಿತು. ನೀರಾವರಿ ವ್ಯವಸ್ಥೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದ್ದಿತು. ಈ ಉದ್ದೇಶಕ್ಕಾಗಿಯೇ ಸ್ಕಾಂಧಗುಪ್ತ 'ಸುದರ್ಶನ' ಕೊಳವೊಂದನ್ನು ನಿರ್ಮಿಸಿದ್ದನು. ಅಂದಿನ ಅರಣ್ಯ, ವಿವಿಧ ಬಗೆಯ ಸಸ್ಯ ಮತ್ತು ತೋಟಗಳ ಬಗ್ಗೆ ತಿಳಿಯಲು ಅಮರ ಕೋಶದಲ್ಲಿ ಒಂದು ಪ್ರತ್ಯೇಕ ಅಧ್ಯಾಯವೇ ಇದೆ.

ಕೆಲವು ಇತಿಹಾಸಕಾರರ ಪ್ರಕಾರ ಗುಪ್ತರ ಕಾಲವು ಊಳಿಗಮಾನ್ಯ ಪದ್ಧತಿಯ ಕೆಲವು ಆರ್ಥಿಕ ಅಂಶಗಳನ್ನು ಅಳವಡಿಸಿಕೊಂಡಿತ್ತು. ಈ ಕಾಲದಲ್ಲಿ ಭೂದಾನಗಳ ಸಂಖ್ಯೆ ಅತೀವವಾಗಿ ಹೆಚ್ಚಿತು. ಬ್ರಾಹ್ಮಣರಿಗೆ, ಮಠಗಳಿಗೆ ಹಾಗೂ ಅಧಿಕಾರಿಗಳಿಗೆ ಧಾರಾಳವಾಗಿ ಭೂಮಿಯನ್ನು ನೀಡಲಾಯಿತು. ಇವರೆಲ್ಲರೂ ಕೃಷಿಯೇತರ ವರ್ಗಕ್ಕೆ ಸೇರಿದ್ದುದರಿಂದ ಉಳುವವನಿಗೆ ಉತ್ಪಾದನೆಯ ಮೇಲೆ ಅಧಿಕಾರವಿರಲಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಬಲಾತ್ಕಾರ ಕೂಲಿ ಸಾಮಾನ್ಯವಾಗಿತ್ತು. ಉತ್ಪಾದನೆಯ ಮೇಲೆ ವಿವಿಧ ರೀತಿಯ ಸುಂಕಗಳನ್ನು ವಿಧಿಸಲಾಗುತ್ತಿತ್ತು. ಹಾಗಿದ್ದರೂ ರೈತರೂ ಅಥವಾ ಕೃಷಿಕರು ಸುಖ ಸಂತೋಷದಿಂದಿದ್ದರೆಂಬ ವಾದವನ್ನು ಡಿ.ಎನ್.ಜಾರವರು ಒಪ್ಪದೇ ಭೂದಾನಗಳನ್ನು ನೀಡಿದ್ದುದರಿಂದ ಊಳಿಗಮಾನ ವ್ಯವಸ್ಥೆಗೆ ದಾರಿಮಾಡಿದಂತಾಯಿತು. ಈ ದತ್ತಿ ಭೂಮಿಗಳಿಗೆ ಅಂಟಿಕೊಂಡಿದ್ದ ಕಾರ್ಮಿಕರು ಮುಂದೆ ಗುಲಾಮರಂತಿದ್ದರು. ದೇಶದಲ್ಲಿ ವಿವಿಧ ಭಾಗಗಳಲ್ಲಿ ಭೂ ಒಡೆತನವಿದ್ದ ರೈತರಿದ್ದರು. ಕಾಲಾನಂತರ ಅವರು ಕೂಲಿಗಳಾಗಿ ಬದಲಾದರು. ಒತ್ತಾಯದ ಸೇವೆ ಕೂಡ ಜನರನ್ನು ತೊಂದರೆಗೆ ಈಡುಮಾಡಿದ್ದಿತು. ವಾತ್ಸ್ಯಾಯನನ ಕಾಮ ಸೂತ್ರದಲ್ಲಿ ರೈತನು ಹಿಳೆ, ಧಣಿ ಅಥವಾ ಗ್ರಾಮ ಮುಖಂಡರ ಮನೆಗಳಲ್ಲಿ ಸಲ್ಲಿಸಬೇಕಾಗಿದ್ದ ವಿವಿಧ ಬಗೆಯ ಕೂಲಿರಹಿತ ಕಾರ್ಯಗಳನ್ನು ದಾಖಲಿಸಿರುವುದು ಅಲ್ಲಿ ಉಲ್ಲೇಖಾರ್ಹವಾಗಿದೆ . ಮುಂದುವರಿದು ರೈತ ಮಹಿಳೆಯು ಹಳ್ಳಿಯ ಪ್ರಮುಖನ ಮನೆಯಲ್ಲಿ ಆಹಾರ ಪದಾರ್ಥಗಳನ್ನು ಉಗ್ರಾಣದಲ್ಲಿ ತುಂಬುವ ಮನೆಶುಚಿಮಾಡುವ, ಭೂಮಿಯಲ್ಲಿ ಕೆಲಸ ಮಾಡುವಂತಹ ಕಡ್ಡಾಯ ಕೂಲಿ ಮಾಡುತ್ತಿದ್ದಳೆಂದು ತಿಳಿಸುತ್ತದೆ. ಹಾಗೆಯೇ ಸಾಮ್ರಾಜ್ಯದ ಸೈನ್ಯವು ಹಳ್ಳಿಯ ಸಮೀಪ ಹಾದು ಹೋದರೆ ದಕ್ಕೆ ಅವಶ್ಯಕವಾದ ನೀರು ಆಹಾರ ಪದಾರ್ಥಗಳನ್ನು ಒದಗಿಸಬೇಕಾಗಿದ್ದಿತು. ಆದು ರೈತರ ಮೇಲೆ ಅಧಿಕ ಖರ್ಚನ್ನು ಹೇರಿ ಅವನು ಇನ್ನೂ ದುಃಸ್ಥಿತಿಗಿಳಿಯಲು ಕಾರಣವಾಯಿತು.

## 54.4.2. ಕೈಗಾರಿಕೆ

ಗುಪ್ತರ ಕಾಲದಲ್ಲಿ ಕೈಗಾರಿಕೆ, ಬ್ಯಾಂಕಿಂಗ್ ಮತ್ತು ವ್ಯಾಪಾರ ವಹಿವಾಟುಗಳ ನಿರ್ವಹಣೆಗಾಗಿ ಪ್ರತ್ಯೇಕ ಸಂಘ ಸಂಸ್ಥೆಗಳಿದ್ದಂತೆ ಕಂಡುಬರುತ್ತದೆ. ಸಮಕಾಲೀನ ಬರವಣಿಗೆಗಳು ಮತ್ತು ಪ್ರಾಕ್ತನ ಆಧಾರಗಳಿಂದ ಗುಪ್ತರ ಕಾಲದಲ್ಲಿ ಅನೇಕ ರೀತಿಯ ಕೈಗಾರಿಕೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಬಟ್ಟೆ ಕೈಗಾರಿಕೆಗಳು , ಕಬ್ಬಿಣ, ಚರ್ಮ, ದಂತ ಮೊದಲಾದ ಕೈಗಾರಿಕೆಗಳು ಗುಪ್ತ ಸಾಮ್ರಾಜ್ಯದಾದ್ಯಂತ ಅಸ್ತಿತ್ವದಲ್ಲಿದ್ದವು. ವಾರಣಾಸಿ, ಮಥುರ, ಕೈಮಾರುವ ಮೊದಲಾವು ಬಟ್ಟೆ ಕೈಗಾರಿಕೆಗೆ ಪ್ರಸಿದ್ಧಿಯಾಗಿದ್ದವು. ಬಹುಸಂಖ್ಯಾತ ಜನ ನೂಲುವ ಮತ್ತು ನೇಯ್ಗೆಯಿಂದ ಜೀವನ ನಡೆಸುತ್ತಿದ್ದರು. ಗುಜರಾತ್, ಬಂಗಾಳ ಮತ್ತು ದಕ್ಷಿಣದ ಅನೇಕ ಸ್ಥಳಗಳಲ್ಲಿ ಬಟ್ಟೆ

ಉದ್ಯಮ ಬೆಳೆದಿತು. ಮಸ್ಲೀನ್, ರೇಷ್ಮೆ, ಉಣ್ಣೆ, ಕ್ಯಾಲಿಕೋದಂತಹ ವಿವಿಧ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಜನರು ಹೊಲಿದ ಮತ್ತು ಹೊಲಿಗೆ ಇಲ್ಲದ ಬಟ್ಟೆಗಳನ್ನು ಧರಿಸುತ್ತಿದ್ದರು. ಅಜಂತಾ ಗುಹಾಲಯದ ಚಿತ್ರಗಳು ಆಗಿನ ವೇಷ ಭೂಷಣಗಳನ್ನು ತಿಳಿಸುತ್ತವೆ. ಬಟ್ಟೆ ಉದ್ಯಮದ ಜೊತೆಗೆ ಚಿನ್ನದ ಉದ್ಯಮ, ದಂತ ಮತ್ತು ಲೋಹ ಕೈಗಾರಿಕೆಗಳೂ ಇದ್ದವು. ಸಾವಿರಾರು ಜನರು ಚಿನ್ನದ ಆಭರಣಗಳನ್ನು ತಯಾರಿಸುತ್ತಿದ್ದರು. ಆಭರಣಗಳು ಮುತ್ತು, ರತ್ನ ಮತ್ತು ವಜ್ರಗಳ ಜೋಡಣೆಯಿಂದ ಮಾಡಲ್ಪಡುತ್ತಿದ್ದವು. ವಜ್ರವನ್ನು ಕತ್ತರಿಸುವ ಹೊಳಪು ಕೊಡುವ ಕೈಗಾರಿಕೆ ಅಭಿವೃದ್ಧಿ ಹೊಂದಿತು. ದಂತದಿಂದ ಪೀಠೋಪಕರಣ ಮತ್ತು ಮುದ್ರೆಗಳನ್ನು ತಯಾರಿಸುತ್ತಿದ್ದರು. ಹಾಗೆಯೇ ಬಡಗಿ, ಕಮ್ಮಾರಿಕೆ, ಕುಂಬಾರಿಕೆ, ಪಾದರಕ್ಷಾ ತಯಾರಿಕೆ ಮುಂತಾದ ಕೈಗಾರಿಕೆಗಳು ವ್ಯವಸ್ಥಿತವಾಗಿ ಅಭಿವೃದ್ಧಿಗೊಂಡಿದ್ದವು.

## 54.4.3. ವ್ಯಾಪಾರ ಮತ್ತು ವಾಣಿಜ್ಯ

ವ್ಯಾಪಾರ ಮತ್ತು ವ್ಯಾಣಿಜ್ಯ ಈ ಕಾಲದಲ್ಲಿ ಉನ್ನತಿಯನ್ನು ಹೊಂದಿತ್ತು. ಪ್ರಮುಖ ನಗರಗಳು ಮತ್ತು ಬಂದರುಗಳಾದ ಬ್ರೋಚ್, ಉಜ್ಜೈನಿ, ವಿದಿಶ, ಪ್ರಯಾಗ, ಬನಾರಸ್, ಗಯಾ, ಪಾಟಲೀಪುತ್ರ, ವೈಶಾಲಿ, ತಾಮ್ರಲಿಪ್ತಿ, ಕೌಸಾಂಬಿ, ಮಥುರಾ, ಪೆಶವರ್, ಮುಂತಾದ ಕೇಂದ್ರಗಳಿಗೆ ಉತ್ತಮ ಹೆದ್ದಾರಿಯಿದ್ದು ರಾಜ್ಯವು ರಸ್ತೆಗಳನ್ನು ಸುರಕ್ಷಿತವಾಗಿಟ್ಟಿದ್ದು ವ್ಯಾಪಾರದ ಅಭಿವೃದ್ಧಿಗೆ ಕಾರಣವಾಯಿತು. ವ್ಯಾಪಾರವು ಗಂಗಾ, ಬ್ರಹ್ಮಪುತ್ರ, ನರ್ಮದಾ ನದಿಗಳ ಮೂಲಕವೂ ನಡೆಯುತ್ತಿತ್ತು. ಫಾಹಿಯಾನನು ಸಾಮ್ರಾಜ್ಯದಲೆಲ್ಲಾ ಸಂಚರಿಸಿ ಅಲ್ಲಿನ ಹೆದ್ದಾರಿಗಳ ಸುರಕ್ಷಿತೆಯ ಬಗ್ಗೆ ಹೊಗಳಿದ್ದಾನೆ.

ದೇಶೀಯ ವ್ಯಾಪಾರವು ಎತ್ತಿನ ಬಂಡಿಯ ಮೂಲಕ ಸಾಗುತ್ತಿತ್ತು. ಗುಪ್ತರ ಕಾಲದ ವ್ಯಾಪಾರವು ವಿದೇಶಗಳಿಗೂ ಹಬ್ಬಿತ್ತು. ಕಲ್ಯಾಣ್, ಚೌಲ್, ಬ್ರೋಚ್ ಮತ್ತು ಕ್ಯಾಂಬೆ ಬಂದರುಗಳ ಮೂಲಕ ಆಗ್ನೇಯ ಏಷ್ಯಾ ಮತ್ತು ಚೀನಾದ ಜೊತೆ ಹಚ್ಚಿನ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಭಾರತದ ವ್ಯಾಪಾರವು ಈ ಕಾಲದಲ್ಲಿ ರೋಮನ್ ಸಾಮ್ರಾಜ್ಯದೊಡನೆ ಹೆಚ್ಚಿದ್ದು ಅಲ್ಲಿಂದ ಅಧಿಕವಾದ ಆದಾಯ ಬರುತ್ತಿತ್ತು. ಇದು ರೋಮನ್ನರ ಆರ್ಥಿಕತೆಗೆ ಎಷ್ಟು ಹೊಡೆತ ಬಿತ್ತೆಂದರೆ ರೋಮನ್ ಸರ್ಕಾರವು ಭಾರತದ ಜೊತೆಗಿನ ವ್ಯಾಪಾರದ ಮೇಲೆ ಅಡೆತಡೆ ವಿಧಿಸಿತು. ಪಶ್ಚಿಮದ ಇತರ ದೇಶಗಳಾದ ಈಜಿಪ್ಟ್, ಅರೇಬಿಯಾ, ಗ್ರೀಕ್, ಸಿರಿಯಾ ಮುಂತಾದ ದೇಶಗಳಿಗೆ ಮುತ್ತು, ಬೆಲೆಬಾಳುವ ಶಿಲೆಗಳು, ಬಟ್ಟೆ, ಸಾಂಬಾರ ಪದಾರ್ಥಗಳು, ಸುಗಂಧ ದ್ರವ್ಯಗಳು, ಇಂಡಿಗೊ, ತೆಂಗಿನ ಕಾಯಿ ಮತ್ತು ದಂತವನ್ನು ರಫ್ತು ಮಾಗಿ, ಚಿಣ್ಣ. ಬೆಳ್ಳಿ, ರೇಷ್ಮೆ ಮತ್ತು ಕುದುರೆಗಳನ್ನು ಹೆಚ್ಚಾಗಿ ಅಮದು ಮಾಡಿಕೊಳ್ಳಲಾಗುತ್ತಿತ್ತು. ಹೀಗೆ ವಿದೇಶಿ ವ್ಯಾಪಾರದಿಂದ ಅಧಿಕ ಸಂಪತ್ತು ಭಾರತಕ್ಕೆ ಬರುತ್ತಿತ್ತು. ಫಾಹಿಯಾನನು ಕೌರೀಸ್(ಸಮುದ್ರ ಚಿಪ್ಪು)ಗಳನ್ನು ಹಣದ ಮಾಧ್ಯಮವಾಗಿ ಉಪಯೋಗಿಸುತ್ತಿದ್ದರೆಂದು ತಿಳಿಸಿದ್ದಾನೆ. ಕಾಸ್‌ಮಾಸ್‌ನ "ಇಂಡಿಕ್ ಪ್ಲೆಕುಸ್ಯಸ್" ಪೂರ್ವ ಮತ್ತು ಪಶ್ಚಿಮದ ಬಂದರುಗಳಿಂದ ಶ್ರೀಲಂಕಾಕ್ಕೆ ಸಮುದ್ರ ಮಾರ್ಗವಿತ್ತೆಂದು, ಅದರ ಮೂಲಕ ಕೃಷಿ ವಸ್ತುಗಳು, ಗಂಧದ ಮರ ರಫ್ತಾಗುತ್ತಿದ್ದವೆಂದು ತಿಳಿಸುತ್ತದೆ. ಕಾಸ್‌ಮಸ್‌ನು ಚೀನಾದಿಂದ ಬರುತ್ತಿದ್ದ ರೇಷ್ಮೆ, ಇಥಿಯೋಪಿಯಾದ ದಂತಗಳ ಬಗ್ಗೆ ತಿಳಿಸುತ್ತಾನೆ.

ಹೀಗೆ ಉತ್ಪಾದನೆಯಲ್ಲಿ ತೊಡಗಿದ್ದ ವರ್ಗಗಳು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ನಿಗಮಗಳನ್ನು ಸ್ಥಾಪಿಸಿಕೊಂಡಿದ್ದರು. ವ್ಯಾಪಾರಿ ವರ್ಗದವರು ತಮ್ಮದೇ ಆದ ನಿಗಮಗಳನ್ನು ಹೊಂದಿದ್ದರು. ರಾಜ್ಯದ ಆರ್ಥಿಕ ಪ್ರಗತಿಯಲ್ಲಿ ಈ ಸಂಘಮತ್ತು ನಿಗಮಗಳು ಪ್ರಮುಖ ಪಾತ್ರವಹಿಸಿದ್ದವು. ಅಂದು ಅಸ್ತಿತ್ವದಲ್ಲಿದ್ದ ಗಿಲ್ಡ್ ಅಥವಾ ಶ್ರೇಣಿ ಅಥವಾ ನಿಗಮಗಳ ಬಗ್ಗೆ ಗುಪ್ತರ ಶಾಸನಗಳಲ್ಲಿ ಮಾಹಿತಿ ಇದೆ.

## 54.4.4. ವೃತ್ತಿ ಸಂಘಗಳು

ವ್ಯಾಪಾರ ವಾಣಿಜ್ಯದ ಅಭಿವೃದ್ಧಿ ಹಂತದ ಪ್ರಮುಖ ಅಂಶವಾದ ವೃತ್ತಿ ಸಂಘಗಳು ಇದ್ದ ಬಗ್ಗೆ ಗುಪ್ತರ ಶಾಸನಗಳು ತಿಳಿಸುತ್ತವೆ. ವೃತ್ತಿ ಸಂಘಗಳನ್ನು ಶ್ರೇಣಿಗಳೆಂದು ಕರೆಯುತ್ತಿದ್ದರು. ಗುಪ್ತರ ಆರ್ಥಿಕ ವ್ಯವಸ್ಥೆಯನ್ನು ಶ್ರೇಣಿಗಳ ಅಧ್ಯಕ್ಷರು ವೃತ್ತಿ ಗುಂಪಿನ ನಾಯಕರು ಮತ್ತು ವ್ಯಾಪಾರಸ್ಥರು ಉತ್ತಮ ಮಟ್ಟದಲ್ಲಿ ವ್ಯವಸ್ಥೆಗೊಳಿಸಿದ್ದರು. ಈ ಕಾಲದಲ್ಲಿ ವ್ಯಾಪಾರಸ್ಥರು ಮಾತ್ರ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿರದೆ ಕಾರ್ಮಿಕರು ಮತ್ತು ನೇಯ್ಗೆಯವರು ಲೇವಾದೇವಿಗಾರರು, ನೇಯ್ಗೆಯವರು, ಗಾಣಿಗರು, ಕಲ್ಲುಕುಟುಕರು ಇತ್ಯಾದಿಯವರು ಸಹ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ಈ ಸಂಘ ಸಂಸ್ಥೆಗಳು ಸ್ವತಂತ್ರವಾಗಿದ್ದು ತಮ್ಮದೇ ಆದ ಅಧ್ಯಕ್ಷ ಮತ್ತು ಸದಸ್ಯ ಮಂಡಲಿಗಳನ್ನು ಹೊಂದಿದ್ದವು. ಈ ಶ್ರೇಣಿಗಳು ಈಗಿನ ಆಧುನಿಕ ಬ್ಯಾಂಕ್‌ಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಸದಸ್ಯರಿಂದ

ವಂತಿಗೆ ಪಡೆದ ಸದಸ್ಯರಿಗೆ ಸಾಲಕೊಡುತ್ತಿದ್ದವು. ಪ್ರತಿಯೊಂದು ಶ್ರೇಣಿಯು ತಮ್ಮದೇ ಆದ ಕಾನೂನುಗಳನ್ನು ಹೊಂದಿದ್ದು ರಾಜ್ಯವು ಅವುಗಳಿಗೆ ಮನ್ನಣೆಕೊಟ್ಟಿತು. ಆಗಿನ ಶ್ರೇಣಿಗಳು ಸದಸ್ಯರ ಆಸ್ತಿಯನ್ನು ಕಾಪಾಡಲು ಅಂಗರಕ್ಷಕ ಪಡೆಯನ್ನು ಇಟ್ಟಿತು. ಸದಸ್ಯರಿಗೆ ವೃತ್ತಿ ಸಂಬಂಧಿತ ಶಿಕ್ಷಣ ನೀಡುತ್ತಿದ್ದವು ಹಾಗೂ ಧಾರ್ಮಿಕ ಮತ್ತು ಸಾರ್ವಜನಿಕ ಹಿತ ಕಾರ್ಯಗಳಲ್ಲಿ ತೊಡಗಿದ್ದವು. ಉದಾಹರಣೆಗೆ ಉತ್ತರ ಪ್ರದೇಶದ ತೈಲೋತ್ಪಾದಕರ ಸಂಘವು ಸೂರ್ಯ ದೇವಾಸ್ಥಾನಕ್ಕೆ ವರ್ಷ ಪೂರ್ತಿ ಉಚಿತ ಎಣ್ಣೆ ಒದಗಿಸಿದ್ದಿತು.

ಅಂದು ಅಸ್ತಿತ್ವದಲ್ಲಿ ಇತರ ಸಂಘಗಳೆಂದರೆ ಹಣಕಾಸು ವ್ಯವಹಾರ ಸಂಘಶ್ರೇಷ್ಟ ಕುಶಲ ಕರ್ಮಿಗಳ ಸಂಘ 'ಕುಲಿಕ' ವ್ಯಾಪಾರಿಗಳ ಸಂಘ 'ಸರ್ತವಹ' ತೈಲಗಾರರ ತೈಲಕ ಶ್ರೇಣಿ ಹೀಗೆ ಮೊದಲಾದ ಸಂಘ ಅಥವಾ ಗಿಲ್ಡಿಗಳನ್ನು ಹೆಸರಿಸಬಹುದು. ಕೆಲವು ಶ್ರೇಣಿಗಳು ಒಟ್ಟುಗೂಡಿ ಒಂದು ಕೇಂದ್ರ ಸಂಘ ರಚಿಸಿಕೊಂಡಿದ್ದವು. ಪ್ರತಿಯೊಂದು ಸಂಘಕ್ಕೂ ಪ್ರತ್ಯೇಕ ಮುದ್ರೆಗಳಿದ್ದವು. ಹೀಗೆ ಗುಪ್ತರ ಕಾಲದಲ್ಲಿ ದೇಶೀಯ ಮತ್ತು ವಿದೇಶೀ ವ್ಯಾಪಾರಗಳು ಪ್ರಗತಿದಾಯಕ ಸ್ಥಿತಿಯಲ್ಲಿದ್ದವು. ವಿದೇಶಿ ವ್ಯಾಪಾರ ಲಾಭದಾಯಕವಾಗಿದ್ದು ದೇಶದ ಆರ್ಥಿಕ ಸಂವೃದ್ಧಿಗೆ ಕಾರಣವಾಗಿದ್ದಿತು.

## 54.4.5. ನಾಣ್ಯ ಪದ್ದತಿ

ಗುಪ್ತರ ಕಾಲದಲ್ಲಿ ಹಲವು ಬಗೆಯ ಬೆಳ್ಳಿ, ಬಂಗಾರ ಮತ್ತು ತಾಮ್ರದ ನಾಣ್ಯಗಳು ಚಲಾವಣೆಯಲ್ಲಿದ್ದವು. ಸಮುದ್ರಗುಪ್ತನು ಎಂಟು ಬಗೆಯ ಬಂಗಾರದ ನಾಣ್ಯಗಳನ್ನು ಹೊರಡಿಸಿದ್ದನು. ವೀಣಾ ಅಶ್ವ, ಬಜ್ರಿ, ಧನುಶ್, ಹುಲಿ, ಶಂಖ, ಛತ್ರ ಗಂಡುಕೊಡಲಿ, ಮೊದಲಾದ ರೀತಿಯ ನಾಣ್ಯಗಳನ್ನು ಅವನು ಹೊರಡಿಸಿದ್ದನು. ಗುಪ್ತರ ಆಳ್ವಿಕೆಯ ಕೊನೆಯ ಕಾಲದ ವೇಳೆಗೆ ಬಂಗಾರದ ನಾಣ್ಯಗಳ ಬಳಕೆ ಕಡಿಮೆಯಾಯಿತು. ಈ ಅಂಶವನ್ನು ಗಮನನಿಸಿದ ಪ್ರೊ.ಡಿ.ಎನ್.ಝಾ ಗುಪ್ತರ ಕಾಲದ ಅರ್ಥಿಕ ಸುಭದ್ರತೆಯನ್ನು ಅನುಮಾನಿಸಿದ್ದಾರೆ. ಆದರೆ ಅವರ ವಾದ ಪುರಸ್ಕೃತವಲ್ಲ. ಏಕೆಂದರೆ ಪ್ರಾಚೀನ ಭಾರತದ ಇತಿಹಾಸದಲ್ಲಿ ಗುಪ್ತರಿಗಿನ್ನ ಮುನ್ನ ಅಥವಾ ಅನಂತರದ ಯುಗಗಳಲ್ಲಿ ಕಂಡುಬರದ ಸಂಮೃದ್ಧಿ ಗುಪ್ತರ ಕಾಲದಲ್ಲಾಗಿದೆ. ಇವರ ನಾಣ್ಯಗಳ ಮೇಲೆ ಗ್ರೀಕ್, ಶಕ ಮತ್ತು ಕುಶಾನರ ಪ್ರಭಾವ ಹೆಚ್ಚಾಗಿದೆ. ನಾಣ್ಯಗಳ ವಿನ್ಯಾಸ ತೂಕ, ಆಕಾರಗಳಲ್ಲಿ ಇವು ಗ್ರೀಕರ ನಾಣ್ಯಗಳನ್ನು ಬಹಳಷ್ಟು ಹೊಲುತ್ತವೆ. ನಾಣ್ಯಗಳ ಮೇಲಿನ ರಾಜರ ವೇಶ ಭೂಶಣಗಳು ಸಿಥಿಯೋ- ಕುಷಾನರ ವೇಶಭೂಶಣಗಳನ್ನು ಹೋಲುತ್ತವೆ. ಈ ಹೋಲಿಕೆ ಶ್ರಿ ಗುಪ್ತನಿಂದ ಸ್ಕಾಂದಗುಪ್ತನವರೆಗೆ ಕಂಡುಬರುತ್ತದೆ. ಅನಂತರದವುಗಳಲ್ಲಿ ಬದಲಾವಣೆ ಇದೆ. ಗುಪ್ತರ ದೇವತೆಗಳಾದ ಲಕ್ಷ್ಮಿ, ಸರಸ್ವತಿ ಮತ್ತು ರಾಣಿಯರ ಮುದ್ರೆಗಳಿರುವ ನಾಣ್ಯಗಳಲ್ಲಿ ವಿದೇಶಿ ಪ್ರಭಾವ ಕಡಿಮೆ ಇದೆ. ಲಕ್ಷ್ಮಿ ನಾಣ್ಯ ಕುಶಾನರ ಅರ್ಡೋಕ್ಷೋ ನಾಣ್ಯವನ್ನು ಬಹುವಾಗಿ ಹೋಲುತ್ತದೆ. ನಾಣ್ಯಗಳ ರಚನೆ ಮತ್ತು ವಿನ್ಯಾಸದಲ್ಲಿ ಅಂದಿನ ಅಕ್ಕಸಾಲಿಗರ ಶ್ರೇಷ್ಠಮಟ್ಟದ ಕೌಶಲ್ಯವನ್ನು ಕಾಣಬಹುದಾಗಿದೆ.

## 54.5. ಗುಪ್ತರ ಕಾಲದ ಸಾಮಾಜಿಕ ಪರಿಸ್ಥಿತಿ

ಸಮಕಾಲೀನ ಶಾಸನಗಳು ಮತ್ತು ಫಾಹೀಯಾನನ ಬರವಣಿಗೆಗಳು ಗುಪ್ತರ ಕಾಲದ ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಫಾಹಿಯಾನನು ಹೇಳುವಂತೆ ಗುಪ್ತರ ಕಾಲದಲ್ಲಿ ಜನರು ಸತ್ಯಸಂಧರು, ಶ್ರೀಮಂತರು ಮತ್ತು ಸುಖಿಗಳು ಆಗಿದ್ದರು. ಅವರು ಪ್ರಾಚೀನ ಕಾಲದ ಅವಿಭಕ್ತ ಕುಟುಂಬ ವ್ಯವಸ್ಥೆ ಇದ್ದು ಕುಟುಂಬದ ಹಿರಿಯ ಮುಖಂಡನಾಗಿದ್ದನು. ಕುಟುಂಬದ ಎಲ್ಲಾ ವಿಚಾರಗಳಲ್ಲೂ ಇವನದೇ ಅಂತಿಮ ತೀಮಾರ್ನವಾಗಿದ್ದಿತು. ಕುಟುಂಬದ ಸದಸ್ಯರೆಲ್ಲರ ವಿಧೆಯತೆ ಹಾಗೂ ಗೌರವಕ್ಕೆ ಪಾತ್ರನಾಗಿದ್ದನು. ಇವನು ಸಂಪಾದಿಸಿದ ಅಸ್ತಿಪಾಸ್ತಿಗಳಲ್ಲಿ ಮಕ್ಕಳು ಮತ್ತು ಸೋದರರಿಗೂ ಪಾಲು ಇದ್ದಿತು. ಸಮಾಜ ಪುರಾತನ ವರ್ಣಾಶ್ರಮ ವ್ಯವಸ್ಥೆಯಿಂದ ಕೂಡ್ಡಿದ್ದಿತು. ಜಾತಿ ವ್ಯವಸ್ಥೆ ಮುಂದುವರೆದರೂ, ಅದೂ ಹಿಂದಿನಂತೆ ಕಟ್ಟುನಿಟ್ಟಾಗಿರಲ್ಲಿಲ್ಲ. ಜನರ ಬೇಡಿಕೆಗಳಿಗನುಗುಣವಾಗಿ ವೃತ್ತಿ ಕಸುಬುಗಳ ಜನ ವಿವಿಧ ವೃತ್ತಿಗಳನ್ನು ಅವಲಂಬಿಸಿದೂದರಿಂದ ಇತರ ಉಪಜಾತಿಗಳೂ ಹುಟ್ಟಿಕೊಂಡವು. ಸ್ತ್ರಿಯರ ಸ್ಥಾನಮಾನ ಕೆಳಮಟ್ಟಕ್ಕಿಳಿಯಿತು. ಪಿತೃಪ್ರಧಾನವಾದ ಸಮಾಜ ಪದ್ಧತಿ ಪ್ರಬಲವಾಯಿತು. ಬಾಲ್ಯಾವಿವಾಹ ಮತ್ತು ಸತಿಪದ್ಧತಿಯು ಉಚ್ಛ ಜಾತಿಗಳ್ಲಿ ಮಾನ್ಯತೆಯನ್ನು ಪಡೆದಿತ್ತು. ಮಾಂಸಹಾರ ಸಸ್ಯಹಾರ ಎರಡೂ ಉಪಯೋಗದಲ್ಲಿತ್ತು, ಗುಪ್ತರ ಕಾಲದ ಉಡುಗೆ ತೊಡಿಗೆಯಲ್ಲಿ ಸಾಮಾನ್ಯ ಬದಲಾವಣೆ ಗಮನಿಸಬಹುದಾಗಿತು. ಹೀಗೆ "ಜಾತಿ ಪದ್ಧತಿಗಳನ್ನು ಮತ್ತು ಸಾಮಾಜಿಕ ವರ್ಗಗಳನ್ನು ಸ್ಥಿರಗೊಳಿಸಲು ಮತ್ತು ಆಯಾ ಜಾತಿಗಳು ಅವುಗಳಿಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗುವಂತೆ ಮಾಡಲು ಕ್ರಮಕೈಗೊಂಡಿದ್ದ

ಪ್ರಸಿದ್ದ ಅರಸರ ಬಗ್ಗೆ ಉಲ್ಲೇಖಗಳು ಶಾಸನಗಳಲ್ಲಿವೆ. ಫಾಹಿಯಾನ್ ತಿಳಿಸುವಂತೆ ಮಧ್ಯ ದೇಶದ ಉತ್ತಮ ಜಾತಿಗಳ ಜನರು " ಪ್ರಾಣಿವಧೆ ಮಾಡುತ್ತಿರಲಿಲ್ಲ. ಮಾದಕ ಪಾನೀಯಗಳನ್ನು ಸೇವಿಸುತ್ತಿರಲಿಲ್ಲ. ಈರುಳ್ಳಿ, ಬೆಳ್ಳುಳ್ಳಿಗಳನ್ನು ಸೇವಿಸುತ್ತಿರಲ್ಲಿಲ್ಲ." ಇವರಿಗೆ ವ್ಯತಿರಿಕ್ತವಾಗಿ ಜೀವಿಸುತ್ತಿದ್ದ ಚಾಂಡಾಲ ವರ್ಗವು ಇತರರಿಂದ ಪ್ರತ್ಯೇಕಗೊಂಡು ಜೀವಿಸುತ್ತಿದ್ದರು. ಅವರು ನಗರವನ್ನು ಅಥವಾ ಮಾರುಕಟ್ಟೆಯ ದ್ವಾರವನ್ನು ಪ್ರವೇಶಿಸಿದಾಗ ತಮ್ಮ ಬರುವಿಕೆಯನ್ನು ತಿಳಿದು ಜನರು ತಮ್ಮಿಂದ ದೂರ ಸರಿಯುವಂತೆ ಸಂಕೇತ ಸೂಚಕವಾಗಿ ಹಲಗೆಯನ್ನು ಬಡಿದು ಶಬ್ದ ಮಾಡುತ್ತಿದ್ದರು". ಭಾರತದಲ್ಲಿ ಇಂತಹ ಅಸ್ಪೃಶ್ಯತೆಯಿದ್ದ ಬಗ್ಗೆ ಭಾರತೀಯ ಮತ್ತು ಚೀನಿ ದಾಖಲೆಗಳು ಮಾತ್ರವಲ್ಲದೆ ಅಲ್ಬರೂನಿಯ ಹೇಳಿಕೆಯ ಸಾಕ್ಷ್ಯಗಳು ದೊರೆಯುತ್ತದೆ. ಅಲ್ಬರೂನಿಯ ಪ್ರಕಾರ ಗುಪ್ತರ ಕಾಲದ ಕೊನೆಯಲ್ಲಿ ವಾಯುವ್ಯ ಭಾಗದಲ್ಲಿದ್ದ ವಿದೇಶಿಯರು ಈ ಅಸ್ಪೃಶ್ಯತೆ ಸಿದ್ಧಾಂತಕ್ಕೆ ಒಳಗಾಗಿದ್ದರು.

## 54.5.1. ಸಮಾಜ ಜೀವನ

ಗುಪ್ತರ ಕಾಲವು ಅನೇಕ ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಯಿತು. ಮೊದಲನೆಯಾಗಿ ಈ ಕಾಲದಲ್ಲಿ ಗುಪ್ತರ ಆಸ್ಥಾನದ ಪ್ರೋತ್ಸಾಹವನ್ನು ಪಡೆದು ಹಿಂದೂ ಧರ್ಮವು ಪುನರುಜ್ಜೀವಗೊಂಡಿತು. ಆದ ಕಾರಣ ಚತುರ್ವರ್ಣ ವ್ಯವಸ್ಥೆಯನ್ನು ಸಮಾಜದಲ್ಲಿ ಜಾತಿಯಾದಾರದ ಮೇಲೆ ಜಾರಿಗೆ ತಂದು ಬ್ರಾಹ್ಮಣ ವರ್ಗದ ಮೇಲ್ಮಟ್ಟವನ್ನು ಎತ್ತಿ ಹಿಡಿಯಲಾಯಿತು. ಭಾರತದ ಮೇಲೆ ವಿದೇಶಿ ದಾಳಿಗಾರರಾಗಿ ಬಂದ ಶಕರು, ಕುಶಾನರು ಮತ್ತು ಪಾರ್ಥಿಯನ್ನರು ಭಾರತದ ಸಮಾಜದಲ್ಲಿ ಒಂದಾಗಿ ಹಿಂದೂ ಧರ್ಮವನ್ನು ಅವಲಂಭಿಸಿದರು. ಆಗ ಈ ವಿದೇಶಿ ಸಮಾಜವನ್ನು ಹಿಂದೂ ಧರ್ಮದಲ್ಲಿ ಅಳವಡಿಸಿಕೊಳ್ಳಲು ಚತುರ್ವರ್ಣ ವ್ಯವಸ್ಥೆ ಅವಶ್ಯಕವಾಯಿತು. ವ್ಯಾಪಾರ ವಾಣಿಜ್ಯದಲ್ಲಾದ ಬೆಳವಣಿಗೆಗಳಿಂದ ಸಂಪತ್ತು ಅಧಿಕವಾಗಿ ಜನರ ಜೀವನ ಮತ್ತೆ ಅಧಿಕಗೊಂಡಿತು ಮತ್ತು ಶ್ರಿಮಂತ ವರ್ಗ ಹಾಗೂ ವರ್ತಕ ವರ್ಗಗಳು, ನಗರಗಳ ಮತ್ತು ನಗರ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾದರು. ನಗರ ಸಂಸ್ಕೃತಿಯ ಉಗಮದಿಂದ ವೈದಿಕ ಸಂಪ್ರಾದಾಯಕ್ಕನುಣವಾದ ಸಮಾಜವನ್ನು ಉಳಿಸಿಕೊಳ್ಳಲು ಕಷ್ಟವಾಯಿತು. ಆಗ ಚತುರ್ವರ್ಣ ವ್ಯವಸ್ಥೆಯ ಮೂಲಕ ಸಮಾಜವನ್ನು ವ್ಯವಸ್ಥೆಗೊಳಿಸಲಾಯಿತು. ಸಮಾಜವನ್ನು ಅವರವರು ನಿರ್ವಹಿಸುವ ಕರ್ತವ್ಯ, ಉದ್ಯೋಗಗಳು, ಸಾಮಾಜಿಕ ಸ್ಥಾನಮಾನವನ್ನು ಅಧರಿಸಿ ಬ್ರಾಹ್ಮಣ, ಕ್ಷತ್ರಿಯ. ವೈಶ್ಯ, ಶೂದ್ರ ಎಂಬುದಾಗಿ ವಿಭಾಗಿಸಲಾಯಿತು.

ಬ್ರಾಹ್ಮಣರ ಉಚ್ಚತೆಯನ್ನು ಎತ್ತಿ ಹಿಡಿಯುವುದೇ ಚತುರ್ವರ್ಣದ ಉದ್ದೇಶವಾಗಿತ್ತು. ಆದರೆ ಬೇರೆ ವರ್ಣಗಳಿಗೂ ಗೌರವದ ಸ್ಥಾನವನ್ನು ನೀಡಲಾಗಿತ್ತು. ಬ್ರಾಹ್ಮಣರ ಪಾವಿತ್ರ್ಯದ ಮೇಲೆ ಒತ್ತು ಹೆಚ್ಚಿದಷ್ಟು ವರ್ಣಬ್ರಷ್ಟರ ಅಪವಿತ್ರತೆಯ ಮೇಲಿನ ಒತ್ತೂ ಹೆಚ್ಚಿತು. 'ದ್ವಿಜ' ಎಂಬ ಪದವು ಬ್ರಾಹ್ಮಣರಿಗೆ ಅನ್ವಯಿಸುವಂತೆ ಹೆಚ್ಚು ಹೆಚ್ಚಾಗಿ ಬಳಸಲ್ಪಟ್ಟಿತು. ಕ್ಷತ್ರಿಯ ವರ್ಣಕ್ಕೆ ಪ್ರಾಯೋಗಿಕವಾಗಿ ಬ್ರಾಹ್ಮಣರಿಗೆ ಸಮಾನವಾದ ಸ್ಥಾನವಿದ್ದು ಧಾರ್ಮಿಕ ವಿಧಿಗಳನ್ನಾಚರಿಸುವ ಹಕ್ಕು ಇದ್ದಿತು. ಬ್ರಾಹ್ಮಣ ವರ್ಣವೊಂದನ್ನುಳಿದು ಬೇರೆ ಮೂರು ವರ್ಣಿಯರು ತಮ್ಮ ತಮ್ಮಲ್ಲೇ ಬೇಕಾದ ವೃತ್ತಿಯನ್ನು ಕೈಗೊಳ್ಳುವ ಸ್ವಾತಂತ್ರ್ಯವಿತ್ತು. ಕ್ಷತ್ರಿಯ ವರ್ಣಕ್ಕೆ ಹೊಣರು, ಗುರ್ಜಾರರು ಮುಂತಾದ ವಿದೇಶಿಯರು ಸೇರಿದ್ದರಿಂದ ಕ್ಷತ್ರಿಯ ವರ್ಗ ಅಧಿಕಗೊಂಡು ಪ್ರಬಲವಾಯಿತು. ವೈಶ್ಯರ ಆರ್ಥಿಕ ಸ್ಥಿತಿಯು ಸುಧಾರಿಸಿದ್ದರಿಂದ ಸಾಮಾಜಿಕ ಸ್ಥಾನಮಾನ ಮತ್ತು ಆಡಳಿತದಲ್ಲಿ ಅವರೂ ಭಾಗವಹಿಸುವಂತಾದರು.

ಶೂದ್ರರು ಕೂಡ ತಮಗೆ ಇಚ್ಛೆಯಾದ ವ್ಯಾಪಾರ ಅಥವಾ ಕೃಷಿಯನ್ನವಲಂಬಿಸಬಹುದಿತ್ತು. ಆದರೆ ಶೂದ್ರ ಮತ್ತು ಚಂಡಾಲ ಅಥವಾ ಅಸ್ಪೃಶ್ಯನಿಗೆ ನಿರ್ದಿಷ್ಟವಾದ ಭಿನ್ನತೆಯಿತ್ತು. ಶೂದ್ರ ವರ್ಗಕ್ಕೆ ಅನೇಕ ಕಾಡಿನಲ್ಲಿದ್ದ ಬುಡಕಟ್ಟು ಜನಾಂಗಗಳು ವರ್ಣವ್ಯವಸ್ಥೆಗೆ ಸೇರಿದಾಗ ಅವರನ್ನು ಪಂಚಮ ವರ್ಣದವರಾಗಿ ಗುರುತಿಸಲಾಯಿತು ಮತ್ತು ಅವರನ್ನು ಅಸ್ಪೃಷ್ಯರಾಗಿ ಕಾಣಲಾರಂಭಿಸಿದರು. ಅಂದರೆ ಪಂಚಮ ವರ್ಣದವನು ಅಥವಾ ವರ್ಣಭ್ರಷ್ಟನು ಬ್ರಾಹ್ಮಣನಿಗೆ ಸಮೀಪದಲ್ಲಿ ಕಾಣಿಸಿಕೊಂಡರೂ ಬ್ರಾಹ್ಮಣನು ಅಪವಿತ್ರನಾದನೆಂಬ ಭಾವನೆ ಮತ್ತು ಶುದ್ಧೀಕರಿಸಿಕೊಳ್ಳಲು ಶಾಸ್ತ್ರಸ್ನಾನ ಮಾಡಬೇಕಿತ್ತು. ವರಾಹಮಮಿಹಿರನು "ಬ್ರಾಹ್ಮಣನು ಐದು ಕೊಠಡಿಗಳ ಮನೆಯನ್ನು ಹೊಂದಿರತಕ್ಕದ್ದು. ಕ್ಷತ್ರಿಯನು ನಾಲ್ಕು ಕೊಠಡಿಗಳನ್ನು , ವೈಶ್ಯನು 3 ಮತ್ತು ಶೂದ್ರನು 2 ಕೊಠಡಿವುಳ್ಳ ಮನೆಯೊಂದಿರಬೇಕೆಂದು" ತಿಳಿಸಿದ್ದಾನೆ. ಅಂದರೆ ಬ್ರಾಹ್ಮಣರ ವಸತಿಯು ಬೇರೆಯವರಿಗಿಂದ ಉತ್ತಮವಾಗಿರಬೇಕೆಂಬುದಾಗಿತ್ತು. ಈ ಕಾಲದ ಬರವಣಿಗೆಗಳಲ್ಲಿ ಬ್ರಾಹ್ಮಣರು ಶೂದ್ರನಿಂದ ಆಹಾರವನ್ನು ಪಡೆದರೆ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಕಳೆದುಕೊಳ್ಳುತ್ತಾನೆಂಬ ಅಂಶಗಳು ಕಂಡು ಬರುತ್ತವೆ. ಹೀಗೆ ಸಹ ಭೋಜನವನ್ನು ಈ ರೀತಿಯಾಗಿ ಹಂತ ಹಂತವಾಗಿ ಮೊಟಕುಗೊಳಿಸುತ್ತಾ ಬರಲಾಯಿತು.

ಮುಂದಿನ ಕಾನೂನುಗಳಲ್ಲಿ ವರ್ಣಕ್ಕೂ ವಿಭಿನ್ನವಾದ ಶಿಕ್ಷೆ ನೀಡುವ ಕ್ರಮಗಳು ಜಾರಿಗೆ ಬಂದವು. ಬ್ರಾಹ್ಮಣನು ಅಪರಾಧಿಯಾದರೆ ಯಾವುದೇ ಕಾರಣಕ್ಕೂ ಗಲ್ಲುಶಿಕ್ಷೆ ನೀಡುವಂತಿರಲಿಲ್ಲ. ಬ್ರಾಹ್ಮಣನಿಗೆ ಅತಿ ಹೆಚ್ಚಿನ ಶಿಕ್ಷೆಯೆಂದರೆ ತಲೆ ಬೋಳಿಸುವುದು ಅಥವಾ ದಂಡ ವಿಧಿಸುವುದಾಗಿತ್ತು. ಆದರೆ ಶೂದ್ರನು ತನ್ನನ್ನು ತಾನು ನ್ಯಾಯಸ್ಥಾನದಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹಿಂದೆ ಆದ ವೃತ್ತಿ ಬದಲಾವಣೆಯನ್ನು ಮನುಸ್ಮೃತಿ ಮತ್ತು ಯಜ್ಞವಲ್ಕ್ಯ ಸ್ಮೃತಿಗಳು, ತಿರಸ್ಕರಿಸಿ, ಶೂದ್ರನು ತನ್ನ ನೀಚ ಉಗಮ ಸ್ಥಾನ ಹೊಂದಿರುವ ಕಾರಣ ಅವನಿಗೆ ಒಂದೇ ಉದ್ಯೋಗ, ಆದೆಂದರೆ ಉಚ್ಚವರ್ಣಗಳಿಗೆ ಅದರಲ್ಲೂ ಬ್ರಾಹ್ಮಣ ವರ್ಗಕ್ಕೆ ಸೇವೆ ಮಾಡುವುದು ಎಂದು ತಿಳಿಸಿದವು. ಶೂದ್ರರಲ್ಲಿದ್ದ ಜಾತಿಗಳಲ್ಲಿ ಕೆಲವು ಸ್ವಲ್ಪ ಮಟ್ಟಿನ ಸ್ಥಾನಮಾನ ಹೊಂದಿದ್ದವು. ಅವುಗಳೆಂದರೆ ಬಡಗಿಗಳು, ಅಗಸರು, ಕಮ್ಮಾರರು ಮತ್ತು ನೇಯ್ಗೆಯವರು. ರೀತಿಯಾಗಿ ವರ್ಣ ಅಥವಾ ವೃತ್ತಿಯಾಧಾರಿತ ಚತುರ್ವರ್ಣ ವ್ಯವಸ್ಥೆಯು ತನ್ನ ಹಿಂದಿನ ಸಡಿಲತೆಯನ್ನು ಕಳೆದುಕೊಂಡು ಗುಪ್ತರ ಮತ್ತು ನಂತರದ ಕಾಲದಲ್ಲಿ ತೊಡಕಾಗಿ ಮತ್ತು ಕಠಿಣವಾಗಿ ಪಾಲಿಸಲಾರಂಭಿಸಿದ್ದರಿಂದ ಹಿಂದೂಧರ್ಮ, ಸಮಾಜವು ಅಸ್ಪೃಶ್ಯತೆಯಂತಹ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು.

## 54.5.2. ಸ್ತ್ರೀಯರ ಸ್ಥಾನಮಾನ

ಗುಪ್ತರ ಕಾಲದ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಸ್ವಾರಸ್ಯಕರವಾದ ವಿಷಯಗಳು ತಿಳಿದು ಬರುತ್ತದೆ. ಕೆಲವು ಪ್ರಾಂತ್ಯಗಳಲ್ಲಿ ಕುಲೀನ ಸ್ತ್ರೀಯರು ಆಡಳಿತದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದರು. ಗುಪ್ತರ ಕಾಲದಲ್ಲಿ ಪಟ್ಟದರಸಿ ಪ್ರಮುಖ ಸ್ಥಾನ ಹೊಂದಿದ್ದಳು. ಭಾರತೀಯ ರಾಣಿಯೊಬ್ಬಳು ತನ್ನ ಸಹೋದರನ ಜೊತೆಗೆ ರಾಜ್ಯಭಾರ ನಡಸುತ್ತಿದ್ದದನ್ನು ಚೀನಿ ಲೇಖಕನೊಬ್ಬ ತಿಳಿಸುತ್ತಾನೆ. ಉನ್ನತ ಕುಟುಂಬದ ಸ್ತ್ರೀಯರು ನೃತ್ಯ ಮತ್ತು ಸಂಗೀತಗಳಲ್ಲಿ ಪರಿಣಿತರಾಗಿದ್ದಲ್ಲದೆ ತಮ್ಮ ಕಲಾ ಸಾಮರ್ಥ್ಯವನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸುತ್ತಿದ್ದರೆಂಬ ಬಗ್ಗೆ ಉಲ್ಲೇಖಗಳಿವೆ. ಈ ವಿಷಯಗಳು ಕೆಲವು ಉನ್ನತ ಮನೆತನಗಳಲ್ಲಿ ಸ್ತ್ರೀಯರು ಸಮಾಜದ ಚಟುವಟಿಕೆಗಳಿಂದ ಸಂಪೂರ್ಣವಾಗಿ ಬಹಿಷ್ಕೃತವಾಗಿರಲಿಲ್ಲವೆಂಬುದನ್ನು ಮತ್ತು ಶ್ರೀಮಂತ ವರ್ಗದ ಸ್ತ್ರೀಯರು ಧಾರಳವಾದ ಶಿಕ್ಷಣವನ್ನು ಹೊಂದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ವಹಿಸಿದ್ದರೆಂಬುದನ್ನು ತಿಳಿಸುತ್ತಾರೆ.

ಗುಪ್ತರ ಕಾಲದಲ್ಲಿ ರಚಿತವಾದ ಸ್ಮೃತಿಗಳು ಸ್ತ್ರೀ ವಿರೋಧಿ ಕಾನೂನು ಮತ್ತು ಸಂಪ್ರದಾಯಗಳನ್ನು ಕುರಿತು ಬರೆದವು. ಹಿಂದಿನ ನಿಯಮಗಳಂತೆ ಸ್ತ್ರೀಯು ತನ್ನ ಜೀವನವನ್ನು ಬಾಲ್ಯದಲ್ಲಿ ತಂದೆಯ ಅಧೀನದಲ್ಲೂ, ಯೌವ್ವನದಲ್ಲಿ ಗಂಡನ ಅಧೀನದಲ್ಲೂ, ಮುಪ್ಪಿನ ಕಾಲದಲ್ಲಿ ಮಕ್ಕಳ ಪೋಷಣೆಯಲ್ಲಿರಬೇಕೆಂಬುದನ್ನು ಮನು ಮತ್ತು ಯಾಜ್ಞವಲ್ಕ್ಯರು ತಮ್ಮ ಸ್ಮೃತಿಗಳಲ್ಲಿ ನಿಯಮಗೊಳಿಸುದರು. ಇದರಿಂದ ಅವರು ಯಾವುದೇ ಹಂತದಲ್ಲೂ ಸ್ವತಂತ್ರರಾಗಿಲ್ಲದಂತಾದರು. ಹಿಂದಿನ ಗಾಂಧರ್ವ ಮಾದರಿಯ ವಿವಾಹವು ಕನ್ಯೆಯ ಪೋಷಕರಿಲ್ಲದಾಗ ಅಥವಾ ಪೋಷಕರು ಪೋಷಣೆ ಮಾಡದೇ ಇದ್ದಾಗ ಗಾಂಧರ್ವ ಮದುವೆಯಾಗಬಹುದೆಂದು ತಿಳಿಸಿದರು. ಆ ಕಾಲದಲ್ಲಿ ಕೆಲವು ಸ್ತ್ರೀ ಗುರುಗಳು, ತಾತ್ವಿಕ ಚಿಂತಕರು ಇದ್ದ ಬಗ್ಗೆ ತಿಳಿದು ಬರುತ್ತದೆ. ಆದರೆ ಅವರ ಸಂಖ್ಯೆ ಬಹಳ ಕಡಿಮೆ.

ಹೆಣ್ಣು ಮಕ್ಕಳನ್ನು ಚಿಕ್ಕ ಮಯಸ್ಸಿನಲ್ಲಿ ಪ್ರಾಪ್ತ ವಯಸ್ಸಿಗಿಂತ ಮುಂಚೆಯೇ ಮದುವೆ ಮಾಡುವ.ಪದ್ದತಿ ಆರಂಭವಾಯಿತು. ಹುಡುಗಿಯ ಮದುವೆಗೆ ಸಂಗಾತಿಯನ್ನು ತಂದೆಯೇ ನಿರ್ಧರಿಸುತ್ತಿದ್ದು ಕೆಲವು ಸಂಧರ್ಭಗಳಲ್ಲಿ ಮಾತ್ರ ಹುಡುಗಿಯ ಒಪ್ಪಿಗೆಯನ್ನು ಕೇಳಲಾಗುತ್ತಿತ್ತು. ವಿಧವಾ ವಿವಾಹಕ್ಕೆ ಒಪ್ಪಿಗೆಯಿರಲಿಲ್ಲ ಮತ್ತು ವಿಧವೆಯು ಕಟ್ಟು ನಿಟ್ಟಿನ ಜೀವನ ನಡೆವಬೇಕಿತ್ತು. ಪತಿಯ ಚಿತೆಯೊಡನೆ ಸತಿ ಹೋಗುವ ಪದ್ದತಿ ಪ್ರಾಮುಖ್ಯತೆ ಪಡೆಯಲಾರಂಭಿಸಿತು. ಆದರೂ ಇದು ಉನ್ನತ ವರ್ಗದಲ್ಲಿ ಪ್ರಚಲಿತವಿತ್ತು. ವಂಶಪಾರಂಪರ್ಯವಾದ ಆಸ್ತಿಯಲ್ಲಿ, ಪಾಲಿನ ಹಕ್ಕಿರಲಿಲ್ಲ. ಸ್ತ್ರೀಯು ಕೇವಲ ಸ್ತ್ರೀ ಧನವನ್ನು ಮಾತ್ರ ಅಂದರೆ ಒಡವೆ, ವಸ್ತ್ರಗಳನ್ನಿಟ್ಟುಕೊಳ್ಳಲು ಅವಕಾಶವಿತ್ತು. ಆಗಿನ ಕಾಲಕ್ಕೆ ನಿಜವಾದ ಸ್ತ್ರಿಯೇ ಸಂಪತ್ತಿನಂತಿದ್ದು ದನ್ನು ಸಾಲವಾಗಿ ಬೇರೆಯವರಿಗೆ ಸಾಲಕೊಡುವಂತಹ ಭಾವನೆ ಇತ್ತು. ದೇವದಾಸಿ ಪದ್ದತಿಯು ಪ್ರಚಲಿತದಲ್ಲಿದ್ದು ಹೆಣ್ಣು ಮಕ್ಕಳನ್ನು ವಿವಿಧ ದೇವಾಲಯಗಳಲ್ಲಿ ದೇವರ ಪೂಜೆಗೆಂದು ಇಟ್ಟುಕೊಳ್ಳಲಾಗಿತ್ತು. ಉದಾಹರಣೆಗೆ ಕಾಳಿದಾಸನ ಕಾಲದಲ್ಲಿ , ಉಜ್ಜೈನಿಯ ಮಹಾಕಾಳಿ ದೇವಾಲಯದಲ್ಲಿ ಇಂತಹ ಹೆಣ್ಣು ಮಕ್ಕಳಿದ್ದರು. ಆಸ್ಥಾನದಲ್ಲಿದ್ದ ಗಣಿಕ ಎಂಬ ನೃತ್ಯಗಾರ್ತಿಯರು ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿದ್ದರೂ ಅವರಲ್ಲಿದ್ದ ಆಹಾರವು ಉನ್ನತ ವರ್ಗಕ್ಕೆ ಅಪ್ರಯೋಜಕವಾಗಿತ್ತು. ಪರ್ದಾ ಪದ್ದತಿಯು ಉನ್ನತ ವರ್ಗದಲ್ಲಿ ಮಾತ್ರ ಇತ್ತು. ವಿಧವಾ ವಿವಾಹಕ್ಕೆ ಒಪ್ಪಿಗೆಯಿರದಿದ್ದರೂ ಅಂತಹ ವಿವಾಹಗಳು ಜರುಗಿದ ಬಗ್ಗೆ ಮಾಹಿತಿಗಳಿವೆ. ಉದಾಹರಣೆಗೆ ಚಂದ್ರಗುಪ್ತನು ತನ್ನ ಸಹೋದರನ ವಿಧವೆ ಧೃವಸ್ವಾಮಿನಿಯನ್ನು ಮದುವೆಯಾದನು.

ಎರಡನೇ ಚಂದ್ರಗುಪ್ತನ ಕಾಲದಲ್ಲಿ ಬಂದಿದ್ದ ಫಾಹಿಯಾನನು ಮಧ್ಯದೇಶವನ್ನು ಕುರಿತು ಈ ರೀತಿ ಹೇಳುತ್ತಾನೆ. " ದೇಶವು ಜನಭರಿತವಾಗಿದ್ದು ಪ್ರಜೆಗಳು ನೆಮ್ಮದಿಯಿಂದ ಜೀವಿಸುತ್ತಾರೆ. ಅವರು ತಮ್ಮ ಆಸ್ತಿ ಪಾಸ್ತಿಗಳನ್ನು ನೋಂದಾಯಿಸಬೇಕಾಗಿರಲಿಲ್ಲ. ವಿವಿಧ ಮತಗಳಿಗೆ ಸೇರಿದ ಶ್ರೀಮಂತ ಜನರು ಧರ್ಮಶಾಲೆಗಳನ್ನು ಮತ್ತು ಔಷದಾಲಯಗಳನ್ನು ಕಟ್ಟಿಸಿ ಬಡ ಜನರಿಗೆ, ದೀನ ದಲಿತರಿಗೆ ಹಾಗೂ ರೋಗಿಗಳಿಗೆ ನೆರವಿ ನೀಡಲಾಗುತ್ತಿತ್ತು" ಎಂದು ತಿಳಿಸುತ್ತಾನೆ. ಹೀಗೆ ದಾನ, ದಯಾಪ್ರವೃತ್ತಿಯ ಶ್ರೀಮಂತರಿಂದಾಗಿ ಅಸಹಾಯಕ ಜನ ಸಾಮಾನ್ಯ ಜೀವನ ನಡೆಸಲು ಅನುಕೂಲವಾಗಿತ್ತು.

ಸಾಮಾನ್ಯ ಜನರು ತೊಡುತ್ತಿದ್ದ ಒಳ ಬಟ್ಟೆ ಮತ್ತು ಹೊರ ಉಡುಪುನ್ನು ಹೊಲಿಯುತ್ತಿರಲಿಲ್ಲ. ನಾಗರಿಕರು ಮಡಿ ಮಾಡಿದ ಬಟ್ಟೆಗಳನ್ನು ಹಾಗೂ ಬಿಳಿಯ ವಸ್ತ್ರಗಳನ್ನು ಧರಿಸಲು ಹೆಚ್ಚಾಗಿ ಅಪೇಕ್ಷಿಸುತ್ತಿದ್ದರು. ಪುರುಷರು ವಸ್ತ್ರವನ್ನು ನಡುವಿನ ಸುತ್ತಲೂ ಸುತ್ತಿ ಕಂಕುಳವರೆಗ ಬರುವಂತೆ ಧರಿಸಿ, ಬಲಭುಜವನ್ನು ಹಾಗೇಯೇ ಬಿಡುತ್ತಿದ್ದರು. ಸ್ತ್ರೀಯರು ಎರಡು ಭುಜಗಳನ್ನು ಮುಚ್ಚಿ ಭುಜದಿಂದ ಇಳಿ ಬೀಳುತ್ತಿದ್ದ ಉದ್ದನೆಯ ವಸ್ತ್ರವನ್ನು (ಸೀರೆಯನ್ನು) ಧರಿಸುತ್ತಿದ್ದರು. ಶಿಖೆಯನ್ನು ಮುಡಿಗಟ್ಟಿ ತಲೆಯ ಉಳಿದ ಭಾಗದ ಕೂದಲನ್ನು ಇಳಿ ಬಿಡುತ್ತಿದ್ದರು. ತಲೆಗೆ ಕಟ್ಟಿದ ಹೂವನ್ನು, ಕೊರಳಿಗೆ ಹಾರಗಳನ್ನು ಧರಿಸುತ್ತಿದ್ದರು. ಶೀತ ಪ್ರದೇಶದ ಜನರು ಬಹುಬಿಗಿಯಾದ ನಡುವಂಗಿಗಳನ್ನು ಧರಿಸುತ್ತಿದ್ದರು".

ಈ ಕಾಲದ ಜನರ ಆಹಾರಗಳಲ್ಲಿ ಮುಖ್ಯವಾದವುಗಳೆಂದರೆ ಹಾಲು, ತುಪ್ಪ, ಹರಳು ಸಕ್ಕರೆ, ಕಲ್ಲು ಸಕ್ಕರೆ, ಸಾಸುವೆ ಎಣ್ಣೆಯೊಡನೆ ತಯಾರಿಸುತ್ತಿದ್ದ ರೊಟ್ಟಿ ಮತ್ತು ಬೇಳೆಗಳು. ಈರುಳ್ಳಿ ಮತ್ತು ಬೆಳ್ಳುಳ್ಳಿಗಳು ಉಪಯೋಗ ಬಹಳ ಕಡಿಮೆಯಾಗಿದ್ದಿತು. ಮಾಂಸಹಾರ ಬಳಕೆಯಲ್ಲಿತು.

## 54.6 ಘಟಕದ ಸಾರಾಂಶ

* ಗುಪ್ತರ ಆಡಳಿತದ ವ್ಯವಸ್ಥೆ ಸಮರ್ಪಕವಾಗಿತ್ತು. ಕೇಂದ್ರ, ಪ್ರಾಂತ್ಯ ಮತ್ತು ಗ್ರಾಮ ಮಟ್ಟಗಳಲ್ಲಿ ಆಡಳಿತ ಸಂಘಟನೆ ಸಮರ್ಪಕವಾಗಿತ್ತು. ಆಡಳಿತದ ಕೆಳಗಿನ ಹಂತಗಳ ಮೇಲೆ ಕೇಂದ್ರ ಸರ್ಕಾರ ಬಿಗಿಯಾದ ನಿಯಂತ್ರಣವನ್ನು ಹೊಂದಿತ್ತು.

* ಪ್ರಜೆಗಳ ಆರ್ಥಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮಗಳನ್ನು ನೋಡಿಕೊಳ್ಳುವುದಕ್ಕೆ ಮತ್ತು ದೇಶವನ್ನು ಪರಕೀಯರ ದಾಳಿಯಿಂದ ರಕ್ಷಿಸುವುದಕ್ಕೂ ಅನುಕೂಲವಾಗುವಂಥ ಆಡಳಿತವನ್ನು ಗುಪ್ತರು ಸ್ಥಾಪಿಸಿದ್ದರು.

* ಜನರು ಭಾಗ್ಯವಂತರು ಸುಖಿಗಳು, ರಾಜಭೂಮಿಯನ್ನು ಮಾಡುವವರು ಬೆಳೆಯಲ್ಲಿ ಪಾಲು ಕೊಡುತ್ತಾರೆ. ಅವರು ತಮಗೆ ಬೇಡವಾದಾಗ ಸಾಗುವಳಿ ಬಿಡುಬಹುದು. ದೇಶದ ಜನರು ಮಧ್ಯಪಾನವಾಡುವುದಿಲ್ಲ. ಮಾಂಸಕ್ಕಾಗಿ ಪ್ರಾಣಿಗಳನ್ನು ಕೊಲ್ಲರು ಎಂಬುದಾಗಿ ಫಾಹಿಯಾನನು ಗುಪ್ತರ ಆಡಳಿತ ಸಾಮಾರ್ಥ್ಯವನ್ನು ವರ್ಣಿಸಿದ್ದಾನೆ.

* ಗುಪ್ತರ ಕಾಲದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು , ಕೃಷಿಗೆ ಉತ್ತೇತನ ನೀಡಲಾಯಿತು. ವಾಣಿಜ್ಯ ಸಹ ಚುರುಕಾಗಿತ್ತು.

* ಗುಪ್ತರ ಕಾಲದಲ್ಲಿ ಹಿಂದೂ ಸಮಾಜವು ಅನೇಕ ಬದಲಾವಣೆಗೆ ಒಳಗಾಯಿತು. ಜಾತಿ ವ್ಯವಸ್ಥೆ ಮುಂದುವರಿದರೂ, ಅದೂ ಹಿಂದಿನಂತೆ ಕಟ್ಟುನಿಟ್ಟಾಗಿರಲಿಲ್ಲ. ಸ್ತ್ರೀಯರ ಸ್ಥಾನಮಾನ ಸುಧಾರಿಸಿತ್ತು.

## 54.7 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು


1. ರಂಗಸ್ವಾಮಿಯ.ಜಿ.ಆರ್. - ಪ್ರಾಚೀನ ಭಾರತ
2. ಶಾರದಾಪ್ರಸಾದ್(ಅನು) - ಭಾರತದ ಪ್ರೌಢ ಇತಿಹಾಸ
3. ಶಿವಣ್ಣ ಆರ್.ಜಿ. - ಉತ್ತರ ಭಾರತದ ಇತಿಹಾಸ
4. ಭಾರತೀಯ ವಿದ್ಯಾಭವನ - ಅಭಿಜಾತಯುಗ ಸರಣೀಗಳು(ಅನು)
   ಮುಂಜುಂದಾರ್. ಆರ್.ಸಿ.
5. Luniya. B.N. - **Evolution of Indian cultur**
6. Romila Thaper - **History of India, Vol-I.**


ಡಾ. ಮಹಾದೇವಿ

# ಟಿಪ್ಪಣಿ

## ಘಟಕ-55

# ಗುಪ್ತರ ಕಾಲದಲ್ಲಿ ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತು ಶಿಲ್ಪ

ರಚನೆ

55.0. ಉದ್ದೇಶ

55.1. ಪೀಠಿಕೆ

55.2 ಗುಪ್ತರ ಧಾರ್ಮಿಕ ನೀತಿ

55.2.1. ಹಿಂದೂ ಧರ್ಮ

55.2.2. ಬೌದ್ಧ ಧರ್ಮ

55.2.3. ಜೈನ ಧರ್ಮ

55.3. ಸಾಹಿತ್ಯ ಮತ್ತು ಶಿಕ್ಷಣ

55.3.1 ಮಹಾಕವಿ ಕಾಳಿದಾಸ

55.3.2. ಭಾಸ

55.3.3. ಸೂದ್ರಕ

55.3.4. ವಿಶಾಕದತ್ತ ಮತ್ತು ಇತರ ಕವಿಗಳು

55.3.5. ವಿಜ್ಞಾನ

55.3.6. ವೈದ್ಯಕೀಯಾ

55.3.7. ಶಿಕ್ಷಣ

55.4. ಕಲೆ ಮತ್ತು ವಾಸ್ತುಶಿಲ್ಪ

55.4.1. ವಾಸ್ತುಶಿಲ್ಪ

55.4.2. ಗುಪ್ತರ ಕಲೆಯ ಪ್ರಧಾನ ಲಕ್ಷಣಗಳು

55.4.3. ಚಿತ್ರಕಲೆ

55.5 ಘಟಕದ ಸಾರಾಂಶ

55.6 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು

## 55.1: ಉದ್ದೇಶ

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ಕೆಳಕಂಡ ಈ ಅಂಶಗಳನ್ನು ತಿಳಿದುಕೊಳ್ಳಲಿರುವಿರಿ.

* ಗುಪ್ತರ ಧಾರ್ಮಿಕ ನೀತಿ ಮತ್ತು ಧರ್ಮ ಸಹಿಷ್ಣುತೆ
* ಗುಪ್ತರ ಕಾಲದಲ್ಲಾದ ಸಾಹಿತ್ಯ ಮತ್ತು ವಿಜ್ಞಾನ ಅಭಿವೃದ್ಧಿ
* ಕಲೆ ಮತ್ತು ವಾಸ್ತುಶಿಲ್ಪ ಬೆಳವಣಿಗೆಗೆ ಗುಪ್ತರ ಕೊಡುಗೆಗಳು
* ಗುಪ್ತರ ಕಾಲವನ್ನು 'ಸುವರ್ಣಯುಗ' ವೆಂದು ಕರೆಯಲು ಕಾರಣಗಳು

## 55.0 ಪೀಠಿಕೆ

ಗುಪ್ತರ ಏಳಿಗೆ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಹೊಸಯುಗವನ್ನು ಸೃಷ್ಟಿಸಿತು. ಗುಪ್ತರು ಸುಮಾರು ಇನ್ನೂರು (300-500 A.D) ವರ್ಷಗಳ ಕಾಲ ಭಾರತದ ಇತಿಹಾಸದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಈ ಇನ್ನೂರು ವರ್ಷಗಳ ಅವಧಿಯಲ್ಲಿ ಗುಪ್ತ ಸಾಮ್ರಾಟರು, ಅವರ ಸಾಮಂತರು, ಅಧಿಕಾರಿಗಳು, ಶ್ರೀಮಂತವರ್ಗದವರು ನೀಡಿದ ಉದಾರ ಪ್ರೋತ್ಸಾಹ ಮತ್ತು ತೋರಿದ ಅಭಿಮಾನ ಧರ್ಮ, ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಂಸ್ಕೃತಿಗಳು ಮಹೋನ್ನತ ಪ್ರಗತಿ ಗಳಿಸಲು ಕಾರಣವಾಯಿತು. ಗಪ್ತ ದೊರೆಗಳು ಸುಶಿಕ್ಷಿತರಾಗಿದ್ದು, ಧರ್ಮ, ಸಾಹಿತ್ಯ, ಕಲೆ ಮತ್ತು ವಿಜ್ಞಾನಗಳ ಉದಾರ ಪೋಷಕರಾಗಿದ್ದರು. ಅವರ ಆಸ್ಥಾನಗಳನ್ನು ಹಲವು ವಿದ್ವಾಂಸರು ಮತ್ತು ಪ್ರತಿಭಾ ಸಂಪನ್ನರು ಅಲಂಕರಿಸಿದ್ದು ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದರು. ಗುಪ್ತರಂತೆಯೇ ಅವರ ಸಾಮಂತರು, ಅಧಿಕಾರಿಗಳು ಮತ್ತು ಶ್ರೀಮಂತವರ್ಗದವರು ಇದೇ ರೀತಿಯ ಪ್ರೋತ್ಸಾಹ ನೀಡಿ ಧರ್ಮ, ಸಾಹಿತ್ಯ, ಕಲೆ ಮತ್ತು ವಿಜ್ಞಾನ ಕ್ಷೇತ್ರಗಳನ್ನು ವಿಕಾಸಗೊಳಿಸಿದರು. ಇದರಿಂದ ಬಹುಕಾಲ ಸುಪ್ತವಾಗಿದ್ದ ಭಾರತೀಯರ ವೈವಿಧ್ಯಮಯ ಪ್ರತಿಭೆಗಳು ಅರಳಿದವು. ಇದು ಗುಪ್ತರ ಕಾಲದಲ್ಲಿ ಜನಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಸರ್ವತೋಮುಖ ಪ್ರಗತಿಗೆ ಕಾರಣವಾಯಿತು. ಈ ರೀತಿಯ ಪ್ರಗತಿಯನ್ನು ಮುಖ್ಯವಾಗಿ ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಸಂಪ್ರದಾಯ ಮತ್ತು ಆಚಾರ ವಿಚಾರಗಳಲ್ಲಿ ಕಾಣಬಹುದು. ಇವು ಏಷ್ಯಾದ ಅನೇಕ ರಾಷ್ಟ್ರಗಳಲ್ಲಿ ಹರಡಿ ಭಾರತವು ಸಾಂಸ್ಕೃತಿಕ ಸಾಮ್ರಾಜ್ಯವೆಂಬ ಖ್ಯಾತಿಗಳಿಸಲು ಕಾರಣವಾಯಿತು. ಈ ಎಲ್ಲಾ ಸಾಧನೆಗಳಿಂದ ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿನ 'ಸುವರ್ಣಯುಗ'ವೆಂದು ಕರೆಯಲಾಗಿದೆಯಲ್ಲದೆ ಪ್ರಾಚೀನ ಗ್ರೀಸ್ ದೇಶದ ದೊರೆ ಪೆರಿಕ್ಲಿಸ್ ಎಂಬುವವನ ಯುಗಕ್ಕೆ ಹೋಲಿಸಲಾಗಿದೆ.

## 55.2 ಗುಪ್ತರ ಧಾರ್ಮಿಕ ನೀತಿ

ಪ್ರಾಚೀನ ಭಾರತದಲ್ಲಿ ಗುಪ್ತರ ಕಾಲವನ್ನು ಹಿಂದೂ ಧರ್ಮದ ವಿಕಾಸದ ಕಾಲವೆಂದು ಕರೆಯಲಾಗಿದೆ. ಗುಪ್ತ ದೊರೆಗಳು ನಿಷ್ಠಾವಂತ ಹಿಂದೂ ಧರ್ಮೀಯರಾಗಿದ್ದು ತಮ್ಮ ಆಳ್ವಿಕೆಯ ಕಾಲದಲ್ಲಿ ಹಿಂದೂಧರ್ಮದ ಪ್ರಗತಿಗೆ ಕಾರಣರಾದರು. ಪರಿಣಾಮವಾಗಿ ಹಿಂದೂ ಧರ್ಮವು ಗುಪ್ತರ ಕಾಲದಲ್ಲಿ ಹಿಂದೆಂದೂ ಕಾಣದ ಪ್ರಗತಿ ಮತ್ತು ಪ್ರಾಬಲ್ಯವನ್ನು ಪಡೆಯಿತು.

ಗುಪ್ತರ ಕಾಲದಲ್ಲಿ ಬ್ರಾಹ್ಮಣ ಧರ್ಮವು ಅಧುನಿಕ ಹಿಂದೂ ಧರ್ಮದ ಸ್ವರೂಪವನ್ನು ಪಡೆದುದು ಅದರ ಒಂದು ಪ್ರಮುಖ ಲಕ್ಷಣವೆನ್ನಬಹುದು. ವಿಷ್ಣು, ಶಿವ, ಕಾರ್ತಿಕೇಯ, ಸೂರ್ಯ. ಲಕ್ಷ್ಮಿ, ಪಾರ್ವತಿ ಇತ್ಯಾದಿ ದೇವದೇವತೆಯರ ಆರಾಧನೆ ಹಾಗೂ ಈ ದೇವದೇವತೆಯರನ್ನು ಹಲವಾರು ಆಕಾರ ಮತ್ತು ಸ್ವರೂಪಗಳಲ್ಲಿ ವಿಗ್ರಹಗಳ ರೂಪದಲ್ಲಿ ಪೂಜಿಸುವ ಪದ್ಧತಿ ಗುಪ್ತರ ಕಾಲದಲ್ಲಿ ರೂಢಿಗೆ ಬಂದಿತು. ಇದರ ಅಭಿವ್ಯಕ್ತಿಯನ್ನು ಸಮಕಾಲೀನ ಶಾಸನಗಳು, ಕಲೆ ಮತ್ತು ಸಾಹಿತ್ಯಗಳಲ್ಲಿ ಕಾಣಬಹುದಾಗಿದೆ. ಇವುಗಳ ಆಧಾರದ ಮೇಲೆ ಗುಪ್ತರ ಕಾಲದಲ್ಲಿ ವೈದಿಕಧರ್ಮದ ವಿವಿಧ ಪಂಥಗಳಾದ ವೈಷ್ಣವ ಮತ್ತು ಶಿವ ಪಂಥಗಳು ಪ್ರಗತಿ ಸಾಧಿಸಿದಂತೆ ಬೌದ್ಧ ಮತ್ತು ಜೈನ ಧರ್ಮಗಳು ಇಳಿಮುಖವಾದವು. ಹಾಗಿದ್ದರೂ ಗುಪ್ತ ದೊರೆಗಳು ಧರ್ಮಸಹಿಷ್ಣುಗಳಾಗಿದ್ದು, ಎಲ್ಲ ಧರ್ಮಗಳ ಏಳಿಗೆಗೂ ಪ್ರೋತ್ಸಾಹ ನೀಡಿದರು. ಮೇಲಿನ ಈ ಎಲ್ಲಾ ಅಂಶಗಳಿಂದ ಗುಪ್ತರ ಕಾಲದಲ್ಲಿ ವೈಷ್ಣವ, ಶೈವ, ಬೌದ್ಧ ಮತ್ತು ಜೈನ

ಧರ್ಮಗಳು ಮತೀಯ ಸೌಹಾರ್ಧತೆಯ ಭಾವನೆಯಿಂದ ಆಚರಣೆಯಲ್ಲಿದ್ದವು ಎಂಬುದು ವ್ಯಕ್ತವಾಗುತ್ತದೆ. ಗುಪ್ತ ದೊರೆಗಳು ಹಿಂದೂ ಧರ್ಮ ಪ್ರಿಯರಾದರೂ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ನೀಡಿ ಸರ್ವಧರ್ಮಸಹಿಷ್ಣುಗಳೆಂಬ ಖ್ಯಾತಿ ಗಳಿಸಿದ್ದರೆಂದರೆ ತಪ್ಪಾಗಲಾರದು. ಧರ್ಮಸಹಿಷ್ಣುತೆ ಗುಪ್ತರ ಕಾಲದ ಧಾರ್ಮಿಕ ಜೀವನದ ಪ್ರಮುಖ ಲಕ್ಷಣ. ಗುಪ್ತ ಸಾಮ್ರಾಟರು ಧರ್ಮದ ಹೆಸರಿನಲ್ಲಿ ಯಾವ ಬೇಧಭಾವವನ್ನು ಎಣಿಸಲಿಲ್ಲ. ವಿವಿಧ ಧರ್ಮದ ವ್ಯಕ್ತಿಗಳಿಗೆ ಅವರ ಯೋಗ್ಯತೆಗೆ ಅನುಗುಣವಾಗಿ ಸ್ಥಾನಮಾನಗಳನ್ನಿತ್ತು ಗೌರವಿಸಿದ್ದರು. ಸರ್ವಧರ್ಮ ಸಮನ್ವಯ ಗೌರವ ಅವರ ನೀತಿಯಾಗಿದ್ದಿತು. ಹಿಂದೂ ಧರ್ಮದ ಪ್ರಗತಿಯು ಜನರಲ್ಲಿ ಧಾರ್ಮಿಕ ಅಸಹಿಷ್ಣು ಭಾವನೆಯನ್ನು ಉಂಟು ಮಾಡಲಿಲ್ಲ. ಫಾಹಿಯಾನನ ಬರವಣಿಗೆಗಳು ಭಾರತದಲ್ಲಿ ಆಗ ವಿವಿಧ ಧರ್ಮ ಮತ್ತು ಪಂಥಗಳು ಜನರಲ್ಲಿ ಏರ್ಪಟ್ಟಿದ್ದ ಸೌಹಾರ್ಧ ಭಾವನೆಗಳನ್ನು ತಿಳಿಸುತ್ತವೆ.

## 55.2.1 ಹಿಂದೂ ಧರ್ಮ

ಗುಪ್ತರ ಕಾಲದಲ್ಲಿ ಅನೇಕ ಶಾಸನಗಳು ಮತ್ತು ನಾಣ್ಯಗಳಲ್ಲಿ ಕಂಡುಬರುವಂತೆ ಅವರ ಕಾಲದಲ್ಲಿ ಹಿಂದೂ ಧರ್ಮವು ಉಚ್ಛ್ರಾಯ ಸ್ಥಿತಿಗೆ ಬಂದಿತು. ಸ್ಕಾಂದಗುಪ್ತನವರೆಗೂ ಆಳಿದ ಗುಪ್ತರಾಜರು ಹಿಂದೂ ಮತೀಯರಾಗಿದ್ದು, ವೈದಿಕ ಮತದ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದರು. ಈ ಅಂಶವನ್ನು ಗುಪ್ತರ ನಾಣ್ಯಗಳು, ಶಾಸನಗಳು ಒತ್ತಿ ಹೇಳುತ್ತವೆ. ಅನೇಕ ಗುಪ್ತ ರಾಜರು ವೈಷ್ಣವ ಪಂಥದವರಾಗಿ ವಿಷ್ಣುವಿನ ಆರಾಧಕರಾಗಿದ್ದರು. ಅದಕ್ಕೆ ಅನುಗುಣವಾದಂತಹ 'ಪರಮ ಭಾಗವತ' ಎಂಬಂತಹ ಬಿರುದುಗಳನ್ನು ಹೊಂದಿದ್ದರು. ಹಾಗೆಯೇ ಗುಪ್ತರ ನಾಣ್ಯಗಳ ಮೇಲೆ ಮತ್ತು ಶಾಸನಗಳ ಮೇಲೆ ವಿಷ್ಣುವಿನ ಗುಂಪಿನ ದೇವತೆಗಳಾದ ಲಕ್ಷ್ಮಿ , ಗರುಡ ಮುಂತಾದವರನ್ನು ಉಲ್ಲೇಖಿಸಲಾಗಿದೆ. ಮೊದಲ ಗುಪ್ತರ ಶಾಸನಗಳಲ್ಲಿ ವೈಷ್ಣವ ಆಚಾರ್ಯರ ಬಗ್ಗೆ ವಿಶೇಷ ಉಲ್ಲೇಖಗಳಿವೆ. ವೈಷ್ಣವ ಪಂಥದವರು ಕ್ರಮವಾಗಿ ವಾಸುದೇವ ಮತ್ತು ನಾರಾಯಣ ಆರಾಧಕರಾಗಿದ್ದರು. ಬಾಣನು ಭಾಗವತರು ಮತ್ತು ಪಂಚರಾತ್ರರು ಎಂಬ ಎರಡು ವೈಷ್ಣವ ಪಂಥಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಮೇಲ್ಕಂಡ ಅಂಶಗಳ ಆಧಾರದ ಮೇಲೆ ಗುಪ್ತರು ವಿಷ್ಣುವಿನ ಆರಾಧಕರಾಗಿದ್ದು 'ಗರುತ್ಮಂತ' 'ಪರಮಭಾಗವತ' ಮಾದಲಾದ ಬಿರುದುಗಳನ್ನು ಹೊಂದಿದ್ದರು.

ಗುಪ್ತರ ಪ್ರೋತ್ಸಾಹದಿಂದ ಹಿಂದೂಮತ ನವಚೈತನ್ಯ ಪಡೆಯಿತು. ಮಹಾಯಾನ ಬೌದ್ಧಮತದ ಪ್ರಸಾರ ಹಾಗೂ ಭಾರತವನ್ನು ಪ್ರವೇಶಿಸಿದ ಪರಕೀಯ ಗುಂಪುಗಳಿಂದುಂಟಾದ ಗೊಂದಲ ಪರಿಸ್ಥಿತಿ ವೈದಿಕ ಮತದ ವಿಕಾಸ ಮತ್ತು ಚೈತನ್ಯಕ್ಕೆ ಬಹುಮಟ್ಟಿಗೆ ಸಹಕಾರಿಯಾದ ಅಂಶಗಳಾಗಿವೆ. ಬುದ್ಧನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸಲಾಯಿತು. ಬೌದ್ಧಮತದ ಹಲವು ಶ್ರೇಷ್ಠ ಅಂಶಗಳನ್ನು ವೈದಿಕ ಮತಕ್ಕೆ ಅಳವಡಿಸಿಕೊಳ್ಳಲಾಯಿತು. ವೈದಿಕ ಮತದ ಸ್ವರೂಪದಲ್ಲಿ ಅನೇಕ ಬದಲಾವಣೆಗಳುಂಟಾಗಿ ಅದು ಇಂದಿನ ರೂಪ ಪಡೆಯಿತು. ಹಿಂದೆ ತಿಳಿಸಿದಂತೆ ಗುಪ್ತರ ಕಾಲದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿಯ ವಿಗ್ರಹಾರಾಧನೆ ಹೆಚ್ಚು ಜನಪ್ರಿಯವಾಗತೊಡಗಿತು. ವಿಷ್ಣು ಶಾಂತಿಪಾಲಕ ಸಕಲಜೀವ ರಕ್ಷಕ ಎಂಬ ಭಾವನೆ ಬೇರೂರಿತು. ವಿಷ್ಣುವಿನ ದಶಾವತಾರಾಧನೆ ವಿಶೇಷವಾಗಿ ಆಚರಣೆಗೆ ಬಂದಿತು. ಗುಪ್ತರ ಕಾಲದ ಶಾಸನಗಳಲ್ಲಿ ಲಕುಳೀಶನಿಂದ ಪ್ರಚಾರವಾದ ಪಾಶುಪತ ಪಂಥದ ವಿವರಣೆಗಳು ಕಾಣಬರುತ್ತವೆ. ಭಾಗವತ ಹರಿವಂಶ ಮತ್ತು ವಿಷ್ಣು ಪುರಾಣದಲ್ಲಿ ನಿರೂಪಿತವಾಗಿರುವ ಘಟನೆಗಳು ಬಹುಮಟ್ಟಿಗೆ ಪ್ರಚಾರವಾದುದಲ್ಲದೆ ಅವುಗಳನ್ನು ಶಿಲ್ಪಕ್ಕೆ ಅಳವಡಿಸಲಾಗಿತ್ತು. ಹೀಗೆ ಗುಪ್ತರ ಕಾಲದಲ್ಲಿ ವೈದಿಕ ಮತ ವಿಕಾಸವಾಗಿ ನವಚೈತನ್ಯದಿಂದ ಅಭಿವೃದ್ಧಿಗೆ ಬಂದಿತು.

ಗುಪ್ತರ ಕಾಲದಲ್ಲಿ ಶೈವ ಮತವು ಕೂಡ ಪ್ರಚಾರದಲ್ಲಿದ್ದು ಪಶುಪತಿ, ಮಹದೇವ, ಮಹಾಭೈರವ, ಭೀರೇಶ್ವರ, ಮಹೇಶ್ವರ, ಶಂಭು, ಹರ, ಮುಂತಾದ ಹೆಸರುಗಳಿಂದ ಶಿವನನ್ನು ಪೂಜಿಸುತ್ತಿದ್ದರು. ಶಕ್ತಿಪೂಜೆ ಈ ಕಾಲದಲ್ಲಿ ಜನಪ್ರಿಯವಾದಂತೆ ಕಂಡು ಬರುತ್ತದೆ. ಭವಾನಿ, ಭಗವತಿ, ದೇವಿ, ನಾರಿ, ದುರ್ಗ, ಮುಂತಾದ ದೇವತೆಗಳನ್ನು ಪೂರ್ಜಿಸುತ್ತಿದ್ದರು. ಗುಪ್ತ ದೊರೆಗಳು ಮಾತ್ರವಲ್ಲದೆ ಅವರ ಕಾಲದ ಅನೇಕ ಉನ್ನತಾಧಿಕಾರಿಗಳು ಕೂಡ ಶಿವನನ್ನು ಆರಾಧಿಸುತ್ತಿದ್ದರು. ಇವರ ಪ್ರೋತ್ಸಾಹಗಳಿಂದ ಶಿವನನ್ನು ಆರಾಧಿಸುವ ಕ್ರಮವು ಬೆಳೆಯಿತು. ದೊರೆಗಳು ಮತ್ತು ಉನ್ನತಾಧಿಕಾರಿಗಳು ಅನುಸರಿಸಿದ ಧಾರ್ಮಿಕ ಆಚಾರಣೆಗಳನ್ನು ಪ್ರಜೆಗಳು ಅನುಸರಿಸಿದರು.

ಗುಪ್ತರ ಕಾಲದಲ್ಲಿ ಶೈವ ಮತದ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಅವುಗಳೆಂದರೆ ಭುಮ್ರಾಢ ಶಿವ ದೇವಾಲಯ, ಅಜಯ್‌ಗರ್‌ನ ಬಳಿ ಇರುವ ನಾಚನಾ- ಕುಟಾರದ ಪಾರ್ವತಿ ದೇವಾಲಯ, ಕೋಹ್‌ನ ಶಿವ ದೇವಾಲಯಗಳು ಪ್ರಮುಖವಾದವು.

ಸ್ಕಾಂದಗುಪ್ತನ ನಾಣ್ಯಗಳ ಮೇಲೆ ನಂದಿಯ ಚಿತ್ರವಿದೆ. ಎರಡನೇ ಚಂದ್ರಗುಪ್ತನ ಉದಯಗಿರಿ ಗುಹಾ ಶಾಸನವು ಶೈವ ಶಾಸನವಾಗಿದ್ದು ಈ ಶಾಸನವು ನಿರ್ಮಿಸಿದ ಗುಹಾ ದೇವಾಲಯವನ್ನು ಶಿವನ ಮತ್ತೊಂದು ಹೆಸರಾದ ಶಂಭು ದೇವತೆಗೆ ಅರ್ಪಿಸಲಾಗಿದೆ ಎಂದು ತಿಳಿಸುತ್ತದೆ. ಕುಮಾರ ಗುಪ್ತನ ಕರ್ಮದಂಡ ಶಾಸನದಲ್ಲಿ ಪ್ರಾರಂಭದ ಸಾಲು "ನಮೋ ಮಹಾದೇವಾಲ" ಎಂಬುದಾಗಿ ಆರಂಭವಾಗಿದೆ. ಮಹಾರಾಜ ಹಸ್ತಿನ್‌ನ ಕೂಹ್ ತಾಮ್ರಾ ಶಾಸನವು ಸಹ 'ನಮೋ ಮಹಾದೇವಾಲಯ'ಎಂಬುದಾಗೇ ಆರಂಭವಾಗಿದೆ. ದಿಯೋಘರನ ದೇವಾಲಯದ ಪ್ರವೇಶ ದ್ವಾರದಲ್ಲಿ ಗಂಗಾ ಮತ್ತು ಯಮುನಾ ದೇವತೆಗಳನ್ನು ಶಿವನ ಪರಿಚಾರಕರಂತೆ ಚಿತ್ರಿಸಲಾಗಿದೆ. ಹೀಗೆ ಗುಪ್ತರ ಕಾಲದಲ್ಲಿ ಶೈವ ಪಂಥವು ಏಳಿಗೆಗೆ ಬಂದಿತು.

ಗುಪ್ತರ ಕಾಲದಲ್ಲಿ ಜನರು ಮುಖ್ಯವಾಗಿ ವಿಷ್ಣು, ಗದಾಧರ, ವಾಸುದೇವ, ಕೃಷ್ಣ, ಜನಾರ್ಧನ, ಅನಂತಶಯನ, ನಾರಾಯಣ, ಗೋವಿಂದ , ಸೂರ್ಯ. ಶಿವ, ಶಂಭು , ಕಾರ್ತಿಕೇಯ ಹಾಗೂ ಲಕ್ಷ್ಮಿ, ದುರ್ಗಿ, ಭಗವತಿ, ಪಾರ್ವತಿ, ಮುಂತಾದ ಹೆಸರಿನಿಂದ ದೇವತೆಗಳ ವಿಗ್ರಹಗಳನ್ನು ಆರಾಧಿಸುವ ಪದ್ಧತಿ ವಿಶೇಷವಾಗಿ ಗುಪ್ತರ ಕಾಲದಲ್ಲಿ ಆಚರಣೆಗೆ ಬಂದಿತು. ಜಪ ತಪ, ಮಂತ್ರ, ಹೋಮ, ಯಜ್ಞಯಾಗದಿ ಕರ್ಮಗಳು ಆಚರಣೆಗೆ ಬಂದವು. ಅಶ್ವಮೇಧ, ವಾಜಪೇಯಿ, ಆಗ್ನಿಸ್ತೋಮ, ಪಂಚಮಹಾಯಾಜ್ಞ ಮೊದಲಾದ ಯಾಗಗಳನ್ನು ಆ ಕಾಲದ ಶಾಸನಗಳಲ್ಲಿ ಹೆಸರಿಸಲಾಗಿದೆ. ಹಿಂದೂ ಮತದ ವಿಶಿಷ್ಟಾಂಶವಾದ ಷಟ್‌ದರ್ಶನ ಪ್ರಕಾರ ಬೆಳೆದಿತ್ತು. ಪೂರ್ವ ಮೀಮಾಂಸ, ಉತ್ತರ ಮೀಮಾಂಸ ಸಾಂಖ್ಯಯೋಗ ಮತ್ತು ನ್ಯಾಯ ವೈಶೇಷಿಕ ಸಂಪ್ರದಾಯಗಳು ಮೋಕ್ಷ ಮಾರ್ಗಗಳೆಂಬುದಾಗಿ ನಿರ್ಣಯವಾಗಿತ್ತು. ದೇವೀಉಪಾಸನೆ ಜನಪ್ರಿಯವಾಗಿತ್ತು. ಯೋಗದ ಪ್ರಕಾರಗಳಾದ ಹಠಯೋಗ, ರಾಜಯೋಗ, ಕರ್ಮಯೋಗ, ಭಕ್ತಿಯೋಗ, ಮಂತ್ರಯೋಗ, ಧ್ಯಾನಯೋಗ ಮೊದಲಾದ ವಿಧಾನಗಳು ಆಚರಣೆಯಲ್ಲಿದ್ದವು.

ಗುಪ್ತರ ಯುಗದ ಜನತೆಯ ಧಾರ್ಮಿಕ ಜೀವನದಲ್ಲಿ ಕಂಡುಬರುವ ಗಮನಾರ್ಹವಾದ ಮತ್ತೊಂದು ವಿಷಯವೆಂದರೆ ಭಕ್ತಿಪಂಥದ ಬೆಳವಣಿಗೆ ಮತ್ತು ಸಹಜೀವಿಗಳ ಬಗ್ಗೆ ಪ್ರೀತಿ ಇವು ಜನರ ಧಾರ್ಮಿಕ ಕ್ರಿಯೆಗಳಲ್ಲಿ ಮತ್ತು ಇತರರ ಅಭಿಪ್ರಾಯಗಳ ಬಗ್ಗೆ ಜನಹೊಂದಿದ್ದ ಸಹನೆಯಲ್ಲಿ ವ್ಯಕ್ತವಾಗುತ್ತದೆ. ಗೀತೆ ಮತ್ತು ಶ್ವೇತಾಶ್ವತರ ಉಪನಿಷತ್ತಿನಲ್ಲಿ ನಿರೂಪಿಸಿರುವಂತೆ ವೈಷ್ಣವ ಮತ್ತು ಶೈವ ಪಂಥಗಳಲ್ಲಿ ಬಹು ಮುಖ್ಯವಾದದ್ದು ಭಕ್ತಿಪಂಥ ಯಾರು ಅಚಲ ಭಕ್ತಿಯಿಂದ ಭಗವಂತನನ್ನು ಪೂಜಿಸುತ್ತಾನೋ ಅವನು ಮುಕ್ತಿಯನ್ನು ಪಡೆಯುತ್ತಾನೆ ಎಂಬುದು ಭಕ್ತಿ ಪಂಥದವರ ನಂಬಿಕೆ. ಸಮಾಜದ ವಿವಿಧ ವರ್ಗಗಳಿಗೆ ಸೇರಿದ ಜನ ರಾಜವಂಶಜರು, ಅಧಿಕಾರಿಗಳು, ವೃತ್ತಿ ಸಂಘಗಳವರು ಮುಂತಾದವರು ಪೂಜಾರ್ಹರಾದ ದೇವತೆಗಳಲ್ಲಿಟ್ಟಿದ್ದ ಭಕ್ತಿಯ ಪ್ರಭಾವದಿಂದ ವಿಷ್ಣು ಕಾರ್ತಿಕೇಯ ಶಿವ, ಸೂರ್ಯದೇವ, ಬುದ್ಧದೇವ ಮತ್ತಿತ್ತರ ದೇವತೆಗಳಿಗಾಗಿ ಬೃಹತ್ ಸ್ತಂಬಗಳು, ಸುಂದರ ಮಹಾದ್ವಾರಗಳು ಮತ್ತು ದೇವಾಲಯಗಳನ್ನು ನಿರ್ಮಿಸಿದರು.

ಒಟ್ಟಿನಲ್ಲಿ ಇತರ ಧರ್ಮಗಳಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆ ವೈದಿಕ ಧರ್ಮಕ್ಕೆ ಗುಪ್ತರ ಕಾಲದಲ್ಲಿ ದೊರಕಿದುದರಿಂದ ಅದು ಪುನಶ್ಚೇತನಗೊಳ್ಳಲು ಅವಕಾಶವಾಯಿತು. ಹೀಗೆ ಗುಪ್ತರ ಕಾಲದಲ್ಲಿ ವೈದಿಕ ಧರ್ಮಕ್ಕೆ ಹೆಚ್ಚಿನ ಉತ್ತೇಜನ ದೊರೆತು ಅದು ಪ್ರಬಲವಾಯಿತು.

## 55.2.2. ಬೌದ್ಧ ಧರ್ಮ

ಗುಪ್ತರ ಕಾಲದಲ್ಲಿ ವೈದಿಕಮತ ಪುನಃಶ್ಚೇತನಗೊಂಡಂತೆ ಬೌದ್ಧಮತ ಕ್ಷೀಣಿಸುತ್ತಾ ಬಂದಿತು. ಗುಪ್ತ ಸಂತತಿಯ ಪ್ರಮುಖ ಚಕ್ರವರ್ತಿಗಳು ಹಿಂದೂ ಮತೀಯರಾದರೂ ಅವರು ಉದಾರ ನೀತಿಯನ್ನು ಅನುಸರಿಸಿದ್ದರು. ಹಿಂದೂ ಧರ್ಮದಂತೆ ಬೌದ್ಧ ಮತ್ತು ಜೈನಮತೀಯಾರಿಗೂ ಪ್ರೋತ್ಸಾಹ ನೀಡಿದರು. ಅಸಂಗ ವಸುಭಂದು ಕುಮಾರಜೀವ ಮತ್ತುದಿಜ್ಞಾಗ ಮುಂತಾದ ಬೌದ್ಧಧರ್ಮದ ನಿರೂಪಕರು ಗುಪ್ತರ ಕಾಲದಲ್ಲಿ ಇದ್ದರು. ಈ ವಿಚಾರವು ಗುಪ್ತರ ಕಾಲದಲ್ಲಿ ಬೌದ್ಧಧರ್ಮಿಯರಿಗೆ ಸಮಾಧಾನಕರವಾದ ಪ್ರೋತ್ಸಾಹ ದೊರೆತ್ತಿತ್ತು ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ.

ಗುಪ್ತರ ಕೊನೆಯ ರಾಜರು ಬೌದ್ಧಮತಾವಲಂಬಿಗಳಾಗಿದ್ದರು ಎಂಬುದು ಸಮಕಾಲೀನ ಕೃತಿಗಳಿಂದ ತಿಳಿದು ಬರುತ್ತದೆ. ಇವರ ಕಾಲದಲ್ಲಿ ಎಲ್ಲಾ ಮತೀಯರ ಸಮಾಜದಲ್ಲಿ ಬಾವೈಕ್ಯತೆಯಿಂದ ಜೀವಿಸುತ್ತಿದ್ದರು. ಅಮರಕೋಶ ಗ್ರಂಥದ ಕರ್ತೃ ಅಮರಸಿಂಹ ಬೌದ್ಧಮತಾವಲಂಬಿಯಾಗಿದ್ದುಅವನುವಿಕ್ರಮಾದಿತ್ಯನ ಆಸ್ಥಾನದ ನವರತ್ನಗಳಲ್ಲೊಬ್ಬನಾಗಿದ್ದನೆಂದು ತಿಳಿದುಬರುತ್ತದೆ. ಆದಾಗ್ಯೂ ಹಲವಾರು ಕಾರಣಗಳಿಂದ ಬೌದ್ಧಮತ ತನ್ನ ಹಿಂದಿನ ಪ್ರಭಾವವನ್ನು ಕಳೆದುಕೊಂಡಿತು. ಕಪಿಲವಸ್ತು,

ಬುದ್ಧಗಯಾ, ಸಾರನಾಥ, ಕುಶಿನಾರ ಮೊದಲಾದ ಬೌದ್ಧಕೇಂದ್ರಗಳು ದುಸ್ಥಿತಿಗೆ ಬಂದ್ದಿದ ಅಂಶವನ್ನು ಫಾಹಿಯಾನನು ತನ್ನ ಬರವಣಿಗೆಯಲ್ಲಿ ತಿಳಿಸಿರುವನು. ನಳಂದ, ಪಾಟಲೀಪುತ್ರ ಮತ್ತು ಇನ್ನು ಹಲವೆಡೆಗಳಲ್ಲಿ ಬೌದ್ಧಬಿಕ್ಷುಗಳು ಹೆಚ್ಚಿನ ಸಂಖ್ಯೆಯಾಲ್ಲಿದ್ದುದಾಗಿ ಅವನು ವಿವರಿಸಿರುವನು. ಫಾಹೀಯಾನನು ವರ್ಣಿಸಿರುವಂತೆ ಮಧ್ಯಏಷ್ಯಾ ಹಾಗೂ ವಾಯುವ್ಯ ಭಾರತಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬೌದ್ಧಧರ್ಮವು ಕಾಲಾನುಕ್ರಮೇಣ ತನ್ನ ಹಿಡಿತ ಕಳೆದುಕೊಳ್ಳಲು ಕಾರಣವೇನೆಂದರೆ ಅದಕ್ಕೆ ಹೊಣರ ಧಾಳಿಗಳೆಂದು ವಿವರಿಸುತ್ತಾನೆ. ಹೂಣರು ಬೌದ್ಧಧರ್ಮದ ಬೆಳವಣಿಗೆಗೆ ಮೂಲಧಾರವಾಗಿದ್ದ ಬೌದ್ಧ ಸಂಘರಾಮಗಳು, ವಿಹಾರಗಳು ಮತ್ತು ಮಠಗಳನ್ನು ನಾಶಪಡಿಸಿದುದರಿಂದ ಬೌದ್ಧಧರ್ಮದ ಏಳಿಗೆ ಕುಂಠಿತಗೊಂಡಿತೆಂದು ತಿಳಿಸುತ್ತಾನೆ. ಹಾಗಿದ್ದರೂ ಗುಪ್ತರ ಕಾಲದಲ್ಲಿ ಬುದ್ಧನನ್ನು ದೈವತ್ವಕ್ಕೆ ಏರಿಸಿದ್ದು ಹಾಗೂ ನಾರಾಯಣ, ವಿಷ್ಣುವಿನ ಅವತಾರವೇ ಬುದ್ಧನೆಂದು ಮಹಾಯಾನಿಗಳು, ವೈದಿಕ ಧರ್ಮದವರು ಪ್ರಚರಿಸಿದ್ದರಿಂದ ಬುದ್ಧನು ವೈಷ್ಣವ ದೇವತೆಗಳೊಂದಿಗೆ ಸೇರ್ಪಡೆಯಾಗಿ ಹೋದನು. ಬೌದ್ಧಮತ ಒಡೆದು ಶಾಖೆಗಳಾಗಿ ಪರಿವರ್ತನೆಗೊಂಡಿದ್ದು, ಮಹಾಯಾನ ಪಂಥೀಯರು ವಿಗ್ರಹಾರಾಧನೆ, ಪೂಜೆ ಹಾಗೂ ತಾಂತ್ರಿಕ ಭಾವನೆಗಳನ್ನೂ ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದರಿಂದ ಬೌದ್ಧಮತೀಯಾರಿಗೂ ಮತ್ತು ವೈದಿಕ ಧರ್ಮೀಯರಿಗೂ ಅಂತರ ಬಹು ಕಡಿಮೆಯಾಗಿತ್ತು ಎನ್ನಬಹುದು.

ಇಷ್ಟಾದರೂ ಗುಪ್ತರ ಕಾಲದಲ್ಲಿ ಪ್ರವಾಸಿಗನಾಗಿ ಬಂದ ಫಾಹಿಯಾನನು ಕೆಲವು ಬೌದ್ಧನಗರಗಳಲ್ಲಿ ಬೌದ್ಧಧರ್ಮದ ಸ್ಥಿತಿ ಅತೃಪ್ತಿಯಾಗಿತ್ತೆಂದು ತಿಳಿಸುತ್ತಾನೆ. ಕಪಿಲವಸ್ತುವಿನ ಬಗ್ಗೆ ಹೇಳುತ್ತಾ "ಇಲ್ಲಿ ರಾಜನಾಗಲಿ ಜನರಾಗಲಿ ಕಾಣಿಸುವುದಿಲ್ಲ. ಇದೊಂದು ದೊಡ್ಡ ಅಡವಿಯಂತಿದೆ. ಕೆಲವೇ ಅರ್ಚಕರು ಮತ್ತು ಎಂಟು ಹತ್ತು ಕುಟುಂಬಗಳಿವೆ. ಇಲ್ಲಿನ ರಸ್ತೆಗಳ ಮೇಲೆ ಬಿಳಿ ಆನೆಗಳೂ ಹಾಗೂ ಸಿಂಹಗಳು ತಿರುಗುತ್ತಿರುವುದರಿಂದ ಸನ್ಯಾಸಿಗಳು ಹೆದರಿಕೆಯಿಂದ ತಿರುಗಾಡಬೇಕಿದೆ" ಎಂದಿದ್ದಾನೆ. ಹಾಗೆಯೇ ಕುಶೀನಗರವು ಜನರಿಲ್ಲದಂತಾಗಿ ಅರ್ಚಕತ್ವಕ್ಕೆ ಸಂಬಂಧಪಟ್ಟ ಕೆಲವರು ಮಾತ್ರ ಅಲ್ಲಿದ್ದರು "ತನ್ನದೇ ಆದ ಗೋಡೆಗಳ ಮಧ್ಯದಲ್ಲಿ ಇದೊಂದು ಹಾಳಾದ ನಗರವಾಗಿದೆ " ಎಂದು ಗಯಾದ ಬಗ್ಗೆ ಹೇಳುತ್ತಾನೆ. ಬೋದ-ಗಯಾವನ್ನು ಅಡವಿಗಳಿಂದ ಕೂಡಿದ ಜಿಲ್ಲೆಯಾಗಿದೆ ಎಂದಿದ್ದಾನೆ. ಹೀಗೆ ಬುದ್ಧನಿಗೆ ಸಂಬಂಧಿಸಿದ ಧಾರ್ಮಿಕ ಕ್ಷೇತ್ರಗಳು ಪೂರ್ವದಲ್ಲಿ ಹಾಳಾಗಿದ್ದವು. ಅದೇ ಗುಪ್ತರ ಮಧ್ಯದೇಶದಲ್ಲಿ ಸರಿಪುತ್ರಮೊಗ್ಗಲ್ಲನ ಹಾಗೂ ಆನಂದ ಇವರುಗಳ ಗೌರವಾರ್ಥವಾಗಿ ಪಗೋಡಾಗಳನ್ನು ಕಟ್ಟಲಾಗಿತ್ತು. ಹೀಗೆ ಗುಪ್ತರ ಕಾಲದಲ್ಲಿ ಹಿಂದೂ ಧರ್ಮಕ್ಕೆ ಹೋಲಿಸಿದರೆ ಬೌದ್ಧ ಧರ್ಮದ ಮಹತ್ವವು ಕಡಿಮೆಯಾಗುತ್ತಾ ಬಂದಿತ್ತು ಎನ್ನಬಹುದು. ಫಾಹಿಯಾನನು ತಿಳಿಸುವಂತೆ ಹೂಣರ ಧಾಳಿಯೇ ಬೌದ್ಧದರ್ಮವು ಇಳಿಮುಖವಾಗಲು ಕಾರಣವಾಯಿತು. ಬೌದ್ಧಮತವು ಹೀನಯಾನ ಮತ್ತು ಮಹಾಯಾನ ಎಂಬ ಎರಡು ಶಾಖೆಗಳಾಗಿ ಒಡೆದಿದ್ದು ಈ ಧರ್ಮದ ಅವನತಿಗೆ ಮತ್ತೊಂದು ಪ್ರಬಲಕಾರಣವೆನ್ನಬಹುದು. ವೈದಿಕ ಧರ್ಮದಲ್ಲಿರುವ ವಿಗ್ರಹಾರಾಧನೆ ಪೂಜೆ ಮುಂತಾದ ನಿಯಮಗಳನ್ನು ಮಹಾಯಾನ ಪಂಥೀಯರು ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡರು. ಬುದ್ಧನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸಿ ಪೂಜಿಸುವ ಪದ್ಧತಿ ಜಾರಿಗೆ ಬಂದಿದ್ದುದ್ದರಿಂದ ಬೌದ್ಧಮತ ತನ್ನ ಪ್ರತ್ಯೇಕ ಅಸ್ಥಿತ್ವವನ್ನು ಕಳೆದುಕೊಳ್ಳಲಾರಂಭಿಸಿತು.

## 55.2.3. ಜೈನಮತ

ಹಿಂದೂಧರ್ಮ ಮತ್ತು ಬೌದ್ಧಧರ್ಮದಂತೆ ಜೈನಧರ್ಮವು ಗುಪ್ತರ ಕಾಲದಲ್ಲಿ ಅಸ್ಥಿತ್ವದಲ್ಲಿದ್ದಂತಹ ಧರ್ಮವಾಗಿತ್ತು. ಆದರೆ ಜೈನಧರ್ಮವು ಈ ಎರಡು ಧರ್ಮಗಳಷ್ಟು ಪ್ರಭಾವಿತವಾಗಿರಲಿಲ್ಲ. ಗುಪ್ತ ದೊರೆಗಳು ವೈದಿಕ ಮತ್ತು ಬೌದ್ಧಧರ್ಮಗಳಿಗೆ ಪ್ರೋತ್ಸಾಹ ನೀಡಿದಂತೆ ಜೈನಧರ್ಮೀಯರಿಗೂ ಪ್ರೋತ್ಸಾಹ ನೀಡಿದ್ದುದ್ದಾಗಿ ಸಮಕಾಲೀನ ಶಾಸನಗಳಿಂದ ತಿಳಿದುಬರುತ್ತದೆ. ಇವರು ಜೈನ ತೀರ್ಥಂಕರರ ಪ್ರತಿಮೆಗಳನ್ನು ಆ ಕಾಲದಲ್ಲಿ ಸ್ಥಾಪಿಸಿದ ಬಗೆಗೆ ನಿದರ್ಶನಗಳು ಕಂಡು ಬಂದಿವೆ. ಬೌದ್ಧಧರ್ಮದಂತೆಯೇ ಜೈನಧರ್ಮವು ಕೊಡ ಎರಡು ಶಾಖೆಗಳಾಗಿ ವಿಭಾಗಿತಗೊಂಡಿತ್ತು. ಇವರನ್ನು ದಿಗಂಬರರು ಮತ್ತು ಶ್ವೇತಾಂಬರ ಶಾಖೆಗಳ ಅನೂಯಾಯಿಗಳೆಂದು ಕರೆಯಲಾಗುತ್ತಿತ್ತು. ಸಮಕಾಲೀನ ಶಾಸನಗಳು ಮತ್ತು ಸಾಹಿತ್ಯಗ್ರಂಥಗಳಿಂದ ತಿಳಿದುಬರುವಂತೆ ಸೌರಾಷ್ಟ್ರ ಮತ್ತು ಕನ್ನಡ ನಾಡಿನಲ್ಲಿ ಇವರು ಹೆಚ್ಚು ಸಂಖ್ಯೆಯಲ್ಲಿದ್ದಂತೆ ತಿಳಿದು ಬರುತ್ತದೆ. ಗುಪ್ತರ ಕಾಲದಲ್ಲಿ ವಲ್ಲಭಿಯಲ್ಲಿ ಒಂದು ಜೈನ ಮಹಾಸಭೆ ನಡೆದ್ದುದ್ದಾಗಿ ತಿಳಿದುಬರುತ್ತದೆ. ಈ ಸಭೆಯಲ್ಲಿ ಶ್ವೇತಾಂಬರ ಪಂಥತ ನಿಯಾಮಾವಳಿಗಳನ್ನೊಳಗೊಂಡ ಗ್ರಂಥಗಳನ್ನು ರಚಿಸಲಾಯಿತು. ಈಗೇ ಗುಪ್ತರ ಕಾಲದಲ್ಲಿ ಜೈನ ಧರ್ಮವು ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿ ಇರದಿದ್ದರೂ ವಿಭಿನ್ನ ಪಂಥಗಳಂತೆಯೇ ಜೈನರು ಗುಪ್ತರ ಕಾಲದಲ್ಲಿ ಪರಸ್ಪರ ವಿಶ್ವಾಸದಿಂದ ಜೀವನ ನಡೆಸುತ್ತಿದ್ದುದ್ದಾಗಿ ತಿಳಿದು ಬರುತ್ತದೆ. ಗುಪ್ತರು ಜೈನಧರ್ಮಕ್ಕೆ ಹಲವು

ರೀತಿಯಲ್ಲಿ ಧಾನದತ್ತಿಗಳನ್ನು ನೀಡಿದ ಬಗೆಗೆ ಆ ಕಾಲದ ಶಾಸನಗಳು ಹೆಸರಿಸುತ್ತವೆಯೊದರೂ ಜೈನಧರ್ಮವು ಗುಪ್ತರ ಕಾಲದಲ್ಲಿ ಹೆಚ್ಚು ಪ್ರಭಾವಶಾಲಿ ಧರ್ಮವಾಗಿರಲಿಲ್ಲ. ಬಹುಶಃ ಜೈನಧರ್ಮದ ಕಠಿಣ ನಿಯಮಗಳು ಹೆಚ್ಚು ಜನರನ್ನು ಆಕರ್ಷಿಸಲಿಲ್ಲವೆಂದು ತೋರುತ್ತದೆ. ಹಿಂದೂಧರ್ಮದ ಪುನರುತ್ಥಾನದಿಂದಾಗಿ ಜೈನ ಧರ್ಮಕ್ಕೆ ರಾಜಾಶ್ರಯವು ತಪ್ಪಿದ್ದುದ್ದಿರಿಂದ ಆ ಧರ್ಮ ಮುಂದುವರಿದರೂ ಅದು ಜನಪ್ರಿಯಧರ್ಮವಾಗಿ ಉಳಿಯಲು ಸಾಧ್ಯಾವಾಗಲಿಲ್ಲವೆನ್ನಬಹುದು. ಹಿಗೇ ಗುಪ್ತರ ಕಾಲದಲ್ಲಿ ವಿವಿಧ ಧರ್ಮಗಳಿದ್ದು ಧರ್ಮ ಸಹಿಷ್ಣುತೆ ಭಾವನೆಯಿಂದ ವಾಸಿಸುತ್ತಿದ್ದರು. ಧರ್ಮಸಹಿಷ್ಣುತೆ ಗುಪ್ತರ ಕಾಲದ ಧಾರ್ಮಿಕ ಜೀವನದ ಪ್ರಮುಖ ಲಕ್ಷಣವೂ ಆಗಿತ್ತು. ಗುಪ್ತ ಸಾಮ್ರಾಟರು ಧರ್ಮದ ಹೆಸರಿನಲ್ಲಿ ಯಾವ ಬೇಧಭಾವವನ್ನು ಎಣಿಸಲಿಲ್ಲ. ವಿವಿಧ ಧರ್ಮದ ವ್ಯಕ್ತಿಗಳಿಗೆ ಅವರ ಯೋಗ್ಯತೆಗೆ ಅನುಗುಣವಾಗಿ ಸ್ಥಾನಮಾನಗಳನ್ನಿತ್ತು ಗೌರವಿಸಿದ್ದರು. ಸರ್ವಧರ್ಮ ಸಮನ್ವಯ ಗೌರವ ಅವರ ನೀತಿಯಾಗಿದ್ದಿತು. ಹಿಂದೂ ಧರ್ಮದ ಪ್ರಗತಿಯೂ ಜನರಲ್ಲಿ ಧಾರ್ಮಿಕ ಅಸಹಿಷ್ಣು ಭಾವನೆಯನ್ನು ಉಂಟು ಮಾಡಲಿಲ್ಲ. ಫಾಹಿಯಾನನ ಬರವಣಿಗೆಗಳು ಭಾರತದಲ್ಲಿ ಆಗ ವಿವಿಧ ಧರ್ಮ ಮತ್ತು ಪಂಥಗಳು ಜನರಲ್ಲಿ ಏರ್ಪಟ್ಟಿದ್ದ ಸೌಹಾರ್ದ ಭಾವನೆಗಳನ್ನು ತಿಳಿಸುತ್ತದೆ.

## 55.3. ಸಾಹಿತ್ಯ ಮತ್ತು ಶಿಕ್ಷಣ

ಸುಮಾರು 300 ವರ್ಷಗಳ ಕಾಲ ಪ್ರಾಚೀನ ಭಾರತದಲ್ಲಿ ಆಳ್ವಿಕೆ ನಡೆಸಿದ ಗುಪ್ತ ಸಾಮ್ರಾಟರು ಉತ್ತರಭಾರತದ ಬಹು ಭಾಗಗಳ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿ ಅಲ್ಲಿ ಸುಭದ್ರ ಆಡಳಿತ ರೂಪಿಸಿ, ಧರ್ಮ, ಸಾಹಿತ್ಯ, ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಅಮೂಲಾಗ್ರ ಪ್ರಗತಿ ಸಾಧಿಸಿದರು. ಈಗೇ ತಮ್ಮ ದಕ್ಷ ಆಡಳಿತ ವ್ಯವಸ್ಥೆಯ ಮೂಲಕ ದೇಶವು ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿ ಶಾಂತಿ, ಸುಭದ್ರತೆ, ನೆಮ್ಮದಿ ನೆಲೆಸಲು ಕಾರಣರಾದರು.

ಗುಪ್ತರ ಕಾಲದಲ್ಲಿ ಸಂಸ್ಕೃತ ಸಾಹಿತ್ಯವು ಪುರೋಭಿವೃದ್ಧಿಯ ಪರಾಕಾಷ್ಠೆತೆಯನ್ನು ಮುಟ್ಟಿತು. ಗುಪ್ತರ ಕಾಲದ ಮೊದಲಾಗಲಿ, ಅನಂತರವಾಗಲಿ ಸಂಸ್ಕೃತ ಭಾಷೆ ಅಷ್ಟು ಸರ್ವಶ್ರೇಷ್ಠ ಮಟ್ಟವನ್ನು ಮುಟ್ಟಿರಲಿಲ್ಲ. ಅದುದರಿಂದ ಗುಪ್ತರ ಕಾಲವನ್ನು ಸಂಸ್ಕೃತ ಸಾಹಿತ್ಯದ ಶ್ರೇಷ್ಠಯುಗವೆಂದು ಕರೆಯಬಹುದು. ಸಂಸ್ಕೃತ ಸಾಹಿತ್ಯದ ಅನೇಕ ಮೇರು ಕೃತಿಗಳು ಈ ಕಾಲದಲ್ಲಿ ರಚಿಸಲ್ಪಟ್ಟವು. ಸಂಸ್ಕೃತ ಭಾಷೆ ರಾಜಾಶ್ರಯ ಮತ್ತು ರಾಜಮನ್ನಣೆಗೆ ಪಾತ್ರವಾಗಿ, ಆಸ್ಥಾನ ಭಾಷೆಯಾಯಿತು. ಆದುದರಿಂದ ಗುಪ್ತರ ಕಾಲವನ್ನು ಗ್ರೀಕ್ ದೇಶದ ಪೆರಿಕ್ಲಿಸನ ಕಾಲಕ್ಕೂ ರೋಮನ್ ಸಾಮ್ರಾಜ್ಯದ ಆಗಸ್ಟಸ್ ಸೀಸರನ ಕಾಲಕ್ಕೂ ಮತ್ತು ಇಂಗ್ಲೆಂಡಿನ ಎಲಿಜಬೆತ್ ರಾಣಿಯ ಕಾಲಕ್ಕೂ ಹೋಲಿಸಲಾಗಿದೆ. ಗುಪ್ತ ಸಾರ್ವಭೌಮರು ಅಲಹಬಾದ್ ಶಿಲಾ ಶಾಸನದಲ್ಲಿ ಸಮುದ್ರಗುಪ್ತನ ಸಾಹಿತ್ಯದ ಸಾಧನೆಗಳನ್ನು ನಿರೂಪಿಸಲಾಗಿದೆ. ಅದರಲ್ಲಿ ಸಮುದ್ರಗುಪ್ತನು ಸ್ವತಃ ಕವಿಯಾಗಿದ್ದು 'ಕವಿರಾಜ' ಎಂಬ ಬಿರುದನ್ನು ಪಡೆದಿದ್ದನು ಎಂಬುದಾಗಿ ವರ್ಣಿಸಲಾಗಿದೆ. ಅವನ ಮಹಾದಂಡನಾಯಕನಾದ ಹರಿಸೇನನೂ ಸಾಹಿತ್ಯದಲ್ಲೂ ಪ್ರವೀಣನಾಗಿದ್ದನು. ಹರಿಸೇನನು ರಚಿಸಿದ ಅಲಹಾಬಾದ್ ಸ್ತಂಭಶಾಸನ ಅವನ ಕವಿತಾ ಪ್ರೌಢಿಮೆಗೆ ಸಾಕ್ಷಿಯಾಗಿದೆ. ಎರಡನೇ ಚಂದ್ರಗುಪ್ತ ವಿಕ್ರಮಾದಿತ್ಯನು ಕಲಾಸಾಧಕನು ಹಾಗೂ ಸಾಹಿತ್ಯ ಪೋಷಕನೂ ಆಗಿದ್ದನು. ಅವನ ಆಸ್ಥಾನವು' ನವರತ್ನಗಳೆಂದು ಪ್ರಸಿದ್ಧರಾದ ಒಂಭತ್ತು ಜನ ಸುಪ್ರಸಿದ್ದ ಕವಿಗಳಿಂದ ಕೂಡಿತ್ತೆಂದು ಸಮಕಾಲೀನ ಶಾಸನ ಮತ್ತು ಸಾಹಿತ್ಯಗಳಲ್ಲಿ ವರ್ಣಿಸಲಾಗಿದೆ. ಈ ಒಂಭತ್ತು ನವಮಣಿಗಳಲ್ಲಿ ಕಾಳಿದಾಸನು ಅತ್ಯಂತ ಸರ್ವಶ್ರೇಷ್ಠ ಕವಿಯಾಗಿದ್ದನು. ಕಾಳಿದಾಸನ ಜೀವಿತಕಾಲದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುವುದಾದರೂ ಬಹುಮಂದಿ ವಿದ್ವಾಂಸರು ಅವನು ಚಂದ್ರಗುಪ್ತ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದನೆಂದು ಅಭಿಪ್ರಾಯ ಪಟ್ಟಿದ್ದಾರೆ.

### 55.3.1. ಮಹಾಕವಿ ಕಾಳಿದಾಸ

ಮಹಾಕವಿ ಕಾಳಿದಾಸನು ಸಂಸ್ಕೃತದಲ್ಲಿ ' ಋತುಸಂಹಾರ', ಮೇಘದೂತ', 'ಕಮಾರ ಸಂಭವ',ರಘುವಂಶ' ಎಂಬ ಕಾವ್ಯಗಳನ್ನೂ, 'ಮಾಳವಿಕಾಗ್ನಿಮಿತ್ರ ', 'ವಿಕ್ರಮೋರ್ವಶ್ರಿ' ಮತ್ತು 'ಅಭಿಜ್ಞಾನ ಶಾಕುಂತಳಂ', ಎಂಬ ನಾಟಕಗಳನ್ನೂ ಬರೆದಿರುವನು. ಕಾಳಿದಾಸನ ಶಾಕುಂತಳ ಜಗತ್ತಿನ ಭಾಷೆಗಳಲ್ಲಿ ರಚಿತವಾಗಿರುವ ಸರ್ವಶೇಷ್ಠ ನಾಟಕಗಳಲ್ಲೊಂದಾಗಿದೆಯೆಂದು ವಿಮರ್ಶಕರು ನಿರ್ಧರಿಸಿರುವರು. ಆಳವಾದ ಪಾಂಡಿತ್ಯ, ರಸಭಾವ ಮತ್ತು ಸದಭಿರುಚಿಗಳಿಗೆ ಕಾಳಿದಾಸ ಪ್ರಖ್ಯಾತವಾಗಿದ್ದನು. ಅವನ ಕೃತಿಗಳು ಪ್ರಪಂಚದ ನಾನಾ ಭಾಷೆಗಳಿಗೆ ತರ್ಜುಮೆಯಾಗಿವೆ. ಹೀಗೆ ಕಾಳಿದಾಸನು ತನ್ನ ಹೆಸರಾಂತ ಕೃತಿಗಳ ಮೂಲಕ ಪ್ರಖ್ಯಾತಿ ಗಳಿಸಿರುವುದಲ್ಲದೆ ಕವಿಗಳಲ್ಲಿ 'ಕವಿಕುಲಗುರು'ವೆಂಬ ಖ್ಯಾತಿಗೆ ಒಳಗಾಗಿದ್ದಾನೆ.

ಕಾಳಿದಾಸನ ಅಭಿಜ್ಞಾನ ಶಾಕುಂತಳ ನಾಟಕವು ಪ್ರಪಂಚದ ಸರ್ವಶ್ರೇಷ್ಠ ನೂರು ಕೃತಿಗಳಲ್ಲಿ ಒಂದಾಗಿದೆ. ಈ ಕೃತಿಯಲ್ಲಿನ ಪಾತ್ರಗಳು, ಕಲ್ಪನೆ, ಪದಗಳ ಉಪಯೋಗ ಈ ಕೃತಿಯನ್ನು ಶ್ರೇಷ್ಠಮಟ್ಟಕ್ಕೊಯ್ದಿವೆ. ಮಹತ್ವಪೂರ್ಣವಾದ ಈ ನಾಟಕದಲ್ಲಿ ಬರುವ ದುಷ್ಯಂತ ಮತ್ತು ಶಾಕುಂತಳೆಯ ಪ್ರಣಯ ಪ್ರಸಂಗ, ಅವರ ಗಂಧರ್ವ ವಿವಾಹ, ದುಷ್ಯಂತನು ರಾಜ್ಯಕ್ಕೆ ಹಿಂತಿರುಗಿದ ನಂತರ ಅವಳನ್ನು ಮರೆತ್ತಿದ್ದು, ಅವಳ ವಿರಹ ವೇದನೆ, ಅನಂತರ ಶಾಕುಂತಳೆಯು ತನ್ನ ಇನಿಯನನ್ನು ಸೇರಲು ಮಾಡಿದ ಪ್ರಯತ್ನ, ಅವನ ಮರೆವು, ಪುನಃ ದುಷ್ಯಂತನು ರಾಜ್ಯಕ್ಕೆ ಹಿಂದಿರುಗಿದ ನಂತರ ಅವಳನ್ನು ಮರೆತಿದ್ದು, ಅವಳ ವಿರಹ ವೇದನೆ, ಅನಂತರ ಶಕುಂತಳೆ ತನ್ನ ಇನಿಯನನ್ನು ಸೇರಲು ಮಾಡಿದ ಪ್ರಯತ್ನ ಅವನ ಮರೆವು, ಪುನಃ ದುಷ್ಯಂತನು ಮುದ್ರಿಕೆಯುಂಗುರದ ಪ್ರಕರಣದಿಂದ ಅವಳನ್ನು ಜ್ಞಾಪಿಸಿಕೊಂಡು ಶಕುಂತಳೆಯನ್ನು ಹಾಗೂ ತನ್ನ ಉತ್ತಾರಾಧಿಕಾರಿಯಾಗಲ್ಲಿದ್ದ ಕುಮಾರ ಭರತನನ್ನು ಸ್ವೀಕರಿಸಿದುದು ಮೊದಲಾದ ಘಟನಾವಳಿಗಳು ಜನಸಾಮಾನ್ಯರನ್ನು ಯಶಸ್ವಿಯಾಗಿ ರಂಜಿಸುತ್ತವೆ. ಆದರೆ ಕಾಳಿದಾಸನು ಕೇವಲ ಮನರಂಜನೆಗಾಗಿ ಶಾಕುಂತಳ ನಾಟಕವನ್ನು ರಚಿಸಲಿಲ್ಲ. ಅವನು ಒಬ್ಬ ಮಹಾ ದಾರ್ಶನಿಕನಾಗಿ ತನ್ನ ಕೃತಿಯಲ್ಲಿ ಭಾರತದರ್ಶನಗಳಲ್ಲಿ ಅಭಿವ್ಯಕ್ತವಾಗಿರುವ ಪುರುಷಾರ್ಥ ಅಥವಾ ಮೋಕ್ಷ ಅಥವಾ ಕೈವಲ್ಯವನ್ನು ನಿರ್ದೇಶಿಸಿರುವವನು. "ಅಭಿಜ್ಞಾನ" ಎಂಬ ಪದವೇ ಸೂಚಿಸಿರುವಂತೆ ದೇವಾತ್ಮನು ಮತ್ತು ಪರಮಾತ್ಮನು ಪರಸ್ಪರ ಗುರುತಿಸಿ ದೇವಾತ್ಮನು ಕೈವಲ್ಯ ಪಡೆಯುವಿಕೆಯನ್ನು ಸಾಂಕೇತಿಕವಾಗಿ ಸೂಚಿಸಿರುವನು. ಈ ರೀತಿಯಾಗಿ ಮಹಾಕವಿ ಕಾಳಿದಾಸನ ಅಭಿಜ್ಞಾನ ಶಾಕುಂತಳವು ಪಾಮರರನ್ನು ಪಂಡಿತರನ್ನು ಏಕಕಾಲದಲ್ಲಿ ರಂಜಿಸುವ ಅಪೂರ್ವ ಗ್ರಂಥವಾಗಿದೆ. ಕಾಳಿದಾಸನು ಷೇಕ್ಸ್‌ಪಿಯರ್ ಮಹಾಕವಿಯಂತೆ ಮಾನವಕೋಟಿಯ ಸರ್ವಶ್ರೇಷ್ಠ ಕವಿಗಳಲ್ಲೊಬ್ಬನಾಗಿದ್ದಾನೆ.

## 55.3.2. ಭಾಸ

ಭಾಸನು ಗುಪ್ತರ ಕಾಲದ ಮತ್ತೊಬ್ಬ ಪ್ರಖ್ಯಾತ ನಾಟಕಕಾರ. ಇವನು ಕ್ರಿ.ಶ.300ರಲ್ಲಿ ಜೀವಿಸಿದ್ದನೆಂದು ತಿಳಿದು ಬರುತ್ತದೆ. ಗುಪ್ತರ ಕಾಲದಲ್ಲಿ ದೊರೆತ ಸಾಹಿತ್ಯಕ ಪ್ರೊತ್ಸಾಹ ಉತ್ತೇಜನದಿಂದ ಅನೇಕ ಗ್ರಂಥಗಳನ್ನು ರಚಿಸಿದನು. ತಿರುವನಂತಪುರದಲ್ಲಿ ಭಾಸನು ರಚಿಸಿದ ಹದಿಮೂರು ನಾಟಕಗಳು ದೊರೆತಿವೆ. ಅವುಗಳು ಯಾವುದೆಂದರೆ : 'ಮಧ್ಯಮವ್ಯಾಯೋಗ,' 'ದೂತವಾಕ್ಯ,' 'ಬಾಲಚರಿತ,' 'ಪ್ರತಿಮಾ,' 'ಅಭಿಷೇಕ,' 'ಅನಿಮಾರ್ಕ,' 'ಪ್ರತಿಜ್ಞಾಯೌಗಂಧರಾಯಣ, 'ಸ್ವಪ್ನವಾಸವದತ್ತ,' 'ಚಾರುದತ್ತ,' 'ದೂತಘಟೋತ್ಕಚ,' **ಕಾರು ಅಭಾರ, ಊರುಭಂಗ, ಪಂಚತಂತ್ರ**. ಇವು ಭಾಸನ ಪ್ರಖ್ಯಾತ ಕೃತಿಗಳಾಗಿವೆ.ಸ

## 55.3.3 ಶೂದ್ರಕ

ಶೂದ್ರಕನು ಕ್ರಿ.ಶ.4ನೇ ಶತಮಾನದಲ್ಲಿ ಜೀವಿಸಿದ್ದ ಮತ್ತೊಬ್ಬ ಶ್ರೇಷ್ಠಕವಿ. ಇವನು 'ಮೃಚ್ಛಕಟಿಕ ಎಂಬ ನಾಟಕವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಇದು ಚಾರುದತ್ತ ಎಂಬ ಶ್ರೀಮಂತ ಬ್ರಾಹ್ಮಣನು ವಸಂತಸೇನೆ ಎಂಬ ಶ್ರೇಷ್ಠ ವಾರಾಂಗನೆಯನ್ನು ಪ್ರೇಮಿಸುವ ಕಥೆಯಾಗಿದೆ . ಇದು ಸರ್ವೋತ್ಕೃಷ್ಟವಾದ ನಾಟಕವಾಗಿದ್ದು ಇದರಲ್ಲಿ ನಾಟಕೀಯ ಗುಣಗಳಾದ ಸತ್ವ, ಸಜೀವತೆ, ನಟನೆ, ಹಾಗೂ ಪಾತ್ರಚಿತ್ರಣ ಔಚಿತ್ಯ ಪೂರ್ಣವಾಗಿದ್ದು, ಗಂಬೀರ ಹಾಗೂ ಹಾಸ್ಯ ಪೂರ್ಣ ಸನ್ನಿವೇಶಗಳ ಸಂಯೋಜನೆಯಾಗಿದೆ. ಇದರಲ್ಲಿ ಸಮಕಾಲೀನ ಸಾಮಾಜಿಕ ಪರಿಸ್ಥಿತಿಯು ಉತ್ಕೃಷ್ಟವಾದ ರೀತಿಯಲ್ಲಿ ಮೂಡಿಬಂದಿದೆ. ಪಾಶ್ಚಾತ್ಯ ವಿದ್ವಾಂಸನಾದ ಮ್ಯಾಕ್ ಡೋನೆಲ್ ಪ್ರಾಚೀನ ಭಾರತದಲ್ಲಿ ನಾಟಕ ತಂತ್ರ ಪರಿಶಾಂತಿಯ ದೃಷ್ಟಿಯಿಂದ 'ಮೃಚ್ಛಕಟಿಕ ' ಅತ್ಯಂತ ಶ್ರೇಷ್ಠ ಕೃತಿಯೆಂದು ಹೊಗಳಿರುವನು.

## 55.3.4. ವಿಶಾಖದತ್ತ ಮತ್ತು ಇತರ ಕವಿಗಳು

ವಿಶಾಖದತ್ತನು ಗುಪ್ತಯುಗದ ಮತ್ತೊಬ್ಬ ಪ್ರಖ್ಯಾತ ಕವಿ. ಇವನು 'ಮುದ್ರಾರಾಕ್ಷಸ' ಮತ್ತು ' ದೇವಿಚಂದ್ರಗುಪ್ತಂ' ಎಂಬ ಎರಡು ನಾಟಕಗಳನ್ನು ರಚಿಸಿರುವನು. ಇವನ ರಾಜಕೀಯ ನಾಟಕವಾದ 'ಮುದ್ರಾರಾಕ್ಷಸ'ವು ಚಂದ್ರಗುಪ್ತ ಮೌರ್ಯ ಮತ್ತು ಚಾಣಕ್ಯರಿಂದ ನಂದವಂಶ ಪತನವಾದ ಬಗ್ಗೆ ಮತ್ತು ಮೌರ್ಯ ಸಾಮ್ರಾಜ್ಯದ ಸ್ಥಾಪನೆಯ ಬಗ್ಗೆ ವಿವರಿಸುತ್ತದೆ. ವಿಶಾಖದತ್ತನನ್ನು ಭಾರತದ ಕಾರ್ನೆಲ್ ಎಂದು ಕರೆಯಲಾಗಿದೆ. ವಿಶಾಖದತ್ತನ ಮುದ್ರರಾಕ್ಷಸ ಗ್ರಂಥದಲ್ಲಿ ಮೌರ್ಯ ಚಕ್ರವರ್ತಿ ಚಂದ್ರ ಗುಪ್ತನಿಗೆ ಸಂಬಂದಿಸಿದ ಇನ್ನೂ ಹೆಚ್ಚು ಮಾಹಿತಿಗಳು ದೊರೆಯುತ್ತವೆ. ಚಾಣಕ್ಯನ ತಂತ್ರ, ನಂದರ ಪ್ರಧಾನಮಂತ್ರಿಯಾಗಿದ್ದ ಅಮಾತ್ಯನ ನಿಷ್ಠೆ ಮೊದಲಾದ ವಿಷಯಗಳು ರಸವತ್ತಾಗಿ ಚಿತ್ರಿತವಾಗಿದೆ. ಇವನ 'ದೇವಿಚಂದ್ರ ಗುಪ್ತಂ' ಎಂಬ ನಾಟಕವು ಎರಡನೇ ಚಂದ್ರಗುಪ್ತನು ಅಧಿಕಾರಕ್ಕೆ ಬರುವ ಪೂರ್ವದ ಇತಿಹಾಸವನ್ನೊಳಗೊಂಡಿದೆ.

ಗುಪ್ತರ ಕಾಲದಲ್ಲಿ ಅನೇಕ ವಿಖ್ಯಾತ ಬೌದ್ಧ ವಿದ್ವಾಂಸರು ಮತ್ತು ಬರಹಗಾರರು ಜನ್ಮತಾಳಿದ್ದರು. ಅವರಲ್ಲಿ ಪ್ರಮುಖರಾದವರು ಸುಬಂಧು, ಆಸಂಗ ಮತ್ತು ದಿಙ್ನಾಗ ಇವರ ಬರಹಗಳು ಬೌದ್ಧ ಸಾಹಿತ್ಯದ ವಲಯಕ್ಕೆ ಮುಖ್ಯ ಕೊಡುಗೆಗಳಾಗಿದ್ದವು. 'ಕಿರಾತಾರ್ಜುನೀಯ' ಗ್ರಂಥದ ಕರ್ತೃವಾದ ಭಾರವಿ ಮತ್ತು ' ದಶಕುಮಾರ ಚರಿತ' ಮತ್ತು ' ಕಾವ್ಯಾದರ್ಶಗಳ' ಕರ್ತೃವಾದ ದಂಡಿ ಈ ಯುಗಕ್ಕೆ ಸೇರಿದವರು. ಸಂಸ್ಕೃತದ ಪ್ರಖ್ಯಾತ ಶಬ್ದಾರ್ಥಕೋಶವಾದ ' ಅಮರಕೋಶ' ಗ್ರಂಥವನ್ನು ಅಮರಸಿಂಹನಿಂದ ಗುಪ್ತರ ಕಾಲದಲ್ಲಿ ರಚಿತವಾಯಿತು. ವಾತ್ಸಾಯನನ ' ಕಾಮಸೂತ್ರ' ಈ ಕಾಲದಲ್ಲಿ ಬರೆಯಲ್ಪಟ್ಟಿತು. 'ಬೃತೃಹರಿಯ ವಿಖ್ಯಾತ ಶತಕಗಳು ಗುಪ್ತರ ಕಾಲಕ್ಕೆ ಸೇರಿದವು. ಕೌಟಿಲ್ಯನ ಅರ್ಥಶಾಸ್ತ್ರವನ್ನು ಹೋಲುವ 'ಕಾಮಾಂಧಕೀಯ ನೀತಿಸಾರ' ಗುಪ್ತರ ಮಂತ್ರಿಯೊಬ್ಬನಿಂದ ರಚಿತವಾಯಿತೆಂದು ತಿಳಿದು ಬರುತ್ತದೆ.

ಗುಪ್ರರ ಕಾಲದಲ್ಲಿ ವಿಶ್ವ ವಿಖ್ಯಾತವಾದ ಪಂಚತಂತ್ರ ಕತೆಗಳು ಮತ್ತು ಹಿತೋಪದೇಶ ಗ್ರಂಥಗಳು ಸೃಷ್ಠಿಯಾದವು. ಪಂಚತಂತ್ರವು ಉತ್ತಮ ಕಥೆಗಳ ಒಂದು ಉತ್ಕೃಷ್ಟ ಅಗರವೇ ಆಗಿದೆ. ಯುವಕರ ಜ್ಞಾನವೃದ್ಧಿ ಹಾಗೂ ಶೀಲ ವೃದ್ಧಿಗೋಸ್ಕರವಾಗಿ ಹೇಳಿದ ಈ ಕಥೆಗಳು ರಮ್ಯವಾಗಿವೆ. ಮೂಲತಃ ಇದು ರಾಜಕುಮಾರರಿಗೆ ರಾಜ್ಯಶಾಸ್ತ್ರವನ್ನು ತಿಳಿಯಪಡಿಸುವ ಗ್ರಂಥವಾಗಿತ್ತು. ಇದು ಜಗತ್ತಿನ 150ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದ್ದು ಬಹುಶಃ ಬೈಬಲ್ಲೊಂದನ್ನು ಬಿಟ್ಟರೆ ಮತ್ತಾವುದೇ ಗ್ರಂಥವನ್ನು ಇಷ್ಟೇಲ್ಲಾ ಭಾಷೆಗಳಿಗೆ ಅನುವಾದಿಸಿಲ್ಲ. ಇದರ ಕರ್ತೃವಿನ ಬಗ್ಗೆ ಜಿಜ್ಞಾಸೆಯಿದ್ದು ವಿಷ್ಣುಶರ್ಮನೆಂಬುವನು ಬರೆದನೆಂದು ಹೇಳಲಾಗಿದೆ. ಈ ಕಾಲದಲ್ಲಿ ಪುರಾಣಗಳು ಮತ್ತು ದಂಡನೀತಿ ಶಾಸ್ತ್ರಗಳು ರಚಿಸಲ್ಪಟ್ಟವು. ಯಾಜ್ಞವಲ್ಕ್ಯ, ನಾರದ, ಕಾತ್ಯಾಯನ ಮತ್ತು ಬೃಹಸ್ಪತಿ ಸ್ಮೃತಿಗಳು ಈ ಕಾಲದಲ್ಲಿ ರಚಿಸಲ್ಪಟ್ಟವು. ಹಿಂದಿನ ಪುರಾಣಗಳನ್ನು ವೈದಿಕ ಪುರೋಹಿತರು ಮತ್ತೊಮ್ಮೆ ಪರಿಷ್ಕರಿಸಿದರು. ಪ್ರಮುಖ ಪುರಾಣಗಳಲ್ಲಿ ಹೊಸ ದೇವತೆಗಳನ್ನು ಪರಿಚಯಿಸಿದರು. ಮತ್ತು ಸಮೀಕರಿಸಿದರು. ವಾಯು, ಮತ್ಸ್ಯ ಹಾಗೂ ವಿಷ್ಣು ಪುರಾಣಗಳು ಗುಪ್ತರ ಕಾಲದಲ್ಲಿ ರಚಿತವಾದವುಗಳು. ನಾರದ ಮತ್ತು ಬೃಹಸ್ಪತಿ ಸ್ಮೃತಿಗಳು ಈ ಕಾಲದಲ್ಲಿ ರಚನೆಗೊಂಡವು. ಮನುವಿನ 'ಧರ್ಮಶಾಸ್ತ್ರ'ವು ಈ ಕಾಲದಲ್ಲಿ ರಚಿತಗೊಂಡಿತು. ಅದೇ ರೀತಿ ವ್ಯಾಸರಿಂದ ರಚಿತವಾದ ಮೂಲಮಹಾಭಾರತ ಹಾಗೂ ರಾಮಾಯಣಗಳು ಪರಿಷ್ಕರಣೆಗೊಂಡು ವಿಸ್ತೃತಗೊಂಡವು. ಈ ರೀತಿಯಲ್ಲಿ ಗುಪ್ತವಂಶದ ಎರಡು ಶತಮಾನಗಳ ಆಳ್ವಿಕೆಯ ಕಾಲದಲ್ಲಿ ಆಗಾಧವಾದ ಸಂಸ್ಕೃತ ಸಾಹಿತ್ಯದ ಸೃಷ್ಟಿಯಾಯಿತು. ಆದುದರಿಂದ ಆ ಕಾಲದಲ್ಲಿ ಉಂಟಾದ ಸಾಹಿತ್ಯದ ಸರ್ವತೋಮುಖ ಪ್ರಗತಿ ಗುಪ್ತರ ಕಾಲವನ್ನು ಭಾರತದ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣಯುಗವನ್ನಾಗಿ ಮಾಡಿತು.

## 55.3.5 ವಿಜ್ಞಾನ

ಗುಪ್ತರ ಕಾಲದಲ್ಲಿ ವಿಜ್ಞಾನ ವಲಯದಲ್ಲಿ ಭಾರತ ಅಚ್ಚರಿಯ ಪ್ರಗತಿ ಸಾಧಿಸಿತು. 'ಶೂನ್ಯ' ಅಥವಾ 'ಸೊನ್ನೆಯ ಬೆಲೆಯ' ಸಿದ್ಧಾಂತವನ್ನು ರೂಪಿಸಿದುದು ಮತ್ತು 'ದಶಮಾಂಶ' ಪದ್ಧತಿಯನ್ನು ಕಂಡು ಹಿಡಿದುದು ಗುಪ್ತರ ಕಾಲದ ಮಹತ್ವಪೂರ್ಣ ವೈಜ್ಞಾನಿಕ ಕೊಡುಗೆಗಳು. ಆರ್ಯಭಟ್ಟ, ವರಹಮಿಹಿರ ಮತ್ತು ಬ್ರಹ್ಮಗುಪ್ತ ಪ್ರಖ್ಯಾತ ಖಗೋಳ ಮತ್ತು ಗಣಿತ ಶಾಸ್ತ್ರಜ್ಞರಾಗಿದ್ದರು.

ಕ್ರಿ.ಶ. 476ರಲ್ಲಿ ಪಾಟಲಿಪುತ್ರದಲ್ಲಿ ಜನಿಸಿದ ಆರ್ಯಭಟ್ಟ ಪ್ರಾಚೀನ ಭಾರತದ ಅತಿಶ್ರೇಷ್ಠ ವಿಜ್ಞಾನಿ. ಆರ್ಯಭಟ್ಟನು 'ಸೂರ್ಯ ಸಿದ್ಧಾಂತ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಅವನು ಈ ಗ್ರಂಥದಲ್ಲಿ ಸೂರ್ಯ ಮತ್ತು ಚಂದ್ರಗ್ರಹಣಗಳ ಕಾರಣಗಳನ್ನು ನಿರೂಪಿಸಿದ್ದಾನೆ. ಭೂಮಿಯು ತನ್ನ ಕಕ್ಷೆಯಲ್ಲಿ ತಿರುಗುತ್ತದೆ ಎಂಬುದನ್ನು ಪ್ರಥಮವಾಗಿ ಪ್ರತಿಪಾದಿಸಿದ ವಿಜ್ಞಾನಿ ಆರ್ಯಭಟ್ಟ. ಅವನು ಗ್ರಹಗಳ ಚಲನೆಯನ್ನು ವಿವರಿಸಿದನು. ಕ್ರಿ.ಶ.499ರಲ್ಲಿ ಆರ್ಯಭಟ್ಟನಿಂದ ರಚಿತವಾದ 'ಆರ್ಯಭಟ್ಟೀಯಂ' ಗ್ರಂಥವು ಗಣಿತ, ಜ್ಯಾಮಿತಿ, ತ್ರಿಜ್ಯಾಮಿತಿ ಮತ್ತು ಬೀಜಗಣಿತದ ವಿಷಯಗಳನ್ನು ಒಳಗೊಂಡಿದೆ. ಇವನ ಶಿಷ್ಯರಲೊಬ್ಬನಾದ ಲತದೇವ ವಿಜ್ಞಾನದ ನಾನಾ ವಲಯಗಳಲ್ಲಿ ಪ್ರಭುತ್ವ ಸಂಪಾದಿಸಿ 'ಸರ್ವಸಿದ್ಧಾಂತಗುರು'ವೆಂಬ ಹೆಸರನ್ನು ಹೊಂದಿದ್ದನು. ಇವನು 'ಪಾಲಿಸ' ಮತ್ತು 'ರೋಮರ' ಸಿದ್ದಾಂಥಗಳನ್ನು ರೂಪಿಸಿದನು.

' ವರಹಮಿಹೀರ'ನು ಯುಗದ ಮತ್ತೊಬ್ಬ ವಿಖ್ಯಾತ ವಿಜ್ಞಾನಿ. ಇವನದು ಬಹುಮುಖ ಪ್ರತಿಭೆ. ಇವನ 'ಬೃಹತ್‌ಸಂಹಿತ' ಗ್ರಂಥವು ಖಗೋಳ ವಿಜ್ಞಾನ, ಭೊಗೋಳ, ಸಸ್ಯಶಾಸ್ತ್ರ ಮತ್ತು ಪ್ರಾಕೃತಿಕ ಇತಿಹಾಸದ ವಿಷಯಗಳನ್ನೊಳಗೊಂಡಿದೆ. ಈತನು 'ಲಘುಜಾತಕ', 'ಬೃಹದ್‌ಜಾತಕ' ಮತ್ತು 'ಪಂಚಸಿದ್ಧಾಂತಿಕ'ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಈ ಕಾಲದ ಹಿಂದೂ ವಿಜ್ಞಾನಿಗಳು ಗ್ರಹಗಳು ಪ್ರತಿಫಲಿತ ಬೆಳಕಿನಿಂದ ಹೊಳೆಯುವುದನ್ನು, ಭೂಮಿಯು ಸುತ್ತುವ ಬಗೆಯನ್ನು ಮತ್ತು ಭೂಮಿಯ ಸುತ್ತಳತೆಯನ್ನು ಕಂಡುಹಿಡಿದಿದ್ದರು.

ಬ್ರಹ್ಮಗುಪ್ತನು ಈ ಯುಗದಿ ಮತ್ತೊಬ್ಬ ಖಗೋಳ ಮತ್ತು ಗಣಿತಶಾಸ್ತ್ರಜ್ಞ, ಇವನು ನ್ಯೂಟನ್ನನ ಗುರುತ್ವಾಕರ್ಷಣ ನಿಯಮವನ್ನು ಆಗಲೇ ಸಿದ್ಧಾಂತ ರೂಪದಲ್ಲಿ ನಿರೂಪಿಸಿದ್ದನು. ಭಾರತೀಯ ವೈದ್ಯ ವಿಜ್ಞಾನದ ಪ್ರಮುಖ ಕೃತಿಗಳಾದ 'ಚರಕ ಸಂಹಿತ'ಮತ್ತು 'ಸಶೃತಿ ಸಂಹಿತ' ಗಳು ಈ ಯುಗದ ಸೃಷ್ಟಿ. ಅನೇಕ ಬಗೆಯ ಚಿಕಿತ್ಸಾ ವಿಧಾನಗಳು ಮತ್ತು ರೋಗನಿವಾರಕ ಔಷದಿಗಳು ಕಂಡು ಹಿಡಿಯುಲ್ಪಟ್ಟವು. ಆರೋಗ್ಯ ಮತ್ತು ನೈರ್ಮಲ್ಯಗಳಿಗೆ ಹೆಚ್ಚಿನ ಗಮನ ಗುಪ್ತರ ಕಾಲದಲ್ಲಿ ನೀಡಲಾಗಿದ್ದಿತು. ಹೀಗೆ ಗುಪ್ತರ ಕಾಲದಲ್ಲಿ ಭಾರತೀಯ ವಿಜ್ಞಾನ ಹಿಂದೆಂದೂ ಕಾಣದ ಪ್ರಗತಿಯನ್ನು ಕಂಡಿತಲ್ಲದೆ, ಅದು ಜಗತ್ತಿನ ವಿಜ್ಞಾನಕ್ಕೆ ಹಲವಾರು ಕೊಡುಗೆಗಳನ್ನು ನೀಡಿತು.

ಗುಪ್ತರ ಕಾಲದಲ್ಲಿ ಲೋಹ ವಿಜ್ಞಾನವು ಅಭಿವೃದ್ಧಿ ಗೊಂಡಿದ್ದರ ಬಗ್ಗೆ ಅವರ ಕಾಲದ ಅನೇಕ ನಾಣ್ಯಗಳು, ಲೋಹ ಸ್ತಂಭಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವು ದೆಹಲಿಯ ಹೊರ ಭಾಗದ ಮಿನಾರ್ ಬಳಿಯಿರುವ ಮೆಹರೌಲಿ ಎಂಬಲ್ಲಿರುವ ಬೃಹತ್ ಕಬ್ಬಿಣದ ಸ್ತಂಬಶಾಸನ ಪ್ರಮುಖವಾದುದಾಗಿದೆ. ಗುಪ್ತರಕಾಲದ ನಾಣ್ಯಗಳೂ ಕೂಡ ಉತ್ತಮ ಲೋಹಗಳಿಂದ ಟಂಕಿಸಿದುವುದಲಾಗಿವೆ. ಒಟ್ಟಿನಲ್ಲಿ ಗುಪ್ತರ ಕಾಲವು ಸಾಹಿತ್ಯಕ, ವೈಜ್ಞಾನಿಕ ಮತ್ತು ಲೋಹಜ್ಞಾನದಲ್ಲಿ ಅತ್ಯಂತ ಉನ್ನತ ಮಟ್ಟವನ್ನು ತಲುಪಿತ್ತು.

## 55.3.6. ವೈದ್ಯಕೀಯ

ವೈದ್ಯಕೀಯ ವಿಜ್ಞಾನದಲ್ಲಿ ಪ್ರಮುಖ ಪಂಥಗಳಾದ ಚರಕ ಮತ್ತು ಸಶೃತ ಪಂಥಗಳು ಗುಪ್ತರ ಕಾಲಕ್ಕೆ ಸೇರಿದವು. ಭಾರತೀಯ ವೈದ್ಯ ವಿಜ್ಞಾನದ ಪ್ರಮುಖ ಕೃತಿಗಳಾದ 'ಚರಕಸಂಹಿತ' ಮತ್ತು 'ಸಶೃತ ಸಂಹಿತ ಗಳು' ಈ ಯುಗದ ಸೃಷ್ಟಿ. ಅನೇಕ ಬಗೆಯ ಚಿಕಿತ್ಸಾ ವಿಧಾನಗಳು ಮತ್ತು ರೋಗನಿವಾರಕ ಔಷಧಿಗಳು ಕಂಡು ಹಿಡಿಯಲ್ಪಟ್ಟವು. ಆರೋಗ್ಯ ಮತ್ತು ನೈರ್ಮಲ್ಯಗಳಿಗೆ ಹೆಚ್ಚಿನ ಗಮನ ನೀಡಲಾಗಿತ್ತು.

ಆಯುರ್ವೇದ ಪಿತಾಮಹನೆನಿಸಿದ ಧನ್ವಂತರಿ ಗುಪ್ತರಕಾಲದಲ್ಲಿ ಜೀವಿಸಿದ್ದನು. ಆಯುರ್ವೇದ ನಿಘಂಟು ಇವನ ಮಹಾನ್ ಕೃತಿ. ಇದು ವೈದ್ಯಕೀಯ ಮತ್ತು ಗಿಡಮೂಲಿಕೆಗಳ ವಿಷಯಗಳನ್ನೊಳಗೊಂಡ ಅತ್ಯಂತ ಪ್ರಾಚೀನ ಗ್ರಂಥವಾಗಿದೆ. ಆಯುರ್ವೇದ ಎಂದರೆ ದೀರ್ಘಾಯಸ್ಸು ಮತ್ತು ಆರೋಗ್ಯದ ಅಧ್ಯಯನ ಎಂದರ್ಥ. ಧನ್ವಂತರಿ ಕೃತಿಯ ಎಂಟನೇ ಶತಮಾನದ ಪ್ರತಿಯೊಂದು ದೊರಕಿದೆ. ಎರಡನೇ ನಾಗಾರ್ಜುನ ಮತ್ತು ವಾಗ್ಭಟ ಎಂಬುವರು ಆಯುರ್ವೇದ ಪದ್ಧತಿಯ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯನ್ನು ಅಭಿವೃದ್ಧಿಗೊಳಿಸಿದರು. ಮಕ್ಕಳ ರೋಗಗಳು ಮತ್ತು ಮಾನಸಿಕ ರೋಗಗಳ ನಿವಾರಣೋಪಾಯಗಳನ್ನು ಕಂಡುಹಿಡಿಯಲಾಗಿತ್ತು. ವಿದರ್ಭದ ಎರಡನೇ ನಾಗಾರ್ಜುನನ ರಸವೈದ್ಯ ಮತ್ತು ಸಿಂಧೂಪ್ರದೇಶದ ವಾಗ್ಭಟನ ಅಷ್ಟಾಂಗ ಸಂಗ್ರಹ ಮತ್ತು ಅಷ್ಟಾಂಗ ಹೃದಯ ಎಂಬ ಗ್ರಂಥಗಳಲ್ಲಿ ಅವುಗಳನ್ನು ಕಾಣಬಹುದು ನಾಗಾರ್ಜುನನನ್ನು ಭಾರತದ ರಸಾಯನಾಶಾಸ್ತ್ರ ಪಿತಾಮಹ ಎಂದು ಪರಿಗಣಿಸಲಾಗಿದೆ.

## 55.3.7 ಶಿಕ್ಷಣ

ಗುಪ್ತರ ಕಾಲದಲ್ಲಿ ಶಿಕ್ಷಣ ಸಾಕಷ್ಟು ಪ್ರಗತಿ ಹೊಂದಿತು. ಈಗಿನಂತೆ ಆಗ ಸರ್ಕಾರವು ನೇರವಾಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಪದ್ಧತಿ ಇರಲಿಲ್ಲವಾದರೂ ಆಗ ಗುರುಕುಲ ಶಿಕ್ಷಣ ವ್ಯವಸ್ಥೆ ಪ್ರಚಾರದಲ್ಲಿತ್ತು. ಆ ಕಾಲದಲ್ಲಿ ಗುರುವಿಗೆ ಅತಿ ಮುಖ್ಯ ಸ್ಥಾನವಿತ್ತು. ಶಿಷ್ಯರಿಗೆ ಶಿಕ್ಷಣ ಕೊಡುವುದು ತನ್ನ ಕರ್ತವ್ಯವೆಂದು ಭಾವಿಸಿ ಗುರು ಶಿಕ್ಷಣ ನೀಡುತ್ತಿದ್ದನು. ಇದಕ್ಕೆ ಪ್ರತಿಯಾಗಿ ಶಿಕ್ಷಣಾರ್ಥಿಗಳ ತಂದೆ ತಾಯಿಗಳು ಅಥವಾ ಪೋಷಕರು ಗೌರವ ಸಂಭಾವನೆ ನೀಡುತ್ತಿದ್ದರು. ಗುಪ್ತರ ಕಾಲದಲ್ಲಿ ವಿದ್ಯಾರ್ಜನೆಗೆ ರಾಜರು, ಸಾಮಂತರು, ಶ್ರೀಮಂತರು ವಿಶೇಷ ಪ್ರೋತ್ಸಾಹ ನೀಡಿದ್ದರು. ಮಠಗಳು, ಗುಡಿಗಳು, ಅಗ್ರಹಾರಗಳು, ವಿಹಾರಗಳು, ಬಸದಿಗಳು, ಹಾಗೂ ವಿಶ್ವವಿದ್ಯಾನಿಲಯಗಳು ಅಂದಿನ ವಿದ್ಯಾಭ್ಯಾಸ ನೀಡುವ ಪ್ರಮುಖ ಕೇಂದ್ರಗಳಾಗಿದ್ದವು. ಇವುಗಳಲ್ಲಿ ಹಿಂದೂ, ಬೌದ್ಧ ಮತ್ತು ಜೈನರ ವ್ಯಾಸಂಗಕ್ಕೆ ಅವಕಾಶವಿದ್ದಿತು. 5ನೇ ಶತಮಾನದ ಮಧ್ಯಭಾಗದಲ್ಲಿ ನಳಂದ ಜ್ಞಾನಪೀಠ ಖ್ಯಾತಿಗೆ ಬಂದಿತು. ಸಕ್ರಾದಿತ್ಯ ಎಂಬುವವನು ಅಲ್ಲಿ ಒಂದು ಭವ್ಯ ಸಂಘಾರಾಮವನ್ನು ಕಟ್ಟಿಸಿಕೊಟ್ಟನು. ಹ್ಯೂಯನ್ ತ್ಸಾಂಗನು ಹೆಸರಿಸಿರುವ ಸಕ್ರಾದಿತ್ಯ ಒಂದನೇ ಕುಮಾರ ಗುಪ್ತನೇ ಇರಬೇಕೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅನಂತರ ಬುಧಗುಪ್ತ, ತಥಾಗತಗುಪ್ತ ಮತ್ತು ಬಾಲಾದಿತ್ಯಗುಪ್ತ ಮೊದಲಾದ ಗುಪ್ತ ಸಂತತಿಯ ಕೊನೆಯ ರಾಜರು ನಳಂದ ವಿದ್ಯಾಪೀಠದ ಮೇಲ್ಮೆಗಾಗಿ ವಿಶೇಷ ಪ್ರೋತ್ಸಾಹ ನೀಡಿದರು. ಪರಿಣಾಮವಾಗಿ ನಳಂದ ಬೌದ್ಧದರ್ಶನ ಹಾಗೂ ಹಿಂದೂ ಸಂಸ್ಕೃತಿಯ ಶ್ರೇಷ್ಠ ಜ್ಞಾನಕೇಂದ್ರವಾಗಿ ಪರಿವರ್ತನೆ ಗೊಂಡಿತು. ಈ ಯುಗದಲ್ಲಿ ವೇದಗಳ ಅಧ್ಯಯನ ಹಿನ್ನಡೆಯಿತು. ಅವುಗಳಿಗೆ ಬದಲಾಗಿ ಪುರಾಣಗಳು, ಸ್ಮೃತಿಗಳು, ತರ್ಕ, ತತ್ವಜ್ಞಾನ, ವ್ಯಾಕರಣ,

ಧರ್ಮಶಾಸ್ತ್ರ, ಗಣಿತ ಮತ್ತು ಖಗೋಳ ವಿಜ್ಞಾನಗಳು ಆಸಕ್ತಿಯಿಂದ ಅಧ್ಯಯನ ಮಾಡಲ್ಪಡುತ್ತಿದ್ದವು. ಶಿಕ್ಷಣ ಮೌಖಿಕ ವಿಧಾನವನ್ನು ಅನುಸರಿಸಿದ್ದಿತು. ಆಗಾಗ್ಗೆ ಪ್ರಮುಖ ವಿಷಯಗಳ ಬಗೆಗೆ ಚರ್ಚೆ ಮತ್ತು ವಾದ ವಿವಾದಗಳು ನಡೆಯುತ್ತಿದ್ದವು. ಶಿಕ್ಷಣ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿದ್ದಿತು. ಮಹಿಳೆಯರ ಶಿಕ್ಷಣ ಪ್ರಗತಿ ಹೊಂದಿರಲಿಲ್ಲ. ಪುರಾತನ ವಿದ್ಯಾ ಕೇಂದ್ರಗಳಾದ ತಕ್ಷಶಿಲ ಮುಂತಾದವು ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದವು. ನಳಂದ ವಿಶ್ವವಿದ್ಯಾಲಯವು ಗುಪ್ತ ಸಾಮ್ರಾಟರ ಪೋಷಣೆಯಲ್ಲಿ ಬೆಳೆಯುತ್ತಾ ಪ್ರಖ್ಯಾತಿಯನ್ನು ಪಡೆಯುತ್ತಿದ್ದಿತು. ಈ ಕಾಲದ ಉನ್ನತ ವಿದ್ಯಾ ಕೇಂದ್ರಗಳಾಗಿದ್ದ ಪಾಟಲಿಪುತ್ರ, ವಲ್ಲಭಿ, ವಿಕ್ರಮಶೀಲ, ಉಜ್ಜೈನಿ, ಮಥುರ, ಅಯೋಧ್ಯ, ಓದಂತಪುರಿ ಮತ್ತು ಕಂಚಿ ಮೊದಲಾದವು ದೇಶಿ ವಿದೇಶಿಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

## 55.4 ಗುಪ್ತರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ಭಾರತೀಯ ವಾಸ್ತು ಮತ್ತು ಶಿಲ್ಪಕಲೆಯ ಇತಿಹಾಸದಲ್ಲಿ ಗುಪ್ತರ ಕಾಲವನ್ನು ಸುವರ್ಣಯುಗವೆನ್ನಬಹುದು. ಕಲೆ ಮಾನವನ ಸೌಂದರ್ಯಾನುಭೂತಿಯ ಅಭಿವ್ಯಕ್ತಿ. ಗುಪ್ತರ ಕಾಲದಲ್ಲಿ ಕಲೆ ಮಹೋನ್ನತ ಪ್ರಗತಿ ಕಂಡಿತು. ಆಗ ರೂಪಗೊಂಡುದು ಸಂಪೂರ್ಣವಾಗಿ ಭಾರತೀಯ ಕಲೆ. ಹೊಸ ಶೈಲಿ ಮತ್ತು ತಾಂತ್ರಿಕತೆ ಆಗ ಬೆಳೆಯಿತು. ಗುಪ್ತರ ಕಾಲದ ಕಲೆಯ ಪ್ರಮುಖ ವಲಯಗಳಾದ ವಾಸ್ತು ಶಿಲ್ಪ, ಮೂರ್ತಿ ಶಿಲ್ಪ, ಚಿತ್ರಕಲೆ ಮತ್ತು ಅಲಂಕಾರ ಪ್ರಕಾರಗಳಲ್ಲಿ ವಿವಿಧ ರೂಪಗಳನ್ನು ಕಾಣಬಹುದಾಗಿದೆ. ಗುಪ್ತರ ಕಾಲದ ಕಲೆಯ ಬಗ್ಗೆ ಡಾ. ಎ.ವಿ.ಸ್ಮಿತ್‌ರವರ ಅಭಿಪ್ರಾಯ ಹೀಗಿದೆ " ಗುಪ್ತರ ಕಲೆ ಹಿಂದೂ ಕಲೆಯ ಅತ್ಯುನ್ನತಿ ಪ್ರತಿನಿಧಿಸುತ್ತದೆ. ಡಾ. ಆರ್.ಸಿ.ಮುಜುಂದಾರ್ ಅವರು ಹೇಳುವಂತೆ" ದೇಶದ ಅಪರಿಮಿತ ಸಂಪತ್ತು, ಕಲೆ ಮತ್ತು ವಾಸ್ತುಶಿಲ್ಪಗಳ ಬೆಳವಣಿಗೆಗೆ ಕಾರಣವಾಯಿತು. ಗುಪ್ತರ ಕಾಲವು ಧಾರ್ಮಿಕ ಮತ್ತು ಬೌದ್ಧಿಕ ಪುನರುಜ್ಜೀವನಕ್ಕೆ ಪ್ರಾಮುಖ್ಯವಾಗಿದ್ದಂತಯೇ ಕುಶಲಕಲೆಗಳ ಶಾಖೆಗಳಾದ ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ಅತ್ಯಂತ ಆಕರ್ಷಕ ಸಾಧನೆಗಳನ್ನು ಕಂಡಿತು. ಕ್ರಿ.ಶ.4ನೇ ಶತಮಾನದ ಮಧ್ಯಭಾಗದಿಂದ ಸುಮಾರು ಮೂರು ಶತಮಾನಗಳ ಕಾಲದಲ್ಲಿ ವಿಶಿಷ್ಟವಾದ ಶೈಲಿಯಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು, ಶಿಲ್ಪಗಳು ಮತ್ತು ಇತರ ಕಲಾಕೃತಿಗಳು, ಸೌಂದರ್ಯ ಮತ್ತು ದಿವ್ಯತೆಯ ಅಚ್ಚಳಿಯದ ಕುರುಹುಗಳಾಗಿವೆ. ಆ ಕಾಲದ ವಾಸ್ತು ಮತ್ತು ಶಿಲ್ಪಕಾರರು ಕೇವಲ ಹೊರಗಿನ ಚೆಲುವಿಗೆ ಮಹತ್ವವೆನ್ನೀಯದೆ. ಅಂತರಾಳದಲ್ಲಿ ಅಡಗಿದ ದೈವೀಶಕ್ತಿಯ ಪ್ರತಿಕವಾಗಿ ಅನೇಕ ಅನುಪಮ ಕೃತಿಗಳನ್ನು ನಿರ್ಮಿಸಿದರು. ಹೀಗೆ ಗುಪ್ತರ ಕಾಲದ ಕಲೆಯ ಶೈಲಿ ಮತ್ತು ಆದರ್ಶಗಳು ಹಲವಾರು ಶತಮಾನಗಳ ಭಾರತೀಯ ಕಲೆಯ ಮೇಲೆ ಪ್ರಭಾವ ಬೀರಿದುದೇ ಅಲ್ಲದೆ ಅನೇಕ ಪೌರ್ವಾತ್ಯ ದೇಶಗಳ ಕಲೆಯ ಮೇಲೂ ಪ್ರಭಾವ ಬೀರಿತು.

### 55.4.1. ವಾಸ್ತುಶಿಲ್ಪ

ಗುಪ್ತರ ಕಾಲದ ಕಲಾಕಾರರ ಕ್ರಿಯಾತ್ಮಕ ಪ್ರತಿಭೆ ವಾಸ್ತುಶಿಲ್ಪದ ಮುಖಾಂತರ ಹೊರಹೊಮ್ಮಿತು, ಗುಪ್ತರ ಕಾಲದ ಕಲಾಕಾರರು, ಹಲವಾರು ದೇವಾಲಯಗಳು, ಸ್ತೂಪಗಳು, ಚೈತಾಲಯಗಳು, ವಿಹಾರಗಳು ಇತ್ಯಾದಿಗಳನ್ನು ನಿರ್ಮಾಣ ಮಾಡಿದರು. ಈ ಕಾಲದ ವಾಸ್ತುಶಿಲ್ಪ ನಿರ್ಮಾಣಗಳು ಹಿಂದಿಂದಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯವನ್ನು ಹೊಂದಿದ್ದು ಅವು ದೇವಾಲಯಗಳ ವಾಸ್ತು ಶಿಲ್ಪಕ್ಕೆ ಒಂದು ಸ್ಥಿರ ಆಸ್ತಿಭಾರ ಹಾಕಿದಂತಾಯಿತು. ಗುಪ್ತರ ಕಾಲದಲ್ಲಿ ವಾಸ್ತು ಶಿಲ್ಪಕ್ಕೆ ಹೆಸರಾದ ಕೆಲವು ಮುಖ್ಯದೇವಾಲಯಗಳೆಂದರೆ (1)ಜಬ್ಬಲ್‌ಪುರ ಜಿಲ್ಲೆಯ ತಿಗಾವದಲ್ಲಿರುವ ವಿಷ್ಣು ದೇವಾಲಯ (2) ಭೂಮರದಲ್ಲಿರುವ ಶಿವದೇವಾಲಯ (3) ಸಾಂಚನ ಕುಠಾರದಲ್ಲಿರುವ ಪಾರ್ವತಿ ದೇವಾಲಯ (4)ಸಾಂಚಿ ಮತ್ತು ಬುದ್ಧಗಯದಲ್ಲಿರುವ ಬೌದ್ಧ ಪವಿತ್ರ ಸ್ಥಳಗಳು (5) ದೇವ್‌ಘರ್‌ನಲ್ಲಿರುವ ದಶಾವತಾರ ದೇವಾಲಯ (6) ಖೋಹದಲ್ಲಿರುವ ಏಕಮುಖ ಶಿವಲಿಂಗದೇವಾಲಯ ಇವುಗಳಲ್ಲದೆ ಗುಪ್ತರ ಕಾಲದ ಅನೇಕ ದೇವಾಲಯಗಳು ಉತ್ತರ ಭಾರತದ ಅನೇಕ ಸ್ಥಳಗಳಲ್ಲಿ ನಿರ್ಮಾಣವಾಗಿದ್ದವೆಂದೂ ಕಾಲಾನಂತರ ಅವು ಮುಸ್ಲಿಮರ ಮತ್ತು ಹೂಣರ ಧಾಳಿಯಿಂದಾಗಿ ನಾಶವಾಯಿತು. ಗುಪ್ತರ ಕಾಲದ ದೇವಾಲಯಗಳು ಬೃಹದಾಕಾರದಲ್ಲಿರಲಿಲ್ಲ, ಹತ್ತು ಅಡಿ ಚೌಕಾಕಾರದ ಅದಕಿಂದಲೂ ಕಿರಿದಾದ ಮೊಗಸಾಲೆವುಳ್ಳ ದೇವಾಲಯಗಳೇ ಹೆಚ್ಚು. ಮೇಲ್ಛಾವಣಿ ಚಪ್ಪಟೆಯಾಗಿರುತಿತ್ತು ಮತ್ತು ಕಲ್ಲುಚಪ್ಪಡಿಗಳನ್ನು, ಗಾರೆಯನ್ನು ಉಪಯೋಗಿಸದೇ ಚೆನ್ನಾಗಿ ನಯಮಾಡಿ ಜೋಡಿಸಲಾಗಿದೆ. ಗುಪ್ತರ ಕಾಲದ ನಂತರ ರಚನೆಯಾದ ದೇವಾಲಯಗಳಂತೆ ಶಿಖರ ಮತ್ತು ಮಂಟಗಳು (ಹಜಾರ) ಈ ದೇವಾಲಯಗಳಿಗಿರಲಿಲ್ಲ. ಆದರೆ ದೇವಘರ್‌ನ ದಶವತಾರ ದೇವಾಲಯದಲ್ಲಿ ಸ್ವಲ್ಪಮಾರ್ಪಾಟನ್ನು

ಕಾಣುತ್ತೇವೆ. ಇದರಲ್ಲಿ ಮೂಲತಃ ನಲವತ್ತು ಅಡಿ ಎತ್ತರದ ಶಿಖರವಿದೆ ಮತ್ತು ಸ್ವಲ್ಪ ಹೆಚ್ಚು ಸ್ಥಳಾವಕಾಶವುಳ್ಳ ಹಜಾರವಿದೆ. ಈ ದೇವಾಲಯದ ಬಾಗಿಲು ಹೆಚ್ಚು ಅಲಂಕಾರಭರಿತವಾಗಿದೆ. ಇದರಲ್ಲಿ ರಂಗಯಮುನೆಯರ ಸಂಗಮದ ಚಿತ್ರ ಮನೋಹರವಾಗಿದೆ. ಇಲ್ಲಿನ ವಿಶೇಷತೆಯೆಂದರೆ ಪೂರ್ಣ ಕಳಸಗಳ ಜೋಡಣೆ ಮತ್ತು ಗವಾಕ್ಷಗಳ ರಚನೆ ಮತ್ತು ಉಪಯೋಗ ದೃಷ್ಟಿಯಿಂದ ಅಸಾಧಾರಣವಾಗಿದೆ. ಇದರ ಬಾಗಿಲಿನಲ್ಲಿರುವ ಪೂರ್ಣಘಟ್ಟ ಮಿಥುನ ಚಿತ್ರಗಳು ಪತ್ರಾವಳಿ ಮುಂತಾದವು ಮನೋಜ್ಞವಾಗಿವೆ.

ಈ ಕಾಲದ ಬೌದ್ಧಸ್ತೂಪಗಳು ನಾಲ್ಕು ಕಡೆಗಳಿಗೂ ಬುದ್ಧನ ವಿಗ್ರಹಗಳನ್ನು ಅಳವಡಿಸಲಾಗಿದೆ. ಗುಪ್ತರ ಕಾಲದ ದೇವಾಲಯಗಳ ವಾಸ್ತುಶಿಲ್ಪದ ಪ್ರಭಾವವೂ ಇವುಗಳ ಮೇಲೆ ಬಿದ್ದಿದೆ. ಅದರಿಂದ ಎತ್ತರದ ವೇದಿಕೆಯ ಮೇಲೆ ಸ್ತೂಪಗಳನ್ನು ರಚಿಸಲಾಗಿದೆ. ನಾಲ್ಕು ಮೂಲೆಗಳಲ್ಲೂ ಚಿಕ್ಕ ಗುಡಿಗಳನ್ನು ನಿರ್ಮಿಸಿರುವುದು ಕಂಡುಬರುತ್ತವೆ. ದಕ್ಷಿಣ ಭಾರತದಲ್ಲಿ ಗುಪ್ತರ ಕಾಲದ ಕಲೆಯ ಪ್ರಭಾವ ಸ್ವಲ್ಪಮಟ್ಟಿಗೆ ಕಾಣ ಬರುತ್ತದೆ. ಚೇಜರಲದ ಕಪೋತೇಶ್ವರ ದೇವಾಲಯ ಐಹೊಳೆಯ ದುರ್ಗದೇವಾಲಯ ಕ್ರಿ.ಶ. 6ನೇ ಶತಮಾನದ ಬೇರ್‌ನಲ್ಲಿರುವ ವೈಷ್ಣವ ದೇವಾಲಯಗಳು ಮುಖ್ಯವಾದವು.

ಗುಪ್ತರ ಕಾಲದಲ್ಲಿ ಜೈನ ಮತ್ತು ಬೌದ್ಧ ವಿಹಾರ ಮತ್ತು ಗುಹಾಲಯಗಳು ನಿರ್ಮಿತವಾದವು. ಅಜಂತದ ಹದಿನಾರನೇ ಮತ್ತು ಹದಿನೇಳನೇ ಗುಹಾಲಯಗಳು ವಾಕಾಟಕ ರಾಜ ಹರಿಸೇನನಿಂದ ಐದನೇ ಶತಮಾನನದ ಅಂತ್ಯ ಭಾಗದಲ್ಲಿ ನಿರ್ಮಿಸಲ್ಪಟ್ಟವು. ಹಿಂದಿನ ಬೌದ್ಧ ವಾಸ್ತು ಶಿಲ್ಪಕಿಂತ ಇಲ್ಲಿ ಅನೇಕ ಮಾರ್ಪಾಟುಗಳು ತೋರಿ ಬರುತ್ತವೆ. ಇದಕ್ಕೆ ಮಹಾಯಾನ ಬೌದ್ಧ ಧರ್ಮದ ಪ್ರಭಾವವೇ ಮುಖ್ಯ ಕಾರಣ. ಈ ಚೈತ್ಯದ ಕಲ್ಲಿನಿಂದ ಕಡೆದಿರುವ ಸ್ತೂಪ ಸಿಲಿಂಡರ್ ಆಕಾರದ ಮೃದಂಗವನ್ನೊಳಗೊಂಡಿದೆ. ಮಕರ ತೋರಣಗಳಿಂದ ಅಲಂಕೃತವಾದ ಭವ್ಯವಾದ ಬುದ್ಧನ ವಿಗ್ರಹವನ್ನು ಇಲ್ಲಿ ಅಲಂಕರಿಸಲಾಗಿದೆ. ಮೃದಂಗ ತ್ರಿಛತ್ರಿಗಳಿಗೆ ಸಹಾಯಕವಾಗಿ ನಿಂತಿದೆ. ಅಜಂತದ ಹದಿನಾರು ಮತ್ತು ಹದಿನೇಳನೆಯ ಗುಹೆಗಳು ಪ್ರತಿಯೊಂದು ಇಪ್ಪತ್ತು ಕಂಬಗಳನ್ನೊಳಗೊಂಡಿದೆ. ಇವು ಅರವತ್ತೈದು ಅಡಿ ಚೌಕಾಕಾರದಲ್ಲಿವೆ. ಇವುಗಳಲ್ಲಿ ಆರು ಬೌದ್ಧ ಭಿಕ್ಷುಗಳು ವಾಸಿಸುವ ಸ್ಥಾನಗಳಿವೆ. ಇವುಗಳಲ್ಲಿ ಭವ ಚಕ್ರವನ್ನು ಗೋಡೆಗಳಲ್ಲಿ ಕೆತ್ತಲಾಗಿದೆ. ಇವುಗಳ ಗೋಡೆಗಳಲ್ಲಿ ಬುದ್ಧನ ಜೀವನ ಚಿತ್ರ ಅಥವಾ ಜಾತಕ ವರ್ಣನೆಗಳನ್ನು ಬಿಡಿಸಲಾಗಿದೆ.

## 55.4.2. ಗುಪ್ತರ ವಾಸ್ತುಶಿಲ್ಪ ಕಲೆಯ ಪ್ರಧಾನ ಲಕ್ಷಣಗಳು

ಗುಪ್ತರ ಕಾಲದ ವಾಸ್ತುಶಿಲ್ಪಕಲೆಯು ತನ್ನದೆ ಆದ ಕೆಲವು ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಭಾರತದ ಕಟ್ಟಡಗಳ ನಿರ್ಮಾಣದ ಇತಿಹಾಸದಲ್ಲೇ ಅತ್ಯಂತ ಮಹತ್ವದ್ದೆನಿಸುವ ಪರಿವರ್ತನೆಯಾದ್ದು ಇವರ ಕಾಲದಲ್ಲಿಯೇ. ಅದಕ್ಕೆ ಮೊದಲು ದೇವಾಲಯ ಮತ್ತು ಇತರ ಕಟ್ಟಡಗಳನ್ನು ಹೆಚ್ಚಾಗಿ ಇಟ್ಟಿಗೆಗಳಿಂದ, ಬಂಡೆಗಲ್ಲುಗಳಲ್ಲಿ ಅಥವಾ ಕೆಲವು ನಾಶೀ ವಸ್ತುಗಳಿಂದ ನಿರ್ಮಿಸುವ ವಾಡಿಕೆಯಿತ್ತು. ಕಲ್ಲುಗಳನ್ನು ನಯವಾಗಿ ಕೆತ್ತಿ ಇಟ್ಟಿಗೆಗಳ ಮಾದರಿಯಲ್ಲಿ ಜೋಡಿಸಿ ದೇವಾಲಯವನ್ನು ಕಟ್ಟುವ ಕೌಶಲ ಆರಂಭವಾದ್ದು ಗುಪ್ತರ ಕಾಲದಲ್ಲಿ . ಇದು ಭಾರತೀಯ ಶಿಲ್ಪದ ಇತಿಹಾಸಕ್ಕೆ ಒಂದು ಹೊಸ ಮೆರುಗನ್ನಿತ್ತಿತ್ತು. ಅದೇ ಕಾಲದಲ್ಲಿ ಹಿಂದೂ ಧರ್ಮದ ಪುನರುಜ್ಜೀವನವಾಯಿತು. ಆ ಮೊದಲು ಬೌದ್ಧ ವಾಸ್ತುಶಿಲ್ಪಗಳು ಅಧಿಕವಾಗಿ ನಿರ್ಮಿಸಲ್ಪಡುತ್ತಿದ್ದವು. ಗುಪ್ತರ ಕಾಲದಲ್ಲೂ ಇವುಗಳ ನಿರ್ಮಾಣ ವಾಗುತ್ತಿದ್ದರೂ ಹಿಂದೂ ವಾಸ್ತುಶಿಲ್ಪಗಳು ವೈವಿಧ್ಯಮಯವಾಗಿ ಬೆಳೆದುವು ಗುಪ್ತರ ಕಾಲದ ದೇವಾಲಯಗಳು ಆರಂಭದಲ್ಲಿ ಗರ್ಭಗೃಹ ಮತ್ತು ಸರಳರೀತಿಯ ಮುಖಮಂಟಪಗಳನ್ನು ಮಾತ್ರ ತಳೆದಿರುತ್ತಿದ್ದವು. ಕಾಲಾನುಕ್ರಮದಲ್ಲಿ ಮುಖಮಂಟಪಗಳು ಕಲಶಾಕಾರದ ಅಲಂಕಾರವುಳ್ಳ ಕಂಬಗಳೊಂದಿಗೆ ಬೆಳೆದುವು. ಗರ್ಭಗೃಹದ ಒಳಗೋಡೆಗಳು ನಿರಾಡಂಬರವಾಗಿದ್ದು ಅದರ ಬಾಗಿಲ ಹೊರಮೈ ಕೆತ್ತನೆ ವಿಶೇಷ ಅಲಂಕಾರದಿಂದ ಕೂಡಿರುತ್ತಿತ್ತು. ಗರ್ಭಗೃಹದೊಳಗೆ ಸ್ಥಾಪಿಸಲಾದ ಮೂರ್ತಿ ಕೌಶಲಪೂರ್ಣವಾಗಿ ತಯಾರಿಸಲ್ಪಡುತ್ತಿತ್ತು. ದೇವಾಲಯವನ್ನು ಚೌಕಾಕಾರದ ತಳಪಾಯದ ಮೇಲೆ ಕಟ್ಟಲಾಗುತ್ತಿತ್ತು, ಕೆಲವು ದೇವಾಲಯಗಳ ನಾಲ್ಕೂ ದಿಕ್ಕುಗಳಲ್ಲಿ ಉಪದೇಗುಲಗಳಿರುತ್ತಿದ್ದವು. ಉಪದೇಗುಲಗಳ ತಳಪಾಯವೂ ಚೌಕಾಕಾರದ್ದೇ ಆಗಿರುತ್ತಿತ್ತು. ಆರಂಭದಲ್ಲಿ ಗರ್ಭಗೃಹದ ಮೇಲೆ ಚಪ್ಪಟೆಯಾದ ಮಾಳಿಗೆ ಇರುತ್ತಿತ್ತು. ಕ್ರಮೇಣ ಗೋಪುರಾಕಾರದ ಶಿಖರಗಳು ಬಂದುವು. ಗುಪ್ತರ ಕಾಲದ ದೇವಾಲಯಗಳು ಅನಂತರ ಕಾಲದಲ್ಲಿ ರೂಢಿಗೆ ಬಂದ ನಾಗರ ಶೈಲಿಗೆ ಮೂಲಾಧಾರವಾಗಿ ಪರಿಣಮಿಸಿದವು. ಆ ಕಾಲದ ಅನೇಕ ದೇವಾಲಯಗಳು ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣ ಪಥಗಳನ್ನುಳ್ಳವಾಗಿದ್ದವು. ಈ ಪ್ರದಕ್ಷಿಣ ಪಥವನ್ನೂ ಗರ್ಭಗೃಹದ ಸುತ್ತಲೂ ಕಂಬಗಳನ್ನೂ ನಿಲ್ಲಿಸಿಯಾಗಲಿ, ಜಾಲಂದರವುಳ್ಳ ಗೋಡೆಗಳಿಂದಾಗಲಿ ನಿರ್ಮಿಸುತ್ತಿದ್ದರೆಂಬುದಕ್ಕೆ ಹಲವಾರು ನಿದರ್ಶನಗಳು ದೊರೆತಿವೆ. ಅನೇಕ ಕಡೆಗಳಲ್ಲಿ ಇಂಥ ಪ್ರದಕ್ಷಿಣ ಪಥಗಳು ಸಂಪೂರ್ಣವಾಗಿ ಅಳಿದುಹೋಗಿವೆ. ದೇವಸ್ಥಾನದ ಗರ್ಭಗುಡಿಯ ಬಾಗಿಲಿನ ಹೊರಮೈ

ಅತ್ಯಂತ ಕಲಾವಂತಿಕೆಯಿಂದ ನಿರ್ಮಿಸಲ್ಪಟ್ಟು, ವಿವಿಧ ರೀತಿಯ ರೇಖಾವಿನ್ಯಾಸ ಮನುಷ್ಯಾಕೃತಿಗಳು, ಮಿಥುನಗಳು, ಪತ್ರಲತೆ, ಶಂಖ, ಚಕ್ರ, ಸ್ವಸ್ತಿಕ, ಮಂಗಲ ವಿಗ್ರಹಗಳು, ಶ್ರೀವೃಕ್ಷ, ಪೂರ್ಣಘಟ, ಗಂಗಾಯಮುನೆಯರು ಮೊದಲಾದ ಶಿಲ್ಪಗಳಿಂದ ಕೂಡಿದ್ದು, ಅದರ ಬಾಗಿಲು ದೇವತೆಗಳ ಪ್ರತಿಮೆಗಳಿಂದ ಅಲಂಕರಿಸಲ್ಪಟ್ಟಿದೆ.

ಕ್ರಿ.ಶ.ನಾಲ್ಕನೆ ಶತಮಾನದ ಹೊತ್ತಿಗೆ ಗುಪ್ತರ ಮೂರ್ತಿ ಶಿಲ್ಪ ಕಲೆ ಅಭಿವೃದ್ಧಿ. ಹೊಂದಲು ಪ್ರಾರಂಭವಾಯಿತು. ಗುಪ್ತರ ಕಲೆ ಸರಳತೆ, ಸೌಂದರ್ಯ ಮತ್ತು ಪರಿಪೂರ್ಣತೆಗೆ ಪ್ರಸಿದ್ಧಿಯಾಗಿದೆ. ಮಥುರ, ಸಾರಾನಾಥ್ ಮತ್ತು ಸಾಂಚಿ ಗುಪ್ತ ಕಲೆಯು ಪ್ರಮುಖ ಕೇಂದ್ರಗಳಾಗಿವೆ. ಮಥುರದಲ್ಲಿ ಕೆತ್ತಲ್ಪಟ್ಟಿರುವ ಬುದ್ಧನು ಮೂರ್ತಿಗಳು, ಸುಂದರವೂ ಮತ್ತು ಪರಿಪೂರ್ಣವಾಗಿಯೂ ಇವೆ. ಆದುದ್ದರಿಂದ ಗುಪ್ತರ ಕಾಲದ ಮೂರ್ತಿಶಿಲ್ಪಕಲೆಯು ಒಂದು ಅಪೂರ್ವ ಸ್ಥಾನವನ್ನು ಪಡೆದಿದೆ. ಭಾರತೀಯ ಶಿಲ್ಪಶಾಸ್ತ್ರಕ್ಕನುಗುಣವಾಗಿ ಮೂರ್ತಿಗಳನ್ನು ಆ ಕಾಲದ ಶಿಲ್ಪಿಗಳು ಕಡೆದಿರುವರು. ಬುದ್ಧನ ವಿಗ್ರಹ ಆಧ್ಯಾತ್ಮಿಕ ಭಾವನೆಯಿಂದ ಮಂದಹಾಸಪೂರಿತವಾಗಿ ಶಾಂತಿ ಮುದ್ರೆ ಪಡೆದಿದೆ. ಇದು ಭಾರತೀಯ ಕಲೆಯ ಒಂದು ಮಹಾ ಸಾಧನೆ. ಇದೇ ರೀತಿ ಮಥುರಾ ಮ್ಯೂಸಿಯಂನಲ್ಲಿರುವ ಏಳೂವರೆ ಅಡಿ ಎತ್ತರದ ಬುದ್ಧನ ತಾಮ್ರದ ಮೂರ್ತಿ ಗುಪ್ತರ ಕಾಲದ ಕಲೆಗೆ ಅತ್ಯುತ್ತಮ ನಿದರ್ಶನವಾಗಿದೆ. ಬುದ್ಧನ ವಿಗ್ರಹದ ಪ್ರಭಾವಳಿ ಸರಳವಾಗಿರುತ್ತಿದ್ದು ಈ ಕಾಲದಲ್ಲಿ ಅಲಂಕಾರಪೂರಕವಾಗಿ ರೂಪುಗೊಳ್ಳ ತೊಡಗಿತ್ತು. ಬುದ್ಧನ ಸಾರನಾಥ ವಿಗ್ರಹದ ಬಗ್ಗೆ ಬರೆಯುತ್ತಾ "ಇದು ಗಾಂಧಾರ ಕಲಾವೈಖರಿಗಿಂತ ಸಂಪೂರ್ಣವಾಗಿ ಸ್ವತಂತ್ರವಾಗಿದೆ" ಎಂಬುದಾಗಿ ವಿನ್ಸೆಂಟ್‌ಸ್ಮಿತ್‌ರು ವರ್ಣಿಸಿದ್ದಾರೆ.

ಗುಪ್ತರ ಕಾಲದಲ್ಲಿ ಶೈವಮತ ಮತ್ತು ವೈಷ್ಣವಮತಗಳೆರಡೂ ಊರ್ಜಿತಾವಸ್ಥೆಯಲ್ಲಿದ್ದವು. ಆದ್ದರಿಂದ ಗುಪ್ತರ ಮೂರ್ತಿಪ್ರಾಕಾರಗಳಲ್ಲಿ ಏಕಮುಖ ಮತ್ತು ಚತುರ್ಮುಖ ಲಿಂಗಗಳು ವೈಶಿಷ್ಟ್ಯ ಪಡೆದವು. ಆ ಕಾಲದ ಅರ್ಧನಾರೇಶ್ವರಶಿವ ಸ್ತ್ರೀ ಪುರುಷ ಮೂರ್ತಿಗಳ ಸಂಯೋಜನೆಯಾಗಿದೆ. ವಿಷ್ಣುವಿನ ವಿಗ್ರಹ ರಚನೆಯಲ್ಲೂ ಗುಪ್ತರ ಕಾಲ ಮಹತ್ವದ್ದೆನಿಸಿದೆ. ವಿಷ್ಣುವಿನ ವರಹಾವತಾರ ಮತ್ತು ನರಸಿಂಹಾವತಾರಗಳ ಜೊತೆಗೆ ಮಾನವ ಮುಖವಿರುವ ವಿಶ್ವರೂಪದ ಮೂರ್ತಿ ರೂಪುಗೊಂಡಿತ್ತು. ಕ್ರಿ.ಶ.ನಾಲ್ಕನೇ ಶತಮಾನದಲ್ಲಿ ಕಡೆಯಲಾದ ಉದಯಗಿರಿಯಲ್ಲಿರುವ ವರಾಹ ವಿಗ್ರಹ ಗುಪ್ತರ ಭವ್ಯತೆಗೆ ಸಾಕ್ಷಿಯಾಗಿದೆ. ಗುಪ್ತರ ಕಾಲ ಹಿಂದೂ ಧರ್ಮದ ಪುನಶ್ಚೇತನ ಕಾಲವಾಗಿತ್ತೆಂಬ ಅಂಶ ಆಗಿನ ಕಾಲದ ಕಲೆಯಲ್ಲೂ ಪ್ರತಿಬಿಂಬಿತವಾಗಿದೆ. ಆ ಕಾಲದ ಕಲೆಯಲ್ಲಿ ಹಿಂದೂದೇವಾಲಯಗಳಲ್ಲಿ ಹೆಚ್ಚು ಹೆಚ್ಚು ಪುರಾಣಕತೆಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಕೃಷ್ಣಾವತಾರ, ರಾಮವತಾರದ ಕತೆಯ ನಿರೂಪಣೆಗಳು ಅಧಿಕವಾಗಿ ಕಂಡು ಬರುತ್ತದೆ. ನರನಾರಾಯಣ ಮೂರ್ತಿಯನ್ನು ದೇವಘರ್ ದೇವಾಲಯದಲ್ಲಿ ಅದ್ವಿತೀಯವಾಗಿ ಚಿತ್ರಸಲಾಗಿದೆ. ಇದು ಹಿಂದೂ ಮೂರ್ತಿ ಶಿಲ್ಪದ ಅಸಾಧಾರಣ ಕಲಾಕೌಶಲವಾಗಿದೆ.

## 55.4.3. ಚಿತ್ರಕಲೆ

ಮೂರ್ತಿಶಿಲ್ಪ, ವಾಸ್ತುಶಿಲ್ಪ ಕಲೆಗಳಂತೆ ಚಿತ್ರಕಲೆಯೂ ಗುಪ್ತರ ಕಾಲದಲ್ಲಿ ಅತ್ಯಂತ ಪರಿಪೂರ್ಣ ಘಟ್ಟವನ್ನು ಮುಟ್ಟಿತು. ಗುಪ್ತರ ಕಾಲದ ಚಿತ್ರಕಲೆ ಅಜಂತಾ ಗುಹಾಲಯಗಳು, ಬಾಗ್ ಗುಹಾಲಯಗಳು, ಪುದು ಕೋಟೆಯ ಸಿತ್ತಲ್‌ನ ವಾಸಲ್ ದೇವಾಲಯ ಮತ್ತು ಸಿಲೋನಿನಲ್ಲಿರುವ ಸಿಗೀರಿಯದಲ್ಲಿ ಕೊರೆದಿರುವ ಶಿಲಾಪೀಠಗಳಲ್ಲಿ ಉತ್ತಮವಾಗಿ ಮೂಡಿ ಬಂದಿವೆ. ಗುಪ್ತರ ಕಾಲದ ಚಿತ್ರಕಲೆ ಅಜಂತದ ಒಂದು, ಎರಡು, ಹದಿನಾರು ಮತ್ತು ಹದಿನೇಳನೆಯ ಗುಹಗಳಲ್ಲು ಕಂಡು ಬರುತ್ತವೆ. ಅಜಂತದ ಮುಖ್ಯ ದೃಶ್ಯಾವಳಿಗಳೆಂದರೆ ಹೂ ಬಿಡುತ್ತಿರುವ ಮರಗಳು, ತೊರೆಗಳು, ಅಸನಗಳು, ಮಂಗಗಳು, ಜಿಂಕೆ ಮತ್ತು ಮೊಲಗಳು ಇವುಗಳನ್ನು ಬಹು ಮನೋಜ್ಞವಾಗಿ ಚಿತ್ರಸಲಾಗಿದೆ. "ಈ ಶಿಲಾ ಕೊರೆತದ ದೇಗುಲಗಳ ಗೋಡೆಗಳು ಮತ್ತು ಕಂಬಗಳಲ್ಲಿರುವ ನೂರಾರು ಚಿತ್ರಗಳಿಂದ ನಮ್ಮ ಕಣ್ಣುಗಳ ಮುಂದೆ ಒಂದು ಬೃಹತ್ ನಾಟಕವೇ ಚಲಿಸಿದಂತೆ ಭಾಸವಾಗುತ್ತದೆ" ಎಂಬುದಾಗಿ ರೋಥನ್ ಸ್ಟೈನ್ನನ್ ಎಂಬುವವನು ನುಡಿಯುತ್ತಾನೆ. ಅಜಂತ ಗುಹೆಯ ಚಿತ್ರಗಳಲ್ಲಿ ಧಾರ್ಮಿಕ ಮತ್ತು ಲೌಕಿಕ ಚಿತ್ರಗಳೆರಡು ಕಂಡು ಬರುತ್ತವೆ. ಇವುಗಳಲ್ಲಿ ಬುದ್ಧ ಬೋದಿಸತ್ವ, ಯಕ್ಷ. ಯಕ್ಷಿಣಿ, ಗಂಧರ್ವ ಆಪ್ಸರೆಯರು, ರಾಜರು ಮತ್ತು ಅವರ ಆಸ್ಥಾನಗಳು, ಮರಗಿಡ ಬಳ್ಳಿಗಳು ಮತ್ತು ಮೃಗಗಳನ್ನು ಅಂದವಾಗಿ ನೈಸರ್ಗಿಕ ಬಣ್ಣಗಳಲ್ಲಿ ಚಿತ್ರಿಸಲಾಗಿದೆ. ಪ್ರಕೃತಿ ದೃಶ್ಯಗಳು, ಪ್ರಾಣಿಗಳು, ಹೂಗಳು, ಮರಗಳು, ಪುರಾಣ ಕಥೆಗಳು, ಯಕ್ಷರು, ಗರುಡ, ಗಂಧರ್ವರು, ಮುಂತಾದ ನೂರಾರ ರೀತಿಯ ಚಿತ್ರಗಳನ್ನು ಇಲ್ಲಿ ಬಿಡಿಸಲಾಗಿದೆ. ಬುದ್ಧ ಮತ್ತು ಬೋದಿಸತ್ವರ ಚಿತ್ರಗಳೂ ಇಲ್ಲಿವೇ.

ಹದಿನಾರನೇಯ ಗುಹೆಯಲ್ಲಿ ಮೃತ್ಯುಶಯ್ಯೆಯಲ್ಲಿರುವ ರಾಜಕುಮಾರಿಯ ಚಿತ್ರ ಗ್ರಿಫಿತ್, ಬರ್ಗೆಸ್ ಮತ್ತು ಫರ್ಗ್ಯುಸನ್‌ರಿಂದ ಪ್ರಶಂಶಿಸಲ್ಪಟ್ಟಿದೆ, ಒಂದನೇ ಗುಹೆಯಲ್ಲಿರುವ ಚಿತ್ರ ಎರಡನೇ ಪುಲೀಕೇಶಿಯ ಕಾಲದಲ್ಲಿ ಬಂದ ಪರ್ಶಿಯಾದ ಚಕ್ರವರ್ತಿ ಖುಸ್ರುವಿನ ರಾಯಬಾರಿಯನ್ನು ಸ್ವಾಗತಿಸುತ್ತಿರುವುದು ಎನ್ನಲಾಗಿದೆ.

ಮಾಳವದ ಭಾಗ್‌ನಲ್ಲಿರುವ ಚಿತ್ರಗಳೂ ಅಜಂತದಷ್ಟೆ ಪ್ರಮುಖವಾಗಿದೆ. ಇಲ್ಲಿನ ಚಿತ್ರಗಳು ಹೆಚ್ಚಾಗಿ ಸಾಮಾಜಿಕ ಚಿತ್ರಗಳಾಗಿವೆ. ಪುದುಕೋಟೆಯ ಸಿತ್ತಲ್‌ನ ವಾಸಲ್ ಗುಹಾಲಯದಲ್ಲಿರುವ ಪದ್ಮವನದ ದೃಶ್ಯ, ಅಪ್ಸರೆಯರು, ರಾಜರಾಣಿಯರ ಚಿತ್ರಗಳು ಆಕರ್ಷಣಿಯವಾಗಿವೆ. ಸಿಲೋನಿನಲ್ಲಿ ಕಲ್ಲಿನ ಮೇಲೆ ಕೊರೆದಿರುವ ರಾಜ ಮನೆತನದ ಸ್ತ್ರೀಯರ ಚಿತ್ರಗಳು ಈ ಕಾಲಕ್ಕೆ ಸೇರಿದ ಭವ್ಯ ಕೃತಿಗಳಾಗಿವೆ.

ಇದಲ್ಲದೆ ಗುಪ್ತರ ಕಾಲದಲ್ಲಿ ಕುಸುರಿ ಕೆಲಸದಲ್ಲಿ ಶಿಲ್ಪಿಗಳು ಕೌಶಲ ತೋರಿಸಿದ್ದಾರೆ ಜೇಡಿ ಮಣ್ಣಿನ ಗೊಂಬೆಗಳನ್ನು ಮಾಡಿ ಅವುಗಳ ಅಲಂಕಾರ ಕೊಠಡಿಗಳು ಶಯ್ಯಾಗೃಹಗಳು ಮತ್ತು ಗೃಹಗಳಲ್ಲಿ ಹೆಚ್ಚಾಗಿ ಇಡುತ್ತಿದ್ದರಂತೆ ತೋರಿಸುತ್ತದೆ. ಗುಪ್ತರ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸುತ್ತಿದ್ದರು. ಚಿತ್ರಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1) ದೇವಾ ದೇವತೆಗಳು 2) ಸ್ತ್ರೀ ಪುರುಷರ ಚಿತ್ರಗಳು 3) ಪ್ರಾಣಿಗಳ ಚಿತ್ರಗಳು ಮತ್ತು ಇನ್ನಿತರ ವಸ್ತುಗಳು ಇವುಗಳೇ ಕೆಂಪು, ಹಳದಿ, ಬಿಳುಪು ಮತ್ತು ಗುಲಾಬಿ ಬಣ್ಣಗಳನ್ನು ಬಳಸಲಾಗಿದೆ. ಜೇಡಿ ಮಣ್ಣಿನಿಂದ, ತಯಾರಿಸುತ್ತಿದ್ದ ಈ ಗೊಂಬೆಗಳು ನಿಜಕ್ಕೂ ಆ ಕಾಲದ ಕಲೆಗಾರನ ನೈಪುಣ್ಯಕ್ಕೆ ದ್ಯೋತಕವಾಗಿದೆ. ಒಟ್ಟಿನಲ್ಲಿ ಗುಪ್ತರ ಕಾಲದ ಕಲಾ ವಿನ್ಯಾಸ ತನ್ನದೇ ಆದಂತಹ ಭವ್ಯತೆಯನ್ನು ಹೊಂದಿದೆ. ಆ ಕಾಲದಲ್ಲಿ ಕೇವಲ ಲೌಕಿಕ ಮತ್ತು ಆಧ್ಯಾತ್ಮಕ ದೃಷ್ಟಿಯನ್ನದೆ ಲೌಕಿಕ ಮತ್ತು ಭೌತಿಕ ಜೀವನ ದೃಷ್ಟಿಯನ್ನು ಬೆರೆಸಲಾಗಿದೆ. ಇವೆರಡರ ಸಮ್ಮಿಲನದಿಂದ ಯಾವುದೂ ಅತಿರೇಕವಾಗದಂತೆ ಕಲಾಕಾರ ಕಾಯ್ದುಕೊಂಡು ಬಂದಿದ್ದಾನೆ. ಹೀಗೆ ಗುಪ್ತರ ಕಾಲದಲ್ಲಿ ಸೌಂದರ್ಯದ ಆಸ್ವಾದನೆಗೆ ಗಮನ ನೀಡಿದಂತೆ ಆಧ್ಯಾತ್ಮಿಕ ಮತ್ತು ಧಾರ್ಮಿಕ ಮೌಲ್ಯಗಳಿಗೆ ಚ್ಯುತಿ ತರದೆ ಜೀವನ ದೃಷ್ಟಿಯನ್ನು ಹೊಂದಿದ್ದರು. ಗುಪ್ತರ ಕಾಲದ ಕಲೆ ತನ್ನ ಇನ್ನೊಂದು ವೈಶಿಷ್ಟವಾದ ಸರಳತೆ ಮತ್ತು ನಿಸರ್ಗಗಳ ಅಭಿವ್ಯಕ್ತತೆಯಿಂದ ಎಲ್ಲರಿಗೂ ಹೃದಯಂಗಮವಾದ ಆನಂದವನ್ನು ಮೂಡಿಸುತ್ತವೆ.

ಆ ಕಾಲದ ಕಲೆ ತಾಯ್ನಾಡಿನಲ್ಲಿ ಮಾತ್ರ ಭದ್ರ ಬುನಾದಿಯಿಂದ ಬೆಳೆದು ನಿಲ್ಲದೆ ಏಷ್ಯಾದ ಬಹುಭಾಗದಲ್ಲಿ ತನ್ನ ಪ್ರಾಭಾವದಿಂದ ಪ್ರಸರಿಸಿತು. ಈ ರೀತಿ ಗುಪ್ತರ ಕಾಲದ ಭಾರತದ ಭವ್ಯ ಪರಂಪರೆಯ ದ್ಯೋತಕವಾಗಿ ಕಾಲದ ಪದಾಘಾತಕ್ಕೆ ಸಿಲುಕಿಯೂ ಅಮರವಾಗಿ ಉಳಿದಿದೆ.

## 55.5. ಘಟಕ ಸಾರಾಂಶ

* ಗುಪ್ತ ದೊರೆಗಳು ಪ್ರಬಲ ಸಾಮ್ರಾಟರು ಮತ್ತು ಉತ್ತಮ ಆಡಳಿತಗಾರರಾಗಿದ್ದಂತೆ ಧರ್ಮಸಾಹಿತ್ಯ ಮತ್ತು ಸಂಸ್ಕೃತಿಯ ಆರಾಧಕರಾಗಿದ್ದರು.
* ಅವರ ಕಾಲದಲ್ಲಿ ಹಿಂದೂ ಧರ್ಮವು ಪ್ರಬಲವಾಯಿತು. ಬೌದ್ಧ ಮತ್ತು ಜೈನಧರ್ಮಗಳು ಅವನತಿಯತ್ತ ಸಾಗಿದವು.
* ಸಮುದ್ರಗುಪ್ತ ಮತ್ತು ಎರಡನೇ ಚಂದ್ರಗುಪ್ತರು ಸಾಹಿತ್ಯ ಪ್ರೇಮಿಗಳಾಗಿದ್ದು ಇವರ ಆಸ್ಥಾನದಲ್ಲಿ, ಅನೇಕ ಕವಿಗಳು ರಾಜಾಶ್ರಾಯ ಪಡೆದು ಸಂಸ್ಕೃತ ಸಾಹಿತ್ಯಾಭಿವೃದ್ಧಿ ಪಡಿಸಿದರು.
* ಈ ರೀತಿಯಲ್ಲಿ ಗುಪ್ತರ ಕಾಲದಲ್ಲಿ ಧರ್ಮ, ಸಂಸ್ಕೃತ, ಸಾಹಿತ್ಯ. ಕಲೆ. ಶಿಲ್ಪಕಲೆ, ಲಲಿತಕಲೆ, ವಿಜ್ಞಾನ, ಗಣಿತ ಇತ್ಯಾದಿಗಳು ಶ್ರೇಷ್ಠ ಮಟ್ಟವನ್ನು ಮುಟ್ಟಿದವು.

## 55.6. ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು


| | | | |
|---|---|---|---|
| 1. | ಶಾರದ ಪ್ರಸಾದ್(ಅನು) | - | ಭಾರತದ ಪ್ರೌಢ ಇತಿಹಾಸ |
| 2. | ಮಜುಂದಾರ್. ಆರ್.ಸಿ.(ಅನು) | - | ಅಭಿಜಾತಯುಗ (ಗುಪ್ತರ ಕಾಲ) |
| | | | ಭಾರತೀಯ ವಿದ್ಯಾಭವನ ಸರಣೀಗಳು. |
| 3. | ರಂಗಸ್ವಾಮಯ್ಯ. ಜಿ.ಆರ್. | - | ಪ್ರಾಚೀನ ಭಾರತ |
| 4. | Ramila Thapar, | - | Hisotry of India, Vol- 1. |
| 5. | Lunigu, B.N. | - | Evolution of Indian Culture. |


ಡಾ. ಮಹಾದೇವಿ

# ಟಿಪ್ಪಣಿ

# ಘಟಕ - 56

## ಥಾನೇಶ್ವರದ ವರ್ಧನ ಸಂತತಿ -ಹರ್ಷವರ್ಧನ ಮತ್ತು ಅವನ ಕಾಲ(ಕ್ರಿ.ಶ.606-642)


ರಚನೆ

56.0 ಉದ್ದೇಶ

56.1 ಪೀಠಿಕೆ

56.2 ಆಧಾರಗಳು

- 56.2.1. ಬಾಣನ ಹರ್ಷಚರಿತೆ
- 56.2.2. ಹ್ಯೂಯಾನ್‌ತ್ಸಾಂಗ್
- 56.2.3. ಶಾಸನಗಳು ಮತ್ತು ಸ್ಮಾರಕಗಳು

56.3. ಆರಂಭದ ದೊರೆಗಳು

56.4. ಹರ್ಷವರ್ಧನ ಮತ್ತು ಅವನ ಕಾಲ

- 56.4.1. ಹರ್ಷನ ದಿಗ್ವಿಜಯಗಳು

56.5. ಹರ್ಷನ ಆಡಳಿತ ಕ್ರಮಗಳು

- 56.5.1. ಮಂತ್ರಿಮಂಡಲ
- 56.5.2. ಆಡಳಿತ ವಿಭಾಗಗಳು
- 56.5.3. ಭೂಕಂದಾಯ
- 56.5.4. ಸೈನ್ಯಾಡಳಿತ
- 56.5.5. ನ್ಯಾಯಾಡಳಿತ

56.6 ಆರ್ಥಿಕ ಪರಿಸ್ಥಿತಿ

56.7 ಸಾಮಾಜಿಕ ಪರಿಸ್ಥಿತಿ

56.8 ಹರ್ಷನ ಧಾರ್ಮಿಕ ನೀತಿ

- 56.8.1. ಹರ್ಷ ಮತ್ತು ಬೌದ್ಧ ದರ್ಮ

56.9 ಸಾಹಿತ್ಯ ಬೆಳವಣಿಗೆ

56.10 ಶಿಕ್ಷಣ ಪ್ರಗತಿ

56.11 ಘಟಕದ ಸಾರಾಂಶ

56.12 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು

## 56.0. ಉದ್ದೇಶಗಳು

ಈ ಘಟಕವನ್ನು ಅಭ್ಯಾಸ ಮಾಡಿದ ನಂತರ ಕೆಳಗಿನ ಈ ಅಂಶಗಳನ್ನು ನೀವು ತಿಳಿದುಕೊಳ್ಳಲಿದ್ದೀರಿ.

* ಥಾನೇಶ್ವರದ ವರ್ಧನ ಸಂತತಿಯ ಆಳ್ವಿಕೆಗೆ ಮೊದಲು ಉತ್ತರ ಭಾರತದಲ್ಲಿದ್ದ ರಾಜಕೀಯ ಪರಿಸ್ಥಿತಿಯನ್ನು ಗ್ರಹಿಸಲು,
* ವರ್ಧನ ವಂಶದ ಬಗೆಗೆ ಇರುವ ಮೂಲಾಧಾರಗಳನ್ನು ಪರೀಕ್ಷಿಸಲು
* ಹರ್ಷವರ್ಧನನ ಆಳ್ವಿಕೆಯ ಪ್ರಾಮುಖ್ಯತೆ ಮತ್ತು ಅವನ ಸಾಧನೆಗಳನ್ನುಅರಿಯಲು
* ಹರ್ಷವರ್ಧನನ ಧಾರ್ಮಿಕ ನೀತಿಯನ್ನು ಅಂದಾಜಿಸಲು
* ಹರ್ಷನು ರೂಪಿಸಿದ ಆಡಳಿತ ವ್ಯವಸ್ಥೆ ಮತ್ತು ಭಾರತೀಯ ಸಂಸ್ಕೃತಿಗೆ ಅವನು ಸಲ್ಲಿಸಿದ ಕೊಡುಗೆಳನ್ನು ಸಾರಾಂಶಿಸಲು
* ಸಾಹಿತ್ಯ ಮತ್ತು ಶಿಕ್ಷಣರಂಗಕ್ಕೆ ಹರ್ಷನು ಸಲ್ಲಿಸಿದ್ದ ಸೇವೆಯನ್ನು ನಿರ್ಧರಿಸಲು, ಈ ಘಟಕದ ಅಭ್ಯಾಸವು ನೆರವಾಗುತ್ತದೆ.

## 56.1. ಪೀಠಿಕೆ

ಗುಪ್ತಸಾಮ್ರಾಜ್ಯದ ಅವನತಿ ಉತ್ತರಭಾರತದಲ್ಲಿ ರಾಜಕೀಯ ಅನೈಕ್ಯತೆ ಸಂಭವಿಸಲು ಕಾರಣವಾಯಿತು. ಪರಿಣಾಮವಾಗಿ ಅನೇಕ ಸಣ್ಣ ಸಣ್ಣ ರಾಜ್ಯಗಳು ಏಳಿಗೆಗೆ ಬಂದವು. ಅವುಗಳಲ್ಲಿ ಥಾನೇಶ್ವರದ ವರ್ಧನರು, ಕನೋಜಿನ ಮೌಖರಿಯವರು ಮತ್ತು ಬಂಗಾಳದ ಗೌಡ ರಾಜ್ಯಗಳು ಪ್ರಮುಖವಾದವು. ಥಾನೇಶ್ವರದ ವರ್ಧನರ ಸಂತತಿ ಕ್ರಿ.ಶ.6ನೇ ಶತಮಾನದ ಆದಿಭಾಗದಲ್ಲಿ **ಪುಷ್ಯಭೂತಿ** ಎಂಬುವವನ ಮೂಲಕ ಅಸ್ತಿತ್ವಕ್ಕೆ ಬಂದಿತ್ತೆಂದು ಬಾಣನ ಹರ್ಷಚರಿತ್ರೆಯಿಂದ ತಿಳಿದು ಬರುತ್ತದೆ. ಅವನ ನಂತರ **ನರವರ್ಧನ, ರಾಜ್ಯವರ್ಧನ, ಆದಿತ್ಯವರ್ಧನ ಮತ್ತು ಪ್ರಭಾಕರವರ್ಧನ**ರು ಕ್ರಮವಾಗಿ ಆಡಳಿತ ನಡೆಸಿದರು. ಇವರಲ್ಲಿ ಹರ್ಷ, ವರ್ಧನ ವಂಶದ ಪ್ರಖ್ಯಾತದೊರೆ. ಇವನು ಆ ಕಾಲದಲ್ಲಿದ್ದ ಸಣ್ಣ ಪುಟ್ಟ ದೊರೆಗಳನ್ನು ಸೋಲಿಸಿ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸುವ ಮೂಲಕ ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಿ ಪ್ರಜೆಗಳು ಸುಖ ಶಾಂತಿಯಿಂದ ನೆಲೆಸುವಂತೆ ಮಾಡಿದನು. ಹಾಗೂ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಹಲವಾರು ರೀತಿಯಲ್ಲಿ ಪ್ರೋತ್ಸಾಹಗಳನ್ನು ನೀಡಿ ತನ್ನ ಸಾಮ್ರಾಜ್ಯವೂ ಸರ್ವತೋಮುಖ ಪ್ರಗತಿ ಸಾಧಿಸಲು ಕಾರಣನಾದನು. ಈ ಕಾರಣಗಳಿಂದ ಹರ್ಷವರ್ಧನನು ಪ್ರಾಚೀನ ಭಾರತೀಯ ಇತಿಹಾಸದ ಧ್ರುವತಾರೆಗಳಲೊಬ್ಬನೆಂದೂ, ಹಾಗೂ ಉತ್ತರ ಭಾರತವನ್ನಾಳಿದ ಸಮರ್ಥ ಹಿಂದೂ ಸಾಮ್ರಾಟರಲ್ಲಿ ಕೊನೆಯವನೆಂದೂ ಪರಿಗಣಿಸಲಾಗಿದೆ.

## 56.2 ಆಧಾರಗಳು

ಥಾನೇಶ್ವರದ ವರ್ಧನರ ಇತಿಹಾಸ ರಚನೆಗೆ ವಿಪುಲವಾದ ಆಧಾರಗಳಿವೆ.ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಹರ್ಷನ ಆಸ್ಥಾನ ಕವಿ ಬಾಣಭಟ್ಟನು ರಚಿಸಿರುವ 'ಹರ್ಷಚರಿತೆ ' ಮತ್ತು ಚೀಣೀಯಾತ್ರಿಕನಾದ ಹೂಯನ್‌ತ್ಸಾಂಗ್‌ನ **'ಸಿಯುಕಿ'** ಗ್ರಂಥ, ಹರ್ಷ ರಚಿಸಿರುವನೆನ್ನಲಾದ ' ರತ್ನಾವಳಿ ' ' ನಾಗಾನಂದ ' ಮತ್ತು 'ಪ್ರೀಯದರ್ಶಿಕ' ಕೃತಿಗಳು ಸಮಕಾಲೀನ ಸಮಾಜ ಹಾಗೂ ರಾಜಕೀಯದ ಬಗ್ಗೆ ಪರೋಕ್ಷವಾಗಿ ಆನೇಕ ಮಾಹಿತಿಗಳನ್ನು ಒದಗಿಸುತ್ತವೆ. ಹರ್ಷವರ್ಧನನ ಕಾಲದಲ್ಲಿ ಭಾರತಕ್ಕೆ ಆಗಮಿಸಿದ್ದ ಚೀನಿ ಯಾತ್ರಿಕ ಹ್ಯೂಯನ್‌ತ್ಸಾಂಗ್, ಅನೇಕ ವರ್ಷಗಳ ಕಾಲ ಭಾರತದಲ್ಲಿ ಪ್ರವಾಸಕೈಗೊಂಡು ತನ್ನ ಅನುಭವಗಳನ್ನು'ಸಿಯುಕಿ'ಗ್ರಂಥದಲ್ಲಿವಿವರವಾಗಿ ಬರೆದಿಟ್ಟಿ ದ್ದಾನೆ. ಈತನ ಬರವಣಿಗೆಯ ಮೂಲಕ ಸಮಕಾಲೀನ ರಾಜಕೀಯ, ಆರ್ಥಿಕ ಪರಿಸ್ಥಿತಿ ಹಾಗೂ ಧಾರ್ಮಿಕ ಪರಿಸ್ಥಿತಿಯ ಬಗ್ಗೆ ಆನೇಕ ವಿವರಗಳನ್ನು ತಿಳಿಯಬಹುದು.ಇವುಗಳ ಜೊತೆಗೆ ಅಂದಿನ ರಾಜಮುದ್ರೆಗಳು ಮತ್ತು ಶಾಸನಗಳು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ.

## 56.2.1 ಹರ್ಷ ಚರಿತ

ಹರ್ಷವರ್ಧನನ ಇತಿಹಾಸ ರಚನೆಗೆ ಇರುವ ಸಾಹಿತ್ಯ ಅಧಾರಗಳಲ್ಲಿ ಬಾಣನ 'ಹರ್ಷಚರಿತ' ಮತ್ತು ಹ್ಯೂಯೆನ್‌ತ್ಸಾಂಗ್‌ನ ಬರವಣಿಗೆಗಳು ಪ್ರಮುಖವಾದವು. ಬಾಣನು ಹರ್ಷನ ಸಮಕಾಲೀನ ಮತ್ತು ಅಸ್ಥಾನ ಕವಿ. ಅದುದರಿಂದ ಬಾಣನಿಗೆ ಹರ್ಷನನ್ನು ಸಮೀಪದಿಂದ ಕಾಣಲು ಸಾದ್ಯವಿದ್ದಿತು. ಅವನ್ನು ತನ್ನ 'ಹರ್ಷಚರಿತ' ಗ್ರಂಥದಲ್ಲಿ ಹರ್ಷನ ಬಾಲ್ಯ ಜೀವನ ಮತ್ತು ಅವನ ರಾಜ್ಯದ ಸ್ಥಿತಿಗತಿಗಳ ಸ್ಪಷ್ಟ ಚಿತ್ರಣವನ್ನು ನೀಡಿದ್ದಾನೆ. ಬಾಣನ 'ಹರ್ಷ ಚರಿತ'ದಲ್ಲಿ ಎಂಟು ಅಧ್ಯಾಯಗಳಿದ್ದು ಮೊದಲ ಅಧ್ಯಾಯ ಕೃತಿಕಾರನ ಜೀವನ ಮತ್ತು ವಂಶಾವಳಿಗಳನ್ನು ತಿಳಿಸುತ್ತದೆ. ಎರಡನೆಯ ಅಧ್ಯಾಯದಲ್ಲಿ ಥಾಣೇಶ್ವರದ ಏಳಿಗೆಯನ್ನೊಳಗೊಂಡಿದೆ. ಮೂರನೇ ಅಧ್ಯಾಯವು ಪುಷ್ಯಭೂತಿಯಿಂದ ಪ್ರಾರಂಭಿಸಿ ಹರ್ಷನವರೆಗಿನ ಪೂರ್ವಿಕರೆಲ್ಲರನ್ನು ಗುರುತಿಸಿ ಅವರ ಚರಿತ್ರೆಯ ಪಟ್ಟಿಯನ್ನೊಳಗೊಂಡಿದೆ. ನಾಲ್ಕನೇ ಅಧ್ಯಾಯದಿಂದ ಆರನೇ ಅಧ್ಯಾಯದವರೆಗೆ ರಾಜ್ಯವರ್ಧನ, ಹರ್ಷ ಹಾಗೂ ರಾಜಶ್ರೀ ಇವರುಗಳ ಜನನ, ರಾಜ್ಯವರ್ಧನ ಮತ್ತು ಹೂಣರ ನಡುವಿನ ಯುದ್ಧ, ಗೃಹವರ್ಮನ ಸಾವಿನ ನಂತರ ಮಾಳವದ ಅರಸನಿಂದ ರಾಜಶ್ರೀಯ ಬಂಧನ, ಹಾಗೂ ಗೌಡ ದೇಶದ ಶಶಾಂಕನಿಂದ ರಾಜ್ಯವರ್ಧನನ ಕೊಲೆ. ಶಶಾಂಕನಂತ ದೊರೆಗಳನ್ನು ಪೃಥ್ವಿಯಿಂದಲೆ ತೊಡದುಹಾಕುವ ಹರ್ಷನ ಸಂಕಲ್ಪ, ರಾಜ್ಯವರ್ಧನನ ಸಾವಿನಿಂದ ವಿಕಲ್ಪಗೊಂಡ ಹರ್ಷನಿಗೆ ಅವನ ಸೇನಾನಿಗಳು, ಬೃಹದ್ರಥ(ಮೌರ್ಯ). ಕಾಕವರ್ಣ(ಶಿಶುನಾಗ) ಮುಂತಾದ ಅರಸರ ಮರಣದ ಘಟನೆಗಳನ್ನು ವಿವರಿಸಿ ಸಮಾದಾನಗೊಳಿಸುವ ಚಿತ್ರವಿದೆ. ಏಳನೆಯ ಅಧ್ಯಾಯವು ಹರ್ಷನ ಸೈನಿಕ ಚಟುವಟಿಕೆಗಳನ್ನು, ರಾಜ್ಯಶ್ರೀಯನ್ನು ಹುಡುಕುತ್ತಾ ಹೊರಟ ಹರ್ಷನ ಯಾತ್ರೆಯನ್ನು ಕುರಿತುದಾಗಿದೆ. ಕೊನೆಯ ಅಧ್ಯಾಯವು ವಿಂದ್ಯದ ತಪ್ಪಲಿನಲ್ಲಿ ಜೀವಿಸುತ್ತಿದ್ದ ವಿವಿಧ ಧಾರ್ಮಿಕ ಪಂಥಗಳ ವಿವರಣೆಯನ್ನು ನೀಡುತ್ತದೆ. ಎಂಟನೇ ಅಧ್ಯಾಯದ ಅಂತ್ಯದಲ್ಲಿ ಇನ್ನೇನು ರಾಜಶ್ರೀಯು ಅಗ್ನೀ ಪ್ರವೇಶಕ್ಕೆ ಸಿದ್ದಳಾಗಿರುವಾಗ ಹರ್ಷನು ಅವಳನ್ನು ಕಾಪಡಿದ ವರ್ಣನೆಯಿದೆ. ಹೀಗೆ ಬಾಣನ ಹರ್ಷಚರಿತವು ಹರ್ಷನ ಕಾಲದ ರಾಜಕೀಯ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ.

## 56.2.2 ಹ್ಯೂಯನ್‌ತ್ಸಾಂಗ್

ಹರ್ಷನ ಕಾಲದ ಇತಿಹಾಸವನ್ನು ತಿಳಿಯಲು ಇರುವ ಮತ್ತೊಂದು ಅಧಾರವೆಂದರೆ ಚೀನಾಯಾತ್ರಿಕ ಹೂಯನ್‌ತ್ಸಾಂಗ್‌ನ ಸಿ.ಯೂ.ಕಿ. ಗ್ರಂಥ. ಹೂಯನ್‌ತ್ಸಾಂಗ್‌ನು ಕ್ರಿ.ಶ.600ರಲ್ಲಿ ಹುಟ್ಟಿದನು.ತನ್ನ 20ನೇ ವಯಸ್ಸಿನಲ್ಲಿಬೌದ್ಧ ತತ್ವಗಳಿಂದ ಪ್ರಭಾವಿತಗೊಂಡು ಬೌದ್ದ ಸನ್ಯಾಸಿಯಾದನು.ಇವನು ಮೊದಲು ಬೌದ್ದಧರ್ಮದ ಚೀನಿ ಅನುವಾದ ಗ್ರಂಥಗಳನ್ನು ಓದಿ ತೃಪ್ತನಾಗದೆ ಬೌದ್ದ ಪಂಥ ಹುಟ್ಟಿದ ಭಾರತಕ್ಕೆ ಒಮ್ಮೆ ಬೇಟಿ ಕೊಡಬೇಕೆಂಬ ಮಹದಾಸೆ ಬೇಳಸಿಕೊಂಡನು. ಪರದೇಶಗಳಿಗೆ ಹೊಗುವ ಚೀನಿಯರು ಸರ್ಕಾರದ ಒಪ್ಪಿಗೆ ಪಡೆಯಬೇಕಿತ್ತು. ಹ್ಯೂಯನ್‌ತ್ಸಾಂಗ್‌ನ ವಿದೇಶಿ ಪ್ರಯಾಣದ ಕೋರಿಕೆಗೆ ಸರ್ಕಾರದ ಮನ್ನಣೆ ನೀಡದಿದ್ದಾಗ ಅವನು ಕ್ರಿ.ಶ. 629ರಲ್ಲಿ ಕಳ್ಳತನದಿಂದ **ಸಯಾಂ** ಮೂಲಕ ಭಾರತಕ್ಕೆ ಭೇಟಿ ನೀಡಿದ್ದನು. ಹೀಗೆ ಚೀನಾದಿಂದ ಭೂ ಮಾರ್ಗದ ಮೂಲಕ ಬಂದ ಹ್ಯೂಯನ್‌ತ್ಸಾಂಗ್‌ನು ಹರ್ಷನ ಸಾಮ್ರಾಜ್ಯವೊಂದರಲ್ಲಿಯೇ ಎಂಟು ವರ್ಷಗಳಕಾಲ ತಂಗಿದ್ದನು ಹಾಗೂ ಭಾರತದಾದ್ಯಂತ ಸಂಚರಿಸಿದ ಹ್ಯೂಯನ್‌ತ್ಸಾಂಗ್‌ನು ತಾನು ಕಂಡು, ಕೇಳಿದ ಎಲ್ಲ ವಿಷಯಗಳನ್ನು ಸಿ-ಯು.ಕಿ. ಗ್ರಂಥದಲ್ಲಿ ಬರೆದಿಟ್ಟನು. ಇವನ್ನು ನಳಂದಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಕ ವಿದ್ಯಾರ್ಥಿಯಾಗಿದ್ದುಕೊಂಡು ಅ ಕಾಲದ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ ಮುಂತಾದ ಅಂಶಗಳ ಬಗ್ಗೆ ವಿಪುಲ ಮಾಹಿತಿಯನ್ನುಸಂಗ್ರಹಿಸಿರುವನು. ಅಂದು ವಿಶ್ವದಲ್ಲೆ ಹೆಸರಾಂತ ವಿದ್ಯಾ ಕೇಂದ್ರವಾಗಿದ್ದ ನಳಂದ ವಿಶ್ವವಿದ್ಯಾನಿಲಯದ ಬಗ್ಗೆ ವಿವರಗಳನ್ನು ತಿಳಿಯಲು ಹ್ಯೂಯನ್‌ತ್ಸಾಂಗ್‌ನ ಬರವಣಿಗೆ ಮುಖ್ಯ ಆಧಾರ. ಹರ್ಷನ ಸಾಮ್ರಾಜ್ಯದ ಎಲ್ಲೆಯನ್ನು ಗುರುತಿಸುವಲ್ಲೂ ಇವನ ಬರವಣಿಗೆಗಳು ಉಪಯುಕ್ತ. ಇವನು ಚಾಲುಕ್ಯ ದೊರೆ ಎರಡನೇ ಪುಲಿಕೇಶಿ ಹಾಗೂ ಕರ್ನಾಟಕದ ಜನರ ಧೈರ್ಯ, ಸಾಹಸಗಳನ್ನು ಹೊಗಳಿ ಬರೆದಿದ್ದಾನೆ. ಇವನು ಕ್ರಿ.ಶ.644ರಲ್ಲಿ ದಕ್ಷಿಣ ಭಾರತದವಿವಿಧ ಭಾಗಗಳಿಗೆ ಭೇಟಿ ನೀಡಿದ್ದನು.

ಅ ಸಂಭಂಧ ಹ್ಯೂಯನ್‌ತ್ಸಾಂಗ್‌ನ ಸಿ.ಯು.ಕೆ ಗ್ರಂಥವು ಬೇರಾವ ಅಧಾರಗಳಿಂದಲೂ ನಮಗೆ ತಿಳಿಯದ ಅಂದಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳ ಮೇಲೆ ಇದು ವಿಶೇಷವಾದ ಬೇಳಕನ್ನು ಚೆಲ್ಲುತ್ತದೆ.

## 56.2.3 ಶಾಸನಗಳು

ಮೇಲ್ಕಾಣಿಸಿದ ಅಧಾರಗಳ ಜೊತೆಗೆ ಆ ಕಾಲದ ಅನೇಕ ಶಾಸನಗಳೂ ವರ್ಧನರ ಇತಿಹಾಸದ ರಚನೆಗೆ ಅಮೂಲ್ಯ ಆಧಾರಗಳಾಗಿವೆ. ಹರ್ಷವರ್ಧನನ ಆಳ್ವಿಕೆಗೆ ಸಂಬಂಧಿಸಿದಂತೆ ಕೆಲವೇ ಶಾಸನಗಳು ಲಭ್ಯವಾಗಿವೆ. ಬನ್ಸ್‌ಖೇರ ಹಾಗೂ ಮದುಬನಗಳಲ್ಲಿ ದೊರೆತ ತಾಮ್ರ ಶಾಸನಗಳು ಮತ್ತು ಸೋನೆಪಟ್ಟದ ತಾಮ್ರ ಹಾಗೂ ಶಾಸನ, ನಳಂದದ ಜೇಡಿ ಮಣ್ಣಿನ ಮುದ್ರಿಕೆಗಳಲ್ಲಿರುವ ಶಾಸನಗಳು ಹಾಗೂ ಮೌಖರಿ, ವಲ್ಲಭೀ ಮುಂತಾದ ಇತರ ರಾಜ ಮನೆತನಗಳ ಅರಸರ ಶಾಸನಗಳು ಸಹ ಈ ಕಾಲದ ಚರಿತ್ರೆಗೆ ಪ್ರಮುಖ ಆಧಾರಗಳಾಗಿವೆ. ಇವುಗಳಲ್ಲದೆ ದಂಡಿ ಮಹಾಕವಿಯ ದಶಕುಮಾರಚರಿತೆ, ಹರ್ಷನೇ ಕರ್ತೃವಾದ **ರತ್ನಾವಳೀ, ಪ್ರಿಯದರ್ಶಿಕಾ** ಮತ್ತು **ನಾಗಾನಂದ ನಾಟಕಗಳು,** ಕಾಮಂದಕನ **ನೀತಿಶಾಸ್ತ್ರ,** ಕಾತ್ಯಾಯನ ಮತ್ತು ದೇವಲರ ಸ್ಮೃತಿಗಳು- ಇವೇ ಮುಂತಾದವು ಇನ್ನಿತರ ಮೂಲ ಆಧಾರಗಳಾಗಿವೆ. ಇವುಗಳು ಹರ್ಷವರ್ಧನನ ಆಳ್ವಿಕೆಗೆ ಸಂಬಂಧಿಸಿದಂತೆ ಮಹತ್ವವಾದ ಮಾಹಿತಿಗಳನ್ನು ನೀಡುತ್ತದೆ.

## 56.3 ಆರಂಭದ ದೊರೆಗಳು

ಗುಪ್ತ ಸಾಮ್ರಾಜ್ಯದ ಅವನತಿಯ ನಂತರ ಉತ್ತರ ಭಾರತದಲ್ಲಿ ಅಸ್ತಿತ್ವಕ್ಕೆ ಬಂದವರಲ್ಲಿ ಥಾನೇಶ್ವರದ ವರ್ಧನರು, ಕನೋಜಿನ ಮೌಖರಿಯರು ಮತ್ತು ಬಂಗಾಳದ ಗೌಡರ ರಾಜ್ಯಗಳು ಮುಖ್ಯವಾದವು. ಇವುಗಳಲ್ಲಿ ಥಾನೇಶ್ವರದ ವರ್ಧನ ವಂಶವು ಅತ್ಯಂತ ಪ್ರಬಲವಾದುದು. ಥಾನೇಶ್ವರದ ವರ್ಧನ ವಂಶದ ಮೂಲ ಪುರುಷ **ಪುಷ್ಯಭೂತಿಯು** ಕ್ರಿ.ಶ. ಆರನೆಯ ಶತಮಾನದಲ್ಲಿ ಆಸ್ತಿಭಾರ ಹಾಕಿದನೆಂದು ಬಾಣನ ಹರ್ಷಚರಿತೆಯಿಂದ ತಿಳಿದು ಬರುತ್ತದೆ. ಆದರೆ ಬಾಣನು ಪುಷ್ಯಭೂತಿಯ ನಂತರ ಆಳಿದ ರಾಜರುಗಳ ಬಗೆಗೆ ಏನನ್ನು ಹೇಳುವುದಿಲ್ಲ. ಬದಲಾಗಿ ಪುಷ್ಯಭೂತಿಯ ನಂತರ ನೇರವಾಗಿ ಪ್ರಭಾಕರ ವರ್ಧನನಿಂದ ಥಾನೇಶ್ವರ ಇತಿಹಾಸವನ್ನು ಆರಂಭಿಸುತ್ತಾನೆ. ಅದರೆ ಆ ಕಾಲದ ರಾಜಮುದ್ರೆಗಳು ಮತ್ತು ಶಾಸನಗಳು ನರವರ್ಧನ, ರಾಜ್ಯವರ್ಧನ, ಆದಿತ್ಯವರ್ಧನ ಹಾಗೂ ಪ್ರಭಾಕರ ವರ್ಧನರ ಆಳ್ವಕೆಯ ಬಗೆಗೆ ಬೆಳಕು ಚಲ್ಲುತ್ತವೆ. ಹರ್ಷವರ್ಧನನ ಕೃತಿಗಳು ಮೆಲ್ಕಂಡ ನಾಲ್ಕು ರಾಜರುಗಳಾದ ನರವರ್ಧನ ರಾಜ್ಯವರ್ಧನ, ಆಧಿತ್ಯವರ್ಧನ ಹಾಗೂ ಪ್ರಭಾಕರ ವರ್ಧನರ ಅಳ್ವಿಕೆಯನ್ನು ತಿಳಿಸುತ್ತವೆ. ಈ ಮೂವರು ರಾಜರುಗಳು ಸ್ವತಂತ್ರವಾಗಿ ಆಳ್ವಿಕೆ ನೆಡೆಸಿರಬಹುದೆಂದು ಕಂಡು ಬರುತ್ತದೆ.

ಆದಿತ್ಯವರ್ಧನನ ತರುವಾಯ ಅವನ ಮಗ ಪ್ರಭಾಕರವರ್ಧನ ರಾಜನಾದನು. ಪ್ರಭಾಕರವರ್ಧನ 'ಮಹಾರಾಜಧಿರಾಜ' ಎಂಬ ಬಿರುದುನ್ನು ಹೊಂದಿದ್ದನು. ಪ್ರಭಾಕರವರ್ಧನ ರಾಜ್ಯವನ್ನು ವಿಸ್ತರಿಸಿ 'ಪ್ರತಾಪಶೀಲ' ಎಂದು ಪ್ರಸಿದ್ಧನಾದ. ಆ ವೇಳೆಗೆ ಪಂಜಾಬ್ ಪ್ರದೇಶದ ಮೇಲೆ ಧಾಳಿ ಮಾಡಿದ ಹೂಣರನ್ನು ಪ್ರಭಾಕರವರ್ಧನ ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಜಿಂಕೆಗಳ ಹಿಂಡಿನೋಪಾದಿಯಲ್ಲಿದ್ದ ಹೂಣರಿಗೆ ಪ್ರಭಾಕರವರ್ಧನ ಸಿಂಹಸ್ವರೂಪನಾಗಿದ್ದನೆಂದೂ , ಅಲ್ಲದೆ ಅವನು ಗುಜರಾತ್, ಗಾಂಧಾರ ಮತ್ತು ಮಾಳವದ ರಾಜರಿಗೆ ಭಯಂಕರ ಸ್ವರೂಪನಾಗಿದ್ದನೆಂದೂ ಬಾಣ ವರ್ಣಿಸಿರುವನು. ಪರಾಕ್ರಮದಿಂದ ರಾಜ್ಯವನ್ನು ವಿಸ್ತರಿಸಿ ತನ್ನ ಪ್ರಭಾವನ್ನು ಸ್ಥಾಪಿಸಿದ ಪ್ರಭಾಕರವರ್ಧನನು ಸಾಮ್ರಾಟನೆಂದು ಘೋಷಿಸಿಕೊಂಡು'ಮಹಾರಾಜಧಿರಾಜ' ಮತ್ತು 'ಪರಮಭಟ್ಟಾರಕ' ಎಂಬ ಬಿರುದುಗಳನ್ನು ಧರಿಸಿದುದಾಗಿ ತಿಳಿದು ಬರುತ್ತದೆ. ಯಶೋಮತಿ ಪ್ರಭಾಕರ ವರ್ಧನನ ರಾಣಿಯಾಗಿದ್ದಳು. ಇವರಿಗೆ ರಾಜ್ಯವರ್ಧನ, ಹರ್ಷವರ್ಧನ ಎಂಬ ಪುತ್ರರೂ ಮತ್ತು ರಾಜ್ಯಶ್ರೀ ಎಂಬ ಪುತ್ರಿಯೂ ಇದ್ದರು. ರಾಜಕುಮಾರರಿಗೆ ವೀರೋಚಿತ ಶಿಕ್ಷಣ ಕೊಡಲಾಯಿತು. ರಾಜಶ್ರೀ ಆ ಕಾಲದ ಪದ್ಧತಿಗನುಗುಣವಾಗಿ ಸಂಗೀತ ಮತ್ತು ನರ್ತನದಲ್ಲಿ ಶಿಕ್ಷಣ ಪಡೆದಳು. ಪ್ರಭಾಕರ ವರ್ಧನ ತನ್ನ ಇಳಿ ವಯಸ್ಸಿನಲ್ಲಿ ರಾಜ್ಯದ ಶ್ರೇಯೋಭಿವೃದ್ಧಿ ನಿರಾತಂಕವಾಗಿ ಮುಂದುವರಿಯಲು ಮೌಖರಿ ಸಂತತಿಯೊಡನೆ ರಕ್ತಸಂಬಂಧ ಬೆಳೆಸಲು ಯೋಚಿಸಿದನು. ಪ್ರಾಯಶಃ ಹೂಣರ ಧಾಳಿಗಳನ್ನು ಯಶಸ್ವಿಯಾಗಿ ತಡೆಗಟ್ಟಲು ಈ ಸಂಬಂಧ ಸಹಕಾರಿಯಾಗವುದೇಂದು ಅವನ ಬಗೆದನೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.ನಂತರ ಪ್ರಾಪ್ತವಯಸ್ಕಳೂ, ರೂಪ, ಗುಣ, ವಿದ್ಯಾ ಸಂಪನ್ನಳೂ ಆದ ತನ್ನ ಕುಮಾರಿಯನ್ನು ಮೌಖರಿ ರಾಜಕುಮಾರ ಗೃಹವರ್ಮನಿಗೆ ಕೊಟ್ಟು, ವಿಜೃಂಭಣೆಯಿಂದ ವಿವಾಹ ಮಾಡಿಕೊಟ್ಟು, ಕ್ರಿ.ಶ.605ರಲ್ಲಿ ಅವನು ಮರಣಹೊಂದಿದನು. ಅದರೆ ಈ ವಿವಾಹ ಸಂಬಂಧವನ್ನು ವಿರೋಧಿಸುತ್ತಿದ್ದ ಮಾಳವದ ದೇವಗುಪ್ತನು ಪ್ರಭಾಕರ ವರ್ಧನನ ಸಾವಿನ ನಂತರ ಕನ್ಯಕುಬ್ಜದ ಮೇಲೆ ಧಾಳಿ ಮಾಡಿ ಗೃಹವರ್ಮನನ್ನು ಕೊಂದು ರಾಜಶ್ರೀಯನ್ನು ಬಂಧಿಸಿ ಸೆರೆಯಲ್ಲಿಟ್ಟನು. ಆಗ ರಾಜ್ಯವರ್ಧನನು ಹಲವಾರು ದಂಡ ಯಾತ್ರೆ ಕೈಕೊಂಡು ಮಾಳವದ ದೇವಗುಪ್ತನನ್ನು ಸೋಲಿಸಿದನು. ಆದರೆ ಶಶಾಂಕನು ಶರಣಾದಂತೆ ನಟಿಸಿ ರಾಜ್ಯವರ್ಧನನನ್ನು ಮೋಸದಿಂದ ಕೊಂದನು. ಇಂತಹ ಸಮಯದಲ್ಲಿ ಪ್ರಭಾಕರವರ್ಧನನ ಕಿರಿಯ ಮಗನಾದ ಹರ್ಷವರ್ಧನಿಗೆ 16ವರ್ಷಗಳಾಗಿದ್ದು ಸಾಮ್ರಾಜ್ಯದ ಹಿತೈಷಿಗಳ ಒತ್ತಾಯದ ಮೇರೆಗೆ ಥಾಣೇಶ್ವರದ ಅರಸನಾದನು.

## 56.4 ಹರ್ಷವರ್ಧನ ಮತ್ತು ಅವನ ಕಾಲ(ಕ್ರಿ.ಶ.606-648)

ಕ್ರಿ.ಶ.606ರಲ್ಲಿ ಸಿಂಹಾಸನಕ್ಕೆ ಬಂದ ಹರ್ಷವರ್ಧನನ್ನು ವರ್ಧನ ಸಾಮ್ರಾಟರಲ್ಲೇ ಅತ್ಯಂತ ಪ್ರಸಿದ್ದ ದೊರೆ. ಇವನು ಸಮರ್ಥ ಆಡಳಿತಗಾರನಾಗಿ, ಧರ್ಮ, ಕಲೆ, ಸಾಹಿತ್ಯ ಪೋಷಕನಾಗಿ ಇತಿಹಾಸದಲ್ಲಿ ಗುರುತಿಸಲ್ಪಟ್ಟಿದ್ದಾನೆ.

ಹರ್ಷನ ಆಳ್ವಿಕೆಯ ಮೊದಲ ದಿನಗಳು ಅತ್ಯಂತ ಕಷ್ಟಕರವಾದ ದಿನಗಳಾಗಿದ್ದವು. ಹರ್ಷನು ಥಾನೇಶ್ವರದ ಸಿಂಹಾಸನಾಧಿಪತಿಯಾಗಿದ್ದರೂ, ಸಹೋದರನ ದುರ್ಮರಣ ಹಾಗೂ ಸಹೋದರಿ ರಾಜಶ್ರೀಗೆ ಒದಗಿದ ಪರಿಸ್ಥಿತಿಯಿಂದ ಅಸಂತುಷ್ಟನಾಗಿದ್ದನು. ಅವರ ಈ ದುಸ್ಥಿತಿಗೆ ಕಾರಣರಾದವರ ವಿರುದ್ಧ ಸೇಡು ತೀರಿಸಿಕೊಳ್ಳಬೇಕಾಗಿದ್ದಿತಲ್ಲದೆ, ಶತ್ರುಗಳ ಸೆರೆಯಿಂದ ತಪ್ಪಿಸಿಕೊಂಡು ವಿಂಧ್ಯಾ ಪರ್ವತ ತಪ್ಪಲಿನಲ್ಲಿದ್ದ ತಂಗಿಯನ್ನು ಕರೆತರುವುದು ಅವನ ಮೊದಲ ಕೆಲಸವಾಗಿದ್ದಿತು. ಈ ಕಾರ್ಯದಲ್ಲಿ ಅವನ ಸಚಿವರೂ, ದಂಡನಾಯಕರೂ ಸಹಭಾಗಿಗಳಾದರು. ಹರ್ಷವರ್ಧನನು ಮೊದಲು ಅರಣ್ಯ ಮುಖ್ಯಸ್ಥರಾಗಿದ್ದ ವ್ಯಾಘ್ರಕೇತು, ಭೂಕಂಪ ಮತ್ತು ನಿರ್ಘಾತ ಹಾಗೂ ದಿವಾಕರ ಮಿತ್ರ ಎಂಬ ಭೌದ್ಧ ಸನ್ಯಾಸಿಯ ಸಹಾಯದಿಂದ, ಜೀವನದಲ್ಲಿ ಜಿಗುಪ್ಸೆಗೊಂಡು ಅಗ್ನಿಕುಂಡವನ್ನು ಪ್ರವೇಶಿಸಲಿದ್ದ ರಾಜಶ್ರೀಯನ್ನು ಸಂತೈಸಿ ತನ್ನ ರಾಜ್ಯಕ್ಕೆ ಕರೆತಂದನು. ರಾಜಶ್ರೀಯ ಕೋರಿಕೆಯಂತೆ ಹರ್ಷನು ಥಾನೇಶ್ವರದ ಜೊತೆಗೆ ಮೌಖರಿ ರಾಜ್ಯದ ಆಡಳಿತವನ್ನು ವಹಿಸಿಕೊಂಡನು. ತದನಂತರ ರಾಜಶ್ರೀಯು ಬೌದ್ಧಮತ ಸ್ವೀಕರಿಸಿ ಸನ್ಯಾಸಿನಿ ಆದಳು ಎಂಬುದಾಗಿ ಹರ್ಷವರ್ಧನುಕಾಲಕ್ಕೆ ಸಂಬಂಧಿಸಿದ ಕೃತಿಗಳಿಂದ ತಿಳಿದು ಬರುತ್ತದೆ.

### 56.4.1 ಹರ್ಷವರ್ಧನನ ದಿಗ್ವಿಜಯಗಳು.

ಹರ್ಷವರ್ಧನನ ದಂಡೆಯಾತ್ರೆ ಅಥವಾ ದಿಗ್ವಿಜಯಗಳ ಬಗೆಗೆ ಸಮಗ್ರವಾಗಿ ಅಂದಿನ ಸಾಹಿತ್ಯಕೃತಿಗಳಲ್ಲಿಅಥವಾ ಶಾಸನಗಳಲ್ಲಿಯಾಗಲಿ ತಿಳಿದು ಬಾರದೆ ಇದ್ದರೂ,ಅವನು ಸಮಕಾಲೀನ ಕೆಲವು ದೊರೆಗಳೊಂದಿಗೆ ಹೋರಾಡಿ ಯಶಸ್ವಿಗಳಿಸಿದುದು ಅವನನ್ನು ಉತ್ತರ ಭಾರತದ ಒಬ್ಬ ಅತಿ ಪ್ರಬಲ ದೊರೆನ್ನಾಗಿ ಮಾಡಿದವು ಎಂಬುದರಲ್ಲಿ ಸಂಶಯವಿಲ್ಲ. ನಾವು ಈಗಾಗಲೇ ತಿಳಿದಿರುವಂತೆ ಹರ್ಷವರ್ಧನನು ಅಧಿಕಾರಕ್ಕೆ ಬಂದೊಡನೆಯೇ ತನ್ನ ಸಹೋದರ ರಾಜ್ಯವರ್ಧನ ಮತ್ತು ತಂಗಿ ರಾಜಶ್ರೀಯ ಪತಿ ಗೃಹವರ್ಮನ ಸಾವಿಗೆ ಕಾರಣನಾದ ಬಂಗಾಳದ ಗೌಡ ದೊರೆ ಶಶಾಂಕನನ್ನು ಶಿಕ್ಷಿಸುವುದರ ಮೂಲಕ ತನ್ನ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಯುದ್ಧ ಸಿದ್ದತೆ ನಡೆಸುತ್ತಿದ್ದನೆಂಬುದಾಗಿ ಬಾಣಭಟ್ಟನ ವರ್ಣನೆಯಿಂದ ತಿಳಿದುಬರುತ್ತದೆ. ಹ್ಯೂಯೆನ್‌ತ್ಸಾಂಗ್‌ನ ಹೇಳಿಕೆಯೂ ಇದನ್ನು ಪುಷ್ಟೀಕರಿಸುತ್ತದೆ. ಹರ್ಷವರ್ಧನನ ಸೈನಿಕ ಚಟುವಟಿಕೆಗಳನ್ನು ನಾಲ್ಕು ಪ್ರಮುಖ ಹಂತಗಳಲ್ಲಿ ಗುರುತಿಸಬಹುದು. ಅವುಗಳೆಂದರೆ -ವಲ್ಲಭಿ ಮತ್ತು ಗೂರ್ಜರ ದೊರೆಗಳು, ಚಾಲುಕ್ಯ ಅರಸ ಇಮ್ಮಡಿಪುಲಕೇಶಿ, ಸಿಂಧೂ ಹಾಗೂ ಮಗಧ, ಗೌಡ, ಓಡ್ರ, ಮತ್ತು ಕೊಂಗೋದ ದೇಶಗಳೊಂದಿನ ಹೋರಾಟವೆಂದು ಗುರುತಿಸಬಹುದು.

ಕ್ರಿ.ಶ.606ರಲ್ಲಿ ಅಧಿಕಾರಕ್ಕೆ ಬಂದ ಹರ್ಷವರ್ಧನ ಮೊದಲು ತನ್ನ ಸಹೋದರಿಯನ್ನು ರಕ್ಷಿಸಲು ಮುಂದಾದನು. ಅವನು ತನ್ನ ಸಹೋದರಿಯ ಸಂಕಷ್ಟಕ್ಕೆ ಕಾರಣನಾದ ಬಂಗಾಳದ ದೊರೆ ಶಶಾಂಕನ ಶತ್ರುವಾಗಿದ್ದ, ಕಾಮರೂಪದ ದೊರೆ ಭಾಸ್ಕರವರ್ಮನೊಂದಿಗೆ ಅವನ ಇಚ್ಛೆಯಂತೆ ಸ್ನೇಹ ಬೆಳೆಸಿ ಅವನೊಂಧಿಗೆ ಸೈನಿಕ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದ ಹರ್ಷವರ್ಧನನಿಗೆ ಶಶಾಂಕನ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುವುದರ ಜೊತೆಗೆ, ರಾಜ್ಯದ ಸಮಗ್ರತೆಯನ್ನು ರಕ್ಷಿಸಿ, ಗಡಿಗಳನ್ನು ವಿಸ್ತರಿಸಲು ಸಾಧ್ಯವಾಯಿತು. ಭಾಸ್ಕರ ವರ್ಮನ ಸೈನಿಕ ಸಹಾಯದಿಂದ ಹರ್ಷವರ್ಧನನು, ಶಶಾಂಕನ ರಾಜಕೀಯ ಬಂಧನದಿಂದ ತಪ್ಪಿಸಿಕೊಂಡು ತನ್ನ ಪತಿಯ ಮಿತ್ರನಾಗಿದ್ದ ದಿವಾಕರ ಮಿತ್ರ ಎಂಬ ಬೌದ್ಧ ಸನ್ಯಾಸಿ ಆಶ್ರಮ ಸೇರಿದ್ದ ಸಹೋದರಿ ರಾಜ್ಯಶ್ರೀಯನ್ನು ಸಂತೈಸಿ, ಅರಮನೆಗೆ ಕರೆತಂದನು. ನಂತರ ಅವಳು ಬೌದ್ಧ ಬಿಕ್ಷುಣಿಯಾದಳೆಂದು ತಿಳಿದು ಬರುತ್ತದೆ.[2] ಭಾಸ್ಕರವರ್ಮನ ಸೈನಿಕ ಸಹಾಯದಿಂದ ಹರ್ಷವರ್ಧನ ಮೌಖರಿ ರಾಜ್ಯದ ವಿರುದ್ಧ ದಂಡೆತ್ತಿ ಹೋಗಿ, ಆ ರಾಜ್ಯವನ್ನು ಗೆದ್ದು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿದನು. ಈ ಗೆಲುವಿನಿಂದ ಉತ್ತರ ಭಾರತದ ರಾಜಕೀಯದಲ್ಲಿ ಹರ್ಷವರ್ಧನನ ಪ್ರಾಬಲ್ಯತೆ ಹೆಚ್ಚಾಯಿತು.

ಹರ್ಷವರ್ಧನ ಒಂದು ಸಣ್ಣ ರಾಜ್ಯವಾದ ಥಾನೇಶ್ವರದ ಅಧಿಪತಿಯಾಗಿ ಅಧಿಕಾರಕ್ಕೆ ಬಂದ ನಂತರ ತನ್ನ ಶಕ್ತಿ ಮತ್ತು ಸಾಮರ್ಥ್ಯಗಳಿಂದ ಮಹಾದಿಗ್ವಿಜಯಿಯಾಗಿ ಯಶಸ್ವಿ ದಂಡನಾಯಕನಾಗಿ ಮತ್ತು ಸಾಮ್ರಾಜ್ಯ ನಿರ್ಮಾಪಕನಾಗಿ ಉತ್ತರ ಭಾರತದ ಬಹುಭಾಗಗಳನ್ನು ಗೆದ್ದು **ಉತ್ತರಪಥೇಶ್ವರ**ನೆಂಬ ಖ್ಯಾತಿಗಳಿಸಿದನು. ಹ್ಯೂಯೆನ್‌ತ್ಸಾಂಗ್‌ನು ಹರ್ಷನ ದಿಗ್ವಿಜಯಗಳ ಬಗೆಗೆ ಹೇಳಿದರೂ ಅವು ಸ್ಪಷ್ಟತೆಯಿಂದ ಕೂಡಿರುವುದಿಲ್ಲ ಎಂಬುದು ಅನೇಕ ಇತಿಹಾಸಜ್ಞರ ಅಭಿಪ್ರಾಯವಾಗಿದೆ. ಹರ್ಷನು ತನ್ನ ಆಳ್ವಿಕೆಯ ಮೊದಲ

ಆರು ವರ್ಷಗಳ ಉದ್ದಕ್ಕೂ ಯುದ್ಧ ಮಾಡಿ ಉತ್ತರಭಾರತವನ್ನೆಲ್ಲ ಗೆದ್ದನೆಂದೂ , ಆನಂತರ ತನ್ನ ಜೀವಿತದ ಮೂವತ್ತು ವರ್ಷಗಳ ಕಾಲ ನಿರ್ವಿಘ್ನವಾಗಿ ಶಾಂತಿಯಿಂದ ಆಳಿದನೆಂದೂ ಹ್ಯೂಯೆನ್‌ತ್ಸಾಂಗ್ ವರ್ಣಿಸಿರುವನು. ಪ್ರವಾಸಿಗನ ಈ ವರ್ಣನೆ ಕೆಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಅವನ ಪ್ರಕಾರ ಹರ್ಷ ಕ್ರಿ.ಶ. 612ರ ವೇಳೆಗೆ ತನ್ನ ದಿಗ್ವಿಜಯಗಳನ್ನು ಅಂತ್ಯಗೊಳಿಸಿ ಉತ್ತರಭಾರತದ ಮೇಲೆ ಅಧಿಕಾರ ಸ್ಥಾಪಿಸಿದನೆಂಬುದು, ಆದರೆ ಆರ್ಯ ಮಂಜುಶ್ರೀ ಮೂಲಕಲ್ಪದ ಪ್ರಕಾರ ಹರ್ಷನ ಕಡು ವಿರೋಧಿ ಬಂಗಾಳದ ದೊರೆ ಶಶಾಂಕ ಕ್ರಿ.ಶ.619ವರೆಗೂ ನಿರಾತಂಕವಾಗಿ ಆಳ್ವಿಕೆ ನಡೆಸುತ್ತಿದ್ದು ಕ್ರಿ.ಶ.637ರಲ್ಲಿ ಶಶಾಂಕನು ಮರಣ ಹೊಂದಿದನೆಂದು ತಿಳಿಸುತ್ತದೆ.ತರುವಾಯವೇ ಅವನ ರಾಜ್ಯವಾದ ಮಗಧದ ಮೇಲೆ ಹರ್ಷವರ್ಧನನು ತನ್ನಪ್ರಭುತ್ವವನ್ನು ಏರ್ಪಡಿಸಿದ್ದನೆಂದು ತಿಳಿದು ಬರುತ್ತದೆ. ಶಶಾಂಕನನ್ನು ಹೊರತುಪಡಿಸಿ ಉಳಿದಂತೆ ಹರ್ಷನು ತನ್ನ ರಾಜ್ಯದ ಸುತ್ತಮುತ್ತಲ ರಾಜರನ್ನು ಸೋಲಿಸಿ ಕ್ರಿ.ಶ.612ರಲ್ಲಿ 'ಶಿಲಾಧಿತ್ಯ' ಮತ್ತು 'ಪರಮಭಟ್ಟಾರಕ'ಎಂಬ ಬಿರುದುಗಳನ್ನು ಸ್ವಿಕರಿಸಿದನು. ಹರ್ಷವರ್ಧನ ನಂತರ ವಲ್ಲಭಿಯ ರಾಜ್ಯದ ದೊರೆಯಾದ ಎರಡನೇ ಧ್ರುವಸೇನನನ್ನು ಸೋಲಿಸಿ ಅಪಾರ ಐಶ್ವರ್ಯವನ್ನು ಅವನ ರಾಜ್ಯದ ಕೆಲವು ಭಾಗಗಳನ್ನು ವಶಪಡಿಸಿಕೊಂಡನು. ಧ್ರುವಸೇನನು ಮುಂದೆ ಹರ್ಷನ ಆಶ್ರಿತ ರಾಜನಾಗಿ ತನ್ನ ರಾಜ್ಯವನ್ನು ಹಿಂದಕ್ಕೆ ಪಡೆದನು. ಅನಂತರ ಹರ್ಷ ತನ್ನ ಮಗಳನ್ನು ಧ್ರುವಸೇನನಿಗೆ ವಿವಾಹಮಾಡಿಕೊಟ್ಟನು. ಈ ಸಂಬಂಧದಿಂದ ಹರ್ಷನ ವರ್ಚಸ್ಸು ಬೆಳೆಯಲು ಸಾಧ್ಯವಾಯಿತು. ಹರ್ಷನ ಸಾಮ್ರಾಜ್ಯ ಕ್ರಿ.ಶ.625ರ ವೇಳೆಗೆ ಪಂಜಾಬಿನ ಪೂರ್ವಭಾಗ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾದ ಕೆಲವು ಪ್ರದೇಶಗಳವರೆಗೂ ವಿಸ್ತರಿಸಿದ್ದಿತು.

ಉತ್ತರ ಭಾರತವನ್ನೆಲ್ಲಾ ತನ್ನ ಆಳ್ವಿಕೆಗೆ ಒಳಪಡಿಸಿಕೊಂಡ ಹರ್ಷವರ್ಧನ, ದಕ್ಷಿಣದತ್ತಲೂ ವಿಸ್ತರಿಸಲು ಯೋಜಿಸಿ ತನ್ನ ಸೈನ್ಯದ ಜೊತೆಗೆ ಆಶ್ರಿತರಾಜರ ಹಾಗೂ ಮಿತ್ರರಾಜ್ಯದ ಸೈನ್ಯವನ್ನು ಸೇರಿಸಿಕೊಂಡು ಶ್ರೇಷ್ಠ ದಳಪತಿಗಳೊಡಗೂಡಿ ವಿಂಧ್ಯಾಭಿಮುಖವಾಗಿ ವಿಜಯಯಾತ್ರೆ ಕೈಗೊಂಡನು. ಈ ಸಂಗತಿ ತಿಳಿದ ದಖನ್ನಿನ ಚಾಲುಕ್ಯವಂಶದ ಎರಡನೇ ಪುಲಕೇಶಿ ಸೈನ್ಯ ಸಮೇತವಾಗಿ ಉತ್ತರಾಭಿಮುಖವಾಗಿ ನಡೆದು ನರ್ಮದಾ ನದಿಯ ತೀರದಲ್ಲಿ ಕ್ರಿ.ಶ.634ರಲ್ಲಿ ಹರ್ಷವರ್ಧನನ್ನು ಎದುರಿಸಿದನು. ಹರ್ಷನು ಈ ಯುದ್ಧದಲ್ಲಿ ಪರಾಜಿತನಾಗಿ ರಾಜ್ಯಧಾನಿಗೆ ಹಿಂದುರಿಗಿದನು. ಹ್ಯೂಯನ್‌ತ್ಸಾಂಗ್ ಈ ಘಟನೆಗಳನ್ನು ವಿವರಿಸಿರುವನು. ಇಮ್ಮಡಿ ಪುಲಕೇಶಿಯ ಐಹೋಳೆ ಶಾಸನವೂ ಮತ್ತು ಭಾದಾಮಿ ಚಾಳುಕ್ಯರ ಇತರ ಶಾಸನಗಳು ಈ ಘಟನೆಯನ್ನು ಚಿತ್ರಿಸಿವೆ. ಸಾಮ್ರಾಟ ಹರ್ಷ ಪುಲಕೇಶಿಯಿಂದ ಪರಾಜಿತನಾದ ಮೇಲೆ ಯುದ್ಧಾಶಕ್ತಿಯನ್ನು ತ್ಯಜಿಸಿ ಶಾಂತಿಯಿಂದ ರಾಜ್ಯಭಾರ ಮಾಡತೊಡಗಿದನು. ಧರ್ಮ ಮತ್ತು ಸಂಸ್ಕೃತಿಯ ವಿಕಾಸಕ್ಕೆ ತನ್ನ ಗಮನವನ್ನು ಕೇಂದ್ರಿಕರಿಸಿದನು.

ಉತ್ತರ ಭಾರತದಲ್ಲಿ ಸಾಮ್ರಾಜವನ್ನು ಸ್ಥಾಪಿಸಿ ವೈಭವದಿಂದ ಆಳಿದ ಹಿಂದೂ ಸಾಮ್ರಾಟರಲ್ಲಿ ಹರ್ಷಚಕ್ರವರ್ತಿಯೇ ಕೊನೇಯವನೆಂದು ಹಲವೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ಹರ್ಷನ ಸಾಮ್ರಾಜ್ಯ ಮೌರ್ಯರ ಅಥಾವ ಗುಪ್ತ ಸಂತತಿಯ ಸಾಮ್ರಾಜ್ಯದಷ್ಟು ವಿಸ್ತರವಾಗಿರಲಿಲ್ಲ. ಆದಾಗ್ಯೂ ಅವನ ಆಳ್ವಿಕೆ ಪ್ರಾಚೀನ ಭಾರತದ ಸಾಂಸ್ಕೃತಿಕ ಇತಿಹಾಸ ಪರಂಪರೆಯ ಉಜ್ವಲ ಅಧ್ಯಾಯಗಳಲ್ಲೊಂದು . ಅವನು ಸ್ಥಾಪಿಸಿದ ವ್ಯವಸ್ಥಿತವಾದ ಆಡಳಿತ, ತನ್ನ ಆಸ್ಥಾನಕ್ಕೆ ಭೇಟಿನೀಡಿದ ಹ್ಯೂಯನ್‌ತ್ಸಾಂಗ್‌ನಿಗೆ ನೀಡಿದ ಭವ್ಯಸ್ವಾಗತ, ಉದಾರ ಮತೀಯ ಧಾರ್ಮಿಕ ನೀತಿ, ಸಾಹಿತ್ಯ ಮತ್ತು ವಿದ್ಯಾಭ್ಯಾಸಕ್ಕೆ ಅವನು ನೀಡಿದ ಅದ್ವಿತೀಯ ಪ್ರೋತ್ಸಾಹ ಮತ್ತು ಸಾಂಸ್ಕೃತಿಕ ವೈಭವಗಳಿಂದ ಕೂಡಿದ್ದ ಹರ್ಷನ ಆಳ್ವಿಕೆಯನ್ನು ಪ್ರಾಚೀನ ಭಾರತದ ಚರಿತ್ರೆಯಲ್ಲಿ ಚಿರಸ್ಮರಣೀಯ ಅಧ್ಯಾಯಗಳಲ್ಲೊಂದೆಂದು ಪರಿಗಣಿಸಲಾಗಿದೆ.

ಎರಡನೇ ಪುಲಕೇಶಿಯ ವಿರುದ್ಧ ಹರ್ಷನು ಸೋತದನ್ನು ಚಾಲುಕ್ಯರ ಬರವಣಿಗೆಗಳು ಮತ್ತು ಹ್ಯೂಯೆನ್‌ತ್ಸಾಂಗ್‌ನ ಬರವಣಿಗೆಗಳು ಸಷ್ಟಪಡಿಸುತ್ತವೆ. ಹೂಯನ್‌ತ್ಸಾಂಗ್‌ನ ಬರವಣಿಗೆಯಲ್ಲಿರುವಂತೆ "ಅತ್ಯಂತ ಶ್ರೇಷ್ಠ ಅರಸನಾದ ಶಿಲಾಧಿತ್ಯ(ಹರ್ಷ)ನಿಗೆ ಅವನ ಸಾಮ್ರಾಜ್ಯದ ಪೂರ್ವಪಶ್ಚಿಮದ ದೊರೆಗಳ ಹಾಗೂ ದೂರದ ಮತ್ತು ಸಮೀಪದ ರಾಷ್ಟ್ರಗಳು ನಿಷ್ಠರಾಗಿದ್ದರೂ, ಮಹಾರಾಷ್ಟ್ರವೊಂದು ಅವನ ಅಧೀನಕ್ಕೊಳಪಡಲಿಲ್ಲ"ಎಂಬ ಹೇಳಿಕೆ ಹರ್ಷನು ಎರಡನೇ ಪುಲಕೇಶಿಯಿಂದ ಸೋಲಿಸಲ್ಪಟ್ಟನೆಂಬುದು ಸ್ಪಷ್ಟವಾಗಿದೆ. ಕ್ರಿ.ಶ.642ರಲ್ಲಿ ಎರಡನೇ ಪುಲಕೇಶಿ ಮರಣಹೊಂದಿದ ನಂತರ ಹರ್ಷತನ್ನ ಕೊನೆಯ ದಿಗ್ವಿಜಯವನ್ನು ದಕ್ಷಿಣದ ಗಂಜಾಂ ಅನ್ನು ವಶಪಡಿಸಿಕೊಳ್ಳುವ ಮೂಲಕ ಅಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಬಾಣನ ಹರ್ಷಚರಿತೆಯಲ್ಲಿರುವಂತೆ ಹರ್ಷನು ಸಿಂಧ್ ಮತ್ತು ನೇಪಾಳವನ್ನು ಗೆದ್ದನೆಂದು ತಿಳಿದುಬರುತ್ತದೆ. ಹರ್ಷನು ಹೀಗೆ ಯಶಸ್ವಿದಂಡನಾಯಕನಾಗಿ ಚಿಕ್ಕ ನಾಡಿನಂತಿದ್ದ ಥಾನೇಶ್ವರವನ್ನು ಉತ್ತರಭಾರತದ ಪ್ರಮುಖ ಸಾಮ್ರಾಜ್ಯವನ್ನಾಗಿ ವಿಸ್ತರಿಸಿದನು.

ಹರ್ಷವರ್ಧನನು ಪ್ರಾಚೀನ ಭಾರತದ ಕಡೆಯ ಸಾಮ್ರಾಟನಾಗಿ ದಕ್ಷಿಣ ಮತ್ತು ಉತ್ತರ ಭಾರತಗಳಲ್ಲಿ ತನ್ನ ಆಡಳಿತವನ್ನು ಯಶಸ್ವಿಯಾಗಿ ನೆಲೆಗೊಳಿಸಿದಂತೆ ತನ್ನ ನೆರೆಯ ವಿದೇಶಿ ರಾಷ್ಟ್ರವಾದ ಚೀನಾದೊಂದಿಗೆ ಉತ್ತಮ ಸಂಭಂದ ಹೊಂದಿದ್ದನು. ಕ್ರಿ.ಶ.641ರಲ್ಲಿ ಅವನು ಭಾರತದಿಂದ ಚೀನಾದೇಶಕ್ಕೆ ಒಬ್ಬ ರಾಯಭಾರಿಯನ್ನು ಕಳುಹಿಸಿದ್ದನು. ಅದಕ್ಕೆ ಪ್ರತಿಯಾಗಿ ಚೀನಾದೇಶದ ರಾಜನೂ ಕೂಡ ಹರ್ಷನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದ್ದನು. ಈ ರೀತಿಯ ಸಂಭಂಧಗಳ ಮೂಲಕ ತನ್ನ ಸಾಮ್ರಾಜ್ಯದ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದು ಹರ್ಷನ ಉದ್ದೇಶವಾಗಿತ್ತು.

## 56.5. ಹರ್ಷವರ್ಧನ ಆಡಳಿತ ಕ್ರಮಗಳು

ಹರ್ಷನ ಸಾಮ್ರಾಜ್ಯವನ್ನು ಕನೂಜ್, ಮಿಥಿಲ, ಬಿಹಾರ್, ಬಂಗಾಳ ಹಾಗೂ ಪಂಜಾಬ್ ಎಂಬ ಐದು ಭಾಗಗಳಾಗಿ ವಿಂಗಡಿಸಲಾಗಿತ್ತು. ಅವನ ಆಡಳಿತ ಕ್ರಮವನ್ನು ತಿಳಿಯಲು ಹೂಯನ್‌ತ್ಸಾಂಗನ ಬರವಣಿಗೆ ಪ್ರಮುಖ ಆಧಾರವಾಗಿದೆ. ಹರ್ಷವರ್ಧನನು ವಿಸ್ತಾರನಾದ ಸಾಮ್ರಾಜ್ಯವನ್ನು ಸ್ಥಾಪಿಸಿದುದರ ಜೊತೆಗೆ ಸುವ್ಯವಸ್ಥಿತವಾದ ಆಡಳಿತವನ್ನು ತನ್ನ ಜನತೆಗೆ ಒದಗಿಸಿದ್ದನು. ಅವನು ಶ್ರೇಷ್ಠದಂಡನಾಯಕ ಮತ್ತು ಸಾಮ್ರಾಜ್ಯ ನಿರ್ಮಾಪಕನಾಗಿದ್ದುದೇ ಅಲ್ಲದೆ ಉತ್ತಮ ರಾಜನೀತಿ ನಿಪುಣ ಮತ್ತು ಆಡಳಿತಗಾರನಾಗಿದ್ದನು. ತನ್ನ ಆಡಳಿತದ ಬಹುಕಾಲ ಯುದ್ಧ ಮತ್ತು ದಿಗ್ವಿಜಯಗಳಲ್ಲಿ ಮಗ್ನನಾಗಿದ್ದರೂ, ವಿಸ್ತಾರವಾಗಿದ್ದ ತನ್ನ ಸಾಮ್ರಾಜ್ಯಕ್ಕೆ ಅತ್ಯುತ್ತಮ ವಾದ ಆಡಳಿತ ವ್ಯವಸ್ಥೆಯನ್ನು ತಂದರೂ ಅವನು ಸರ್ವಾಧಿಕಾರಿಯಾಗಿರಲಿಲ್ಲ. ವಿಶಾಲ ಸಾಮ್ರಾಜ್ಯದ ಆಡಳಿತ ಯಂತ್ರದಲ್ಲಿ ರಾಜನೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು. ಹರ್ಷನ ಕಾಲದ ಆಡಳಿತದ ಪದ್ಧತಿಯ ಸಂಪೂರ್ಣ ವಿವರಗಳನ್ನು ಹ್ಯೂಯನ್‌ತ್ಸಾಂಗ್ ತನ್ನ ಬರವಣಿಗೆಯಲ್ಲಿ ತಿಳಿಸುತ್ತಾನೆ. ಹೂಯನ್‌ತ್ಸಾಂಗನು ಹರ್ಷನನ್ನು ಹೀಗೆ ವರ್ಣಿಸುತ್ತಾನೆ."ಅವನು ತನ್ನ ಆಡಳಿತದಲ್ಲಿ ನ್ಯಾಯವಂತನಾಗಿದ್ದನು, ಕರ್ತವ್ಯ ನಿರ್ವಹಣೆಯಲ್ಲಿ ಅತ್ಯಂತ ಸೂಕ್ಷ್ಮಮತಿಯಾಗಿದ್ದನು. ಆಡಳಿತ ಮತ್ತು ಆಡಳಿತಾದಿಕಾರಿಗಳನ್ನು ಪರೀಕ್ಷಿಸುವುದಕ್ಕೋಸ್ಕರ ತನ್ನ ರಾಜ್ಯದಲ್ಲೆಲ್ಲಾ ಪ್ರವಾಸ ಮಾಡುತ್ತಿದ್ದನು. ದೀರ್ಘ ಅವಧಿಯವರೆಗೆ ಒಂದೆಡೆ ನಿಲ್ಲದ ಅವನು ಪ್ರವಾಸದ ಸ್ಥಳಗಳಲ್ಲಿ ತನ್ನ ವಸತಿಗೋಸ್ಕರ ತಾತ್ಕಾಲಿಕ ವಸತಿ ಗೃಹಗಳನ್ನು ಕಟ್ಟಿಸಿಕೋಳುತ್ತಿದ್ದನು. ಹೀಗೆ ಸದಾಕಾಲ ಅವಿಶ್ರಾಂತವಾಗಿ ದುಡಿಯುತ್ತಿದ್ದ ಅವನಿಗೆ ಒಂದು ದಿನವು ತೀರಾ ಚಿಕ್ಕದಾಗಿತ್ತು " ಎಂದಿದ್ದಾನೆ. ಈ ಪ್ರವಾಸದ ಉದ್ದೇಶವು ಹೆದ್ದಾರಿಗಳ ದರೋಡೆಗಳನ್ನು ತಡೆಗಟ್ಟುವುದು, ಆಡಳಿತ ಸಮೀಕ್ಷೆ ಮತ್ತು ರಾಜಕೀಯ ಗಡಿಪ್ರದೇಶಗಳ ಚಟುವಟಿಕೆಗಳನ್ನು ಗಮನಿಸುವುದಿಗಿತ್ತು.

ಹರ್ಷನು ತನ್ನ ಆಡಳಿತ ವಿವಿಧ ಇಲಾಖೆಗಳ ಬಗ್ಗೆ ಸ್ವತಃ ಗಮನ ಹರಿಸುತ್ತಿದ್ದನು. ಅಧಿಕಾರಿಗಳು ಜನರ ಕ್ಷೇಮವನ್ನು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೆಂದು ತಿಳಿಯಲು ಸ್ವತಃ ಹರ್ಷನೇ ಅಧಿಕಾರಿಗಳ ಜೊತೆಗೂಡಿ ಪ್ರವಾಸ ಕೈಗೊಳುತ್ತಿದ್ದನು. ಹಾಗೆಯೇ ಸೋಮಾರಿ ಮತ್ತು ಅಪ್ರಮಾಣಿಕ ಅಧಿಕಾರಿಗಳನ್ನು ಪತ್ತೆ ಹಚ್ಚಿ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತಿದನು.

ಉನ್ನತ ಅಧಿಕಾರಿಗಳು ಒಂದೇ ಕಡೆಯಲ್ಲಿ ಖಾಯಂ ಆಗಿ ನೆಲೆನಿಂತರೆ ಅವರು ತಮ್ಮ ಹಿತಾಸಕ್ತಿಗಳನ್ನು ಬೆಳೆಸಿಕೊಂಡು ಪ್ರಜಾಕಲ್ಯಾಣ ನೀತಿಗೆ ಮಾರಕವಾಗುವುದನ್ನು ತಪ್ಪಿಸಲು ಹರ್ಷವರ್ಧನನು ಉನ್ನತ ಅಧಿಕಾರಿಗಳನ್ನು ಕಾಲಕಾಲಕ್ಕೆ ವಿವಿಧ ಕಡೆಗಳಿಗೆ ವರ್ಗಾವಣೆ ಮಾಡುತ್ತಿದ್ದನು. ಈ ನೀತಿಯಿಂದ ಅವನ ಅಧಿಕಾರಿಗಳು ರಾಜನ ನಿಯಂತ್ರಣಕ್ಕೆ ಒಳಪಟ್ಟು ಅವರ ಕರ್ತವ್ಯ ನಿರ್ವಹಣೆಯಲ್ಲಿ ಸದಾ ಜಾಗೃತರಾಗಿ ಸಲಹೆ ಮತ್ತು ಸಹಾಯವನ್ನು ಮಾಡಬೇಕಾಗಿತ್ತು. ಆ ಮೂಲಕ ಪ್ರಜೆಗಳ ಸಮಸ್ಯೆಗಳಿಗೆ ತಕ್ಷಣ ಅಲ್ಲಿಯೇ ಪರಿಹಾರ ಕೊಡುವ ವ್ಯವಸ್ಥೆಯನ್ನು ಹರ್ಷವರ್ಧನನು ಮಾಡಿದ್ದನು.ಒಟ್ಟಿನಲ್ಲಿ ರಾಜ್ಯದ ಆಡಳಿತ ಅತ್ಯಂತ ದಕ್ಷತೆಯಿಂದ ಕೂಡಿದ್ದಿತು.

### 56.5.1 ಮಂತ್ರಿ ಮಂಡಲ

ಹರ್ಷವರ್ಧನನು ತನ್ನ ಆಡಳಿತದಲ್ಲಿ ಸಲಹೆ ಮತ್ತು ಸಹಕಾರಗಳನ್ನು ಪಡೆಯುವುದಕ್ಕಾಗಿ ಮಂತ್ರಿಪರಿಷತ್ತನ್ನು (ಮಂತ್ರಿ ಮಂಡಲ) ಹೊಂದಿದ್ದನು. ಹ್ಯೂಯನ್‌ತ್ಸಾಂಗ್‌ನ ಪ್ರಕಾರ ಕನೂಜಿನ ಗಣ್ಯವ್ಯಕ್ತಿಗಳ ಮತ್ತು ಮಂತ್ರಿಗಳನ್ನೊಳಗೊಂಡ ಸಭೆಯು ಹರ್ಷನನ್ನು ಕನೋಜಿನ ದೊರೆಯಾಗಿ ಆಯ್ಕೆ ಮಾಡಿತ್ತು. ಹರ್ಷನ ಕಾಲದಲ್ಲೂ ಇಂತಹ ಗಣ್ಯರ ಸಭೆಯು ರಾಜನ ಮೇಲೆ ಹಾಗೂ ಸರ್ಕಾರದ ಆಡಳಿತದ ಮೇಲೆ ಗಣನೀಯ ಪ್ರಭಾವ ಹೊಂದಿದ್ದಾಗಿ ತಿಳಿದುಬರುತ್ತದೆ. ನಾಗಾನಂದನಿಂದ ತಿಳಿದುಬರುವಂತೆ ಆಡಳಿತ ವ್ಯವಸ್ಥೆಯಲ್ಲಿ ರಾಜ ಮತ್ತು ಯುವರಾಜನ ನಂತರ ಪ್ರಧಾನಮಂತ್ರಿಯು ಪ್ರಾಧಾನ್ಯತೆ ಗಳಿಸಿದ್ದನು. ಹರ್ಷನ 'ರತ್ನಾವಳಿ'ಯಲ್ಲೂ ಪ್ರಧಾನಮಂತ್ರಿ ಮತ್ತು ಇತರ ಮಂತ್ರಿಗಳ ಬಗೆಗೆ ಪ್ರಸ್ತಾಪವಿದೆ. ಹರ್ಷವರ್ಧನ ತನ್ನ ಮಂತ್ರಿಪರಿಷತ್ತಿನ ಮೇಲೆ ವಿಶ್ವಾಸವಿಟ್ಟು

ಯುದ್ದ ಮತ್ತು ಶಾಂತಿ ಮಾತುಕತೆಗಳ ಸಂದರ್ಭಗಳಲ್ಲಿ ತನ್ನ ಮಂತ್ರಿಗಳ ಸಲಹೆಗಳಿಗೆ ಮನ್ನಣೆ ನೀಡುತ್ತಿದ್ದನು. ಒಟ್ಟಿನಲ್ಲಿ ಹರ್ಷವರ್ಧನನ ಕಾಲದಲ್ಲೂ 'ಮಂತ್ರಿಪರಿಷತ್ತು' ರಾಜನ ಆಡಳಿತದಲ್ಲಿ ನೆರವಾಗುತ್ತಿದ್ದುದು ಸಮಕಾಲೀನ ಸಾಹಿತ್ಯಕೃತಿಗಳಿಂದ ತಿಳಿದುಬರುತ್ತದೆ.

## 56.5.2 ಆಡಳಿತ ವಿಭಾಗಗಳು

ಹರ್ಷವರ್ಧನನು ಆಡಳಿತದ ಅನುಕೂಲಕ್ಕಾಗಿ ತನ್ನ ಸಾಮ್ರಾಜ್ಯವನ್ನು ಹಲವು ಪ್ರಾಂತ್ಯಗಳನ್ನಾಗಿ, ಪ್ರಾಂತ್ಯಗಳನ್ನು ಜಿಲ್ಲೆಗಳನ್ನಾಗಿ ವಿಭಜಿಸಿದ್ದನು. ಪ್ರಾಂತ್ಯಗಳನ್ನು 'ಭುಕ್ತಿ'ಗಳೆಂದು ಕರೆಯಲಾಗುತ್ತಿತ್ತು. ಜಿಲ್ಲೆಗಳನ್ನು 'ವಿಷಯ'ಗಳೆಂದೂ, ವಿಷಯಗಳನ್ನು ಪಥಕ ಅಥವಾ ತಾಲ್ಲೂಕುಗಳಾಗಿ , ತಾಲ್ಲೂಕುಗಳನ್ನು ಗ್ರಾಮಗಳನ್ನಾಗಿ ವಿಭಜಿಸಲಾಗಿತ್ತು. ಸಾಮಾನ್ಯವಾಗಿ ಸಾಮ್ರಾಜ್ಯದ ಕೇಂದ್ರಾಡಳಿತವನ್ನು ರಾಜ ಮತ್ತು ಅವನ ಮಂತ್ರಿ ಪರಿಷತ್ತು ನೋಡಿಕೊಂಡರೆ, ಭುಕ್ತಿಗಳ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸಲು ಪ್ರಾಂತ್ಯಾಧಿಕಾರಿಗಳನ್ನು ನೇಮಿಸಲಾಗಿತ್ತು. ಈ ಎಲ್ಲಾ ಅಧಿಕಾರಿಗಳು ನೇರವಾಗಿ ಸಾಮ್ರಾಟನಿಗೆ ಜವಾಬ್ದಾರರಾಗಿರುತ್ತಿದ್ದರು. ಹರ್ಷವರ್ಧನನ ಕಾಲದಲ್ಲಿ ಅಹಿಚ್ಛತ್ರ ಮತ್ತು ಸ್ರಾವಸ್ತಿ ಎಂಬ ಎರಡು ಪ್ರಾಂತ್ಯಗಳು ಪ್ರಖ್ಯಾತಿ ಹೊಂದಿದ್ದವು.

ಸಾಮ್ರಾಜ್ಯದಲ್ಲಿ ಅನೇಕ ಸಾಮಂತ ರಾಜ್ಯಗಳೂ ಇದ್ದವು. ಸಾಮಂತ ರಾಜರ ಚಟುವಟಿಕೆಗಳನ್ನು ಗಮನಿಸಲು ಹರ್ಷ ವೀಕ್ಷಕ ಅಧಿಕಾರ ವರ್ಗವನ್ನು ನೇಮಿಸಿದ್ದನು. ಹರ್ಷನ ಸಾಮ್ರಾಜ್ಯದಲ್ಲಿ **ಥಾನೇಶ್ವರ, ಕನ್ಯಕುಬ್ಜ, ಅಯೋದ್ಧ, ಕಾಶಿ,** ಮೊದಲಾದ ಪಟ್ಟಣಗಳು ಪ್ರಸಿದ್ಧವಾಗಿದ್ದವು. ನಗರಗಳ ಆಡಳಿತವನ್ನು ಪೌರಸಂಸ್ಥೆಗಳಿಗೆ ವಹಿಸಲಾಗಿತ್ತು. ಗ್ರಾಮಗಳು ಹರ್ಷನ ಆಳ್ವಿಕೆಯ ಕಡೇ ಆಡಳಿತ ವರ್ಗಗಳಾಗಿದ್ದವು. ಗ್ರಾಮಸಂಸ್ಥೆಗಳು ಗ್ರಾಮಾಡಳಿತವನ್ನು ನಡೆಸುತ್ತಿದ್ದವು.ಗ್ರಾಮದ ಮುಖ್ಯಸ್ಥನಿಗೆ ಗ್ರಾಮ ವ್ಯವಹಾರದ ನಿರ್ವಹಣೆಯಲ್ಲಿ ಸಹಾಯಕ ಮಾಡಲು ಸ್ಥಳೀಯ ಅಧಿಕಾರಿಗಳಿದ್ದರು. ಮುಖ್ಯ ಗ್ರಾಮಾಧಿಕಾರಿಯನ್ನು '**ಕ್ಷಪತಲಿಕ**' ಎಂದು ಕರೆಯಲಾಗುತ್ತಿತ್ತು.

ಬಾಣನ 'ಹರ್ಷಚರಿತ' ಹಾಗೂ ಶಾಸನಗಳಲ್ಲಿ ಕಂಡು ಬರುವಂತೆ ಹರ್ಷವರ್ಧನನ ಸಾಮ್ರಾಜ್ಯದಲ್ಲಿ ನುರಿತ ಅಧಕಾರಿಗಳನ್ನು ಹೊಂದಿದ ಆಡಳಿತ ವರ್ಗವು ಇದ್ದಿತು. ಈ ಅಧಿಕಾರಿಗಳು ಸಾಮ್ರಾಜ್ಯದ ಸೈನಿಕ ಮತ್ತು ನಾಗರಿಕ ಎರಡೂ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಆ ಅಧಿಕಾರ ವರ್ಗದಲ್ಲಿನ ಪ್ರಮುಖರೆಂದರೆ **ಮಹಾಸಂಧಿ** (ಯುದ್ಧ ಮತ್ತು ಶಾಂತಿ ವ್ಯವಸ್ಥೆಯ ಮುಖ್ಯಸ್ಥ) ಮಹಾಬಲಾಧಿಕ್ರಿತ (ಮಹಾದಂಡನಾಯಕ), ವಿಗ್ರಹಾದಿಕೃತ(ವಿದೇಶಾಂಗ ಮಂತ್ರಿ), ಸೇನಾಪತಿ(ದಂಡನಾಯಕ) ಬೃಹದಶ್ವವಾರ(ಅಶ್ವಸೇನಾಪತಿ) ದೂತ(ರಾಯಭಾರಿ), ರಾಜಾಸ್ಥಾನೀಯ(ರಾಜ್ಯಪಾಲ),ಉಪಾರಿಕಾ ಮಹಾರಾಜ (ಪ್ರಾಂತೀಯ ರಾಜ್ಯಪಾಲ) ಲೇಖಕ(ಬರಹಗಾರ) ಕರಣಿಕ (ಗುಮಾಸ್ತ) ಸೇವಕ ಇತ್ಯಾದಿ ಶ್ರೇಣೀಕೃತ ಆಡಳಿತವರ್ಗ ಹರ್ಷವರ್ಧನನ ಕಾಲದಲ್ಲಿ ಇದ್ದಂತೆ ಕಂಡು ಬರುತ್ತದೆ. ಈ ಅಧಿಕಾರ ವರ್ಗಕ್ಕೆ ವೇತನ ರೂಪದಲ್ಲಿ ಸಂಬಳ ನೀಡಲಾಗುತ್ತಿತ್ತು. ಇಲ್ಲವೇ ಭೂಮಿಯನ್ನು ದತ್ತಿ ಕೊಡಲಾಗುತ್ತಿತ್ತು. ಒಟ್ಟಿನಲ್ಲಿ ಹರ್ಷನ ಆಡಳಿತ ಕ್ರಮವೂ ಮೌರ್ಯರ ಆಡಳಿತ ಕ್ರಮದಂತೆ ಅಧಿಕಾರಿಗಳನ್ನು ಅವಲಂಬಿಸಿರದೇ ರಾಜನನ್ನೇ ಅವಲಂಬಿಸಿರುತ್ತಿತ್ತು. ರಾಜನು ದಿನದ ಬಹುಕಾಲ ತನ್ನ ರಾಜ್ಯದ ಆಡಳಿತದಲ್ಲಿ ನಿರತವಾಗಿರುತ್ತಿದ್ದನೆಂದು ಸಮಕಾಲೀನ ಸಾಹಿತ್ಯ ಕೃತಿಗಳಿಂದ ತಿಳಿದು ಬರುತ್ತದೆ. ಅಧಿಕಾರಿಗಳು ರಾಜನ ಜೊತೆಯಲ್ಲಿ ಇದ್ದು ರಾಜ್ಯದ ಅಭಿವೃದ್ದಿ ಕಾರ್ಯಗಳಲ್ಲಿ ನೆರವಾಗುತ್ತಿದ್ದರು.

## 56.5.3 ಭೂಕಂದಾಯ

ಭೂಕಂದಾಯ ಮತ್ತು ವ್ಯಾಪಾರದ ಮೇಲೆ ವಿಧಿಸಿದ್ದ ತೆರಿಗೆಗಳು ರಾಜ್ಯದ ಮುಖ್ಯ ಆದಾಯ ಮೂಲಗಳಾಗಿದ್ದವು. ಸರ್ಕಾರವು ಭೂಕಂದಾಯ ರೈತರ ಹುಟ್ಟುವಳಿಯ ಆರನೆ ಒಂದು ಭಾಗವೆಂದು ವಿಧಿಸಿತ್ತು. ಅದರಂತೆ ಹರ್ಷವರ್ಧನನ ಕಾಲದಲ್ಲಿ ರೈತರು ತಾವು ಬೆಳೆದ ಬೆಳೆಯಲ್ಲಿ ಆರನೇ ಒಂದು ಭಾಗ (1/6)ಭೂಕಂದಾಯವನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದರು.ರೈತರಿಂದ ಸಂಗ್ರಹಿಸಿದ ಭೂಕಂದಾಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ರಾಜ್ಯಾಡಳಿತದ ವೆಚ್ಚಕ್ಕೂ, ಎರಡನೆಯದನ್ನು ಸಾರ್ವಜನಿಕ ಸೇವೆಮಾಡಿ ಪ್ರಸಿದ್ಧರಾದವರಿಗೆ, ಮೂರನೆಯದನ್ನು ಮೇಧಾವಿಗಳನ್ನು , ಜ್ಞಾನಿಗಳನ್ನು ಗೌರವಿಸುವುದಕ್ಕೂ, ನಾಲ್ಕನೆಯ ಭಾಗವನ್ನು ವಿವಿಧ ಧರ್ಮಗಳಿಗೆ ದಾನವಾಗಿ ಕೊಡಲು ಮೀಸಲಿಡಲಾಗಿತ್ತು. ಸರ್ಕಾರವು ಭೂಕಂದಾಯ ವಸೂಲಾತಿಯಲ್ಲಿ ಉದಾರ ಮನೋಭಾವ ಹೊಂದಿದ್ದುದ್ದರಿಂದ ಭೂತೆರಿಗೆಗಳು ಹಗುರುವಾಗಿದ್ದವು. ರೈತರು ಕಂದಾಯವನ್ನು ಹಣ ಅಥವಾ ವಸ್ತು ರೂಪದಲ್ಲಿ ನೀಡಬಹುದಾಗಿತ್ತು.

ವಸ್ತು ವಿನಿಮಯ ಮತ್ತು ನಾಣ್ಯಪದ್ಧತಿಗಳೆರಡೂ ಆಚರಣೆಯಲ್ಲಿದ್ದವು. ಸರ್ಕಾರದ ಅಧಿಕಾರ ವರ್ಗದವರಿಗೆ ಅವರ ಕರ್ತವ್ಯಕ್ಕನುಗುಣವಾಗಿ ಸಂಬಳ ಸಲ್ಲಿಸಲಾಗುತ್ತಿತ್ತು. ಸಚಿವ ಮತ್ತು ಇತರ ದೊಡ್ಡ ಅಧಿಕಾರ ವರ್ಗದವರಿಗೆ ಭೂಮಿಯನ್ನು ಕೊಡಲಾಗುತ್ತಿತ್ತು.

ಭೂಕಂದಾಯವಲ್ಲದೆ, ಸುಂಕಗಳು, ತೆರಿಗೆಗಳು, ದಂಡಗಳು, ಗುಪ್ತನಿಧಿಗಳು ಇವುಗಳು ಸಹ ರಾಜನ ಬೊಕ್ಕಸವನ್ನು ತುಂಬುತ್ತಿದ್ದವು. ಕಂದಾಯವನ್ನು ಸುಂಕ ತೆರಿಗೆಗಳನ್ನು ಹಣದ ರೂಪದಲ್ಲಿಯಾಗಲೀ, ಧಾನ್ಯದ ರೂಪದಲ್ಲಿಯಾಗಲೀ ಪಡೆಯಲಾಗುತ್ತಿತ್ತು. ಜನರಿಗೆ ಕಂದಾಯ ಹೆಚ್ಚಾಗಿರಲಿಲ್ಲ. ಹ್ಯೂಯೆನ್‌ತ್ಸಾಂಗನೇ ಹೇಳುವಂತೆ ಕೊಡಬೇಕಾದ ತೆರಿಗೆ ಸ್ವಲ್ಪವೇ ಆಗಿದ್ದು ತತ್ಪರಿಣಾಮವಾಗಿ ಜನರು ತಮ್ಮ ತಮ್ಮ ವೃತ್ತಿಗಳನ್ನು ಬಿಡದೆ ಸುಖದಿಂದ ಜೀವಿಸುತ್ತಿದ್ದರು.

## 56.5.4 ಸೈನಾಡಳಿತ

ಸಾಮ್ರಾಜ್ಯದ ಭದ್ರತೆಗಾಗಿ ಹಾಗೂ ಸಮಗ್ರತೆಯನ್ನು ಕಾಪಾಡಲು ಹರ್ಷವರ್ಧನನು ಸುಸಜ್ಜಿತ ಸನ್ನದ್ಧವಾದ ಸೈನ್ಯವನ್ನು ಹೊಂದಿದ್ದನು. ಹ್ಯೂಯೆನ್‌ತ್ಸಾಂಗ್‌ನ ಹೇಳಿಕೆಯ ಪ್ರಕಾರ ಹರ್ಷವರ್ಧನನ ಬಳಿ 5,000ಗಜದಳ, 2,000ಅಶ್ವದಳವಿದ್ದಿತೆಂದು ಹೇಳುತ್ತಾನೆ. ಆದರೆ ಹ್ಯೂಯೆನ್‌ತ್ಸಾಂಗ್‌ನು ಹರ್ಷವರ್ಧನನ ಆಸ್ಥಾನಕ್ಕೆ ಭೇಟಿಕೊಟ್ಟಾಗ ಅದರ ಸಂಖ್ಯೆ ಹೆಚ್ಚಾಗಿತ್ತೆಂದು ತಿಳಿಸುತ್ತಾನೆ. ಹ್ಯೂಯೆನ್‌ತ್ಸಾಂಗ್‌ನ ಈ ಹೇಳಿಕೆ ಬಹುಶಃ ಹರ್ಷನ ದಂಡೆಯಾತ್ರೆಯ ಸಮಯದಲ್ಲಿ ಆನೆ, ಕುದುರೆ, ಹಾಗೂ ಪದಾತಿ ಸೈನಿಕರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುತ್ತಿದ್ದುದರ ಕುರಿತುದಾಗಿರಬಹುದು. ಹರ್ಷವರ್ಧನನು ತನ್ನ ಸೈನ್ಯಕ್ಕೆ ಬೇಕಾಗುತ್ತಿದ್ದ ಕುದುರೆಗಳನ್ನು ಪರ್ಶಿಯಾ ಮತ್ತು ಅರೇಬಿಯಾದಿಂದ ಆಮದು ಮಾಡಿಕೊಳ್ಳುತ್ತಿದ್ದನೆಂದು ತಿಳಿದು ಬರುತ್ತದೆ. ಹರ್ಷವರ್ಧನನ ಸೈನಿಕರು ಅನುವಂಶಿಕ ವೃತ್ತಿಯನ್ನು ಮಾಡುವವರಾದ್ದರಿಂದ ಯುದ್ಧ ಕೌಶಲ್ಯದಲ್ಲಿ ನಿಷ್ಣಾತರಾಗಿದ್ದರು ಎಂಬ ವಿಚಾರವು ಹ್ಯೂಯನ್‌ತ್ಸಾಂಗ್‌ನ ಬರವಣಿಗೆಯಿಂದ ತಿಳಿದು ಬರುತ್ತದೆ. ಅವರು ಧೈರ್ಯವಂತರು, ಶೌರ್ಯವಂತರೂ ಆಗಿದ್ದು ದೇಶವನ್ನು ರಕ್ಷಿಸಲು ಸದಾ ಉತ್ಸುಕರಾಗಿರುತ್ತಿದ್ದರು. ಶಾಂತಿಕಾಲದಲ್ಲಿ ಅರಮನೆಯನ್ನು ಕಾಯುತ್ತಲೂ ಯುದ್ಧಕಾಲದಲ್ಲಿ ಸೇನಾನಿಗಳಾಗಿ ಹೋರಾಡುತ್ತಿದ್ದರು. ಅವರ ಆಯುಧಗಳೆಂದರೆ ಭಿಲ್ಲೆ, ಗುರಾಣಿ, ಬಿಲ್ಲು, ಕಠಾರಿ, ಡೊಂಕು ಖಡ್ಗ ಇತ್ಯಾದಿಗಳು.

ಹರ್ಷವರ್ಧನನ ಸೈನ್ಯದಲ್ಲಿ ಮಹಾಸೇನಾಪತಿ(ಸೈನ್ಯದ ಮುಖ್ಯಾಧಿಕಾರಿ) ಮಹಾಬಲ್ಯಾಧ್ಯಕ್ಷ, ಸೈನ್ಯಾಪತಿ, ಗಜಸಾಧನಿಕ(ಗಜಸೇನೆಯ ಅಧಿಪತಿ) ನಾಳಿವಾಹಕ, ಘಾಸಿಕ (ಆನೆಗಳಿಗೆ ಹುಲ್ಲು, ನೀರು ಸರಬರಾಜು ಮಾಡುವವರು) ಅಶ್ವಪತಿ (ಕುದುರೆ ದಳದ ಮುಖ್ಯಸ್ಥ) ಎಂಬ ಅನೇಕ ಅಧಿಕಾರಿಗಳು ಸೈನ್ಯ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು ಎಂಬ ವಿಚಾರವನ್ನು ಹ್ಯೂಯನ್‌ತ್ಸಾಂಗ್‌ನು ತನ್ನ ಬರವಣಿಗೆಯಲ್ಲಿ ವರ್ಣಿಸಿದ್ದಾನೆ. **ರಣಭಾಂಡಾಗಾರಾಧಿಕರಣನು** ಸೈನ್ಯದ ಆರ್ಥಿಕ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತಿದ್ದನು.

## 56.5.5 ನ್ಯಾಯಾಡಳಿತ

ಹರ್ಷನು ತನ್ನ ಆಡಳಿತದಲ್ಲಿ ನ್ಯಾಯಾಡಳಿತಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದನು. ರಾಜನೇ ಮುಖ್ಯ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸುತ್ತಿದ್ದನು. ತನಗೆ ಸಹಾಯಕರಾಗಿ ನ್ಯಾಯಾದಾನ ಮಾಡಲು ಮಿಮಾಂಸಕರನ್ನು ನೇಮಿಸಿದ್ದನು. ಅಪರಾಧಿಗಳೆಂದು ಅಪಾದಿಸಲ್ಪಟ್ಟವರನ್ನು ಮುಗ್ದರೋ, ಅಪರಾಧಿಗಳೋ ಎಂದು ನಿರ್ಣಯಿಸಲು ನೀರು, ಬೆಂಕಿ, ತೂಕ ನೋಡುವ ಮತ್ತು ವಿಷ ಕುಡಿಸುವಂತಹ ನಾಲ್ಕು ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಅಪರಾಧಿಗಳನ್ನು ಅಜೀವಪರ್ಯಂತ ಬಂಧಿಸಿಡಲಾಗುತ್ತಿತ್ತು. ಅಂತಂಹವರನ್ನು ಜಾತಿಯಿಂದ ಜನರು ಬಹಿಷ್ಕರಿಸುತ್ತಿದ್ದರು. ಘೋರವಾದ ಅಪರಾಧಗಳಿಗೆ, ಸಾಮಾಜಿಕ ರೀತಿ ನೀತಿಗಳನ್ನು ಮೀರಿದವರಿಗೆ ಕಿವಿ, ಮೂಗು ಅಥವಾ ಕೈ ಕಾಲುಗಳನ್ನು ಕತ್ತರಿಸುವಂತಹ ಉಗ್ರ ಶಿಕ್ಷೆಗಳನ್ನು ನೀಡಲಾಗುತ್ತಿತ್ತು. ಇಲ್ಲದಿದ್ದರೆ ದೇಶದಿಂದ ಹೊರಗಟ್ಟಲಾಗುತ್ತಿತ್ತು. ಅಥವಾ ಮರುಭೂಮಿಗೆ ಕೊಂಡೊಯ್ದು ಬಿಡಲಾಗುತ್ತಿತ್ತು. ಸಣ್ಣಪುಟ್ಟ ತಪ್ಪುಗಳಿಗೆ ದಂಡ ಅಥವಾ ಪರಿಹಾರ ಧನಕೊಟ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿತ್ತು.

## 56.6 ಆರ್ಥಿಕ ಪರಿಸ್ಥಿತಿ

ದಿಗ್ವಿಜಯಿಯಾಗಿ ವಿಶಾಲಸಾಮ್ರಾಜ್ಯ ಸ್ಥಾಪಿಸಿದ್ದ ಹರ್ಷವರ್ಧನನು ಅದಕ್ಕೆ ಉತ್ತಮ ಮತ್ತು ದಕ್ಷ ಆಡಳಿತವನ್ನು ರೂಪಿಸಿದಂತೆ, ಅಷ್ಟೇ ಸುಭದ್ರವಾದ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದನು. ಅವನ ಸಾಮ್ರಾಜ್ಯದ ಆರ್ಥಿಕ ವ್ಯವಸ್ಥೆ ವ್ಯವಸಾಯ. ಕೈಗಾರಿಕೆ ಮತ್ತು ವಾಣಿಜ್ಯ ವ್ಯಾಪಾರವನ್ನು ಅವಲಂಭಿಸಿತ್ತು.

ಬಾಣ ಮತ್ತು ಹ್ಯೂಯೆನ್‌ತ್ಸಾಂಗರ ಬರವಣಿಗೆಗಳಲ್ಲಿ ಕಂಡು ಬರುವಂತೆ ಹರ್ಷನ ಸಾಮ್ರಾಜ್ಯವೂ ಸೇರಿದಂತೆ ಕ್ರಿ.ಶ.ಏಳನೇ ಶತಮಾನದಲ್ಲಿ ಭಾರತಾದ್ಯಂತ ಸಾಮಾನ್ಯವಾಗಿ ಹೆಚ್ಚು ಜನರು ಕೃಷಿಯನ್ನು ಮೂಲ ಕಸುಬನ್ನಾಗಿ ಅವಲಂಬಿಸಿದ್ದರು. ತಂಪಾದ ಹವಮಾನ, ಹಲವಾರು ನದಿ ಬಯಲುಗಳ ಪ್ರದೇಶ, ಉತ್ತಮವಾದ ಮಳೆ ನೀರಾವರಿ ಸೌಲಭ್ಯ ಹಾಗೂ ಫಲವತ್ತಾದ ಭೂಮಿ ಅಂದಿನ ಸಮೃದ್ಧ ವ್ಯವಸಾಯ ಅವಲಂಭನೆಗೆ ಕಾರಣವಾಗಿತ್ತು. ಹರ್ಷವರ್ಧನನ ಸಾಮ್ರಾಜ್ಯದ ರೈತರು ಉತ್ತಮ ಉಪಕರಣಗಳ ಜೊತೆಗೆ ನೀರಾವರಿ ಸೌಲಭ್ಯವನ್ನು ಹೊಂದಿದ್ದುದರಿಂದ ಉತ್ತಮವಾದ ಬೇಸಾಯ ಕ್ರಮವನ್ನು ಅನುಸರಿಸಿ ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದರು. ಭತ್ತ, ಗೋಧಿ, ಬಾರ್ಲಿ, ಹಣ್ಣುಹಂಪಲು, ತರಕಾರಿ, ವಿವಿಧ ಬಗೆಯ ಆಹಾರಕಾಳುಗಳು, ವಿವಿಧ ಬಗೆಯ ಹೂಗಳು, ಕಬ್ಬು, ಹತ್ತಿ, ಇತ್ಯಾದಿ ಆರ್ಥಿಕ ಬೆಳೆಗಳನ್ನು ಬೆಳೆಯುತ್ತಿದ್ದರು. ಕಾಶ್ಮೀರ, ಪಂಜಾಬ್, ಜಲಂಧರ್, ತಕ್ಷಶಿಲೆ, ಪ್ರಯಾಗ, ಕೌಸಂಬಿ, ವಾರಣಾಸಿ, ಕನ್ಯಕುಬ್ಜ, ಅಯೋಧ್ಯ, ಸಿಂಹಪುರ, ಗೋವಿಸಾನ ಮೊದಲಾದ ಪ್ರಾಂತ್ಯಗಳು ವ್ಯವಸಾಯಕ್ಕೆ ಪ್ರಸಿದ್ಧವಾಗಿದ್ದವು.

ಗಾಂಧಾರದಲ್ಲಿ ಯಥೇಚ್ಚವಾಗಿ ಆಹಾರ ಕಾಳುಗಳು ಹಣ್ಣುಹಂಪಲುಗಳು, ಮತ್ತು ಸುಂದರವಾದ ಹೂಗಳನ್ನು ಬೆಳೆಯಲಾಗುತ್ತಿತ್ತು. ಕಾಶ್ಮೀರವು ಕೇಸರಿ ಬೆಳೆ ಉತ್ಪಾದನೆಗೆ ಹೆಸರುವಾಸಿಯಾಗಿತ್ತಲ್ಲದೆ, ಹೂಹಣ್ಣುಹಂಪಲುಗಳನ್ನು ಯಥೇಚ್ಚವಾಗಿ ಬೆಳೆಯಲಾಗುತ್ತಿತ್ತು. ತಕ್ಷಶೀಲ ಮತ್ತು ಸಿಂಹಾಪುರಗಳಲ್ಲಿ ಮಣ್ಣು ಬಹಳ ಫಲವತ್ತಾಗಿದ್ದು, ಹಲವು ನದಿಗಳು ಮತ್ತು ಸಂಮೃದ್ಧವಾದ ಕಾಡುಗಳಿಂದ ಆವೃತಗೊಂಡಿದ್ದು ಉತ್ತಮ ಕೃಷಿ ಉತ್ಪಾದನೆಗೆ ಹೆಸರು ಗಳಿಸಿದ್ದವು. ಜಲಂಧರ್ ಪ್ರದೇಶದಲ್ಲಿ ಉತ್ತಮ ತಳಿಯ ಅಕ್ಕಿ, ಕಾಳುಗಳು, ಹಣ್ಣುಹಂಪಲು ಮತ್ತು ಸುಗಂಧಭರಿತ ಹೊಗಳನ್ನು ಬೆಳೆಯಲಾಗುತ್ತಿತ್ತು. ಮಥುರ ಭಾಗದಲ್ಲಿ ಭೂಮಿಯು ಫಲವತ್ತಾದ ಮಣ್ಣನ್ನು ಹೊಂದಿದ್ದುದರಿಂದ ಉತ್ತಮ ಮಟ್ಟದ ಹತ್ತಿಯನ್ನು ಉತ್ಪಾದಿಸಲಾಗುತ್ತಿತ್ತು. ಹೀಗೆ ಕೃಷಿ ಬೆಳೆಗಳಿಗೆ ಉತ್ತಮವಾದ ಮಾರುಕಟ್ಟೆಯ ವ್ಯವಸ್ಥೆಯೂ ಇದ್ದಂತೆ ಹ್ಯೂಯೆನ್‌ತ್ಸಾಂಗ್‌ನ ವರ್ಣನೆಗಳಿಂದ ತಿಳಿದುಬರುತ್ತದೆ. ರೈತರು ತಾವು ಬೆಳೆದ ಬೆಳೆಯ 1/6ಭಾಗದಷ್ಟನ್ನು ರಾಜ್ಯಕ್ಕೆ ಸಲ್ಲಿಸುತ್ತಿದ್ದರು. ಒಟ್ಟಿನಲ್ಲಿ ಹರ್ಷವರ್ಧನನ ಕಾಲದಲ್ಲಿ ವ್ಯವಸಾಯು ಸಂವೃದ್ಧಿಯಿಂದ ಕೂಡಿದ್ದು. ಜನರು ಸುಖಶಾಂತಿಯಿಂದ ಬಾಳುತ್ತಿದ್ದರು. ಸಾಮ್ರಾಜ್ಯದ ಮುಖ್ಯಕಸುಬು ವ್ಯವಸಾಯವಾಗಿದ್ದರೂ, ಕೂಡ ಕೈಗಾರಿಕೆ ಹಿಂದೆ ಬಿದ್ದಿರಲಿಲ್ಲ. ತಕ್ಷಶೀಲ, ಥಾನೇಶ್ವರ, ಮಥುರ, ಕಾಶ್ಮೀರ, ಕನೌಜ, ಬನಾರಸ್, ಅಲಹಬಾದ್, ಅಯೋದ್ಯಾ ಮೊದಲಾದ ನಗರಗಳು ಅಭಿವೃದ್ಧಿ ಹೊಂದಿದ್ದು, ಅನೇಕ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದವು ಎಂಬುದಕ್ಕೆ ಅಲ್ಲಿನ ಜನರು ಉಪಯೋಗಿಸುತ್ತಿದ್ದ ತಾಮ್ರ, ಹಿತ್ತಾಳೆ ಪಾತ್ರೆಗಳು ಮತ್ತು ಇನ್ನಿತರ ಲೋಹದ ವಸ್ತುಗಳೇ ಸಾಕ್ಷಿಯಾಗಿವೆ. ಹರ್ಷನ ಕಾಲದಲ್ಲಿಸೈನಿಕರು ಉಪಯೋಗಿಸುತ್ತಿದ್ದಂತಹ ಆಯುಧಗಳು ಕಬ್ಬಿಣದಿಂದ ಮಾಡಿದಂತವುಗಳಾಗಿದ್ದವು. ಕರಕುಶಲ ಕಲೆಗಳಾದ ವಜ್ರವೈಡೂರ್ಯಗಳು ಕೂಡ ಪ್ರಮುಖವಾಗಿದ್ದು,ಇವು ಕೈಗಾರಿಕಾ ಬೆಳವಣಿಗೆಯ ಸಂಕೇತವಾಗಿದ್ದವು. ನೂಲುವುದು, ನೇಯುವುದು ಹಾಗೂ ಗಣಿಗಾರಿಕೆಗಳೂ ಈ ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದವು. ವಿನಿಮಯ ಮಾಧ್ಯಮಗಳಾದ ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳು, ಕವಡೆಗಳು ಹಾಗೂ ಮುತ್ತುಗಳು ಚಲಾವಣೆಯಲ್ಲಿದ್ದವು. ಹೀಗೆ ಕೈಗಾರಿಕೆಯಲ್ಲಿ ಪ್ರಗತಿ ಸಾಧಿಸಿದುದರಿಂದ ವಾಣಿಜ್ಯ ಮತ್ತು ವ್ಯಾಪಾರವೂ ಕೂಡ ಹರ್ಷವರ್ಧನನ ಸಾಮ್ರಾಜ್ಯದಲ್ಲಿ ಪ್ರಗತಿ ಸಾಧಿಸಿದ್ದುದು ಕಂಡು ಬರುತ್ತದೆ.

ವ್ಯಾಪಾರವಾಣಿಜ್ಯವು ಅಭಿವೃದ್ಧಿ ಪಥದಲ್ಲಿದ್ದುದು ನಗರಗಳ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತ್ತು. ಈ ಕಾಲದಲ್ಲಿ ಥಾನೇಶ್ವರ. ಮಥುರಾ, ಕನೌಜ, ಅಲಹಬಾದ್, ಅಯೋದ್ಯಾ. ಬನಾರಸ್, ಕಾಶ್ಮೀರ , ತಕ್ಷಶೀಲ ಮೊದಲಾದ ನಗರಗಳು ಸಂಪದ್ಭರಿತ ವ್ಯಾಪಾರ ಕೇಂದ್ರಗಳಾಗಿ ಅಭಿವೃದ್ಧಿ ಸಾಧಿಸಿದ್ದವು. ವ್ಯಾಪಾರ ವಾಣಿಜ್ಯಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸರ್ಕಾರವು ದೇಶೀಯ ವ್ಯಾಪಾರದ ಮೇಲಿನ ಸುಂಕವನ್ನು ಕಡಿಮೆ ಹಾಕಿದ್ದುದರಿಂದ ಆಂತರಿಕ ವ್ಯಾಪಾರವು ಮತ್ತಷ್ಟು ಅಭಿವೃದ್ಧಿ ಹೊಂದಿತು. ಇದೇ ಕಾಲದಲ್ಲಿ ಭಾರತೀಯ ವಸಾಹಾತುಗಳು ಆಗ್ನೇಯ ಏಷ್ಯಾ ದೇಶಗಳಲ್ಲಿ ವ್ಯಾಪಿಸಿದ್ದು ವಿದೇಶಿ ವ್ಯಾಪಾರಕ್ಕೂ ಪ್ರೋತ್ಸಾಹ ದೊರೆತಂತಾಯಿತು. ವ್ಯಾಪಾರದಲ್ಲಿ ಮತ್ತು ವೃತ್ತಿಗಳಲ್ಲಿ ಸಂಘಶ್ರೇಣಿಗಳು ತೊಡಗಿದ್ದು ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಅವು ಬಹು ಪ್ರಮುಖ ಸ್ಥಾನ ಹೊಂದಿದವು. ಒಟ್ಟಿನಲ್ಲಿ ಹರ್ಷನ ಕಾಲದಲ್ಲಿ ಆರ್ಥಿಕ ಪರಿಸ್ಥಿತಿಯು ವ್ಯವಸಾಯ, ಕೈಗಾರಿಕೆ ಹಾಗೂ ವ್ಯಾಪಾರವಾಗಿದ್ದುದರ ಮೂಲಕ ಸುಭದ್ರವಾಗಿತ್ತು.

## 56.7 ಹರ್ಷವರ್ಧನನ ಕಾಲದ ಸಾಮಾಜಿಕ ಜೀವನ

ಹ್ಯೂಯನ್‌ತ್ಸಾಂಗ್‌ಮತ್ತು ಬಾಣನ ಬರಹಗಳು ಆ ಕಾಲದ ಜನರ ಸಾಮಾಜಿಕ ಜೀವನವನ್ನು ಅರಿಯಲು ಸಹಕಾರಿಯಾಗಿವೆ. ಅಂದು ವ್ಯವಸಾಯ ಮತ್ತು ಕೈಗಾರಿಕೆಗಳು ಅಭಿವೃದ್ಧಿ ಸ್ಥಿತಿಯಲ್ಲಿದ್ದು ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿದಾಯಕವಾಗಿತ್ತು. ಹಾಗೂ ತೆರಿಗೆಗಳು ಜನರಿಗೆ ಹೊರೆಯಾಗಿರಲಿಲ್ಲ. ಈ ಎಲ್ಲಾ ದೃಷ್ಟಿಯಿಂದ ಅಂದು ಜನರ ಸಾಮಾಜಿಕ ಸ್ಥಿತಿಗತಿಗಳು ಸಮೃದ್ಧವಾಗಿದ್ದವು.

ಹರ್ಷನ ಕಾಲದಲ್ಲಿ ಜಾತಿ ಆಧಾರಿತ ಸಮಾಜ ನಿರ್ಮಾಣವಾಗಿತ್ತು ಎಂಬುದಾಗಿ ಹೂಯನ್‌ತ್ಸಾಂಗ್ ಬರವಣಿಗೆಯಿಂದ ಕಂಡುಬರುತ್ತದೆ. ಸಮಾಜವು ನಾಲ್ಕುಪ್ರಮುಖ ಜಾತಿಯ ಆಧಾರದ ಮೇಲೆ ನಿಂತಿತ್ತು. ಅದರೊಂದಿಗೆ ಇತರ ಸಣ್ಣಪುಟ್ಟ ಜಾತಿಗಳು ಇದ್ದವು. ಹ್ಯೂಯನ್‌ತ್ಸಾಂಗ್‌ನು ವೈಶ್ಯರನ್ನು ವರ್ತಕರೆಂದೂ, ಶೂದ್ರರನ್ನು ಒಕ್ಕಲಿಗರೆಂದೂ ಪರಿಗಣಿಸಿದ್ದನು. ಅಸ್ಪೃಶ್ಯರನ್ನು ಇತರ ವರ್ಣಿಯರಿಂದ ಬೇರ್ಪಡಿಸಲಾಗಿತ್ತು. ಕಟುಕರು, ಮೀನುಗಾರರು, ಸಾರ್ವಜನಿಕ ವೇಷಧಾರಿಗಳು, ಭಂಗಿಗಳು ಊರ ಹೊರಗಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ಹಳ್ಳಿಗಳಲ್ಲಿ ಅವರು ಓಡಾಡುವಾಗ ಕಣ್ಣು ತಪ್ಪಿಸಿ ಓಡಾಡುತ್ತಿದ್ದರು. ಸಮಾಜದಲ್ಲಿ ಕುಂಬಾರರು, ನರ್ತಕಿಯರು, ಮಾಲಿಷ್ ಮಾಡುವವರು, ಮದ್ದಳೆಯವರು ಮುಂತಾದ ವೃತ್ತಿಗಳನ್ನವಲಂಬಿಸಿದ್ದ ಉಪಜಾತಿಗಳಿದ್ದವು. ವಿಧವಾ ವಿವಾಹ ಮತ್ತು ಬಹಳ ಹತ್ತಿರದ ಸಂಬಂಧಿಗಳ ನಡುವಿನ ವಿವಾಹವನ್ನು ನಿಷೇಧಿಸಲಾಗಿತ್ತು. ಸತಿ ಪದ್ಧತಿ ಆಚರಣೆಯಲ್ಲಿತ್ತು. ವಿಧವೆಯರೂ ಸಹ ಜಡೆಯನ್ನು ಹಾಕಿಕೊಳ್ಳುತ್ತಿದ್ದರೆಂದು ಬಾಣನು ತಿಳಿಸುತ್ತಾನೆ. ಹೊಲಿದ ಬಟ್ಟೆಗಳನ್ನು ಬೆಲೆಬಾಳುವ ಆಭರಣಗಳನ್ನು ಧರಿಸುತ್ತಿದ್ದರು. ಹಬ್ಬ ಹರಿದಿನಗಳು ಆಚರಣೆಯಲ್ಲಿದ್ದವು. ರಾಜರುಗಳ ಪುತ್ರೋತ್ಸವದ ಸಂದರ್ಭದಲ್ಲಿ ಅರಮನೆಯಲ್ಲಿ ಅನೇಕ ವ್ರತಾಚರಣೆಗಳು ಜರುಗುತ್ತಿದ್ದವು. ಯಾರನ್ನಾದರೂ ಭೇಟಿಯಾದಾಗ ಮುಂಡಾಸವನ್ನು ಎತ್ತುವುದು ಗೌರವ ಸೂಚಕವಾಗಿತ್ತು. ಸಾಮಾನ್ಯವಾಗಿ ಜನರೆಲ್ಲರೂ ನೀತಿವಂತರೂ, ಪ್ರಾಮಾಣಿಕರು ಆಗಿದ್ದರು.

## 56.8 ಹರ್ಷನ ಧಾರ್ಮಿಕ ನೀತಿ

ಹರ್ಷವರ್ಧನನ ಪೂರ್ವಿಕರು ಸೂರ್ಯನಾರಾಯಣನ ಆರಾಧಕರಾಗಿದ್ದರು. ಅವನು ತನ್ನ ಆಳ್ವಿಕೆಯ ಮೊದಲ ಇಪ್ಪತ್ತೈದು ವರ್ಷಗಳ ಕಾಲ ಶಿವನ ಆರಾಧಕನಾಗಿದ್ದುದಲ್ಲದೆ "ಪರಮಮಹೇಶ್ವರ" ಎಂಬುದಾಗಿ ಕರೆದುಕೊಳ್ಳುತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಬೌದ್ಧ ಸನ್ಯಾಸಿನಿಯಾದ ಅವನ ತಂಗಿಯ ಮೇಲಿನ ಅಕ್ಕರೆಯಿಂದ ಅವನ ಮನಸ್ಸು ಬೌದ್ಧ ಮತದತ್ತ ಸೆಳೆಯಲ್ಪಟ್ಟಿತೆಂದು ತೋರುತ್ತದೆ. ಅವನ ಆಸ್ಥಾನಕ್ಕೆ ಬಂದ ಹ್ಯೂಯನ್‌ತ್ಸಾಂಗ್ ಮಹಾಯಾನ ಬೌದ್ಧಪಂಥದ ದಿಗ್ಧಂತಿಯಾಗಿದ್ದನು. ಹ್ಯೂಯನ್‌ತ್ಸಾಂಗ್‌ನ ಆದ್ವಿತೀಯ ವ್ಯಾಖ್ಯೆ ಹರ್ಷನ ಮನಸ್ಸನ್ನು ಬೌದ್ಧ ಮತದತ್ತ ಹೆಚ್ಚು ಆಕರ್ಷಿಸಿತು. ಈ ಕಾರಣಗಳಿಂದ ಅವನು ಬೌದ್ಧ ಮತವಲಂಬಿಯಾದನು. ಕ್ರಮೇಣ ಬೌದ್ಧ ಮತದ ಉನ್ನತಿಗೆ ಹರ್ಷ ಪ್ರತ್ಯಕ್ಷವಾಗಿ ಸಹಕರಿಸಿದನು. ಬೌದ್ಧಮತೀಯರಿಗೆ ವಿಶೇಷ ಪ್ರೋತ್ಸಾಹ ನೀಡುವ ಉದ್ದೇಶದಿಂದಲೇ ಹರ್ಷತನ್ನ ರಾಜಧಾನಿಯಲ್ಲಿ ಬೌದ್ಧ ಭಿಕ್ಷುಗಳ ಸಭೆಯನ್ನು ಸೇರಿಸಿದ್ದನು. ಹರ್ಷ ಚಕ್ರವರ್ತಿ ಬೌದ್ಧಮತವನ್ನು ಸ್ವೀಕರಿಸಿದಾಗ ಮತ್ತು ಅವನ ಒಲವು ಆ ಮತದತ್ತ ಹೆಚ್ಚಾಗಿ ಇದ್ದಾಗ್ಯೂ ಅವನು ಬೇರೆ ಮತಗಳನ್ನು ಹೀನಾಯವಾಗಿ ಕಾಣಲಿಲ್ಲ. ಮಿಗಿಲಾಗಿ ಪ್ರಯೊಗದಲ್ಲಿ ಸೇರಿಸಿದ ಮೋಕ್ಷ ಮಹಾಪರಿಷತ್ ಸಮ್ಮೇಳನದಲ್ಲಿ ಬುದ್ಧನ ವಿಗ್ರಹದ ಜೊತೆಗೆ ಸೂರ್ಯ ಮತ್ತು ಶಿವನ ವಿಗ್ರಹಗಳನ್ನು ಉತ್ಸವದಲ್ಲಿ ಕೊಂಡೊಯ್ಯಲಾಯಿತು. ಪ್ರಜೆಗಳ ಧರ್ಮವೇ ರಾಜನ ಧರ್ಮವೆಂಬ ಪ್ರಾಚೀನ ರಾಜ್ಯಶಾಸ್ತ್ರ ಗ್ರಂಥಕರ್ತೃಗಳ ಸಂದೇಶವನ್ನು ಹರ್ಷ ಪರಿಪಾಲಿಸಿದನು. ಬ್ರಾಹ್ಮಣರನ್ನು, ಜೈನರನ್ನು ಗೌರವಿಸಿ ಅವರಿಗೆ ಉದಾರವಾಗಿ ಕಾಣಿಕೆಗಳನ್ನು ನೀಡಿದನು. 'ಹರ್ಷಚರಿತ' ಮತ್ತು 'ಕಾದಂಬರಿ"ಗಳ ಕರ್ತೃ ಬಾಣಭಟ್ಟ ಬ್ರಾಹ್ಮಣನಾದರೂ ಹರ್ಷನ ಆಸ್ಥಾನ ಕವಿಯಾಗಿದ್ದನು. ಸಾಮ್ರಾಜ್ಯದ ಸಾಮಂತ ಮತ್ತು ಮಿತ್ರ ರಾಜರಲ್ಲನೇಕರು ಬೌದ್ಧಮತೀಯರಾಗಿರಲಿಲ್ಲ. ಆದರೂ ಹರ್ಷ ಅವರನ್ನೂ ಗೌರವಿಸುತ್ತಿದ್ದನು. ಬೌದ್ಧಮತದ ಮೇಲ್ಮೆಯ ಬಗ್ಗೆ ಅವನು ಹೆಚ್ಚು ಆಸಕ್ತಿ ಹೊಂದಿದ್ದಾಗ್ಯೂ ಅವನ ಪರಮತ ಸಹಿಷ್ಣುತೆ ಆದರ್ಶಪ್ರಾಯ ಮತ್ತು ಅನುಕರಣೀಯ.

### 56.8.1 ಹರ್ಷ ಮತ್ತು ಬೌದ್ಧ ಧರ್ಮ

ಹರ್ಷವರ್ಧನನ ಸಹೋದರಿ ರಾಜಶ್ರೀ ತನ್ನ ಪತಿಯನ್ನು ಕಳೆದುಕೊಂಡ ನಂತರ ಬೌದ್ಧ ಸನ್ಯಾಸಿನಿಯಾದಳು. ಆಕೆಯ ಪ್ರಭಾವದಿಂದ ಹಾಗೂ ಹ್ಯೂಯನ್‌ತ್ಸಾಂಗ್‌ನ ಪ್ರೇರಣೆಯಿಂದ ಹರ್ಷವರ್ಧನನು ತನ್ನ ಪೂರ್ವಿಕರ ಶೈವಪಂಥವನ್ನು ತೊರೆದು ಬೌದ್ಧ ಮತವನ್ನು ಸ್ವೀಕರಿಸಿದನೆಂದು ತಿಳಿದು ಬರುತ್ತದೆ. ಕ್ರಿ.ಶ.4ನೇ ಶತಮಾನದ ಹೊತ್ತಿಗೆ ಬೌದ್ಧಮತವು ಅವನತಿಯತ್ತ ಸಾಗುತ್ತಿತ್ತು ಎಂಬುದನ್ನು

ಹ್ಯೂಯೆನ್‌ತ್ಸಾಂಗ್ ತನ್ನ ಬರವಣಿಗೆಯಲ್ಲಿ ತಿಳಿಸಿರುವುದು ಸರಿಯಷ್ಟೇ. ಹೀಗೆ ಅವನತಿಯತ್ತ ಸಾಗುತ್ತಿದ್ದ ಬೌದ್ಧಮತ್ತವನ್ನು ಮತ್ತೊಮ್ಮೆ ಜನಪ್ರಿಯ ಧರ್ಮವನ್ನಾಗಿ ಮಾಡಲು ಹರ್ಷವರ್ಧನ ಪ್ರಯತ್ನಿಸಿದ್ದನು. ಅವನು ಅದಕ್ಕಾಗಿ ಅನೇಕ ಬೌದ್ಧಸಮ್ಮೇಳನಗಳನ್ನು ನಡೆಸಿದ್ದಿದ್ದು ಕಂಡು ಬರುತ್ತದೆ. ಅಂದು ಬೌದ್ಧ ಭಿಕ್ಷುಗಳಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಹೊಗಲಾಡಿಸುವ ಸಲುವಾಗಿ ಹರ್ಷವರ್ಧನನಿಂತಂಹ ಬೌದ್ಧ ಭಿಕ್ಷುಗಳ ಸಮ್ಮೇಳನಗಳನ್ನು ನಡೆಸಿದನು. ಹರ್ಷವರ್ಧನ ಬೌದ್ಧದರ್ಮವನ್ನು ಸ್ವೀಕರಿಸಿದರೂ ಇತರ ಧರ್ಮಗಳನ್ನು ಕಡೆಗಣಿಸಲಿಲ್ಲ. ಬೌದ್ಧಧರ್ಮಿಯರೊಂದಿಗೆ ವೈದಿಕ, ಮತ್ತು ಜೈನ ಮತವಾಲಂಬಿಗಳು ಸಾಮ್ರಾಜ್ಯದಲ್ಲಿ ವಾಸಿಸುತ್ತಿದ್ದುದ್ದಾಗಿ ಹರ್ಷಚರಿತ ಮತ್ತು ಹ್ಯೂಯೆನ್‌ತ್ಸಾಂಗ್‌ನ ಬರವಣಿಗೆಗಳಿಂದ ತಿಳಿದು ಬರುತ್ತದೆ. ಜೈನ ಮತೀಯರು ಕೆಲವೇ ಸ್ಥಳಗಳಲ್ಲಿ ಮಾತ್ರ ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ವೈಶಾಲಿ ಮತ್ತು ಇತರ ಪ್ರದೇಶಗಳು ಜೈನ ದಿಗಂಬರ ಪಂಥದ ಕೇಂದ್ರಗಳಾಗಿದ್ದವು. ಪ್ರಯಾಗ, ವಾರಾಣಾಸಿ, ಮೊದಲಾದವು ವೈದಿಕ ಮತದ ಕೇಂದ್ರಗಳಾಗಿದ್ದವು. ಜನರು ವಿಷ್ಣು ಮತ್ತು ಶಿವನ ಭಕ್ತರಾಗಿದ್ದು ಅವರನ್ನು ಪೂಜಿಸುತ್ತಿದ್ದರು.

ಬೌದ್ಧಮತಕ್ಕೆ ಸಂಬಂಧಿಸಿದಂತೆ ಹ್ಯೂಯೆನ್‌ತ್ಸಾಂಗ್‌ನ ಹೇಳಿಕೆಗಳನ್ನು ಗಮನಿಸುವುದು ಸೂಕ್ತವೆನಿಸುತ್ತದೆ. ಆತನ ಪ್ರಕಾರ ಬೌದ್ಧಧರ್ಮವು ಹರ್ಷವರ್ಧನನ ಸಾಮ್ರಾಜ್ಯದಲ್ಲಿ ಜನಪ್ರಿಯವಾಗಿತ್ತು. ಆದರೆ ಭಾರತದ ಇತರ ಪ್ರಾಂತ್ಯಗಳಲ್ಲಿ ಬೌದ್ಧಧರ್ಮವು ನಶಿಸಿಹೋಗಿತ್ತೆಂದು ಹೇಳುತ್ತಾನೆ. ಬೌದ್ಧಮತ ಹರ್ಷವರ್ಧನನ ಸಾಮ್ರಾಜ್ಯದಲ್ಲಿ ಉನ್ನತ ಸ್ಥಿತಿಯಲ್ಲಿದ್ದರೂ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಅದು ಹೀನ ಸ್ಥಿತಿಯಲ್ಲಿದ್ದುದನ್ನು ಹೂಯನ್‌ತ್ಸಾಂಗ್ ಮನಗಂಡನು. ಹೀನಯಾನ ಶಾಖೆ ಕ್ಷೀಣಿಸಿತ್ತು. ಮಹಾಯಾನ ಶಾಖೆ ಮಾತ್ರ ಮಗಧ ರಾಜ್ಯದಲ್ಲಿ ಪ್ರಬಲವಾಗಿತ್ತು. ಮಹಾಯಾನ ಶಾಖೆಯಲ್ಲೂ ಅನೇಕ ಒಳಪಂಗಡಗಳು ತಲೆಯೆತ್ತಿದ್ದವು. ಈ ಪಂಗಡಗಳಲ್ಲಿ ಆಗಾಗ್ಗೆ ವಾದ ವಿವಾದಗಳೂ ನಡೆಯುತ್ತಿದ್ದವು. ಅಂತರಿಕ ವಿವಾದಗಳು ಬೌದ್ಧಮತದ ಕ್ಷೀಣಿಸಲು ಕಾರಣವಾದವು. ಹರ್ಷ ಸಾಮ್ರಾಟ ಬೌದ್ಧಮತದ ಉನ್ನತಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡನು.

ಹ್ಯೂಯೆನ್‌ತ್ಸಾಂಗ್ ಹರ್ಷವರ್ಧನನ ವ್ಯಕ್ತಿತ್ವದ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದ್ದನು. ಹ್ಯೂಯನ್‌ತ್ಸಾಂಗ್‌ನ ಗೌರವಾರ್ಥವಾಗಿ ಹರ್ಷವರ್ಧನ ಕನ್ಯಕುಬ್ಜದಲ್ಲಿ ಒಂದು ಬೌದ್ಧ ಸಮ್ಮೇಳನವನ್ನು ಕ್ರಿ.ಶ.643ರಲ್ಲಿ ಸಮಾವೇಶಗೊಳಿಸಿದನು. ಈ ಸಮ್ಮೇಳನದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚಿನ ಹಿಂದೂ ಸನ್ಯಾಸಿಗಳೂ ಹಾಗೂ ಮೂರು ಸಾವಿರಕ್ಕೂ ಮಿಗಿಲಾಗಿ ಬೌದ್ಧಭಿಕ್ಷುಗಳು ಭಾಗವಹಿಸಿದ್ದರು. ಈ ಸಮ್ಮೇಳನವು ಯಶ್ವಸಿಯಾಗಿ ಹದಿನೆಂಟು ದಿನಗಳು ಜರುಗಿತು. ಬುದ್ಧನ ಚಿನ್ನದ ಬೃಹತ್ ವಿಗ್ರಹವನ್ನು ಮೆರಣಿಗೆಯಲ್ಲಿ ತಂದು ಸಮ್ಮೇಳನದ ಹದಿನೆಂಟು ದಿನಗಳ ಕಾಲವೂ ಪೂಜಿಸಲಾಯಿತು. **ಕನ್ಯಕುಬ್ಜ**ದಲ್ಲಿ ಬೌದ್ಧಸಮ್ಮೇಳನವಾದ ನಂತರ ಹರ್ಷವರ್ಧನ **ಪ್ರಯಾಗ**ದಲ್ಲಿ ಮತ್ತೊಂದು ಧಾರ್ಮಿಕ ಸಮ್ಮೇಳನವನ್ನು ಸೇರಿಸಿದನು. ಪ್ರಯಾಗವು ಎರಡು ಪವಿತ್ರ ನದಿಗಳಾದ ಗಂಗಾ ಮತ್ತು ಯಮುನೆಯ ಸಂಗಮ ಸ್ಥಳದಲ್ಲಿರುವುದರಿಂದ ಪ್ರಾಚೀನ ಕಾಲದಿಂದಲೂ ಹಿಂದೂಗಳಿಗೆ ಒಂದು ಯಾತ್ರ ಸ್ಥಳವಾಗಿದೆ. ಪ್ರಯಾಗದ ಧಾರ್ಮಿಕ ಸಮ್ಮೇಳನವನ್ನು "ಮೋಕ್ಷ ಮಹಾಪರಿಷತ್" ಎಂದು ಕರೆಯಲಾಗಿದೆ. ಈ ಧಾರ್ಮಿಕ ಸಮ್ಮೇಳನವು ಪ್ರಯಾಗದಲ್ಲಿ ಐದು ವರ್ಷಗಳಿಗೊಮ್ಮೆ ಸಮಾವೇಶಗೊಳ್ಳುತ್ತಿತ್ತು. ಪ್ರಾಚೀನ ಕಾಲದಿಂದಲೂ ಅನೇಕ ದೊರೆಗಳು ಈ ಧಾರ್ಮಿಕ ಸಮ್ಮೇಳನದಲ್ಲಿ ಸಕ್ರಿಯವಾದ ಪಾತ್ರವನ್ನು ವಹಿಸುತ್ತಿದ್ದರೆಂದು ತಿಳಿದು ಬರುತ್ತದೆ. ಹರ್ಷವರ್ಧನ ತಾನು ಈ ರೀತಿಯ ಐದು ಧಾರ್ಮಿಕ ಸಮ್ಮೇಳನಗಳನ್ನು ಪ್ರಯೋಗದಲ್ಲಿ ಸಮಾವೇಶಗೊಳಿಸಿದುದಾಗಿ ಹೇಳಿಕೊಂಡಿದ್ದಾನೆ. ಬುದ್ಧ, ಸೂರ್ಯ ಹಾಗೂ ಶಿವನನ್ನು ಆರಾಧಿಸಲಾಗುತ್ತಿತ್ತು. ಈ ಸಮಾವೇಶಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು, ಧಾರ್ಮಿಕ ನಾಯಕರು ಹಾಗೂ ವಿದ್ವಾಂಸರು ಹಾಜರಾಗುತ್ತಿದ್ದರೆಂದು ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನೆ. ಹರ್ಷವರ್ಧನನು ಈ ಸಮಾವೇಶದ ಎಲ್ಲಾ ದಿನಗಳಲ್ಲೂ ಸಾವಿರಾರು ಸನ್ಯಾಸಿಗಳಿಗೆ, ಬ್ರಾಹ್ಮಣರಿಗೆ ಹಾಗೂ ಶ್ರವಣರಿಗೆ ಅನ್ನದಾನದ ವ್ಯವಸ್ಥೆ ಮಾಡುತ್ತಿದ್ದನು. ಈ ಮೊಕ್ಷ ಮಹಾ ಪರಿಷತ್ತಿನಲ್ಲಿ ಎಲ್ಲಾ ಧರ್ಮದ ಪ್ರಜೆಗಳು ಸಮಾವೇಶಗೊಳ್ಳುತ್ತಿದ್ದರು. ಇದು ಹರ್ಷವರ್ಧನನು ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ನೀತಿಯಾಗಿತ್ತು. ಹ್ಯೂಯನ್‌ತ್ಸಾಂಗ್ ಈ ಎಲ್ಲಾ ಪ್ರಮುಖ ಘಟನೆಗಳನ್ನು ಕಣ್ಣಾರೆ ವೀಕ್ಷಿಸಿದನು. ಆತ ಹರ್ಷವರ್ಧನನ ಹೃದಯ ವೈಶಾಲ್ಯತೆಯ ಬಗ್ಗೆ ಕೊಂಡಾಡಿದ್ದಾನೆ.

ಕ್ರಿ. ಶ.ಏಳನೇ ಶತಮಾನದ ಉತ್ತರಾರ್ಧದಲ್ಲಿ ಭಾರತಕ್ಕೆ ಬಂದಿದ್ದ ಮತ್ತೊಬ್ಬ ಚೀಣಾಯಾತ್ರಿಕ ಇತ್ಸಿಂಗ್‌ನ ಬರವಣಿಗೆ ಬೌದ್ಧಮತದ ಸ್ಥಿತಿಗತಿಗಳಿಗೆ ಸಂಬಂಧಿಸಿದ ವಿವರಣೆಗಳನ್ನೊಳಗೊಂಡಿದೆ. ಇತ್ಸಿಂಗ್ ಕ್ರಿ.ಶ.672ರಲ್ಲಿ ಸುಮಾತ್ರದ ಮೂಲಕ ಭಾರತಕ್ಕೆ ಬಂದನು. ಅವನು **ನಳಂದ, ರಾಜಗೃಹ, ಬುದ್ಧಗಯೆ, ವೈಶಾಲಿ** ಮತ್ತು **ವಾರಣಾಸಿ** ಮೊದಲಾದ ಸ್ಥಳಗಳಿಗೆ ಭೇಟಿ ನೀಡಿದನು. ಬೌದ್ಧಮತ ಭಾರತದಲ್ಲಿ ಕ್ಷೀಣಿಸುತ್ತಿರುವುದನ್ನು ಮನಗಂಡನು. ಕ್ರಿ.ಶ695ರಲ್ಲಿ ತಾಮ್ರಲಿಪ್ತಿಯಿಂದ ಹಡಗಿನಲ್ಲಿ ಸ್ವದೇಶಕ್ಕೆ ಸಯಾಮಿನ ಮೂಲಕ ಪ್ರಯಾಣ ಮಾಡಿದನು. ಇತ್ಸಿಂಗ್ ನಳಂದ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹೆಚ್ಚು ವಿವರಗಳನ್ನು ನೀಡಿರುವನು.

## 56.9 ಸಾಹಿತ್ಯಾಭಿವೃದ್ದಿ

ಪಾಂಡಿತ್ಯ ಮತ್ತು ಸಾಹಿತ್ಯಭಿಮಾನಿಯಾದ ಹರ್ಷನ ಆಸ್ಥಾನ ಪ್ರಖ್ಯಾತ ಕವಿಗಳನ್ನು ವಿದ್ವಾಂಸರನ್ನು ಆಕರ್ಷಿಸಿತ್ತು. ಅವನ ಆಸ್ಥಾನ ಅನೇಕ ವಿದ್ವಾಂಸರ ಕೇಂದ್ರವಾಗಿತ್ತು. ಹರ್ಷನ ಕವಿತಾ ಪ್ರೌಢಿಮೆಯನ್ನು ಬಾಣನು ಶ್ಲಾಘಿಸಿರುವನು. ನಾಗಾನಂದ, ರತ್ನಾವಳಿ, ಪ್ರಿಯದರ್ಶಿಕ ಎಂಬ ಪ್ರಸಿದ್ಧ ನಾಟಕಗಳನ್ನೂ ಅನೇಕ ಬೌದ್ಧ ಶ್ಲೋಕಗಳನ್ನು ಹರ್ಷ ರಚಿಸಿದನು. ನಾಗಾನಂದ ನಾಟಕವನ್ನು ಸಾಮ್ರಾಟನ ಆಸ್ಥಾನದಲ್ಲಿ ಆಗಾಗ್ಗೆ ಯಶಸ್ವಿಯಾಗಿ ಅಭಿನಯಿಸಲಾಗುತ್ತಿದೆಂದು ತಿಳಿದುಬರುತ್ತದೆ. ಹರ್ಷನ ಕವಿತಾ ಪ್ರೌಢಿಮೆಯನ್ನು ಅವನ ಸಮಕಾಲೀನ ಹಾಗೂ ಅನಂತರದ ಕವಿಗಳೂ ಮನ ಮೆಚ್ಚಿ ಪ್ರಶಂಸಿದ್ದಾರೆ. ಹನ್ನೆರಡನೇ ಶತಮಾನದ ಪ್ರಸಿದ್ಧ ಕವಿ ಜಯದೇವ ತನ್ನ 'ಗೀತ ಗೋವಿಂದ'ಕೃತಿಯಲ್ಲಿ ಹರ್ಷನನ್ನೂ ಸ್ಮರಿಸಿರುವುದಲ್ಲದೆ ಅವನನ್ನು ಸುಪ್ರಸಿದ್ದ ಕವಿಗಳಾದ ಭಾಸ ಮತ್ತು ಕಾಳಿದಾಸ ಮೊದಲಾದವರಿಗೆ ಹೋಲಿಸಿದ್ದಾನೆ.

ಸಾಹಿತ್ಯಭಿಮಾನಿಯಾದ ಹರ್ಷ ಹಲವು ವಿದ್ವಾಂಸರಿಗೂ ಕವಿಗಳಿಗೂ ಪ್ರೋತ್ಸಾಹ ನೀಡಿ ಅವರನ್ನು ಗೌರವಿಸಿದ ಪ್ರಾಚೀನ ಭಾರತದ ಚಕ್ರವರ್ತಿಗಳಲ್ಲಿ ಅಗ್ರಗಣ್ಯ. ಚಕ್ರವರ್ತಿಯ ವೆಚ್ಚಕ್ಕೆಂದು ಮೀಸಲಾಗಿದ್ದ ಭೂಮಿಯ ಹುಟ್ಟುವಳಿಯ ನಾಲ್ಕನೇ ಒಂದು ಭಾಗವನ್ನು ವಿದ್ವಾಂಸರು ಮತ್ತು ಕವಿಗಳಿಗ ಕೊಟ್ಟು ಗೌರವಿಸಲು ಗೊತ್ತುಪಡಿಸಿದನು. ಹ್ಯೂಯೆನ್‌ತ್ಸಾಂಗ್‌ನ ಜೀವನ ಚರಿತ್ರೆಯಲ್ಲಿ ವರ್ಣಿಸಲಾಗಿರುವ ಪ್ರಕಾರ ಹರ್ಷಚಕ್ರವರ್ತಿ ಹಲವಾರು ವಿಷಯಗಳಲ್ಲಿ ವಿಶೇಷವಾಗಿ ಪಾಂಡಿತ್ಯ ಪಡೆದಿದ್ದ ಜಯಸೇನ ಎಂಬ ವಿದ್ವಾಂಸ ನಿಗೆ ಸುಮಾರು 80 ಗ್ರಾಮಗಳ ಹುಟ್ಟುವಳಿಯನ್ನು ಕೊಟಲು ಹರ್ಷವರ್ಧನನು ಮುಂದಾದಾಗ ಅದನ್ನು ಈ ವಿದ್ವಾಂಸನು ನಯವಾಗಿ ತಿರಸ್ಕರಿಸಿದನೆಂದು ತಿಳಿದು ಬರುತ್ತದೆ. ಹರ್ಷವರ್ಧನ ಅನೇಕ ಕವಿಗಳಿಗೆ ಆಶ್ರಯದಾತನಾಗಿದ್ದನು. ಅವನ ಆಸ್ಥಾನವನ್ನಲಂಕರಿಸಿದ ಕವಿಗಳು ಮತ್ತು ವಿದ್ವಾಂಸರಲ್ಲಿ ಪ್ರಖ್ಯಾತರೆಂದರೆ ಬಾಣ, ಮಯೂರ ಮತ್ತು ಮಾತಂಗ ,ದಿವಾಕರರು. ಬಾಣನು "ಹರ್ಷಚರಿತ" "ಕಾದಂಬರಿ" "ಚಂಡಿ ಶತಕ" ಇತ್ಯಾದಿ ಕೃತಿ ರಚನೆ ಮಾಡಿದನು. ಮಯೂರನ ಮುಖ್ಯ ಕೊಡಿಗೆ "ಸೂರ್ಯ ಶತಕ" ಇವುಗಳಲ್ಲದೆ ಬಾಣನು 'ಪಾರ್ವತೀಪರಿಣಯ' ಬರೆದನು. ಮಯೂರ ಎಂಬ ಕವಿಯು ಶೃಂಗಾರ ರಸ ಪ್ರಧಾನವಾದ ಅಷ್ಟಕ(ಎಂಟು ಪದ್ಯಗಳ ಒಂದು ಸಂಗ್ರಹ)ವನ್ನು ಹಾಗೂ 'ಸೂರ್ಯಶತಕ'ವನ್ನು ರಚಿಸಿದನು.

ಹರ್ಷನ ಆಸ್ಥಾನದಲ್ಲಿದ್ದ ಮತ್ತೊಬ್ಬ ಮೇದಾವಿಯೆಂದರೆ ಮಾತಂಗ ದಿವಾಕರ. ಇವನನ್ನು "ಕಲ್ಯಾಣ ಮಂದಿರ ಸ್ತೋತ್ರದ ಸಿದ್ದಸೇನ ದಿವಾಕರನೆಂದೂ, ಇನ್ನೂ ಕೆಲವರು 'ಭಕ್ತಮಾರಸ್ತೋತ್ರ'ದ ಜೈನ ಲೇಖಕ ಮಾನತುಂಗನೆಂದು ಗುರುತ್ತಿಸುತ್ತಾರೆ. ಪ್ರಖ್ಯಾತ ಕವಿ, ತತ್ವಜ್ಞ ಮತ್ತು ವ್ಯಾಕರಣಕಾರನಾದ ಬರ್ತೃಹರಿಯು ಕ್ರಿ.ಶ.ಏಳನೇ ಶತಮಾನದ ಆರಂಭ ಕಾಲದಲ್ಲಿ ಜೀವಿಸಿದ್ದನು.ಹರ್ಷನ ಪ್ರೋತ್ಸಾಹದಿಂದ ಬೌದ್ಧ ಮತೀಯ ವಿದ್ವಾಂಸರು ಆ ಮತಕ್ಕೆ ಸಂಬಂಸಿದ ಅನೇಕ ಗ್ರಂಥಗಳನ್ನು ರಚಿಸಿದನು. ಇತ್ಸಿಂಗನ ಬರವಣಿಗೆಯ ಪ್ರಕಾರ ಹರ್ಷಚಕ್ರವರ್ತಿ ಒಮ್ಮೆ ತನ್ನ ಆಸ್ಥಾನದ ಬೌದ್ಧಮತೀಯ ವಿದ್ವಾಂಸರನ್ನು ಕುರಿತು ಗೀತೆಗಳನ್ನು ರಚಿಸುವಂತೆ ಕೋರಿಕೆ ಸಲ್ಲಿಲಿದನು. ಬುದ್ಧನ ಜೀವನಕ್ಕೆ ಸಂಬಂಧಿಸಿದ ಐದುನೂರು ಬೇರೆ ಬೇರೆ ಗೀತೆಗಳನ್ನು ಬೇರೆ ಬೇರೆ ವಿದ್ವಾಂಸರು ರಚಿಸಿದರು. ಅವುಗಳನ್ನೆಲ್ಲಾ ಜಾತಕಮೂಲ ಎಂಬ ಹೆಸರಿನಿಂದ ಕ್ರೋಢಿಕರಿಸಲಾಯಿತು.

## 56.10 ವಿದ್ಯಾಭ್ಯಾಸ ಪ್ರಗತಿ.

ಹರ್ಷನು ವಿದ್ಯಾಭ್ಯಾಸಕ್ಕೆ ಅಪಾರ ಪ್ರೋತ್ಸಾಹವನ್ನು ನೀಡುತ್ತಿದ್ದು ವಲ್ಲಭಿ ಮತ್ತು ನಳಂದ ವಿಶ್ವವಿದ್ಯಾಲಯಗಳ ಪ್ರಗತಿಗೆ ಕಾರಣನಾದನಲ್ಲದೆ ಅಲ್ಲಿ ಬೌದ್ಧ ಮತ್ತು ಜೈನ ಮತ ತತ್ವಗಳ ಬೋಧನೆಗೆ ಅವಕಾಶ ಕಲ್ಪಿಸಿದನು. ಅರಣ್ಯಗಳಲ್ಲಿದ್ದ ಅಶ್ರಮಗಳಲ್ಲಿಯ ಭೌದ್ಧಿಕ ಚಟುವಟಿಕೆಗಳು ಪ್ರಾಚೀನ ಭಾರತದ ಒಂದು ವೈಶಿಷ್ಟವಾಗಿತ್ತು. ಬೌದ್ಧ ಸಂತನಾದ ದಿವಾಕರ ಮಿತ್ರನ 'ಅಶ್ರಮದ' ವರ್ಣನೆಯನ್ನು ಬಾಣನು. ಈ ಕೆಳಕಂಡಂತೆ ಕೊಡುತ್ತಾನೆ. ಈ ಅಶ್ರಮದಲ್ಲಿ ವಿವಿಧ ಮತಗಳ ಅನೇಕ ಪ್ರತಿನಿಧಿಗಳಿದ್ದರು. ಇವರು ಒಂದೇ ಕಡೆ ಇದ್ದು ವಿದ್ಯಾಭಾಸವನ್ನು ಮುಂದುವರಿಸುತ್ತಿದ್ದರು. ಇವರಲ್ಲಿ ವಿವಿಧ ಪ್ರಾಂತಗಳಿಂದ ಬಂದ ಬೌದ್ದನು, ಜೈನರು, ಬ್ರಾಹ್ಮಣ ಸಂತರು, ಕೃಷ್ಣನ ಅನುಯಾಯಿಗಳು, ಕಪಿಲದ ಅನುಯಾಯಿಗಳು ಕಾನಡದ ಅನುಯಾಯಿಗಳು, ವೈಯಾಕರಣಿಗಳು, ಪಂಚರಾತ್ರಿಕರು ಇವರೆಲ್ಲರೂ ತಮ್ಮ ತತ್ವಗಳ ಬಗ್ಗೆ ಸದಾ ವಿಚಾರ ವಿನಿಮಯ ವಾದಪ್ರತಿವಾದ, ಸಂಶಯ ನಿವಾರಿಸಿಕೊಳ್ಳವುದು. ಅಭ್ಯಾಸ ಮಾಡುವುದು, ಮುಂತಾದ ಅನೇಕ ಚಟುವಟಿಕೆಗಳಲ್ಲಿ ಅವರು ನಿರತರಾಗಿದ್ದರು. ಹರ್ಷನು ಈ ಅಶ್ರಮದ ಬಗ್ಗೆ ಬಹಳ ಗೌರವ ಭಾವನೆ ಹೊಂದಿದ್ದು

ವಿವಿಧ ರೀತಿಯಲ್ಲಿ ಪೋಷಿಸುತ್ತಿದ್ದನು. ಹರ್ಷನು ಆ ಕಾಲದ ಪ್ರಸಿದ್ಧ ವಿಶ್ವವಿದ್ಯಾಲಯವಾಗಿದ್ದ ನಳಂದ ವಿಶ್ವವಿದ್ಯಾಲಯಕ್ಕೆ ಅನೇಕ ಆಶ್ರಮಗಳನ್ನು ಕಟ್ಟಿಸುವ ಮೂಲಕ ಹಾಗೂ ಇನ್ನಿತರ ವಿಧಗಳಿಂದ ಪೋಷಿಸಿದನು.

ಕಲಾರಾಧಕ, ಸಾಹಿತ್ಯಾಭಿಮಾನಿ ಹಾಗೂ ಜ್ಞಾನಪಕ್ಷಪತಿಯಾದ ಹರ್ಷವರ್ಧನ ವಿದ್ವಾಂಸರಿಗೆ ಪ್ರೋತ್ಸಾಹ ನೀಡಿ ಅವರನ್ನು ಗೌರವಿಸಿದ ಪ್ರಾಚೀನ ಚಕ್ರವರ್ತಿಗಳಲ್ಲಿ ಅಗ್ರಗಣ್ಯನೆನಿಸಿದ್ದಾನೆ. ಈತನು ಸ್ವತಃ ವಿದ್ವಾಂಸನಾಗಿ ಅನೇಕ ಕೃತಿಗಳನ್ನು ರಚಿಸಿದಾಗ್ಯೂ ವಿದ್ವಾಂಸರನ್ನೂ , ಕವಿಗಳನ್ನೂ ಆಕರ್ಷಿಸಿದುದಲ್ಲದೆ ಪ್ರಾಥಾಮಿಕ ಮತ್ತು ಉನ್ನತ ಶಿಕ್ಷಣದ ವಿದ್ಯಾಸಂಸ್ಥೆಗಳಿಗೆ ವಿಶೇಷ ಸವಲತ್ತುಗಳನ್ನು ನೀಡಿ ಬೆಳೆಸಿದನು. ಅಂದಿನ ಸುಪ್ರಸಿದ್ಧ ವಿದ್ವಾಂಸರೂ ಮತ್ತು ಕವಿಗಳೂ ಆದ ಬಾಣ, ಮಯೂರ, ಸಿದ್ಧಸೇನ, ಹರಿದತ್ತ, ಮತಂಗ, ದಿವಾಕರ ಮೊದಲಾದವರು ಹರ್ಷನ ಆಸ್ಥಾನದಲ್ಲಿದ್ದು ಸಾಹಿತ್ಯ ರಚನೆಯ ಜೊತೆಗೆ ವಿದ್ಯಾಭಿವೃದ್ಧಿಗೂ ಸೇವೆಸಲ್ಲಿಸಿದರೆಂದರೆ ತಪ್ಪಾಗಲಾರದು. ಚಕ್ರವರ್ತಿಯ ವೆಚ್ಚಕ್ಕೆಂದು ಮೀಸಲಾಗಿದ್ದ ಭೂಮಿಯ ಹುಟ್ಟುವಳಿಯ ನಾಲ್ಕನೆಯ ಒಂದು ಭಾಗವನ್ನು ವಿದ್ವಾಂಸರಿಗೆ ಕೊಟ್ಟು ಗೌರವಿಸಲು ಗೊತ್ತುಪಡಿಸಿದುದು ಅವನು ಜ್ಞಾನ ಪಕ್ಷಪಾತಿಯಾಗಿದ್ದೂದಕ್ಕೆ ಒಂದು ಶ್ರೇಷ್ಠ ನಿದರ್ಶನವಾಗಿದೆ.. ಹ್ಯೂಯೆನ್‌ತ್ಸಾಂಗ್‌ನ ಜೀವನಚರಿತ್ರೆಯಲ್ಲಿ ವರ್ಣಿಸಲಾಗಿರುವ ಪ್ರಕಾರ ಹರ್ಷಚಕ್ರವರ್ತಿ ಹೇತುವಿದ್ಯೆ, ಶಬ್ದವಿದ್ಯೆ, ಯೋಗಶಾಸ್ತ್ರ, ನಾಲ್ಕು ವೇದಗಳು, ಖಗೋಳಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಗಣಿತಶಾಸ್ತ್ರ ಇವುಗಳಲ್ಲಿ ವಿಶೇಷವಾಗಿ ಪಾಂಡಿತ್ಯ ಪಡೆದಿದ್ದ ಜಯಸೇನ ಎಂಬ ವಿದ್ವಾಂಸನಿಗೆ ತನ್ನ ಸಾಮ್ರಾಜ್ಯದ ಒರಿಸ್ಸಾ ಪ್ರಾಂತದ ಎಂಬತ್ತು ಗ್ರಾಮಗಳ ಹುಟ್ಟುವಳಿಯನ್ನು ಕೊಡಲು ಮುಂದಾದನೆಂದೂ, ಆದರೆ ಜಯಸೇನ ಅಷ್ಟು ಹಿರಿದಾದ ದಾನವನ್ನು ಸ್ವೀಕರಿಸುವುದರಿಂದ ಐಶ್ವರ್ಯ ಪ್ರಲೋಭನಕ್ಕೊಳಗಾಗುವನೆಂಬ ಭೀತಿಯಿಂದ ದಾನವನ್ನು ಸ್ವೀಕರಿಸಲಿಲ್ಲವೆಂದೂ ತಿಳಿದುಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕ್ರಿ.ಶ.ಏಳನೇ ಶತಮಾನದಲ್ಲಿ ವಿದ್ಯಾಭ್ಯಾಸವು ವಿಶೇಷವಾಗಿ ವ್ಯಾಪಕವಾಗಿತ್ತು ಎಂಬುದು ವೇದ್ಯವಾಗುತ್ತದೆ. ಸಮಕಾಲೀನ ಸ್ಮಾರಕಗಳು, ಪ್ರವಾಸಿಗರ ಬರವಣಿಗೆಗಳು ದೇಶೀಯ ಶಾಸನಗಳು,ಸ್ಮಾರಕಗಳು ಹಾಗೂ ಗ್ರಂಥಗಳು ಅಂದಿನ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಅಗಾಧ ಬೆಳಕನ್ನು ಚೆಲ್ಲುತ್ತವೆ. ಬಾಣ ಮತ್ತು ಹ್ಯೂಯೆನ್‌ತ್ಸಾಂಗ್‌ರ ಬರವಣಿಗೆಗಳಲ್ಲಿ ಕಂಡುಬರುವಂತೆ ಹರ್ಷಚಕ್ರವರ್ತಿ ವೈದಿಕ ಮತ್ತು ಬೌದ್ಧವಿಹಾರ ವಿದ್ಯಾಕೇಂದ್ರಗಳಿಗೆ ವಿಶೇಷ ಸವಲತ್ತುಗಳನ್ನು ನೀಡುವ ಮೂಲಕ ವಿದ್ಯಾಭ್ಯಾಸಕ್ಕೆ ಉದಾರ ಪ್ರೋತ್ಸಾಹ ನೀಡಿದನು. ಕನ್ಯಕುಬ್ಜ, ವಾರಣಾಸಿ, ಮಥುರ ಮತ್ತು ವಲ್ಲಭಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಹಿಂದೂ ದೇವಾಲಯಗಳಿದ್ದವು. ಅಲ್ಲಿ ವೈಧಿಕ ಧರ್ಮದ ಹಲವಾರು ಶಾಖೆಗಳಾದ ಕಪಿಲ, ಸಾಂಖ್ಯ, ಕಾನಡ, ಭಾಗವತ, ಪಂಚರಾತ್ರಿಕ, ಉಪನಿಷತ್, ಲೋಕಾಯಿತ, ಮೊದಲಾದ ಪಂಥಗಳ ಆಚಾರ್ಯರೂ, ವಿದ್ಯಾರ್ಥಿಗಳೂ ವಿಶೇಷ ಅಧ್ಯಯನದಲ್ಲಿ ತೊಡಗಿದ್ದರು. ಈ ರೀತಿಯಲ್ಲಿ ಹರ್ಷನು ವಿದ್ಯಾಭ್ಯಾಕ್ಕೆ ಅಪಾರ ಪ್ರೋತ್ಸಾಹವನ್ನು ನೀಡುತ್ತಿದ್ದು ,ವಲ್ಲಭಿ ಮತ್ತು ನಳಂದ ವಿಶ್ವವಿದ್ಯಾನಿಲಯಗಳ ಪ್ರಗತಿಗೆ ಕಾರಣನಾದನಲ್ಲದೆ ಅಲ್ಲಿ ಬೌದ್ಧ ಮತ್ತು ಜೈನ ಮತತತ್ವಗಳ ಬೋದನೆಗೆ ಅವಕಾಶ ಕಲ್ಪಿಸಿದ್ದನು.

ವೈದಿಕ ವಿದ್ಯಾಕೇಂದ್ರಗಳಂತೆ ಬೌದ್ಧ ವಿಹಾರಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು. ಬೌದ್ಧಭಿಕ್ಷುಗಳು ಪ್ರಾರಂಭದಿಂದಲೂ ಜ್ಞಾನಾರ್ಜನೆಗೆ ಹೆಚ್ಚು ಗಮನ ನೀಡಿದ್ದರು. ಅಲ್ಲಲ್ಲಿ ಸ್ಥಾಪಿತವಾಗಿದ್ದ ಬೌದ್ಧವಿಹಾರಗಳೂ ಉನ್ನತ ಅಧ್ಯಯನ ಕೇಂದ್ರಗಳಾಗಿದ್ದವು. ಬೌದ್ಧಸನ್ಯಾಸಿಯೂ ವಿದ್ವಾಂಸನೂ ಆದ ದಿವಾಕರ ಮಿತ್ರನ 'ಆಶ್ರಮದ'ಚಟುವಟಿಕೆಗಳ ಬಗೆಗೆ ಬಾಣಕವಿಯು ವರ್ಣಿಸಿರುವನು. ಅವನ ಹೇಳಿಕೆಯಂತೆ "ಈ ಆಶ್ರಮದಲ್ಲಿ ವಿವಿಧ ಧರ್ಮದ ಅನೇಕ ಪ್ರತಿನಿಧಿಗಳು ಒಂದೇ ಕಡೆ ಇದ್ದು ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಈ ಪ್ರತಿನಿಧಿಗಳಲ್ಲಿ ವಿವಿಧ ಪ್ರಾಂತಗಳಿಂದ ಬಂದಿದ್ದ ಬೌದ್ಧರು, ಜೈನರು, ಬ್ರಾಹ್ಮಣಸಂತರು, ಕೃಷ್ಣನ ಅನುಯಾಯಿಗಳು, ಕಾನಡದ ಅನುಯಾಯಿಗಳು, ವೈಯಾಕರಣಿಗಳು, ಪಂಚರಾತ್ರಿಕರು, ಹೀಗೆ ಹಲವಾರು ವಿದ್ವತ್‌ಜನರು ತಮ್ಮ ತಮ್ಮ ಬಗೆಗೆ ವಿಚಾರವಿನಿಮಯ ಮತ್ತು ಚರ್ಚೆಗಳ ಮೂಲಕ ಸಂಶಯ ನಿವಾರಿಸಿಕೊಂಡು, ಅಧ್ಯಯನ ಮತ್ತಿತ್ತರ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಹರ್ಷನು ಈ ಆಶ್ರಮದ ಬಗ್ಗೆ ಬಹಳ ಗೌರವ ಭಾವನೆ ಹೊಂದಿದ್ದು ವಿವಿಧ ರೀತಿಯಲ್ಲಿ ಪೋಷಿಸುತ್ತಿದ್ದನು. ಹಾಗೂ ಆ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದನಳಂದ ವಿಶ್ವವಿದ್ಯಾನಿಲಯಕ್ಕೆ ವಿಶೇಷ ಗಮನಹರಿಸಿ, ಆದ್ಯತೆಯ ಮೇರೆಗೆ ಅನೇಕ ಆಶ್ರಮಗಳನ್ನು ಕಟ್ಟಿಸುವ ಮೂಲಕ ಉನ್ನತ ಶಿಕ್ಷಣದ ಬೆಳವಣಿಗೆಗೆ ಕಾರಣಕರ್ತನಾದನು.

ಈ ರೀತಿಯಲ್ಲಿ ಹರ್ಷವರ್ಧನನು ವಿಶಾಲ ಸಾಮ್ರಾಜ್ಯ ಸ್ಥಾಪಿಸಿ, ನಲವತ್ತೆರಡು ವರ್ಷಗಳ ಕಾಲ ವೈಭವದಿಂದ ಆಳ್ವಿಕೆ ನೆಡೆಸಿ, ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೊತ್ಸಾಹ ನೀಡಿದ ಪ್ರಾಚೀನ ಭಾರತದ ಅವಿಸ್ಮರಣೀಯ ಸಾಮ್ರಾಟರಲ್ಲಿ

ಒಬ್ಬನೆಂದು ಪರಿಗಣಿಸಬಹುದು. ಅವನು ಖಡ್ಗ ಹಿಡಿದು ಹಿರಿದಾದ ಸಾಮ್ರಾಜ್ಯ ಕಟ್ಟಿ ದಕ್ಷತೆಯಿಂದ ಆಳಿದಂತೆ; ಲೇಖನಿ ಹಿಡಿದು ಪ್ರತಿಭಾಶಾಲಿ ಕವಿಯೆನಿಸಿಕೊಂಡನು. ಅವನು ವೈದಿಕ ಮತ್ತು ಬೌದ್ಧ ದರ್ಶನಗಳನ್ನು ಪ್ರೋತ್ಸಾಹಿಸಿ, ಸರ್ವಧರ್ಮಸಹಿಷ್ಣು ಎನಿಸಿದಂತೆ ನಳಂದ ವಿಶ್ವವಿದ್ಯಾನಿಲಯದಂತ ವಿಶ್ವಾಖ್ಯಾತಿ ಗಳಿಸಿದ್ದ ಮಹಾವಿದ್ಯಾಲಯ ಪೀಠವನ್ನು ಪ್ರೋತ್ಸಾಹಿಸಿ, ಬೆಳೆಸಿ ವಿದ್ಯಾಪಕ್ಷಪಾತಿಯೆನಿಸಿದನು. ಇದರಿಂದ ಅವನ ಕೀರ್ತಿ ದೇಶವಿದೇಶಗಳಲ್ಲಿ ಪ್ರಸರಿಸಿತು.

## 56.11 ಘಟಕದ ಸಾರಾಂಶ

* ಗುಪ್ತರ ಅವನತಿಯ ನಂತರ ಉತ್ತರಭಾರತದಲ್ಲಿ ಥಾನೇಶ್ವರದ ವರ್ಧನ ವಂಶದ ದೊರೆಗಳು ಪ್ರವರ್ಧಮಾನಕ್ಕೆ ಬಂದರು.
* ಥಾನೇಶ್ವರ ವರ್ಧನ ವಂಶದ ಇತಿಹಾಸವನ್ನು ತಿಳಿಯಲು ಚೀನಿ ಯಾತ್ರಿಕ ಹ್ಯೂಯನ್‌ತ್ಸಾಂಗ್ ಮತ್ತು ಬಾಣನ ಬರವಣಿಗೆಗಳು ಪ್ರಮುಖ ಆಧಾರಗಳಾಗಿವೆ.
* ಹರ್ಷವರ್ಧನನು ವರ್ಧನ ವಂಶದ ಪ್ರಖ್ಯಾತ ದೊರೆ. ಇವನು ದಕ್ಷಿಣದ ಪ್ರಖ್ಯಾತ ದೊರೆ ಇಮ್ಮಡಿ ಪುಲಕೇಶಿಯಿಂದ ಸೋಲನ್ನು ಅನುಭವಿಸಿದನು.
* ಹರ್ಷವರ್ಧನನ ಆಡಳಿತ ವ್ಯವಸ್ಥೆ, ಗುಪ್ತರ ಆಡಳಿತ ವ್ಯವಸ್ಥೆಯಂತೆಯೇ ಇತ್ತು.
* ಹರ್ಷವರ್ಧನನು ಬೌದ್ಧಧರ್ಮವನ್ನು ಸ್ವೀಕರಿಸಿ ಅದನ್ನು ಮತ್ತಷ್ಟು ಜನಪ್ರಿಯಗೊಳಿಸಿದನು.
* ವಿದ್ಯಾಪಕ್ಷಪಾತಿಯಾಗಿದ್ದ ಹರ್ಷವರ್ಧನನು ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿಸ್ವತಃ ಅನೇಕ ಕೃತಿಗಳನ್ನು ರಚಿಸಿದನು.
* ನಳಂದ ಮತ್ತು ಇತರ ಉನ್ನತ ವಿದ್ಯಾಕೇಂದ್ರಗಳು ಇವನ ಕಾಲದಲ್ಲಿ ಪ್ರಖ್ಯಾತಿ ಪಡೆದಿದ್ದವು.

## 56.12 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು


1. ಜಿ.ಆರ್. ರಂಗಸ್ವಾಮಯ್ಯ - ಪ್ರಾಚೀನ ಭಾರತ
2. ಆರ್.ಜಿ.ಶಿವಣ್ಣ - ಪ್ರಾಚೀನ ಭಾರತದ ಇತಿಹಾಸ
3. ಶಾರದ ಪ್ರಸಾದ್(ಅನು) - ಭಾರತದ ಪ್ರೌಢ ಇತಿಹಾಸ
4. Dr. Baijyanath Sharma - Harsha And His Times
5. Pannikkar.K.M. - Harshavardhana of Kanuj
6 Luniya .B.N. - Evolution of Indian Culture.


ಡಾ. ಮಹಾದೇವಿ

# ಟಿಪ್ಪಣಿ

# ಘಟಕ-57

## ಪ್ರಾಚೀನ ಭಾರತದಲ್ಲಿ ಶಿಕ್ಷಣ ಪದ್ಧತಿ - ಪ್ರಸಿದ್ಧ ವಿಶ್ವವಿದ್ಯಾಲಯಗಳು

*ರಚನೆ*

**57.0** ಉದ್ದೇಶ

**57.1** ಪೀಠಿಕೆ

**57.2** ಪ್ರಾಚೀನ ಭಾರತದಲ್ಲಿ ಶಿಕ್ಷಣ ಪದ್ಧತಿ

  **57.2.1** ಬೌದ್ಧರ ಶಿಕ್ಷಣ ಪದ್ಧತಿ

**57.3** ಪ್ರಸಿದ್ಧ ವಿಶ್ವವಿದ್ಯಾನಿಲಯಗಳು

  **57.3.1** ತಕ್ಷಶಿಲಾ ವಿಶ್ವವಿದ್ಯಾನಿಲಯ

  **57. 3.2** ನಳಂದ ವಿಶ್ವವಿದ್ಯಾನಿಲಯ

    **57.3.2.1** ನಳಂದದ ಪೂರ್ವ ಇತಿಹಾಸ

    **57.3.2.2** ಕಟ್ಟಡಗಳು

    **57.3.2.3** ನಳಂದಕ್ಕೆ ಪ್ರವೇಶ

    **57.3.2.4** ಪಠ್ಯಕ್ರಮ

    **57.3.2.5** ಬೋಧಕ ವರ್ಗ

    **57.3.2.6** ಗ್ರಂಥ ಭಂಡಾರ

    **57.3.2 .7** ಕೊಡುಗೆಗಳು

  **57.3 .3.** ವಲ್ಲಭಿ ವಿಶ್ವವಿದ್ಯಾನಿಲಯ

  **57.3.4.** ವಿಕ್ರಮಶೀಲ ವಿಶ್ವವಿದ್ಯಾನಿಲಯ

  **57.3.5.** ಒದಂತಪುರಿ ಮತ್ತು ಇತರ ವಿದ್ಯಾನಿಲಯಗಳು

**57.4** ಘಟಕದ ಸಾರಾಂಶ

**57.5** ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು.

## 57.0. ಉದ್ದೇಶ

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕಳಕಂಡ ಈ ಅಂಶಗಳನ್ನು ನೀವು ತಿಳಿದುಕೊಳ್ಳಲಿದ್ದೀರಿ

* ವೈದಿಕ ಶಿಕ್ಷಣ ಕ್ರಮವನ್ನು ಅರಿಯಲು
* ವಿದ್ಯಾರ್ಜನೆಯಲ್ಲಿ ಗುರುವಿನ ಪಾತ್ರವನ್ನು ಗುರುತಿಸಲು
* ಬೌದ್ಧರ ಶಿಕ್ಷಣ ಪದ್ದತಿಯ ಪ್ರಾಮುಖ್ಯತೆಯನ್ನು ಅಂದಾಜಿಸಲು
* ವಿದ್ಯಾರ್ಜನೆಯಲ್ಲಿದ್ದ ಪ್ರಮುಖ ಅಧ್ಯಯನ ವಿಷಯಗಳನ್ನು ಗ್ರಹಿಸಲು
* ಪ್ರಾಚೀನ ಕಾಲದಲ್ಲಿದ್ದ ಪ್ರಸಿದ್ದ ವಿಶ್ವವಿದ್ಯಾನಿಲಯಗಳನ್ನು ಗುರುತಿಸಲು
* ನಳಂದ ವಿಶ್ವವಿದ್ಯಾನಿಲಯದಲ್ಲಿದ್ದ ಉನ್ನತ ಶಿಕ್ಷಣ ಪದ್ಧತಿ ಪಠ್ಯಕ್ರಮಗಳು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಹಾಗೂ ನಳಂದ ವಿಶ್ವವಿದ್ಯಾನಿಲಯದ ಪ್ರಖ್ಯಾತಿಯನ್ನು ವ್ಯಾಖ್ಯಾನಿಸಲು ನೀವು ಸಮರ್ಥರಾಗುವಿರಿ.

## 57.1. ಪೀಠಿಕೆ

ಪ್ರಾಚೀನ ಭಾರತದಲ್ಲಿ ಭಾರತೀಯರು ಶಿಕ್ಷಣದ ಬಗೆಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ವಿದ್ಯಾರ್ಜನೆಯಲ್ಲಿ 'ಗುರು'ವಿನ ಪಾತ್ರ ಪ್ರಾಧಾನ ವಾದುದಾಗಿತ್ತು.ಜನರು ಗುರುವಿನ ಮೂಲಕ ಜ್ಞಾನಾರ್ಜನೆಯನ್ನು ಪಡೆಯುವ ತವಕ ಹೊಂದಿದ್ದರು. ಅಂದಿನ ವಿದ್ಯಾರ್ಥಿಗಳಲ್ಲಿ ಸರಳತೆ, ಸಂಯಮವಿದ್ದು ಆತ್ಮಜ್ಞಾನದ ಅರಿವನ್ನು ಸಾಧಿಸುವ ಗುರಿಯೊಂದಿದ್ದರು. ಪ್ರಾಚೀನ ಭಾರತೀಯ ವಿದ್ಯಾಭ್ಯಾಸ ಕ್ರಮವನ್ನುತಿಳಿಯಲು ವೇದಗಳು, ಸೂತ್ರಗಳು, ಕಾವ್ಯಗಳು,ಹಾಗೂ ಯಾತ್ರಿಕರ ಬರವಣಿಗೆಗಳು ಸಹಕಾರಿಯಾಗಿವೆ.

ಗುಪ್ತರ ಮತ್ತು ಹರ್ಷವರ್ಧನನ ಕಾಲದಲ್ಲಿ ಶಿಕ್ಷಣವು ಹೆಚ್ಚು ಅಭಿವೃದ್ಧಿ ಸಾಧಿಸಿತು. 'ಗುರು' ಆ ಕಾಲದ ಶಿಕ್ಷಣ ವ್ಯವಸ್ಥೆಯ ಪ್ರಧಾನ ವ್ಯಕ್ತಿಯಾಗಿದ್ದ. ಗುರು ಜ್ಞಾನಾರ್ಥಿಗಳಿಗೆ ವಿದ್ಯಾರ್ಜನೆ ಮಾಡುವುದು ತನ್ನ ಆದ್ಯ ಕರ್ತವ್ಯವೆಂದು ತಿಳಿದಿದ್ದನು. ಅಂದು ಪ್ರಸಿದ್ದ ಆಚಾರ್ಯರು ಹಾಗೂ ವಿದ್ವಾಂಸರುಗಳು ವೈಯಕ್ತಿಕ ಇಲ್ಲವೇ ಖಾಸಾಗಿಯಾಗಿ ತಮ್ಮ ಮನೆಗಳಲ್ಲಿ ಅಥವಾ ಮಠಗಳಲ್ಲಿ ವಿದ್ಯಾರ್ಜನೆಯನ್ನು ಮಾಡುತ್ತಿದ್ದರು. ಆರಂಭದಲ್ಲಿ ವಿದ್ಯಾರ್ಜನೆ ಕೇವಲ ಶ್ಲೋಕಗಳನ್ನು ಪಠಿಸುವುದಕ್ಕೆ ಸೀಮಿತವಾಗಿತ್ತು.ವಿದ್ಯಾರ್ಥಿಗಳು ಅವುಗಳನ್ನು ಮನನಮಾಡಿ ಗುರುಗಳೊಡನೆ ಚರ್ಚಿಸುವುದರ ಮೂಲಕ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಳ್ಳತ್ತಿದ್ದರು. ಕಾಲಾನಂತರ ವೇದಗಳು, ವ್ಯಾಕರಣ, ಸಂಸ್ಕೃತ, ತತ್ವಶಾಸ್ತ್ರ, ತರ್ಕಶಾಸ್ತ್ರ, ವೈದ್ಯಕೀಯ ಮೊದಲಾದ ವಿಷಯಗಳನ್ನು ಗುರಿಸಾಧನೆಗಾಗಿ ಅತ್ಯುತ್ಸಾಹದಿಂದ ಅಧ್ಯಯನ ಮಾಡಲಾರಂಭಿಸಿದರು. ಲೌಕಿಕ ವಿಷಯಗಳೂ ಅಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸೇರ್ಪಡೆಯಾಗಿದ್ದವು. ಒಟ್ಟಿನಲ್ಲಿ ಅಂದಿನ ಶಿಕ್ಷಣಕ್ರಮವು ಧರ್ಮ ಮತ್ತು ಸಾಹಿತ್ಯ ಪ್ರಧಾನವಾದುದಾಗಿತ್ತು.

ಬ್ರಾಹ್ಮಣ ಗುರುಗಳಂತೆ ಬೌದ್ಧ ಸಂನ್ಯಾಸಿಗಳೂ ಅಂದು ಜನರಿಗೆ ವಿದ್ಯಾರ್ಜನೆ ಮಾಡುತ್ತಿದ್ದರು. ಹಿಂದೂ ಶಿಕ್ಷಣಕ್ರಮದಂತೆ ಬೌದ್ಧರ ಶಿಕ್ಷಣ ಕ್ರಮವೂ ಬೌದ್ಧಧರ್ಮ ಮತ್ತು ಸಾಹಿತ್ಯ ಪ್ರಧಾನವಾದುದಾಗಿತ್ತು. ಪ್ರಾಚೀನ ಕಾಲದಲ್ಲಿ ರಾಜರು, ಮಂತ್ರಿಮಹೋದಯರು ಬೌದ್ದ ಸನ್ಯಾಸಿಗಳಿಗಾಗಿ ಅನೇಕ ವಿಹಾರಗಳನ್ನು ನಿರ್ಮಿಸಿದ್ದರು. ಆ ಬೌದ್ಧ ವಿಹಾರಗಳು ಬೌದ್ಧ ತತ್ವಗಳನ್ನು ಪ್ರಚಾರ ಮಾಡುವುದರ ಜೊತೆಗೆ ಶಿಕ್ಷಣವನ್ನೂ ನೀಡಿದ್ದವು. ಕೊನೆಯ ಗುಪ್ತ ದೊರೆಗಳ ಕಾಲದಲ್ಲಿ ಹಲವಾರು ಬೌದ್ಧವಿಹಾರಗಳು ಸ್ಥಾಪನೆಗೊಂಡಿದ್ದವು. ಇವು ಮುಂದೆ ಪ್ರಸಿದ್ಧ ಶೈಕ್ಷಣಿಕ ಕೇಂದ್ರಗಳಾಗಿ ಪರಿವರ್ತಿತಗೊಂಡವು. ಅಂತಹ ಮಹಾವಿಹಾರಗಳಲ್ಲಿ ನಳಂದವು ಒಂದು . ಇಲ್ಲಿನ ಅಧ್ಯಯನ ವಿಷಯಗಳು, ಪ್ರತಿಭಾವಂತ ಅಧ್ಯಾಪಕ ವೃಂದ, ಶಿಕ್ಷಣಕ್ರಮ, ಶಿಕ್ಷಣ ಸೌಲಭ್ಯ, ವಿದ್ಯಾರ್ಥಿಗಳ ಶಿಸ್ತು ಮೊದಲಾದವುಗಳಿಂದ ಆಕರ್ಷಿತಗೊಂಡು ದೇಶವಿದೇಶಗಳಿಂದ ವಿದ್ಯಾರ್ಥಿಗಳು, ಜ್ಞಾನಾರ್ಜನೆಗಾಗಿ ಈ ವಿಶ್ವವಿದ್ಯಾಲಯಕ್ಕೆ ಆಗಮಿಸುತ್ತಿದ್ದರು. ಇದರಿಂದ ಕ್ರಿ.ಶ. ಏಳನೇ ಶತಮಾನದಲ್ಲಿ ನಳಂದವು ವಿಶ್ವ ಪ್ರಸಿದ್ಧವಾಯಿತು. ನಳಂದದಂತೆಯೇ ಇನ್ನೂ ಅನೇಕ ವಿದ್ಯಾಕೇಂದ್ರಗಳು ಈ ಕಾಲದಲ್ಲಿ ಸ್ಥಾಪನೆಗೊಂಡುವು. ಅವುಗಳಲ್ಲಿ ತಕ್ಷಶಿಲೆ ವಲ್ಲಭಿ ವಿದ್ಯಾಪೀಠ, ವಿಕ್ರಮಶೀಲ, ಓದಾಂತಪುರಿ ಮಿಥಿಲ, ಕಂಚಿ ಮೊದಲಾದವು ಪ್ರಮುಖವಾದವು. ವಲ್ಲಭಿ, ವಿಕ್ರಮಶೀಲ ಮತ್ತು ಕಂಚಿ ನಳಂದದಷ್ಟೇ ಪ್ರಸಿದ್ಧಿ ಪಡೆದಿದ್ದ ವಿದ್ಯಾಕೇಂದ್ರಗಳಾಗಿದ್ದವು. ಇಲ್ಲಿ ಕೂಡ ವೈದಿಕ ಮತ್ತು ಬೌದ್ಧತತ್ವಗಳಿಗೆ ಸಂಬಂಧಿಸಿದ ಶಿಕ್ಷಣವನ್ನು ನೀಡಲಾಗುತ್ತಿತ್ತು.

## 57.2 ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸ ಪದ್ಧತಿ

ಪ್ರಾಚೀನ ಭಾರತೀಯ ವಿದ್ಯಾಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಯು ತನ್ನ 5-6ನೇ ವಯಸ್ಸಿನಲ್ಲಿ 'ಉಪನಯನ ' ಎಂಬ ಕರ್ಮಾಚರಣೆ ಪಡೆದ ನಂತರ ವಿದ್ಯಾರ್ಜನೆಗಾಗಿ 'ಗುರುಕುಲ' ಅಥವಾ 'ಆಶ್ರಮ'ಕ್ಕೆ ಸೇರುತ್ತಿದ್ದನು. 8 ರಿಂದ12ನೇ ವಯಸ್ಸಿನಲ್ಲಿ 'ಉಪನಯನ ' ಸಂಸ್ಕಾರ ನಡೆಸುವುದು ಉತ್ತಮವೆಂದು ಸ್ಮೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಈ ಸಂದರ್ಭದಲ್ಲಿ ಗುರುವು ವಿದ್ಯಾರ್ಥಿಗೆ ಗಾಯಿತ್ರಿ ಮಂತ್ರವನ್ನು ಉಪದೇಶಿಸಿದ ನಂತರ ವಿಧ್ಯುಕ್ತವಾಗಿ ಬ್ರಹ್ಮಚಾರಿಯೆನಿಸಿ ತನ್ನ ಆಶ್ರಮ ಅಥವಾ ಗುರುಕುಲದಲ್ಲಿ ವಿದ್ಯಾರ್ಜನೆಯಲ್ಲಿ ತೊಡಗಲು ಅರ್ಶೀವದಿಸುತ್ತಿದ್ದನು. ವಿದ್ಯಾರ್ಜನೆಗೆ ಬ್ರಹ್ಮಚರ್ಯಾವಸ್ಥೆ ಬಹು ಉತ್ತಮವಾದ ಕಾಲವೆಂದು ಪರಿಗಣಿಸಲಾಗಿದ್ದಿತು. ವಿದ್ಯಾರ್ಥಿ ತನ್ನ ತಂದೆತಾಯಿಗಳಿಂದ ಕೇವಲ ಭೌತಿಕ ಶರೀರವನ್ನು ಪಡೆದು ಅನಂತರ ಆಧ್ಯಾತ್ಮಿಕತೆಯನ್ನು ಗುರುವಿನಿಂದ ಪಡೆಯಬೇಕೆಂಬುದು ಉಪನಯನದ ಸಂಕೇತವಾಗಿತ್ತು. ತಪೋವನಗಳಲ್ಲಿದ್ದ ಗುರುಕುಲ ಸೇರಿದ ವಿದ್ಯಾರ್ಥಿ ಕಠಿಣ ನಿಯಮಗಳನ್ನು ಪಾಲೀಸಬೇಕಿದ್ದಿತು.ಬ್ರಹ್ಮಶ್ಚರ್ಯ, ಪರಿಶುದ್ಧತೆ, ಸರಳ ಜೀವನ ಹಾಗೂ ಉನ್ನತ ಜ್ಞಾನದ ಆರ್ಜನೆ ವಿದ್ಯಾರ್ಥಿ ದಿಶೆಯ ಕಾರ್ಯಗಳಲ್ಲಿ ಪ್ರಮುಖವಾಗಿದ್ದವು. ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಯಾದವನು ತನ್ನ ಜೀವನದ ಇತರ ಮೂರು ಘಟ್ಟಗಳಿಗಿಂತ ವಿದ್ಯಾರ್ಥಿ ದಿಶೆಯಲ್ಲಿ ಜ್ಞಾನಸಂಪಾದಿಸುವುದು ಸರಿಯಾದ ಕ್ರಮವಾಗಿತ್ತು.

ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸವು ಮೂರು ಮೂಲ ಉದ್ದೇಶಗಳನ್ನು ಒಳಗೊಂಡಿತ್ತು. ಜ್ಞಾನಸಂಪಾದಿಸುವುದು, ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸುವುದು , ಧಾರ್ಮಿಕ ಪ್ರಕ್ರಿಯೆಗಳನ್ನು ಆಚರಿಸುವುದನ್ನು ಅರಿತುಕೊಳ್ಳುವುದಾಗಿತ್ತು. ಆ ಮೂಲಕ ವಿದ್ಯಾರ್ಥಿತನ್ನ ಜೀವನದಲ್ಲಿ ಮುಂದೆ ಅನುಸರಿಸಬೇಕಾದ ಮಾರ್ಗ, ರೂಪಿಸಿಕೊಳ್ಳಬೇಕಾದವ್ಯಕ್ತಿತ್ವ ಹಾಗೂ ತನ್ನ ಕುಟುಂಬ ಮತ್ತು ಸಮಾಜ, ಗುರುಹಿರಿಯರ ಬಗೆಗೆ ಅವನು ಹೊಂದಿರಬೇಕಾದ ಕಾಳಜಿ ಮೊದಲಾದ ಜವಬ್ದಾರಿಗಳನ್ನು ಅರಿತುಕೊಳ್ಳವಂತೆ ಮಾಡುವುದಾಗಿತ್ತು.ಈ ಬಗ್ಗೆ ಪ್ರಾಚೀನ ಭಾರತದ ಅನೇಕ ಗ್ರಂಥಗಳಲ್ಲಿ ಉಲ್ಲೇಕಗೊಂಡಿದೆ. ವಿದ್ಯಾರ್ಥಿಯಾದವನಿಗೆ ಜ್ಞಾನ ಸಂಪಾದಿಸುವುದೇ ಅತಿಮುಖ್ಯವಾದುದಾಗಿತ್ತು.

ಸಾಮಾನ್ಯವಾಗಿ ಗುರುಕುಲಗಳಲ್ಲಿ ವಿದ್ಯಾರ್ಥಿಗಳಿಗೆ ವೇದಗಳು. ವ್ಯಾಕರಣ, ತರ್ಕಶಾಸ್ತ್ರ, ತತ್ವಶಾಸ್ತ್ರ, ಧರ್ಮಶಾಸ್ತ್ರ, ಸಂಸ್ಕೃತ ಸಾಹಿತ್ಯ. ವಿಜ್ಞಾನ, ವೈದ್ಯಕೀಯ, ಶಶ್ತ್ರಾಸ್ತ್ರಗಳನ್ನು ಉಪಯೋಗಿಸುವ ಕ್ರಮ, ರಾಜನೀತಿ ಮೊದಲಾದವುಗಳನ್ನು ಚರ್ಚೆಯ ಮೂಲಕ, ವಾದವಿವಾದಗಳ ಮೂಲಕ ಅಥವಾ ಅನುಕರಣೆ ಮೂಲಕ, ಸ್ಮರಿಸಿಕೊಳ್ಳವಂತೆ ಮಾಡುವ ಮೂಲಕ ಹಾಗೂ ಪ್ರಾಯೋಗಿಕ ಮೂಲಕ ಹೇಳಿಕೊಡಲಾಗುತ್ತಿತ್ತು. ಅಂದು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಪರೀಕ್ಷೆಗಳನ್ನು ನಡೆಸುತ್ತಿರಲಿಲ್ಲ. ವಿದ್ಯಾರ್ಥಿಯ ಶೈಕ್ಷಣಿಕ ಮಟ್ಟದ ಬಗೆಗೆ ಗುರುವಿಗೆ ತೃಪ್ತಿಯಾದ ನಂತರ ಅವನು ಗುರುಕುಲದಿಂದ ತನ್ನ ಮನೆಗೆ ತೆರಳಬಹುದಾಗಿತ್ತು. ಕೆಲವೊಮ್ಮೆ ವಿದ್ಯಾರ್ಥಿಯನ್ನು ಅವನ ವ್ಯಾಸಂಗಕ್ರಮ ಮುಗಿದ ಕೂಡಲೇ ಪರಿಣಿತ ವಿದ್ವಾಂಸರ ಸಭೆಯಲ್ಲಿ ಹಾಜರುಪಡಿಸಿ ಅವನ ಜ್ಞಾನಮಟ್ಟವನ್ನು ಪರೀಕ್ಷಿಸಲಾಗುತ್ತಿತ್ತು. ವಿದ್ಯಾರ್ಜನೆಯ ಅವದಿ ಕೂಡ ಇಷ್ಟೇ ಎಂದು ನಿಗಧಿಯಾಗಿರಲ್ಲಿಲ್ಲ. ಸಾಧಾರಣವಾಗಿ ಹನ್ನೆರಡು ವರ್ಷಗಳ ಅವಧಿ ಇದ್ದಿತು. ಕೆಲವೊಮ್ಮೆ ಮೂವತ್ತೆರಡು ವರ್ಷಗಳವರೆಗೂ ನಡೆದಿರುತ್ತಿತ್ತು. ಇದು ಕಲಿಯಬೇಕೆಂಬ ವಿದ್ಯಾರ್ಥಿ ಹಾಗೂ ಗುರುಗಳ ಇಚ್ಛೆಯನ್ನವಲಂಬಿಸಿರುತ್ತಿದ್ದಂತೆ ಕಂಡುಬರುತ್ತದೆ. ಒಟ್ಟಿನಲ್ಲಿವಿದ್ಯಾರ್ಥಿ ತನ್ನ ಅವಧಿ ಮುಗಿಯುವವರೆಗೂ ಗುರುವಿನೊಡನಿದ್ದು ಶಿಕ್ಷಣ ಪಡೆಯುತ್ತಿದ್ದನು.

ಹೂಯನ್‌ತ್ಸಾಂಗ್ ಮತ್ತು ಇತ್ಸಿಂಗರ ಬರವಣಿಗೆಗಳಿಂದ ಬ್ರಾಹ್ಮಣ ವಿದ್ಯಾರ್ಥಿ ಜೀವನವು ಮೂವತ್ತನೇಯ ವರ್ಷದಲ್ಲಿ ಕೊನೆಗೊಳ್ಳುತ್ತಿದ್ದಿತ್ತೆಂದು ತಿಳಿದು ಬರುತ್ತದೆ. ಹೂಯನ್‌ತ್ಸಾಂಗ್ ಬ್ರಾಹ್ಮಣ ಗುರುಗಳ ವಿದ್ವತ್ತು ಮತ್ತು ಶ್ರದ್ಧೆಗಳನ್ನು ಕುರಿತು ಮೆಚ್ಚುತ್ತ ಅವರ ಊರಿಂದ ಊರಿಗೆ ತಿರುಗುತ್ತಿದ್ದು, ತಮ್ಮ ಜೀವನವನ್ನು ಕಲಿಯುದಕ್ಕೆ ಮತ್ತು ಕಲಿಸುವುದಕ್ಕೆ ಮುಡುಪಾಗಿರಿಸಿದ್ದರೆಂದು ಒಂದು ವರ್ಗದ ಉಪಾಧ್ಯಾಯರನ್ನು ಉಲ್ಲೇಖಿಸುತ್ತಾನೆ. ಹರ್ಷಚರಿತದ ಖ್ಯಾತ ಲೇಖಕ ಬಾಣನು ತನ್ನ ಜೀವನದ ಆರಂಭದೆಸೆಯಲ್ಲಿ ಗುರುವಿನ ಮನೆಯಲ್ಲಿದ್ದು ಸುಮಾರು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಮನೆಗೆ ಹಿಂದಿರುಗಿದುದಾಗಿ ತಿಳಿಸುತ್ತಾನೆ. ಈ ವಿಷಯವನ್ನು ಗಮನಿಸಿದರೆ, ಯುವಕ ಬ್ರಾಹ್ಮಣರು ಗುರುಗಳ ಜೊತೆ ವಾಸಿಸುತ್ತಿದ್ದರೆಂಬುದು ವಿದಿತವಾಗುತ್ತದೆ.

ವಿಧ್ಯಾಭ್ಯಾಸ ಅಂದು ಸಾರ್ವತ್ರಿಕವಾಗಿರಲ್ಲಿಲ್ಲ. ಅಂದರೆ ಎಲರಿಗೂ ಅದು ದೊರೆಯುವಂತಹುದಾಗಿರಲಿಲ್ಲ. ಅರಸುಕುಮಾರರು, ಬ್ರಾಹ್ಮಣರಿಗೆ ಅದು ಮೀಸಲಾಗಿದ್ದಿತು. ಬೋಧನಾಕಾರ್ಯ ಬ್ರಾಹ್ಮಣರ ನಿತ್ಯವೃತ್ತಿಯಾಗಿದ್ದಿತ್ತು. ಅನಂತರದ ದಿನಗಳಲ್ಲಿ ಕ್ಷತ್ರಿಯರು ಮತ್ತು ವೈಶ್ಯರಿಗೂ ಅದು ಲಭ್ಯವಾಯಿತು. ಶೂದ್ರರು ಅಧ್ಯಯನ ಅಥವಾ ಅಧ್ಯಾಪನ ಮಾಡದಂತೆ ನಿರ್ಭಂಧಗಳಿದ್ದವು. ಶೂದ್ರರಿನಿಸಿದ ಕೊನೆಯವರ್ಗ ವಿದ್ಯಾಕೇಂದ್ರಗಳ ಕಡೆ ಅಪ್ಪಿತಪ್ಪಿಯೂ ಸುಳಿದಾಡುವಂತ್ತಿರಲ್ಲಿಲ್ಲ. ವೇದಗಳ ಪಠನದ ಶಬ್ದ ಅವರ ಕರ್ಣಗಳಿಗೆ ತಾಕಿದರೂ ಅದು ಮಹಾ ಅಪರಾಧವೆಂದೂ ಅಂದು ಪರಿಗಣಿಸಿದಂತೆ ಕಂಡು ಬರುತ್ತದೆ. ಹಾಗಾಗಿ ಶಿಕ್ಷಣ ಅಥವಾ ವಿದ್ಯಾರ್ಜನೆ ಅಂದು ಸಾರ್ವತ್ರಿಕವಾದುದಾಗಿರಲ್ಲಿಲ್ಲ. ಅಂದು ಕೆಲವರು ವೀದ್ಯಾರ್ಜನೆಯನ್ನು ತಮ್ಮ ಸ್ವತ್ತು ಎಂದು ಪರಿಗಣಿಸಕೊಂಡಿದ್ದರೆಂದರೆ ತಪ್ಪಾಗಲಾರದು. ಈ ಎಲ್ಲಾ ಅಂಶಗಳಿಂದ ಪ್ರಾಚೀನ ಭಾರತದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣೋತ್ತಮರೆ ಗುರುಗಳ ಸ್ಥಾನ ಪಡೆದಿದ್ದು ಶಿಕ್ಷಣವನ್ನು ನೀಡುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

## 57.2.1 ಬೌದ್ಧರ ವಿದ್ಯಾಭ್ಯಾಸ ಪದ್ಧತಿ

ಬೌದ್ಧರ ವಿದ್ಯಾಭ್ಯಾಸ ಪದ್ಧತಿಯನ್ನು ತಿಳಿಯಲು ಬೌದ್ಧ ಗ್ರಂಥಗಳು ಮತ್ತು ಜಾತಕ ಕತೆಗಳು ನಮಗೆ ಉತ್ತಮ ಆಧಾರಗಳಾಗಿವೆ. ಅವುಗಳ ಪ್ರಕಾರ ಬೌದ್ಧರ ಸಂಘಾರಾಮಗಳು, ವಿಹಾರಗಳು, ಶಿಕ್ಷಣ ನೀಡುವ ಕೇಂದ್ರ ಸ್ಥಳಗಳಾಗಿದ್ದುವು. ಭಿಕ್ಷುಗಳು, ಭಿಕ್ಷುಣಿಯರು ಯಾವ ಭಿನ್ನ ಭೇದವಿಲ್ಲದೆ ಬೌದ್ಧ ಮಠಗಳಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದರು. ವಿದ್ಯಾರ್ಜನೆಗೆ ಪ್ರವೇಶ ಪಡೆಯುವ ಮುನ್ನ ಪ್ರುಬ್ರಜ್ಯ ಅಥವಾ ಪಬ್ಬಜ್ಜ ಎಂಬ ಕರ್ಮಾಚರಣೆಯ ನಂತರ ಸಂಘದಲ್ಲಿ ವಿದ್ಯಾರ್ಜನೆಗೆ ಪ್ರವೇಶ ಪ್ರಾಪ್ತವಾಗುತ್ತಿತ್ತು. ಇದು ವಿದ್ಯಾರ್ಥಿಯ ಎಂಟನೆಯ ವಯಸ್ಸಿನಲ್ಲಿ ಜರುಗುತ್ತಿದ್ದು ಅನಂತರ ಅವನು ವಿದ್ಯಾರ್ಜನೆಗೆ ಅರ್ಹತೆ ಪಡೆಯುತ್ತಿದ್ದನು. ಸಂಘ ಸೇರಿದ ಮೇಲೆ ವಿದ್ಯಾರ್ಥಿ ಅಲ್ಲಿನ ಶಿಸ್ತು, ನೀತಿ ನಿಯಾಮಾವಳಿಗಳನ್ನು ಚಾಚೂ ತಪ್ಪದೆ ಪರಿಪಾಲಿಸಬೇಕಿದ್ದಿತು. ಬೌದ್ಧರ ವಿದ್ಯಾಕೇಂದ್ರಗಳಲ್ಲಿ ವಿದ್ಯಾರ್ಜನೆಯ ಪ್ರವೇಶಕ್ಕೆ ಯಾವುದೇ ವರ್ಣ ಅಥವಾ ಲಿಂಗ ಭೇದವಿರಲಿಲ್ಲ. ವಿಧ್ಯಾರ್ಥಿಯಾಗಿ ಪ್ರವೇಶ ಪಡೆದವರೆಲ್ಲರೂ ಭಿಕ್ಷುಗಳೆಂದು ಪರಿಗಣಿಸಲಾಗುತ್ತಿತ್ತು. ಹನ್ನೆರಡು ವರ್ಷಗಳ ಶಿಕ್ಷಣ ಕಾಲಾವಧಿ ಮುಗಿದ ಮೇಲೆ 'ಉಪಸಂಪದ "ಎಂಬ ಕರ್ಮಾಚರಣೆ ನೆಡೆಯುತ್ತಿದ್ದಿತು. ಅದು ಬೌದ್ಧ ಶಿಕ್ಷಣದ ಮುಕ್ತಾಯದ ಸಂಕೇತವಾಗಿದ್ದಿತು. ಇಲ್ಲಿಯವರೆಗೂ ಬ್ರಹ್ಮಚರ್ಯ ಪಾಲಿಸಿದ ವಿದ್ಯಾರ್ಥಿಗಳು ನಂತರ ವಿವಾಹ ಮಾಡಿಕೊಳ್ಳುವ ಸಂಪ್ರದಾಯ ರೂಢಿಯಲ್ಲಿದ್ದಿತು. ಇದೇ ನಿಯಾಮ ಬೌದ್ಧ ವಿದ್ಯಾರ್ಥಿನಿಯರಿಗೂ ಅನ್ವಯವಾಗಿದ್ದಿತು. ಇವರನ್ನು ಬಿಕ್ಷುಣಿಯರೆಂದು ಸಂಬೋಧಿಸಲಾಗುತ್ತಿತ್ತು.

ಬೌದ್ಧ ವಿಹಾರಗಳ ಜೀವನಕ್ರಮಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಶಿಕ್ಷಕನೊಡನೆ ವಿದ್ಯಾರ್ಥಿಯ ನಡೆವಳಿಕೆ ಹೇಗಿರಬೇಕೆಂಬುದು ಉಲ್ಲೇಖಿತವಾಗಿದೆ. ಇದು ಬ್ರಾಹ್ಮಣ ಗ್ರಂಥಗಳಲ್ಲಿ ಹೇಳಿರುವ ರೀತಿಯಲ್ಲಿಯೇ ಉಲ್ಲೇಖಿಗೊಂಡಿದೆ. ಈ ನಿಯಮಾವಳಿಗಳು ಬೌದ್ಧ ವಿಹಾರಗಳಲ್ಲಿ ಏಳನೇಯ ಶತಮಾನದ ಉತ್ತಾರಾರ್ಧದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿದ್ದವು ಎಂಬುದು ಇತ್ಸಿಂಗನ ಬರವಣಿಗೆಯಿಂದ ಖಚಿತವಾಗುತ್ತದೆ.

ಇತ್ಸಿಂಗನ ಪ್ರಕಾರ 'ವಿನಿಯಪಿಟಕ'ವನ್ನು ಚನ್ನಾಗಿ ಅಭ್ಯಾಸಮಾಡಿ ಪರಿಣತಿ ಸಾಧಿಸಲು ಅವಶ್ಯಕವಾದ ಐದು ಬೇಸಿಗೆಗಳನ್ನು ಪೂರೈಸಿದ ನಂತರ ವಿದ್ಯಾರ್ಥಿ ಗುರುವಿನಿಂದ ಪ್ರತ್ಯೇಕವಾಗಿ ವಾಸಮಾಡಬಹುದಾಗಿದ್ದಿತು. ಅವನು ಎಲ್ಲಿಗೆ ಹೋದರೂ ಒಬ್ಬ ಗುರುವಿನ ಆಶ್ರಯವನ್ನು ಪಡೆಯಬೇಕಾಗಿದ್ದಿತು. ಹತ್ತು ಬೇಸಿಗೆಗಳು ಕಳೆದ ನಂತರ ವಿದ್ಯಾರ್ಥಿ ಜೀವನವು ಪೂರ್ಣಗೊಳುತ್ತಿತ್ತು. ಆದರೂ ಅವನು ವಿನಯ ಪಿಟಿಕದ ಮೇಲೆ ಪರಿಣಿತಿ ಸಂಪಾದಿಸದೆ ಹೋದರೆ, ಇನ್ನೂಬ್ಬ ಗುರು ಅಥವಾ ಉಪಗುರುವಿನ ಅಶ್ರಯದಲ್ಲಿ ಮಿಕ್ಕ ಜೀವನವನ್ನು ಕಳೆಯಬೇಕಾಗಿದ್ದಿತು.

ಬೌದ್ಧ ವಿಹಾರ ಶಾಲೆಗಳಲ್ಲಿ ಆರಂಭಿಗರು ಮಾತ್ರವಲ್ಲದೆ ಎರಡು ರೀತಿಯ ನವಶಿಷ್ಯರಿರುತ್ತಿದ್ದರೆಂಬ ಮಾಹಿತಿಯನ್ನು ಇತ್ಸಿಂಗನ ಬರವಣಿಗೆಯಿಂದ ತಿಳಿಯುತ್ತೇವೆ. ಮೊದಲನೆಯ ವರ್ಗದವರು ಮಕ್ಕಳು ; ಇವರು ಪ್ರಧಾನವಾಗಿ ಮುಂದೆ ಬೌದ್ಧಧರ್ಮ ದೀಕ್ಷೆಯನ್ನು ಪಡೆಯುವ ಸಲುವಾಗಿ ಬೌದ್ಧಧರ್ಮ ಗ್ರಂಥಗಳನ್ನು ಅಭ್ಯಾಸ ಮಾಡಲು ಬಂದವರು. ಎರಡನೆಯ ವರ್ಗದವರು ಬ್ರಹ್ಮಚಾರಿಗಳು ಅಥವಾ ವಿದ್ಯಾರ್ಥಿಗಳು ; ಇವರು ಸಂಸಾರ ತ್ಯಾಗದ ಇಚ್ಛೆ ಇಲ್ಲದೆ ಇದ್ದು, ಧರ್ಮೇತರ ಗ್ರಂಥಗಳನ್ನು ಓದಲು ಬಂದವರು. ಆರಂಭಿಗರ ಶಿಕ್ಷಣದ ಖರ್ಚುವೆಚ್ಚಗಳನ್ನು ಸಂಘದ ಸಾರ್ವತ್ರಿಕ ಮೊತ್ತದಿಂದ ಕೊಡಲಾಗುತ್ತಿತ್ತು. ಆದರೆ ನವ ಶಿಷ್ಯರ ವೆಚ್ಚವನ್ನು ಅವರೇ ಭರಿಸಿಕೋಳ್ಳಬೇಕಾಗಿದ್ದಿತು.

ಬ್ರಾಹ್ಮಣ ವಿದ್ಯಾಭ್ಯಾಸ ಕ್ರಮದಂತೆ ಬೌದ್ಧ ವಿದ್ಯಾಭ್ಯಾಸ ಕ್ರಮದಲ್ಲೂ ವಿದ್ಯಾರ್ಥಿ ತನ್ನ ವಿದ್ಯಾರ್ಜನೆಯ ಕಾಲದಲ್ಲಿ ಗುರುಗಳೊಂದಿಗೆ ಬೌದ್ಧ ವಿಹಾರಗಳಲ್ಲಿ ಶಿಸ್ತುಬದ್ಧವಾಗಿ ವಾಸಿಸಬೇಕಾಗಿದ್ದಿತು. ಅವರ ಅಪ್ಪಣೆ ಇಲ್ಲದೆ ಎಲ್ಲಿಯೂ ಹೋಗುವಂತಿರಲಿಲ್ಲ. ಆ ವಿದ್ಯಾರ್ಥಿಗಳು ಅಥವಾ ಭಿಕ್ಷುಗಳು ಬೆಳಗಿನ ತಮ್ಮ ದಿನಚರಿ ಕೆಲಸಗಳನ್ನು ಮುಗಿಸಿದ ಕೂಡಲೇ ತಮ್ಮ ಅಧ್ಯಾಪಕರುಗಳಿಗೆ ಆಹಾರವನ್ನು ಬೇಡಿ ತರಬೇಕಾಗಿದ್ದಿತು. ಬೌದ್ಧ ವಿಹಾರಗಳಲ್ಲಿ ಉಪನ್ಯಾಸ, ಚರ್ಚೆ, ವಿಶ್ರಾಂತಿ, ವಸತಿ, ಊಟ ವ್ಯವಸ್ಥೆಗೆ ಪ್ರತ್ಯೇಕ ಕೋಣೆಗಳನ್ನು ನಿಗಧಿಪಡಿಸಲಾಗಿದ್ದಿತು. ವಿದ್ಯಾರ್ಥಿಯ ಶಿಸ್ತು, ನೀತಿ, ನಡವಳಿಕೆಯನ್ನು ಅಧ್ಯಾಪಕರು ಬಹು ಸೂಕ್ಷ್ಮವಾಗಿ ಗಮನಿಸಿ ಸೂಕ್ತ ಸಲಹೆ ನೀಡಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಬಹು ಶ್ರಮ ವಹಿಸುತ್ತಿದ್ದರು. ಭಿಕ್ಷುಗಳು ಕೂಡ ಕೇವಲ ತಮ್ಮ ವಿದ್ವತ್ತಿಗೆ ಮಾತ್ರ ಮಾನ್ಯರಾಗದೆ, ತಮ್ಮ ಸಚ್ಚಾರಿತ್ರ್ಯಕ್ಕೂ ಹೆಸರುವಾಸಿಯಾಗಿದ್ದರು.

ಸಾಮಾನ್ಯವಾಗಿ ಬೌದ್ಧ ವಿಹಾರಗಳಲ್ಲಿ ಬೌದ್ಧಧಾರ್ಮಿಕ ಗ್ರಂಥಗಳು ಅವರ ವಿದ್ಯಾರ್ಜನೆಯ ಪ್ರಮುಖ ವಿಷಯಗಳಾಗಿದ್ದವು. ಇದರ ಜೊತೆಗೆ ಸಂಸ್ಕೃತ, ವ್ಯಾಕರಣ. ಕಲೆ ಮತ್ತು ಕುಶಲಕಲೆ, ವೈದ್ಯಕೀಯ , ಇತಿಹಾಸ, ತರ್ಕಶಾಸ್ತ್ರ, ತತ್ವಶಾಸ್ತ್ರ, ಗಣಿತ, ಖಗೋಳಶಾಸ್ತ್ರ, ನ್ಯಾಯಶಾಸ್ತ್ರ ಮೊದಲಾದವು ಅವರ ವಿದ್ಯಾರ್ಜನೆಯ ವಿಷಯಗಳಾಗಿದ್ದವು. ವೇದ, ಪುರಾಣ, ಮೀಮಾಂಸ, ಧರ್ಮಶಾಸ್ತ್ರ, ಧನುರ್ವೇದ, ಗಂಧರ್ವವೇದ ಅರ್ಥಶಾಸ್ತ್ರಗಳನ್ನು ಬ್ರಾಹ್ಮಣ ಬುದ್ಧಿಜೀವಿಗಳು ಅಭ್ಯಾಸಿಸುತ್ತಿದ್ದರು. ಎಲ್ಲಾ ವಿಷಯಗಳಲ್ಲೂ ಪಾರಂಗತನಾದ ಭಿಕ್ಷುವಿಗೆ ಉನ್ನತ ಸ್ಥಾನ ಗೌರವಗಳು ಪ್ರಾಪ್ತವಾಗುತ್ತಿದ್ದವು.

ಬೌದ್ಧಧರ್ಮವು ಊರ್ಜಿತಗೊಂಡ ಮೇಲೆ ವೇದಗಳು ಮಹತ್ವಕ್ಕೆ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಬಂದಿತ್ತು. ಹಾಗಿದ್ದರೂ ಪ್ರಾಚೀನ ಕಾಲದ ವೈದಿಕ ಶಿಕ್ಷಣ ಪದ್ಧತಿಗೂ ಬೌದ್ಧಮತೀಯದ ಶಿಕ್ಷಣ ಪದ್ಧತಿಗೂ ಅಷ್ಟೇನೂ ವ್ಯತ್ಯಾಸವಿದ್ದಂತೆ ಕಂಡು ಬರುವುದಿಲ್ಲ. ಆದರೆ ಬೌದ್ಧಮತೀಯರ ಶಿಕ್ಷಣಕ್ಕೆ ವೇದಗಳು ಯಾವುದೇ ರೀತೀಯಾದ ಆಧಾರಗಳಾಗಿರಲಿಲ್ಲ. ವೈದಿಕ ವಿದ್ಯಾಭ್ಯಾಸದಲ್ಲಿ ಕೆಲವರಿಗೆ ವಿದ್ಯಾರ್ಜನೆಯ ಅವಕಾಶವಿದ್ದರೆ; ಬೌದ್ಧಮತೀಯ ಶಿಕ್ಷಣದಲ್ಲಿ ಎಲ್ಲಾ ಜಾತಿಮತಿಯರೂ ವಿದ್ಯೆಗೆ ಅರ್ಹರಾಗಿದ್ದರು. ವೈದಿಕ ಶಿಕ್ಷಣ ಕೇಂದ್ರಗಳು, ಗುರುಕುಲಗಳು ಮತ್ತು ಆಶ್ರಮಗಳಾದರೆ, ಬೌದ್ಧಮತೀಯರ ಶಿಕ್ಷಣಕ್ಕೆ ಬೌದ್ಧ ವಿಹಾರಗಳೇ ಕೇಂದ್ರಗಳಾಗಿದ್ದವು. ಬೌದ್ಧದೀಕ್ಷಾ ಸ್ವೀಕಾರಕ್ಕೆ ಕನಿಷ್ಠ ಎಂಟು ವರ್ಷಗಳ ವಯಸ್ಸಾಗಿರದೇಕಿದ್ದಿತು. ಬೌದ್ಧವಿಹಾರಗಳಲ್ಲಿ ಮಹಿಳೆಯರಿಗೂ ಪ್ರವೇಶವಿದ್ದಿತು. ವೇದಗಳ ಕಾಲದಲ್ಲಿ ವಿದ್ಯಾರ್ಜನೆಯಲ್ಲಿ ಸಂಸ್ಕೃತ ಭಾಷೆಗೆ ಪ್ರಾಮುಖ್ಯವಿದ್ದರೆ; ಬೌದ್ಧರ ಶಿಕ್ಷಣ ಕ್ರಮದಲ್ಲಿ ಪಾಳಿ, ಪ್ರಾಕೃತ ಭಾಷೆಗಳು ಬಳಕೆಯಲ್ಲಿದ್ದವು. ಹೀಗೆ ಪ್ರಾಚೀನ ಭಾರತದಲ್ಲಿ ವೈದಿಕ ಮತ್ತು ಬೌದ್ಧ ಶೈಕ್ಷಣಿಕ ಕೇಂದ್ರಗಳು ಹೆಚ್ಚಿನ ಬದಲಾವಣೆಗಳೇನೂ ಇಲ್ಲದೆ ಜನತೆಗೆ ವಿದ್ಯಾರ್ಜನೆಯನ್ನು ಮಾಡುತ್ತಿದ್ದವು.

## 57.3 ಪ್ರಸಿದ್ಧ ವಿಶ್ವವಿದ್ಯಾನಿಲಯಗಳು

ಪ್ರಾಚೀನ ಭಾರತದಲ್ಲಿ ಕಾಲಕ್ರಮೇಣ ವಿದ್ಯಾಭ್ಯಾಸ ಕ್ರಮದಲ್ಲಿ ಕೆಲವು ಬದಲಾವಣೆಗಳುಂಟಾಗಿ ಬ್ರಾಹ್ಮಣರು ನೆಲೆಗೊಂಡ ಅಗ್ರಹಾರಗಳು ವಿದ್ಯಾರ್ಜನೆಯ ಕೇಂದ್ರಗಳಾದವು. ಇವುಗಳನ್ನು ಬ್ರಹ್ಮಪುರಿಗಳೆಂದೂ ಕರೆಯಲಾಗುತ್ತಿತ್ತು. ಅನಂತರ ರಾಜಮಹಾರಾಜರುಗಳ ಆಶ್ರಯ ಮತ್ತು ಪ್ರೋತ್ಸಾಹದಿಂದ ಮುಂದೆ ಅನೇಕ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ತಕ್ಷಶಿಲಾ, ಉಜ್ಜೈನಿ, ನಳಂದ, ವಿಕ್ರಮಶೀಲ,ಒದಂತಪುರಿ, ವಲ್ಲಬ್ಬಿ, ಕಂಚಿ ಮೊದಲಾದವು ಪ್ರಮುಖವಾದುವು.

### 57.3.1. ತಕ್ಷಶಿಲಾ ವಿಶ್ವವಿದ್ಯಾನಿಲಯ (ಕ್ರಿ.ಪೂ.600-300)

ತಕ್ಷಶಿಲಾ ವಿಶ್ವವಿದ್ಯಾನಿಲಯವು ಭಾರತದ ಪ್ರಾಚೀನ ವಿಶ್ವವಿದ್ಯಾನಿಲಯಗಳಲ್ಲಿ ಅತ್ಯಂತ ಪ್ರಾಚೀನವಾದುದು. ಕ್ರಿ.ಪೂ.ಆರನೇ ಶತಮಾನದಲ್ಲಿ ಆರಂಭಗೊಂಡ ಈ ವಿಶ್ವವಿದ್ಯಾನಿಲಯವು ಕ್ರಿ.ಶ.ಐದನೇ ಶತಮಾನದವರೆಗೂ ಒಂದು ಮಹಾನ್ ವಿಶ್ವವಿದ್ಯಾನಿಲಯದ ಕೇಂದ್ರವಾಗಿ ಉಛ್ರಾಯ ಸ್ಥಿತಿಯಲ್ಲಿತ್ತು. ಕ್ರಿ.ಶ. ಐದನೇ ಶತಮಾನದಲ್ಲಿ ಹೂಣರ ಧಾಳಿಯಿಂದ ಈ ವಿಶ್ವವಿದ್ಯಾನಿಲಯವು ನಾಶವಾಯಿತೆಂದು ತಿಳಿದುಬರುತ್ತದೆ. ಭಾರತದ ಪ್ರಥಮ ಪುರತತ್ವ ಇಲಾಖೆಯ ಅಧ್ಯಕ್ಷನಾಗಿದ್ದ ಸರ್. ಜಾನ್. ಮಾರ್ಷಲ್ ಹಾಗೂ ಇದಕ್ಕೂ ಮೊದಲು ಕನ್ನಿಂಗ್ ಹ್ಯಾಮ್ ಎಂಬ ಬ್ರಿಟೀಷ್ ವಿದ್ವಾಂಸರು ತಕ್ಷಶಿಲಾ ವಿದ್ಯಾಪೀಠದ ನೀವೇಶನವನ್ನು ಪತ್ತೆ ಹಚ್ಚಿದರು. ಅದು ಇಂದಿನ ಪಾಕಿಸ್ತಾನದ ರಾವಲ್ಪಿಂಡಿ ಎಂಬ ನಗರದ ಪಶ್ಚಿಮ ದಿಕ್ಕಿನಲ್ಲಿ ಸುಮಾರು ನಲವತ್ತು ಮೈಲಿ ದೂರದಲ್ಲಿತ್ತು.

ತಕ್ಷಶಿಲಾ ವಿಶ್ವವಿದ್ಯಾನಿಲಯವು ಒಂದು ವೈಶಿಷ್ಟಪೂರ್ಣವಾದ ಹಾಗೂ ಸುಸಂಘಟಿತವಾದ ವಿದ್ಯಾಕೇಂದ್ರವಾಗಿತ್ತು.ಇಲ್ಲಿ ಹಲವಾರು ಪ್ರತಿಭಾವಂತ ಘನವಿದ್ವಾಂಸರುಗಳಿದ್ದುದರಿಂದ ಈ ವಿದ್ಯಾಪೀಠದಲ್ಲಿ ವಿದ್ಯೆಯ ಅರ್ಜನೆಗಾಗಿ ವಿದ್ಯಾರ್ಥಿಗಳು ವಿವಿಧ ದೇಶಗಳಿಂದಲೂ, ಭಾರತದ ವಿವಿಧ ಭಾಗಗಳಿಂದ ಬರುತ್ತಿದ್ದರು. ತಕ್ಷಶಿಲಾ ವಿದ್ಯಾಪೀಠದಲ್ಲಿ ವಿದ್ಯೆಹರಸಿ ಬಂದ ವಿದ್ಯಾರ್ಥಿಗಳು ಮುಂಗಡವಾಗಿ ಸುಮಾರು ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಪ್ರವೇಶದ ಸಮಯದಲ್ಲಿಯೇ ನೀಡಬೇಕಾಗಿದ್ದಿತು. ಇಲ್ಲಿ ಪ್ರತಿವರ್ಷ ಸುಮಾರು ಐನೂರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿ ಪದವಿ ಪಡೆದುಕೊಳ್ಳುತ್ತಿದ್ದರು. ತಕ್ಷಶಿಲಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಗಗಳಿಗೆ ಸೇರಿದವರಾಗಿರುತ್ತಿದ್ದರು.

ಬಡ ವಿದ್ಯಾರ್ಥಿಗಳು ಗುರುಗಳ ಸೇವೆ ಮಾಡಿಕೊಂಡು ವಿದ್ಯಾರ್ಜನೆ ಮಾಡುತ್ತಿದ್ದರು. ಇಲ್ಲಿನ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಸಹ ಅಧ್ಯಾಪಕರಂತೆ ಕಾರ್ಯ ನಿರ್ವಹಿಸುತ್ತಿದ್ದರು. ಅಲ್ಲಿನ ಪಠ್ಯಕ್ರಮ, ವ್ಯಾಸಂಗ ಮೊದಲಾದ ವಿಚಾರಗಳಲ್ಲಿ ಪ್ರಾಧ್ಯಾಪಕರು ಸ್ವಾತಂತ್ರ್ಯ ಹೊಂದಿದ್ದರು. ಅದರ ಮೇಲೆ ಯಾವುದೇ ಅರಸನ ಅಥವಾ ಗುಂಪಿನ ನಿಯಂತ್ರಣವಿರಲಿಲ್ಲ. ಸಾಹಿತ್ಯ, ವಿಜ್ಞಾನ, ವ್ಯಾಕರಣ, ವೇದಶಾಸ್ತ್ರ, ಸೈನಿಕಶಾಸ್ತ್ರ, ಇತಿಹಾಸ, ವಾಣಿಜ್ಯೋದ್ಯಮ, ಕೃಷಿ ಮತ್ತು ಕುಶಲ ಕಸಬುಗಳಿಗೆ ಸಂಬಂಧಪಟ್ಟ ವಿಷಯಗಳ ಜ್ಞಾನಾರ್ಜನೆಗೆ ಅವಕಾಶವಿದ್ದಿತು. ಸಸ್ಯಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದ ವಿಷಯಗಳಲ್ಲಿ ಪ್ರಾಯೋಗಿಕ ಅಧ್ಯಯನಗಳನ್ನು ನಡೆಸಲಾಗಿತ್ತಿತ್ತು. ಕ್ರಿ. ಪೂ.ಆರನೇಯ ಶತಮಾನದಲ್ಲಿ ತಕ್ಷಶಿಲೆ ಪರ್ಶಿಯನ್ನರ ಆಳ್ವಿಕೆಗೆ ಒಳಪಟ್ಟಾಗ ಆ ದೇಶದ ಖರೋಷ್ಠಿಲಿಪಿಯು ರೂಢಿಗೆ ಬಂದಿತು. ಆಗ ಪ್ರಚಾರಕ್ಕೆ ಬಂದ ಬೌದ್ಧಧರ್ಮವೂ ವ್ಯಾಸಂಗದಲ್ಲಿ ಸೇರಿಕೊಂಡಿತು. ಅನಂತರ ಕ್ರಿ.ಶ. ಎರಡನೆಯ ಶತಮಾನದಲ್ಲಿ ಬ್ಯಾಕ್ಟ್ರಿಯನರ ಪ್ರಭಾವಕ್ಕೆ ಒಳಗಾಯಿತು.

ತಕ್ಷಶಿಲಾ ವಿದ್ಯಾಪೀಠದ ಆರ್ಥಿಕ ವ್ಯವಸ್ಥೆಯನ್ನು ಸಮಾಜವೇ ನಿರ್ವಹಿಸಿತ್ತು. ಉಚಿತ ಶಿಕ್ಷಣದ ಅವಕಾಶವಿತ್ತು. ರಾಜ ಮಹಾರಾಜರು, ಶ್ರೀಮಂತರು ಹಾಗೂ ಜನತೆ ಉದಾರ ದಾನ ದತ್ತಿ ನೀಡಿ ಅದರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಪಾಣಿನಿ, ಕೌಟಿಲ್ಯ, ಜೀವಿಕ,ಮಹಾನಿ, ಪ್ರಸೇನಜೀತ್ ಮುಂತಾದವರು ತಕ್ಷಶಿಲಾದಲ್ಲಿ ಅಧ್ಯಯನ ಮಾಡಿರುವುದು ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುತ್ತದೆ.

## 57.3.2. ನಳಂದ ವಿಶ್ವವಿದ್ಯಾನಿಲಯ (ಕ್ರಿ.ಶ.500-1200)

ಪ್ರಾಚೀನ ಭಾರತದ ವಿವಿಧ ಭಾಗಗಳಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಆರಂಭಗೊಂಡು ಭಾರತೀಯರಿಗೆ ಉನ್ನತ ಜ್ಞಾನವನ್ನು ನೀಡುತ್ತಿದ್ದವು. ಅವುಗಳಲ್ಲಿ ಅತ್ಯಂತ ಪ್ರಮುಖವಾದುವುಗಳೆಂದರೆ, ತಕ್ಷಶಿಲೆ ವಿಶ್ವವಿದ್ಯಾನಿಲಯ, ನಳಂದ ವಿಶ್ವವಿದ್ಯಾನಿಲಯ, ವಿಕ್ರಮಾಶೀಲ , ವಲ್ಲಭಿ, ಒದಂತಪುರಿ, ಮಿಥಿಲ, ಉಜ್ಜೈನಿ, ಕಂಚಿ, ಮಧುರೈ, ಬಳ್ಳಿಗಾವೆ, ಮೊದಲಾದವು ಉಚ್ಛ್ರಾಯ ಮಟ್ಟದಲ್ಲಿದ್ದವು. ಇವುಗಳಲೆಲ್ಲ ನಳಂದ ವಿಶ್ವವಿದ್ಯಾನಿಲಯವು ಅತ್ಯಂತ ಪ್ರಖ್ಯಾತವಾದ ವಿದ್ಯಾಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ಭಾರತದಲ್ಲಿ ಹೂಣರು ಮತ್ತು ಮುಸ್ಲಿಮರ ದಾಳಿಯಿಂದಾಗಿ ಇವು ಕಾಲಾನಂತರದಲ್ಲಿ ನಶಿಸಿ ಹೋದವು.

ನಳಂದ ವಿಶ್ವವಿದ್ಯಾನಿಲಯದ ಇತಿಹಾಸದ ಬಗೆಗೆ ತಿಳಿಯಲು ಬೌದ್ಧ ಮತ್ತು ಜೈನರ ಗ್ರಂಥಗಳು, ಸಮಕಾಲೀನ ಶಾಸನಗಳು, ಚೀನಾದೇಶದ ಯಾತ್ರಿಕರಾದ ಹೂಯನ್‌ತ್ಸಾಂಗ್ ಮತ್ತು ಇತ್ಸಿಂಗ್‌ರ ಬರವಣಿಗೆಗಳು ಹಾಗೂ ಟಿಬೆಟ್ಟಿನ ತಾರಾನಾಥನ ಬರವಣಿಗೆಗಳು ಅಮೂಲ್ಯ ಮಾಹಿತಿಗಳನ್ನು ನೀಡುತ್ತವೆ. ಪ್ರಾಚ್ಯಸಂಶೋಧಕನಾದ ಡಾ.ಸ್ಪೂನರ್ ಕ್ರಿ.ಶ.1913ರಲ್ಲಿ ನಡೆಸಿದ ಭೂಸಂಶೋಧನೆಯಿಂದ ನಳಂದ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಅನೇಕ ಅವಶೇಷಗಳು ಬೆಳಕಿಗೆ ಬಂದವು. ಅವು ಮೇಲ್ಕಂಡ ಬರವಣಿಗೆಯ ಆಧಾರಗಳನ್ನು ಪುಷ್ಟೀಕರಿಸುತ್ತವೆ. ಕ್ರಿ.ಶ.1875ರಲ್ಲಿ ಅಲೆಗ್ಸಾಂಡರ್ ಕ್ಯಾನಿಂಗ್ ಹ್ಯಾಂ ಎಂಬ ಆಂಗ್ಲ ಸಂಶೋಧಕನು ಭೂ ಉತ್ಖನನ ನಡೆಸಿ ನಳಂದ ವಿಶ್ವವಿದ್ಯಾನಿಲಯವು ಈಗಿನ ಬಿಹಾರ್ ರಾಜ್ಯದ ರಾಜಘರ್‌ಗೆ ಏಳು ಮೈಲಿ ದೂರದಲ್ಲಿರುವ ಇಂದಿನ ಬಂಗಾಂವ್ ಗ್ರಾಮವೇ ಆಗಿತ್ತೆಂದು ಸಂಶೋಧನೆಗಳಿಂದ ದೃಢಪಡಿಸಿರುವನು. ಬೌದ್ಧಮತೀಯರ ಸಾಮಾನ್ಯ ವ್ಯಾಸಂಗ ಕ್ಷೇತ್ರವಾಗಿದ್ದ ನಳಂದ ಕಾಲಕ್ರಮೇಣ ಮಹಾಯಾನ ಶಾಖೆ ಪ್ರಾಬಲ್ಯಕ್ಕೆ ಬಂದ ಮೇಲೆ ಅದು ಉನ್ನತ ಶಿಕ್ಷಣದ ಅಧ್ಯಯನ ಕೇಂದ್ರವಾಗಿ ಉಚ್ಛ್ರಾಯ ಸ್ಥಿತಿಗೆ ಬಂದಿತು.

## 57.3.2.1 ನಳಂದದ ಪೂರ್ವ ಇತಿಹಾಸ

ಒಂದನೇ ಕುಮಾರ ಗುಪ್ತನ ಕಾಲದಲ್ಲಿ ಸಖರಾದಿತ್ಯನೆಂಬ ಶ್ರೀಮಂತ ವ್ಯಾಪಾರಿ ನಳಂದದಲ್ಲಿ ಒಂದು ಮಹಾವಿಹಾರವನ್ನು ಕಟ್ಟಿಸಿ ಹೇರಳಧನಸಹಾಯ ಮಾಡಿ ಅದರ ಪುರೋಭಿವೃದ್ಧಿಗೆ ಕಾರಣನಾದನು. ಅನಂತರ ರಾಜ್ಯವಾಳಿದ ಗುಪ್ತ ದೊರೆಗಳು ನಳಂದ ವಿದ್ಯಾಕೇಂದ್ರವನ್ನು ಪೋಷಿಸಿ ಅಭಿವೃದ್ಧ ಪಡಿಸಿದರೆಂದು ತಿಳಿದು ಬರುತ್ತದೆ. ಹೂಯನ್‌ತ್ಸಾಂಗನ ಬರವಣೆಗೆಯ ಪ್ರಕಾರ ಕ್ರಿ.ಶ.5ನೇ ಶತಮಾನದ ಮಧ್ಯಭಾಗದಲ್ಲಿ ಗುಪ್ತರ ಅರಸ ಚಕ್ರಾಧಿತ್ಯ ಅಥವಾ ಸಖರಾಧಿತ್ಯನಿಂದ (ಒಂದನೇ ಕುಮಾರ ಗುಪ್ತ)ನಳಂದ ವಿಶ್ವವಿದ್ಯಾನಿಲಯವು ಸ್ಥಾಪಿಸಲ್ಪಟ್ಟಿತು. ಮುಂದೆ ಒಂದನೇ ಕುಮಾರಗುಪ್ತನ ಉತ್ತರಾಧಿಕಾರಿಗಳಾದ ಬುದಗುಪ್ತ, ತಥಾಗತಗುಪ್ತ, ಬಾಲಾಧಿತ್ಯರು ಈ ವಿಶ್ವವಿದ್ಯಾನಿಲಯಕ್ಕೆ ಅನೇಕ ವಿಹಾರಗಳನ್ನು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಿ ಪೋಷಿಸಿದರು. ಆ ನಂತರ ಶಕರ ದೊರೆ ರುದ್ರದೇವನ ಸಹೋದರಿಯರು ಮತ್ತು ಕಾಮರೂಪದ ಭಾಸ್ಕರವರ್ಮ ಮೊದಲಾದವರು ವಿಶ್ವವಿದ್ಯಾನಿಲಯದ ವಿಕಾಶಕ್ಕೆ ಹಲವು ರೀತಿಯಲ್ಲಿ ಆಶ್ರಯ ಪ್ರೋತ್ಸಾಹಗಳನ್ನು ನೀಡಿದರು. ಹರ್ಷವರ್ಧನನು ಇನ್ನಿಲ್ಲದಂತೆ ಈ ವಿಶ್ವವಿದ್ಯಾನಿಲಯದ ಪುರೋಭಿವೃದ್ಧಿಗೆ ಪ್ರೋತ್ಸಾಹ ನೀಡಿದನೆಂದು ಹ್ಯೂಯನ್‌ತ್ಸಾಂಗ್‌ನ ಬರವಣೆಗೆಯಿಂದ ತಿಳಿದು ಬರುತ್ತದೆ. ಹರ್ಷವರ್ಧನನು ನಳಂದ ವಿಶ್ವವಿದ್ಯಾನಿಲಯಕ್ಕೆ ಅನೇಕ ಕಟ್ಟಡಗಳನ್ನು ನಿರ್ಮಿಸಿಕೊಟ್ಟನಲ್ಲದೆ, ಅದರ ನಿರ್ವಹಣೆಗೆ ಸುಮಾರು ನೂರು ಹಳ್ಳಿಗಳ ಭೂಕಂದಾಯವನ್ನು ದಾನವಾಗಿ ನೀಡಿದನು. ಈ ನೂರು ಹಳ್ಳಿಗಳ ಸುಮಾರು ಇನ್ನೂರು ಜನರು ಪ್ರತಿದಿನವೂ ಅಕ್ಕಿ, ಬೇಳೆ, ಬೆಣ್ಣೆ, ಮೊಸರು ಮತ್ತು ಹಾಲನ್ನು ಈ ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡುತ್ತಿದ್ದರೆಂದು ಹೂಯಾನ್‌ತ್ಸಾಂಗ್‌ನು ತಿಳಿಸುತ್ತಾನೆ. ಜಾವಾ ಮತ್ತು ಸುಮಾತ್ರಗಳ ರಾಜ ಬಾಲಪುತ್ರದೇವ ಮತ್ತು ಆಫ್ಘಾನಿಸ್ತಾನದ (ಜಲಾಲಾಬಾದ್) ರಾಜ ವೀರದೇವನೂ ಈ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಯಥೇಚ್ಛ ದ್ರವ್ಯಗಳನ್ನು ನೀಡಿದುದಾಗಿ ಅಲ್ಲಿ ದೊರೆತ್ತಿರುವ ತಾಮ್ರ ಪತ್ರಗಳಿಂದ ವೇದ್ಯವಾಗುತ್ತದೆ. ಹೀಗೆ ಒಂದು ಮಹಾವಿದ್ಯಾನಿಲಯವಾಗಿ ರೂಪುಗೊಂಡ ನಳಂದ ವಿಶ್ವವಿದ್ಯಾನಿಲಯವು ಕ್ರಿ.ಶ.ಏಳು ಮತ್ತು ಎಂಟನೇ ಶತಮಾನದಲ್ಲಿ ಜಗತ್ಪಸಿದ್ಧಿ ಪಡೆಯಿತು. ನಳಂದ ವಿಶ್ವವಿದ್ಯಾನಿಲಯದ ಖ್ಯಾತಿ ದೇಶವಿದೇಶಗಳಲ್ಲಿ ಪ್ರಸರಿಸಿದಂತೆ ಭಾರತದ ಎಲ್ಲ ಭಾಗಗಳಿಂದ ಮಾತ್ರವಲ್ಲದೆ ಏಷ್ಯಾದ ಅನೇಕ ಭಾಗಗಳಿಂದಲೂ ವಿದ್ಯಾರ್ಜನೆಗಾಗಿ ಈ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳು ಬರತೊಡಗಿದರು. ಚೀನಾದ ಬೌದ್ಧಯಾತ್ರಿಕರಾದ ಹೂಯಾನ್‌ತ್ಸಾಂಗ್ ಮತ್ತು ಇತ್ಸಿಂಗ್‌ರು ಈ ವಿಶ್ವವಿದ್ಯಾನಿಲಯದಲ್ಲಿ ಹಲವು ವರ್ಷಗಳ ಕಾಲವಿದ್ದು ವಿದ್ಯಾರ್ಜನೆ ಮಾಡಿದರು. ಇವರ ಬರವಣಿಗೆಗಳು ನಳಂದ ವಿಶ್ವವಿದ್ಯಾನಿಲಯದಲ್ಲಿದ್ದ ವ್ಯಾಸಂಗಕ್ರಮ, ಪಠ್ಯ ವಿಷಯಗಳು, ಶೈಕ್ಷಣಿಕ ಸೌಲಭ್ಯ, ವಿದ್ಯಾರ್ಥಿಗಳ ನಿಷ್ಠೆ, ಶಿಸ್ತು, ದಕ್ಷ ಅಧ್ಯಾಪಕ ವರ್ಗ ಮುಂತಾದವುಗಳ ಬಗೆಗೆ ಅಧ್ಯಯನ ಮಾಡಲು ಸಹಕಾರಿಯಾಗಿವೆ.

ಈಗಾಗಲೇ ತಿಳಿದಂತೆ ಕ್ರಿ.ಶ. ಏಳನೇ ಶತಮಾನದೊತ್ತಿಗೆ ನಳಂದ ವಿಶ್ವವಿದ್ಯಾನಿಲಯದ ಘನತೆ ಗೌರವಗಳು ದೇಶವಿದೇಶಗಳಲ್ಲಿ ಪ್ರಸಾರಗೊಂಡಿತು. ನಳಂದವು ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನು ಹೊಂದಿದ್ದುದರಿಂದ ಪ್ರಖ್ಯಾತಿ ಪಡೆಯಲು ಕಾರಣವೂ ಅಗಿತ್ತು ಎನ್ನಬಹುದು. ಸಾಮಾನ್ಯವಾಗಿ ಯಾವುದೇ ಒಂದು ವಿಶ್ವವಿದ್ಯಾನಿಲಯದ ಪ್ರಖ್ಯಾತಿ ಅಥವಾ ಘನತೆ ಅಲ್ಲಿನ ಭವ್ಯಕಟ್ಟಡಗಳು, ನೈಸರ್ಗಿಕ ವಾತಾವರಣ, ವ್ಯಾಸಂಗ ವಿಷಯಗಳು, ಶೈಕ್ಷಣಿಕ ಸೌಲಭ್ಯ ಮತ್ತು ಸಲಕರಣೆಗಳು, ದಕ್ಷ ಮತ್ತು ಪರಿಣಿತಿ ಪಡೆದ ಅಧ್ಯಾಪಕರ ವರ್ಗ, ಶೈಕ್ಷಣಿಕ ಸಿಬ್ಬಂಧಿ, ಪುಸ್ತಕ ಭಂಡಾರ, ಆದಾಯ ಮೂಲ ಹಾಗೂ ಅಷ್ಟೇ ನಿಷ್ಠೆ, ಶಿಸ್ತು, ಸಂಯಮ, ಶ್ರದ್ಧೆಯಿಂದ ಅಧ್ಯಯನ ಮಾಡಬಯಸುವ ವಿದ್ಯಾರ್ಥಿ ವೃಂದದವರನ್ನು ಅವಲಂಬಿಸಿರುತ್ತದೆ. ಈ ಅಂಶಗಳ ಹಿನ್ನಲೆಯಲ್ಲಿ ನಳಂದ ವಿಶ್ವವಿದ್ಯಾನಿಲಯನ್ನು ಅವಲೋಕಿಸಿದರೆ ಅದು ಆಶ್ಚರ್ಯಕರ ರೀತಿಯಲ್ಲಿ ಈ ಎಲ್ಲಾ ಅಂಶಗಳನ್ನು ಒಳಗೊಂಡು ಅತ್ಯುನ್ನತ ಮಟ್ಟದಲ್ಲಿತ್ತು.

## 57.3.2.2 ಭವ್ಯ ಕಟ್ಟಡಗಳು

ನಳಂದ ವಿಶ್ವವಿದ್ಯಾನಿಲಯವು ಅನೇಕ ಭವ್ಯ ಕಟ್ಟಡಗಳನ್ನೂ ಸುತ್ತಲೂ ಇಟ್ಟಿಗೆಗಳಿಂದ ಕಟ್ಟಿದ ವಿಸ್ತಾರವಾದ ಆವರಣದ ಗೋಡೆಯನ್ನು ಹೊಂದಿತ್ತು. ಚೀನಾ ಪ್ರವಾಸಿಗ ಹಾಗೂ ನಳಂದ ವಿಶ್ವವಿದ್ಯಾನಿಲಯ ವಿದ್ಯಾರ್ಥಿಯಾಗಿದ್ದ ಹೂಯಾನ್‌ತ್ಸಾಂಗ್‌ನ ಪ್ರಕಾರ ನಳಂದ ವಿದ್ಯಾನಿಲಯದ ಹೊರ ಆವರಣವು ಇಟ್ಟಿಗೆಯ ಗೋಡೆಯಿಂದ ಆವೃತ್ತವಾಗಿದ್ದು, ಅದರೊಳಗೆ ಆರು ಅಂತಸ್ತುಗಳ ಭವನದಲ್ಲಿ ಎಂಟು ದೊಡ್ಡ ಹಜಾರಗಳು ಮತ್ತು ಮುನ್ನೂರು ವಿದ್ಯಾರ್ಥಿಗಳ ಕೋಣೆಗಳಿದ್ದವು. ಇದೇ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿದ್ದ ಮತ್ತೊಬ್ಬ ಚೀನೀ ಯಾತ್ರಿಕ ಇತ್ಸಿಂಗನು ಕೂಡ ನಳಂದದಲ್ಲಿ 300 ಕೊಠಡಿಗಳೂ ಹಾಗೂ 8 ಮಹಾಮಂದಿರಗಳೂ ಇದ್ದುದಾಗಿ ತನ್ನ ಬರವಣಿಗೆಯಲ್ಲಿ ಉಲ್ಲೇಖಿಸುತ್ತಾನೆ. ಇಲ್ಲಿಯ ಪ್ರತಿಯೊಂದು ಶಾಖೆಗಳು ಮಧ್ಯಗೋಡೆಗಳಿಂದ ಪ್ರತ್ಯೇಕಿಸಲ್ಪಟ್ಟಿತ್ತು.

ಪ್ರತಿಯೊಂದು ಮಹಡಿಯಲ್ಲಿದ್ದ ಕೊಠಡಿಗಳು ವಿಶಾಲವಾದ ಕಿಟಕಿಗಳನ್ನು ಹೊಂದಿದ್ದು, ಆ ಕಿಟಕಿಗಳ ಮೂಲಕ ಪ್ರಶಾಂತವಾದ ಗಾಳಿ ಮತ್ತು ಬೆಳಕು ಕೊಠಡಿಯೊಳಗೆ ಬರುವಂತೆ ಮಾಡಲಾಗಿದೆ. ವಿದ್ಯಾರ್ಥಿಗಳು ಆ ಕಿಟಕಿಗಳ ಮೂಲಕ ಮನಮೋಹಕವಾದ ನಿಸರ್ಗ ಸೌಂದರ್ಯವನ್ನು ಸವಿಯಬಹುದಾಗಿತ್ತು. ನಳಂದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು ಮತ್ತು ವಿದ್ವಾಂಸರ ವಾಸಕ್ಕೆ ಪ್ರತ್ಯೇಕ ಉಪ್ಪರಿಗೆ ಮನೆಗಳು, ವಿಹಾರಗಳು, ತರ್ಕ ಮಂದಿರಗಳು, ಸ್ತೂಪಗಳು, ಮುಗಿಲೆತ್ತರದ ಗೋಪುರಗಳು, ಪಾಠಪ್ರವಚನ ಕೇಂದ್ರಗಳು ಇತ್ಯಾದಿಗಳನ್ನು ನಿರ್ಮಿಸಲಾಗಿದ್ದು ಇವು ಬೀರಗಾವ್ ನದೀತಟದಲ್ಲಿ ಪ್ರಾಶಾಂತತೆಯಿಂದ ಜ್ಞಾನದೀವಿಗೆಗಳಾಗಿ ರಂಜಿಸುತ್ತಿದ್ದವು. ಈ ಅಂಶವನ್ನು ಯಶೋವರ್ಮನ ಶಾಸನವೂ ಪುಷ್ಟೀಕರಿಸುತ್ತದೆ. ವಿಶ್ವವಿದ್ಯಾಲಯದ ಆವರಣದ ಒಳಗಡೆ ಮತ್ತು ಹೊರಗಡೆ ಮಾವಿನ ತೋಪುಗಳನು ಬೆಳೆಸಲಾಗಿತ್ತು. ಅಲ್ಲಲ್ಲಿ ತಾವರೆ ಹೂವಿನಿಂದ ಕೂಡಿದ ಪುಷ್ಕರಣಿಗಳಿದ್ದವು. ವಿಶಾಲವಾದ ಕಟ್ಟಡಗಳ ಕಂಬಗಳು ಸುಂದರವಾಗಿ ಕೆತ್ತನೆ ಕೆಲಸಗಳಿಂದ ಅಲಂಕೃತಗೊಂಡಿದ್ದವು. ಕಟ್ಟಡಗಳ ಮೇಲ್ಛಾವಣಿಗೆ ಬಣ್ಣದ ಹೆಂಚುಗಳನ್ನು ಹೊದಿಸಲಾಗಿತ್ತು. ಹೂಯನ್‌ತ್ಸಾಂಗ್‌ನು ನಳಂದ ವಿದ್ಯಾಪೀಠದಲ್ಲಿ ಖಗೋಳ ಶಾಸ್ತ್ರಾಭ್ಯಾಸಕ್ಕಾಗಿ ಅತಿ ವಿತ್ತರವಾದ ವಿಕ್ಷಣಾಲಯವೊಂದು ಇದ್ದಿತೆಂದು ತಿಳಿಸುತ್ತಾನೆ, ಈ ವಿಕ್ಷಣಾಲಯವು ಮಂಜಿನಿಂದ ಮುಚ್ಚಿ ಕಾಣದಷ್ಟು ಎತ್ತರವಾಗಿತ್ತು ಎಂದಿದ್ದಾನೆ. ವಿದ್ಯಾರ್ಥಿಗಳು ಮತ್ತು ವಿದ್ವಾಂಸರ ವ್ಯಾಸಂಗಕ್ಕೆ, ಪೂಜೆ, ಪ್ರಾರ್ಥನೆ ಮತ್ತು ಗ್ರಂಥ ಭಂಡಾರಕ್ಕೆ ಬೇರೆ ಬೇರೆ ಕಟ್ಟಡಗಳಿದ್ದವು. ಈ ಕಟ್ಟಡಗಳು ಅನೇಕ ಅಂತಸ್ತುಗಳಿಂದ ಕೂಡಿದ್ದವು. ರಸಾಯನಶಾಸ್ತ್ರದ ಪ್ರಯೋಗಶಾಲೆ ಒಂದು ಕಟ್ಟಡದ ಎರಡನೇ ಅಂತಸ್ತಿನಲ್ಲಿ ಇತ್ತೆಂದು ತಿಳಿಸುತ್ತಾನೆ. ಅತ್ಯಂತ ಎತ್ತರವಾದ ಮಹಡಿ ಮೇಲಿನ ಕಿಟಕಿಗಳಿಂದ ಅನತಿ ದೂರದಲ್ಲಿನ ಮೋಡಗಳನ್ನು ವೀಕ್ಷಿಸಬಹುದಾಗಿತ್ತು ಎಂದು ಹೂಯನ್‌ತ್ಸಾಂಗ್‌ನು ತನ್ನ ಬರವಣಿಗೆಯಲ್ಲಿ, ತಿಳಿಸುತ್ತಾನೆ. ಇವುಗಳಲ್ಲದೆ ಕ್ರೀಡಾಸ್ಥಾನಗಳು,ಪುಷ್ಪೋದ್ಯಾನಗಳು, ವಿಹಾರವಾಟಿಕೆಗಳು, ಸಭಾಂಗಣಗಳು ಹಾಗೂ ತರಗತಿಗಳ ಭವ್ಯಭವನಗಳ ಪ್ರದೇಶದಲ್ಲಿ 80 ಅಡಿ ಎತ್ತರದ ಬುದ್ಧನ ವಿಗ್ರಹವನ್ನು ನಿರ್ಮಿಸಲಾಗಿತ್ತು.

## 57.3.2.3 ನಳಂದದ ಪ್ರವೇಶ

ಜ್ಞಾನಕಾಂಕ್ಷಿಗಳಾದ ವಿದ್ವಾಂಸರೂ ಹಾಗೂ ವಿದ್ಯಾರ್ಥಿಗಳೂ ದೇಶ ವಿದೇಶಗಳಿಂದ ನಳಂದಕ್ಕೆ ವಿಶೇಷ ವ್ಯಾಸಂಗಕ್ಕಾಗಿ ಬರುತ್ತಿದ್ದರು.ಅದರೆ ಪ್ರವೇಶ ಕೋರಿ ಬಂದವರಿಗೆಲ್ಲರಿಗೂ ಇಲ್ಲಿ ಅವಕಾಶ ಸಿಕ್ಕುತ್ತಿರಲ್ಲಿಲ್ಲ. ಅಭ್ಯರ್ಥಿಗಳನ್ನು ಆರಿಸಿಕೊಳ್ಳಲು ಕೆಲವು ನಿಯಮಾವಳಿಗಳಿದ್ದವು. ಪ್ರವೇಶಕೋರಿ ಬಂದ ಅಭ್ಯರ್ಥಿಗಳು ವಿದ್ಯಾಪೀಠದ ಹೊರವಲಯದಲ್ಲಿ ನಿರ್ಮಿಸಿದ್ದ ಕಟ್ಟಡಗಳಲ್ಲಿ ಸುಮಾರು ಮೂರು ತಿಂಗಳ ಕಾಲ ವಾಸಿಸಬೇಕಿತ್ತು. ಅವರಿಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಬೋಧಿಸಲಾಗುತ್ತಿತ್ತು ಹಾಗೂ ಅವರ ಗ್ರಹಣ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತಿತ್ತು. ಆನಂತರ ಪ್ರಸಿದ್ಧ ವಿದ್ವಾಂಸರು ವಿದ್ಯಾರ್ಥಿಗಳ ಆಯ್ಕೆ ನಡೆಸುತ್ತಿದ್ದರು. ಈ ವಿದ್ವಾಂಸರಿಗೆ "ದ್ವಾರ ಪಂಡಿತ"ರೆಂದು ಹೆಸರಿದ್ದಿತ್ತು. ಪ್ರವೇಶ ಪರೀಕ್ಷೆಯಲ್ಲಿ ನೂರರಲ್ಲಿ ಕೇವಲ ಮೂವತ್ತು ಮಂದಿ ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ, ಮತ್ತು ವೈದ್ಯಕೀಯ ಸೌಲಭ್ಯವಿದ್ದಿತು. ಸಹ ಶಿಕ್ಷಣವಿದ್ದು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಒದಗಿಸಲಾಗಿದ್ದಿತು. ಹೂಯನ್‌ತ್ಸಾಂಗ್ ನಳಂದದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅಲ್ಲಿ ಸುಮಾರು ಹತ್ತು ಸಹಸ್ರ ಮಂದಿ ವಿಧ್ಯಾರ್ಥಿಗಳಿದ್ದರು. ಅಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿಧ್ಯಾರ್ಥಿಗಳಿದ್ದರೂ ಈ ವಿದ್ಯಾನಿಲಯದ ದೀರ್ಘ ಇತಿಹಾಸದಲ್ಲಿ ಒಂದು ಸಾರಿಯಾದರೂ ವಿಧ್ಯಾರ್ಥಿಗಳ ಶಿಸ್ತು ಮೀರಿದ ಘಟನೆಯ ಉಲ್ಲೇಖವಿಲ್ಲ. ನಳಂದ ವಿಶ್ವವಿದ್ಯಾನಿಲಯ ವಿಧ್ಯಾರ್ಥಿಗಳ ಮತ್ತು ಆಚಾರ್ಯ ವರ್ಗದ ಮಧುರ ಭಾಂದವ್ಯ ಹಾಗೂ ಸಂಯಮಗಳು ಆದರ್ಶಪ್ರಾಯವಾಗಿದ್ದವು. ಇವರ ಸಹಕಾರಗಳಿಂದ ನಳಂದದ ಕಾರ್ಯಕ್ರಮಗಳು ನಿಯಿತಕಾಲದಲ್ಲಿ ನೆಡೆಯುತ್ತಿದ್ದವು.

## 57.3.2.4 ಪಠ್ಯಕ್ರಮ

ನಳಂದದಲ್ಲಿನ ಶಿಕ್ಷಣ ಕ್ರಮವು ಆಧುನಿಕ ರಾಷ್ಟ್ರಗಳಲ್ಲಿನ ಶಿಕ್ಷಣ ವಿಧಾನದಂತಿತ್ತು. ಇಲ್ಲಿನ ವಿಧ್ಯಾರ್ಥಿಗಳ ಪ್ರವೇಶಪದ್ಧತಿ, ಭೋಧನೆ, ಸಂಶೋಧನೆ ಹಾಗೂ ಪ್ರಸಾರಗಳಿಗೆ ಸಂಬಂಧಿಸದಂತೆ ಅತ್ಯುತ್ತಮವಾದ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿತ್ತು.

ನಳಂದ ವಿಶ್ವವಿದ್ಯಾನಿಲಯವು ಬೌದ್ಧವಿದ್ಯಾಲಯವಾಗಿದ್ದರೂ ಸಹ ಇಲ್ಲಿನ ಅಭ್ಯಾಸ ಕ್ರಮವು ಮತ್ತು ಭೋದನಾ ವಿಷಯಗಳು ಬೌದ್ಧರಿಗೇ ಅಲ್ಲದೆ ಇತರರಿಗೂ ಉಪಯುಕ್ತವಾಗುವಂತವಾಗಿದ್ದವು. ಇಲ್ಲಿನ ಬೋಧನಾ ವಿಷಯಗಳೆಂದರೆ ಮಹಾಯಾನ ಮತ್ತು ಹೀನಾಯಾನ ಬೌದ್ಧಧರ್ಮದ ಬೋಧನೆಗಳು, ಬ್ರಾಹ್ಮಣ ಸಂಬಂಧಿ ವಿಷಯಗಳಾದ 'ವೇದಗಳೂ ಸೇರಿದಂತೆ ಸಾಹಿತ್ಯ, ಶಿಲ್ಪಕಲೆ,

ವಿಜ್ಞಾನ, ಅಥರ್ವವೇಧ, ಸಾಂಖ್ಯ, ವೈದ್ಯಕೀಯ, ಯೋಗ, ಖಗೋಳಶಾಸ್ತ್ರ, ತಂತ್ರಮತ್ತು ಪ್ರತಿಮೂಲ ಅಲಕ್ಷಣಶಾಸ್ತ್ರ ಮುಂತಾದ ವಿಷಯಗಳ ವ್ಯಾಸಂಗಕ್ಕೆ ಪ್ರಾಧಾನ್ಯ ಕೊಡಲಾಗಿತ್ತು. ವೇದಗಳು, ಇತಹಾಸ, ಪುರಾಣಗಳಿಂದ ಹಿಡಿದು ಸರ್ಪಮಂತ್ರ, ಗಾನಕಲೆ, ನೃತ್ಯ ಮತ್ತು ಲೇಪನ ವಸ್ತುಗಳನ್ನು ತಯಾರುಮಾಡುವ ವಿಷಯಗಳ ಅಧ್ಯಯನವು ವ್ಯಾಸಂಗ ಕ್ರಮದಲ್ಲಿತ್ತು. ಅಭಿನಯ ಕಲೆ, ಚಿತ್ರಕಲೆ, ಕಾಲಜ್ಞಾನ, ಪಕ್ಷಿ ವಿಶೇಷ, ಕುದುರೆ, ಆನೆ ಮುಂತಾದವುಗಳ ತಿಳುವಳಿಕೆ, ರಾಜನೀತಿ ಶಾಸ್ತ್ರ, ವ್ಯಾಕರಣ, ಗಣಿತ, ಆತ್ಮಜ್ಞಾನ, ಇನ್ನೂ ಮುಂತಾದ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಪ್ರಾಚೀನ ಕಾಲದಲ್ಲಿ ವ್ಯಾಸಂಗ ಮಾಡಬಹುದಾಗಿದ್ದ ವಿಷಯಗಳೆಲ್ಲವನ್ನೂ ಶಿಕ್ಷಣಕ್ಕೊಳ್ಳಪಡಿಸಲಾಗಿತ್ತು. ಚೀನೀ ಬೌದ್ಧ ಯಾತ್ರಿಕರು ಬೌದ್ಧ ಹಾಗೂ ಬ್ರಾಹ್ಮಣ ಸಂಸ್ಥೆಗಳಲ್ಲಿ ಪ್ರಚಲಿತವಾಗಿದ್ದ ವ್ಯಾಸಂಗ ವಿಷಯಗಳ ಮೇಲೆ ಅಮೂಲ್ಯ ಬೆಳಕು ಚೆಲ್ಲುತ್ತಾರೆ. ಭಾರತದ ಬಗ್ಗೆ ಪೀಠಿಕೆಯ ರೂಪದಲ್ಲಿ ಬರೆದ ಉಲ್ಲೇಖದಲ್ಲಿ ಹೂಯೆನ್‌ತ್ಸಾಂಗ್‌ನು ಮಕ್ಕಳು 'ಹನ್ನೆರಡು ಅಧ್ಯಾಯಗಳು' ಎಂಬ ಪುಸ್ತಕವನ್ನು ಓದಿದ ನಂತರ ಅವರ ಏಳನೆಯ ವರ್ಷದಲ್ಲಿ ಐದು ವಿಜ್ಞಾನ ವಿಷಯಗಳನ್ನು ಪರಚಯಿಸಲಾಗುತ್ತದೆ ಎಂದು ಹೇಳುತ್ತಾನೆ.

ಹೂಯನ್‌ತ್ಸಾಂಗ್‌ನ ಮೇಲಿನ ಹೇಳಿಕೆಯಿಂದ ನಳಂದಾದಲ್ಲಿ ವ್ಯಾಸಂಗವು ಮೂರು ಹಂತಗಳಲ್ಲಿ ನಡೆಯುತ್ತಿತ್ತು ಎಂಬುದು ಮನದಟ್ಟಾಗುತ್ತದೆ. ಸಾಮಾನ್ಯವಾಗಿ 8ರಿಂದ 13 ವರ್ಷದವರೆಗೆ ಪ್ರಾಥಾಮಿಕ ಶಿಕ್ಷಣವೂ 13ರಿಂದ 20 ವರ್ಷದವರಿಗೆ ಮಾಧ್ಯಮಿಕ ಶಿಕ್ಷಣವೂ ನಂತರ ಉಚ್ಚ ಶಿಕ್ಷಣವು ನಡೆಯಿತ್ತಿತ್ತು. ಉನ್ನತ ಶಿಕ್ಷಣವನ್ನು ಉಪನ್ಯಾಸ, ಚರ್ಚೆ, ವಾದ ವಿವಾದ ಹಾಗೂ ಪ್ರಶ್ನೋತ್ತರಗಳ ಮೂಲಕ ವಿಧ್ಯಾರ್ಥಿಗಳಿಗೆ ಬೋದಿಸಲಾಗುತ್ತಿತ್ತು. ನಳಂದ ವಿಶ್ವವಿದ್ಯಾನಿಲಯದಲ್ಲಿ. ಬೋಧನೆ, ಸಂಶೋಧನೆ ಹಾಗೂ ಪ್ರಸಾರ ಇವುಗಳಿಗೆ ಅವಕಾಶವಿತ್ತು. ಹಿಂದೆ ಹೇಳಿದಂತೆ ವಿಧ್ಯಾರ್ಥಿಗಳ ವ್ಯಾಸಂಗ ಕ್ರಮವು ದರ್ಜೆಗನುಗುಣವಾಗಿ ನಡೆಯುತ್ತಿತ್ತು. ಕೆಳದರ್ಜೆಯ ತರಗತಿಗಳಿಗೆ ಪಠ್ಯ ಪುಸ್ತಕಗಳ ಮೂಲಕ ಬೋಧಿಸುತ್ತಿದ್ದರು. ಉಚ್ಚ ಶಿಕ್ಷಣದಲ್ಲಿ ಆಧುನಿಕ ಕಾಲದ ವ್ಯಾಸಂಗ ಗೋಷ್ಠಿಯಂತಹ ಪದ್ದತಿ ಇತ್ತು. ಪ್ರಶ್ನೆ ಮತ್ತು ಉತ್ತರದ ಮೂಲಕ ಗಹನವಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಸರ್ವೋಚ್ಚ ವ್ಯಾಸಂಗದಲ್ಲಿ ನಿರತರಾಗಿದ್ದ ಪ್ರತಿ ಮೂವರು ವಿಧ್ಯಾರ್ಥಿಗಳಗೊಬ್ಬರಂತೆ ಮಾರ್ಗದರ್ಶಕ ಪ್ರಾಧ್ಯಾಕರಿರುತ್ತಿದ್ದರು. ಈ ವರ್ಗದ ವಿದ್ಯಾರ್ಥಿಗಳು ತಾವೇ ತಮ್ಮ ತಮ್ಮ ವ್ಯಾಸಂಗದ ವಿಷಯಗಳ ಮೇಲೆ ಪ್ರೌಢ ಪ್ರಬಂಧವನ್ನು ರಚಿಸಬೇಕಾಗಿದ್ದಿತು. ಅಂತ ಪ್ರಬಂಧಗಳನ್ನು ಇಬ್ಬರು ಅಥಾವ ಮೂವರು ಪ್ರಾಧ್ಯಾಪಕರು ಪರೀಕ್ಷಿಸುತ್ತಿದ್ದರು. ಇಂತಹ ಪರೀಕ್ಷೆಯಲ್ಲಿ ತೇರ್ಗಡೆಯಾದ ಆನಂತರ ಅವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗುತ್ತಿತ್ತು. ಈ ವಿಶ್ವವಿದ್ಯಾನಿಲಯದಲ್ಲಿ ಪ್ರಶಸ್ತಿ ಪಡೆದ ವಿದೇಶ ಗಣ್ಯ ವಿಧ್ಯಾರ್ಥಿಗಳಲ್ಲಿ ಹ್ಯೂಯನ್‌ತ್ಸಾಂಗನು ಒಬ್ಬ. ಈತನಿಗೆ ಧರ್ಮಚಾರ್ಯ. ಮೋಕ್ಷಚಾರ್ಯ ಮತ್ತು ಮಹಾಯಾನದೇವ ಎಂಬ ಪ್ರಶಸ್ತಿಗಳನ್ನು ಕೊಡಲಾಗಿತ್ತು. ಪ್ರಶಸ್ತಿ ಪತ್ರ ವಿತರಣೆಯಲ್ಲಿ ಅಧುನಿಕತೆ ಇತ್ತೆಂದು ಟಿಬೆಟಿನ ಗ್ರಂಥಗಳ ಆಧಾರಗಳಿಂದ ತಿಳಿದು ಬರುತ್ತದೆ. ವಿಕ್ರಮಶೀಲ ವಿದ್ಯಾಪೀಠದ ಪದವಿ ಪ್ರಧಾನ ಸಮಾರಂಭವೊಂದರ ಅಧ್ಯಕ್ಷತೆಯನ್ನು ಒಮ್ಮೆ ಹರ್ಷಚಕ್ರವರ್ತಿ ಅಲಂಕರಿಸಿದ್ದನು. ಇದೇ ರೀತಿಯ ಸಂಪ್ರದಾಯ ನಳಂದ ವಿಶ್ವವಿಧ್ಯಾನಿಲಯದಲ್ಲಿ ಇದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿಯಲ್ಲಿ ಅನೇಕ ಗಣ್ಯ ವಿದ್ವಾಂಸರು ಏಷ್ಯಾಖಂಡದ ನಾನಾ ದೇಶಗಳಿಂದ ತಮ್ಮ ಸಮಸ್ಯೆಗಳ ನಿವಾರಣೆಗಾಗಿ ನಳಂದ ವಿಶ್ವವಿದ್ಯಾಲಯದ ಆಚಾರ್ಯರಲ್ಲಿಗೆ ಬರುತ್ತಿದ್ದರು. ಪರಸ್ಪರ ಚರ್ಚೆಯ ಮೂಲಕ ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳತ್ತಿದ್ದರು. ಹಾಗೂ ಇಲ್ಲಿನ ವಿದ್ವಾಂಸರನ್ನು ತಮ್ಮ ತಮ್ಮ ದೇಶಗಳಿಗೆ ಆಹ್ವಾನಿಸಿಸ ಗೌರವಿಸುತ್ತಿದ್ದರು.

ನಳಂದ ವಿಶ್ವವಿದ್ಯಾನಿಲಯ ಭಾರತೀಯ ಸಂಸ್ಕೃತಿಯನ್ನು ಟಿಬೆಟ್. ಚೀನಾ, ಕೋರಿಯಾ ಮತ್ತು ಜಪಾನ್ ದೇಶಗಳಲ್ಲಿ ಪ್ರಸರ ಮಾಡಿತ್ತು. ಬೌದ್ಧ ಮತ ಗ್ರಂಥಗಳಲ್ಲದೆ ಹಿಂದುಮತದ ದಾರ್ಶನಿಕ ಹಾಗೂ ಸಂಸ್ಕೃತ ಸಾಹಿತ್ಯ ಗ್ರಂಥಗಳು ಟಿಬೆಟ್ ಮತ್ತು ಚೀನಾ ದೇಶಗಳ ಭಾಷೆಗಳಿಗೆ ತರ್ಜುಮೆಯಾದವು. ಹೀಗೆ ತರ್ಜುಮೆಯಾದ ಗ್ರಂಥಗಳಲ್ಲಿ ಪಾಣಿನಿಯ ಅಷ್ಟಾಧ್ಯಾಯಿಯೂ ಚರಕಸಂಹಿತೆಯೂ ಕಾಳಿದಾಸನ ಮೇಘದೂತವೂ ಸೇರಿವೆ. ಟಿಬೆಟ್ಟಿನ ರಾಜನ ಆಹ್ವಾನದ ಮೇರೆಗೆ ನಳಂದ ವಿದ್ಯಾಪೀಠ ಅಚಾರ್ಯರಲೊಬ್ಬನಾದ ಶಾಂತರಕ್ಷಿತ ಅಲ್ಲಿಗೆ ಹೋಗಿ ಅನೇಕ ಬೌದ್ಧ ಮತ ಗ್ರಂಥಗಳನ್ನು ಟಿಬೆಟಿಯನ್ ಭಾಷಗೆ ಭಾಷಾಂತರಿಸಿದನು. ಅದೇ ಕಾಲದಲ್ಲಿ ಟಿಬೆಟ್ಟಿಗೆ ಆಹ್ವಾನಿತರಾದ ಇತರ ಅಚಾರ್ಯರಲ್ಲಿ ಪದ್ಮ ಸಂಭವ ಅತಿ ಮುಖ್ಯ. ಈತನು ಟಿಬೆಟಿನ ಲಾಮಾ ಪೀಠದ ಸಂಸ್ಥಾಪಕ.

## 57.3.2.5 ಬೋಧಕ ವರ್ಗ

ಹೀಗೆ ನಳಂದ ವಿದ್ಯಾಪೀಠವು ಒಂದು ಮಹಾವಿದ್ಯಾನಿಲಯವಾಗಿ ರೂಪುಗೊಂಡು ದೇಶ ವಿದೇಶಗಳವರೆಗೆ ಅದರ ಖ್ಯಾತಿ ಪಸರಿಸಲು ಅಲ್ಲಿನ ಪಂಡಿತೋತ್ತಮರು ಮತ್ತು ಘನವಿದ್ವಾಂಸರು ಕಾರಣವಾಗಿದ್ದರು. ಅವರ ಆಳವಾದ ಪಾಂಡಿತ್ಯ, ಹಿರಿಮೆ ಮತ್ತು ಆದರ್ಶಗಳು ವಿಶ್ವವಿದ್ಯಾನಿಲಯದ ಘನತೆ ಹೆಚ್ಚಲು ಮತ್ತಷ್ಟು ಕಾರಣವಾಗಿದ್ದಿತು. ಹರ್ಷವರ್ಧನನ ಕಾಲದಲ್ಲಿ ಸುಮಾರು 1500 ಮೇಧಾವಿ ಅಧ್ಯಾಪಕರು ನಳಂದದಲ್ಲಿದ್ದರು. ಅವರಲ್ಲಿ ಆಚಾರ್ಯಪೀಠ ಅಲಂಕರಿಸಿದ್ದವರು ದಿಙ್ನಾಗ, ಸ್ಥಿರಮತಿ, ಧರ್ಮಪಾಲ, ಚಂದ್ರಪಾಲ, ಗುಣಮತಿ, ಪ್ರಭಾಮಿತ್ರ, ಜಿನಮಿತ್ರ ಮತ್ತು ಶೀಲಭದ್ರ ಮೊದಲಾದವರು ಅತ್ಯಂತ ಪ್ರಸಿದ್ಧ ಪ್ರಾಧ್ಯಾಪಕರಾಗಿದ್ದರು. ಈ ವಿದ್ಯಾಪೀಠಕ್ಕೆ ಶೀಲ, ಅರ್ಹತೆ ಮತ್ತು ಪಾಂಡಿತ್ಯಗಳಿಂದ ಕೂಡಿದ ಪ್ರಗಲ್ಭ ಪಂಡಿತರುಗಳನ್ನು ದೇಶದ ನಾನಾ ಮೂಲೆಗಳಿಂದ ಆಹ್ವಾನಿಸಲಾಗುತ್ತಿತ್ತು. ಆಚಾರ್ಯ ಧರ್ಮಪಾಲನು ದಕ್ಷಿಣ ಭಾರತದ ಕಂಚಿಯವನು ಈತನು ತನ್ನ ಪಾಂಡಿತ್ಯದಿಂದ ನಳಂದ ವಿದ್ಯಾಪೀಠದ ಅತ್ಯುನ್ನತ ಪದವಿಯಾದ ಕುಲಪತಿಸ್ಥಾನವನ್ನು ಅಲಂಕರಿಸಿದ್ದನು. ಧರ್ಮಪಾಲನು ಯೊಗವನ್ನು ಕುರಿತ ಅನೇಕ ಗ್ರಂಥಗಳನ್ನು ರಚಿಸಿರುವನು. ಬೌದ್ಧಶಾಸ್ತ್ರ ಮತ್ತು ಆಧ್ಯಾತ್ಮ ವಿದ್ಯೆಗಳ ಮೇಲೆಯೂ ಗ್ರಂಥ ರಚನೆ ಮಾಡಿದ ಧರ್ಮಪಾಲನು ಪ್ರಸಿದ್ಧವಾದಗಾರನಾಗಿದ್ದು ಮಹಾಯಾನ ಪಂಥವನ್ನು ಪ್ರತಿಪಾದಿಸುತ್ತಿದ್ದನು. ಈ ವಿದ್ಯಾಪೀಠದ ಇತರ ಪ್ರಾಧ್ಯಾಪಕರಾದ ಸ್ಥಿರಮತಿ ದಂಡಕಾರಣ್ಯದಿಂದಲೂ, ಗುಣಮತಿ ವಲ್ಲಭಿಯಿಂದಲೂ ಬಂದವರು. ಧರ್ಮಪಾಲನ ನಂತರ ನಳಂದದ ಕುಲಪತಿಯಾಗಿದ್ದ ಶೀಲಭದ್ರನು ಸಮತಟದವನು. ಹೂಯನ್‌ತ್ಸಾಂಗ್ ನಳಂದ ವಿಶ್ವವಿದ್ಯಾನಿಲಯಕ್ಕೆ ಭೇಟಿ ಕೊಟ್ಟಾಗ ಶೀಲಭದ್ರನು ವಿದ್ವಾಂಸನಾಗಿ ನಳಂದದ ಮುಖ್ಯಸ್ಥನಾಗಿ, ಹೆಸರುಗಳಿಸಿದ್ದನು. ಕುಲಪತಿ ಶೀಲಭದ್ರನ ಪಾಂಡಿತ್ಯ ಪ್ರತಿಭಾಶಕ್ತಿ ಅದ್ವಿತೀಯವಾದುದಾಗಿತ್ತು. ಅವನ ಮೇಧಾಶಕ್ತಿ ಘನ ವಿದ್ವತು ಎಷ್ಟಿತ್ತೆಂದರೆ ಒಂದು ಪಕ್ಷ ಆ ಮಹಾವಿದ್ಯಾಲಯವೇನಾದರೂ ನಾಶವಾದ ಪಕ್ಷದಲ್ಲಿ ಶೀಲಭದ್ರನೊಬ್ಬ ಉಳಿದರೆ ಸಾಕೆಂದು ಬೇಳಲಾಗುತ್ತಿತ್ತಂತೆ. ಅವನೇ ಒಂದು ವಿಶ್ವಕೋಶದಂತಿದ್ದನು. ಅವನ ಮೇಲ್ವಿಚಾರಣೆಯಲ್ಲಿ ಅನೇಕ ಮಹಾಮಹಿಮ ಪ್ರತಿಭಾವಂತ ವಿದ್ವಾಂಸರನ್ನು ಒಳಗೊಂಡಿದ್ದ ಈ ವಿದ್ಯಾನಿಲಯಕ್ಕೆ ತಮ್ಮ ಅನೇಕ ಸಮಸ್ಯೆಗಳಿಗೆ ಉತ್ತರವಾಗಿ ವಿದೇಶಗಳಿಂದ ಜನ ಬರುತ್ತಿದ್ದರು. ದಿಙ್ನಾಗನು ತರ್ಕಶಾಸ್ತ್ರ, ವ್ಯಾಕರಣಗಳಲ್ಲಿ ಪರಿಣಿತಿ ಹೊಂದಿದ್ದನು. ಭಾರತದ ಯಾವ ಪ್ರದೇಶಕ್ಕೆ ಸೇರಿದವರಾದರೂ ಪಾಂಡಿತ್ಯದ ಆಧಾರದ ಮೇಲೆ ನಳಂದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪದವಿಗೆ ಅರ್ಹರಾಗಿರುತ್ತಿದ್ದರು. ಜ್ಞಾನವು ಜಾತಿ, ಎಲ್ಲೆ ಮತ್ತು ಪ್ರಾಂತಗಳನ್ನು ಮೀರಿತ್ತು ಎಂಬ ಅಂಶವು ನಳಂದ ವಿಶ್ವವಿದ್ಯಾನಿಲಯದಲ್ಲಿದ್ದ ಅಧಿಕಾರವರ್ಗದಿಂದ ಮನವರಿಕೆಯಾಗುತ್ತದೆ. ಪ್ರತಿಯೊಂದು ವಿಭಾಗದ ಪ್ರಾಧ್ಯಾಪಕರ ಅಥವಾ ಮುಖ್ಯಸ್ಥರ ಹೆಸರುಗಳನ್ನು ನಾಮಫಲಕಗಳ ಮೇಲೆ ಕೆತ್ತಿ ಇಡುತ್ತಿದ್ದರು. ದಿಙ್ನಾಗನು ಕೆಂಪು ಟೋಪಿಯನ್ನು ಧರಿಸುತ್ತಿದ್ದನೆಂದೂ ತಿಳಿದುಬರುತ್ತದೆ.

## 57.3.2.6. ಗ್ರಂಥಭಂಡಾರ

ನಳಂದ ವಿಶ್ವವಿದ್ಯಾನಿಲಯದಲ್ಲಿ ಒಂದು ಸಜ್ಜಾದ ಗ್ರಂಥಭಂಡಾವಿದ್ದಿತ್ತು. ಈ ಗ್ರಂಥಭಂಡಾರವು ಮೂರು ಅಂತಸ್ತಿನಿಂದ ಕೂಡಿದ್ದು ಮೂರು ಬೃಹತ್ ಕಟ್ಟಡಗಳಲ್ಲಿ ನೆಲೆಗೊಂಡಿತ್ತು. ಈ ಕಟ್ಟಡಗಳಲ್ಲಿ ಬಹುಸಂಖ್ಯಾತ ಓಲೆಗರಿಗಳನ್ನು ಸಂಗ್ರಹಿಸಿಡಲಾಗಿತ್ತು. ಈ ಗ್ರಂಥಭಂಡಾರದ ಮೂರು ಕಟ್ಟಡಗಳನ್ನು 'ರತ್ನೋದಧಿ' 'ರತ್ನರಂಜಕ' 'ರತ್ನಸಾಗರ 'ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಗ್ರಂಥ ಭಂಡಾರದ ಪ್ರದೇಶವನ್ನು 'ಧರ್ಮಗಂಜ್' ಎಂದು ಕರೆಯಲಾಗುತ್ತಿತ್ತು. ಈ ಗ್ರಂಥ ಭಂಡಾರವು ಆ ಕಾಲದ ಸರ್ವಶ್ರೇಷ್ಠ ಗ್ರಂಥಾಲಯವಾಗಿದ್ದು ಅಮೂಲ್ಯ ಗ್ರಂಥಗಳು, ಅಪೂರ್ವ ಹಸ್ತಪ್ರತಿಗಳು ಸಂಗ್ರಹಿತಗೊಂಡಿದ್ದವು. ಇಲ್ಲಿದ ಮೂಲ ಪ್ರತಿಗಳ ನಕಲನ್ನು ಪಡೆದುಕೊಳ್ಳಲು ದೇಶವಿದೇಶಗಳಿಂದ ವಿದ್ವಾಂಸರು ಬರುತ್ತಿದ್ದರು. ಇಂತಹ ನಕಲನ್ನು ಮಾಡುವ ಪ್ರತ್ಯೇಕ ಶಾಖೆಯೇ ಗ್ರಂಥಾಲಯದಲ್ಲಿತ್ತು. ಹೀಗೆ ಕೊಂಡೊಯ್ದು ಪ್ರತಿಗಳು ನೇಪಾಳ, ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿ ಮತ್ತು ಆಕ್ಸ್‌ಫರ್ಡ್ ಗ್ರಂಥಾಲಯಗಳಲ್ಲಿವೆ. ನಳಂದ ವಿಶ್ವವಿದ್ಯಾನಿಲಯದಲ್ಲಿ ಉಪಯೋಗಿಸುತ್ತಿದ್ದ ಪಠ್ಯಪುಸ್ತಕಗಳ ಬಗ್ಗೆ ಹಾಗೂ ವ್ಯಾಕರಣಕ್ಕೆ ನೀಡುತ್ತಿದ್ದ ಅತೀವಾ ಮಹತ್ವದ ಬಗ್ಗೆ ಇತ್ಸಿಂಗ್‌ನು ಮಹತ್ವನಾದ ವಿವರಗಳನ್ನು ತಿಳಿಸುತ್ತಾನೆ. ನಳಂದ ವಿಶ್ವವಿದ್ಯಾನಿಲಯಗಲ್ಲಿ ಸಂಸ್ಕೃತದಲ್ಲಿ ವಿದ್ಯಾರ್ಜನೆ ನೀಡಲಾಗುತ್ತಿತ್ತು. ಆದುದರಿಂದ ಸಂಸ್ಕೃತ ಸಾಹಿತ್ಯದ ಅಭಿವೃದ್ಧಿಗೆ ಮಹತ್ತರ ಕಾಣಿಕೆಯನ್ನು ನೀಡಲಾಯಿತು.

ಒಟ್ಟಿನಲ್ಲಿ ನಳಂದ ವಿದ್ಯಾಪೀಠವು ಜ್ಞಾನಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ನೀಡುವ, ವಾಸ್ತವ್ಯಕ್ಕೆ ಅನುಕೂಲವಿರುವ, ಒಮ್ಮತದಿಂದ ಕೂಡಿ ಸಂಶೋಧನೆಯನ್ನು ಊರ್ಜಿತಗೊಳಿಸಿ ಮುಂದುವರಿಸಿಕೊಂಡು ಹೋಗುವ ಎಲ್ಲಾ ಸೌಲಭ್ಯಸಲಕರಣೆಗಳನ್ನು ಹೊಂದಿದ್ದ ಅಂತರರಾಷ್ಟ್ರೀಯ ವಿದ್ಯಾಲಯವಾಗಿತ್ತು. ಈ ವಿದ್ಯಾಪೀಠದ ಚಿನ್ಹೆ 'ಧರ್ಮಚಕ್ರ' ವಾಗಿದ್ದಿತ್ತು.

## 57.3.2.7 ಕೊಡುಗೆಗಳು

ಈ ರೀತಿಯಲ್ಲಿ ಇಡೀ ಏಷ್ಯಾ ಖಂಡದಲ್ಲೆಲ್ಲ ಪ್ರಸಿದ್ದ ಜ್ಞಾನ ಕೇಂದ್ರವೆಂದು ಹೆಸರು ಪಡೆದಿದ್ದ ನಳಂದ ವಿಶ್ವವಿದ್ಯಾನಿಲಯದ ಆಧಾಯ ಮೂಲಗಳು ಹೇರಳವಾಗಿದ್ದವು. ಸಮಕಾಲೀನ ರಾಜ ಮಹಾರಾಜರು ಧನಧಾನ್ಯ ಕೊಡುಗೆಗಳ ಮೂಲಕ ಈ ವಿದ್ಯಾಲಯವನ್ನು ಪೋಷಿಸುತ್ತಿದ್ದುದಲ್ಲದೆ ಅನೇಕ ಗ್ರಾಮಗಳ ಹುಟ್ಟುವಳಿಯನ್ನು ವಿಶ್ವವಿದ್ಯಾನಿಲಯದ ವೆಚ್ಚಾಕ್ಕಾಗಿ ದತ್ತಿ ಬಿಟ್ಟಿದ್ದರು. ಗುಪ್ತರ ವಂಶದ ಅನೇಕ ಸಾಮ್ರಾಟರು ನಳಂದದ ಮಹಾ ವಿದ್ಯಾಲಯವನ್ನು ಅನೇಕ ರೀತಿಯಲ್ಲಿ ಪೋಷಿಸಿ ಪ್ರೋತ್ಸಾಹ ಕೊಟ್ಟಿದ್ದರು. "ನಳಂದ ವಿದ್ಯಾಕೇಂದ್ರದ ಪ್ರಾಧ್ಯಾಪಕರ ಪಾದ ಸೇವಕ"ನೆಂದು ತನ್ನನ್ನು ತಾನೇ ಕರೆದುಕೊಂಡ ಸಾಮ್ರಾಟ್ ಶ್ರೀಹರ್ಷನ ಶ್ರದ್ಧೋತ್ಸಾಹಗಳು ಆ ವಿಶ್ವವಿಧ್ಯಾನಿಲಯದ ಯಶಸ್ಸಿಗೆ ಬಹು ಮಟ್ಟಿಗೆ ಸಹಕಾರಿಯಾದವು. ಆತನ ಕಾಲದಲ್ಲಿ ನಳಂದ ವಿಶ್ವ ವಿಧ್ಯಾನಿಲಯ ಸರ್ವತೋಮುಖವಾದ ಅಭಿವೃದ್ದಿ ಹೊಂದಿತು. ಹರ್ಷವರ್ಧನ ತನ್ನ ಸಾಮ್ರಾಜ್ಯದ ನೂರು ಗ್ರಾಮಗಳ ಹುಟ್ಟುವಳಿಯನ್ನು ವಿದ್ಯಾಸಂಸ್ಥೆಯ ವೆಚ್ಚಕ್ಕಾಗಿ ಬಿಟ್ಟುಕೊಟ್ಟನೆಂಬುದನ್ನು ಹಿಂದೆಯೇ ತಿಳಿದಿದ್ದೇವೆ. ಅದರೊಂದಿಗೆ ಅವನು ಅಲ್ಲಿ ಒಂದು ವಿಶಾಲಸೌಧವನ್ನು ಕಟ್ಟಿ ಅದಕ್ಕೆ ಹಿತ್ತಾಳೆಯ ತಗಡುಗಳನ್ನು ಹೊದಿಸಿದನು. ಕನೋಜದಲ್ಲಿ ತಾನು ಸೇರಿಸಿದ ಸರ್ವಧರ್ಮಸಮ್ಮೇಳನಕ್ಕೆ ನಳಂದದಿಂದ ಸಾವಿರಾರು ವಿದ್ವಾಂಸರನ್ನು ಅಸ್ವಾಹಿಸಿ ಗೌರವಿಸಿದನು. ತನ್ನ ಮಿತ್ರ ರಾಜರು ಹಾಗೂ ಶ್ರೀಮಂತ ಪ್ರಜೆಗಳು ವಿದ್ಯಾಲಯದ ಮೇಲ್ಮೈಗೆ ಮುಂದಾಗಲು ಕರೆ ಕೊಟ್ಟನು. ಆತನ ಪ್ರಜೇಗಳು ಪ್ರತಿನಿತ್ಯವೂ ಅಕ್ಕಿ, ಹಾಲು, ಹಣ್ಣು, ತುಪ್ಪ ಮತ್ತು ಇತರ ಸಾಮಾಗ್ರಿಗಳನ್ನು ವಿದ್ಯಾಕೇಂದ್ರಕ್ಕೆ ಒದಗಿಸುತ್ತಿದ್ದರು. ಅವನ ಅನಂತರ ಕ್ರಿ.ಶ.8ನೇ ಶತಮಾನದಲ್ಲಿ ಕನೋಜ್ ರಾಜ್ಯದ ಪ್ರಧಾನಿ ಯಶೋವರ್ಮದೇವನ ಕುಮಾರನಾದ ಮಾಲದ ತನ್ನ ವಿಪುಲ ಅಸ್ತಿ ಐಶ್ವರ್ಯವನ್ನು ಈ ವಿಶ್ವವಿದ್ಯಾಲಯಕ್ಕೆ ದಾನ ಮಾಡಿದನು. ಈತನು ಬರೆಸಿದ ಶಾಸನ ನಳಂದದ ಹಿರಿಮೆಯನ್ನು ಪ್ರತಿ ಬಿಂಬಸುವ ಕನ್ನಡಿಯಂತಿದೆ. "ಪ್ರಗಲ್ಬ ಪಾಂಡಿತ್ಯದಿಂದ ಕೂಡಿದ ಪ್ರಾಧ್ಯಾಪಕರ ನಿಧಿಯಾದ ನಳಂದವು ಸಕಲ ಸಾರ್ವಭೌಮರ ಸಂಪತ್ತಿನ ನಗರಗಳನ್ನು ನಾಚುವಂತೆ ಮಾಡಿದೆ." ಎಂದು ಈ ಶಾಸನದಲ್ಲಿ ಕೆತ್ತಲಾಗಿದೆ. "ಕೈಲಾಸ ಪರ್ವತವನ್ನು ಹೋಲುವ ಬದ್ದದೇವನಿಗಾಗಿ ನಿರ್ಮಿಸಿದ"ನೆಂದು ಇದೇ ಶಾಸನದಿಂದ ತಿಳಿದುಬರುತ್ತದೆ.

ಎಂಟನೇ ಶತಮಾನದ ಉತ್ತರಾರ್ಧದಲ್ಲಿ ಪಾಲವಂಶದ ಅರಶನಾದ ಗೋಪಾಲ ಮತ್ತು ಧರ್ಮಪಾಲ ಈ ವಿದ್ಯಾಪೀಠಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟರು. ಸುಮಾರು ಅದೇ ಕಾಲದಲ್ಲಿ ವಿಪುಲ ಶ್ರೀಮಿತ್ರ ಎಂಬುವನು ನಳಂದದಲ್ಲಿನ ಹಲವು ಶಿಥಿಲವಾದ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ ಇನ್ನು ಕೆಲವು ಹೊಸ ಕಟ್ಟಡಗಳನ್ನು ಹಾಗೂ ತಾರಭಗವತಿಯ ಪೂಜಮಂದಿರವನ್ನೂ ಕಟ್ಟಿಸಿದನು ಎಂಬುದಾಗಿ ಅಲ್ಲಿ ಸಿಕ್ಕಿರುವ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ನಳಂದ ವಿಶ್ವವಿದ್ಯಾನಿಲಯಕ್ಕೆ ದೇಶಿಯ ರಾಜರಿಂದ ಮಾತ್ರವಲ್ಲದೆ ಏಷ್ಯಾಖಂಡದ ಇತರ ರಾಜ್ಯಗಳಿಂದಲೂ ಕಾಣಿಕೆ ಬರುತ್ತಿತ್ತು. ಒಂಬತ್ತನೇ ಶತಮಾನದಲ್ಲಿ ಸುವರ್ಣದ್ವೀಪದ (ಸುಮಾತ್ರ) ಮಹಾರಾಜ ಬಲಪುತ್ರದೇವ ಬಂಗಾಳದ ದೇವಪುತ್ರ ಸಾಮ್ರಾಟನ ಅಪ್ಪಣೇ ಪಡೆದು ನಳಂದದಲ್ಲಿ ಹೊಸ ಭವನಗಳನ್ನು ನಿರ್ಮಿಸಿದುದಲ್ಲದೆ ವಿದ್ಯಾಪೀಠಕ್ಕೆ ಐದು ಗ್ರಾಮಗಳ ಹುಟ್ಟುವಳಿ ಸಂದಾಯವಾಗುವ ಏರ್ಪಾಟು ಮಾಡಿದನು.

ಹೀಗೆ ಕ್ರಿ.ಶ. ಐದನೇ ಶತಮಾನದಲ್ಲಿ ಪ್ರಸಿದ್ದಿಗೆ ಬಂದ ನಳಂದವಿಶ್ವವಿದ್ಯಾನಿಲಯವು ಚಕ್ರವರ್ತಿಯ ಆಳ್ವಿಕೆಯಲ್ಲಿ ಉಚ್ಚ್ರಾಯಸ್ಥಿತಿ ಮುಟ್ಟಿತ್ತು. ಅದು ಕ್ರಿ.ಶ.12ನೇ ಶತಮಾನದ ಕೊನೆಯವರೆಗೂ ಉಚ್ಚ್ರಾಯ ಸ್ಥಿತಿಯಲ್ಲಿತ್ತು. ಕ್ರಿ.ಶ. 1197ರ ಸುಮಾರಿನಲ್ಲಿ ಭಕ್ತಿಯಾರ್ ಖಿಲ್ಜಿಯ ದಂಡೆಯಾತ್ರೆಗೆ ಸಿಕ್ಕ ನಳಂದ ಹಾಳಾಯಿತೆಂದು ತಿಳಿದುಬರುತ್ತದೆ. ಹೀಗೆ ಪ್ರಾಚೀನ ಭಾರತೀಯ ಇತಿಹಾಸದ ಚಿರಂತನ ನೆನಪುಗಳಲ್ಲೊಂದಾದ ನಳಂದ ವಿಶ್ವಾವಿದ್ಯಾನಿಲಯದ ಅಧ್ಯಾಯನ ಆಧುನಿಕ ಯುಗದಲ್ಲೂ ಭಾರತೀಯರ ಜ್ಞಾನವರ್ಧನೆಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುವ ಚೈತನ್ಯವಾಗಿದೆ ಎಂದರೆ ತಪ್ಪಾಗಲಾರದು.

ನಳಂದ ವಿಶ್ವವಿದ್ಯಾಲಯವು ದೇಶವಿದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸಿ ಪ್ರಸಿದ್ದಿ ಪಡೆದಂತೆ ಅನೇಕ ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಸ್ಫೂರ್ತಿ ನೀಡಿತು. ಅದರ ಸ್ಫೂರ್ತಿಯಿಂದ ಸ್ಥಾಪನೆಗೊಂಡ ಇತರ ಪ್ರಾಚೀನ ವಿದ್ಯಾಸಂಸ್ಥೆಗಳೆಂದರೆ ವಲ್ಲಭಿ ವಿದ್ಯಾಪೀಠ, ವಿಕ್ರಮಶೀಲ, ಓದಾಂತಪುರಿ ಮತ್ತು ಜಗದ್ದಲ ವಿದ್ಯಾಪೀಠ, ಮಿಥಿಲ, ಕಂಚಿ, ಮೊದಲಾದವು ಪ್ರಖ್ಯಾತ ವಿದ್ಯಾಸಂಸ್ಥೆಗಳಾಗಿದ್ದವು.

## 57.3.3. ವಲ್ಲಭಿ ವಿದ್ಯಾಪೀಠ

ಕ್ರಿ.ಶ.475 ರಿಂದ 750ರ ಅವಧಿಯ ಕಾಲದಲ್ಲಿ ವಲ್ಲಭಿಪುರಂ ಅಥವಾ ಮಲ್ಲಭಿಯು ಮೈತ್ರಕ ವಂಶದ ದೊರೆಗಳ ರಾಜಧಾನಿಯಾಗಿದ್ದಿತು. ಇವರ ಆಳ್ವಿಕೆಗೆ ಸೌರಾಷ್ಟ್ರ ಮತ್ತು ಗುಜರಾತ್ ಒಳಪಟ್ಟಿದ್ದವು. ಪ್ರಾಚೀನ ಕಾಲದಿಂದಲೂ ಇದು ವಿದೇಶ ವ್ಯಾಪಾರದ ಪ್ರಮುಖ ಕೇಂದ್ರವಾಗಿದ್ದು ಆರ್ಥಿಕವಾಗಿ ಸುಭದ್ರವಾಗಿದ್ದಿತು. ಈ ಹಿನ್ನಲೆಯಲ್ಲಿ ಮೈತ್ರಕ ದೊರೆಗಳು ತಮ್ಮ ರಾಜ್ಯದಲ್ಲಿ ಸಾಂಸ್ಕೃತಿಕ ಅಭಿವದ್ಧಿ ಕೆಲಸಗಳನ್ನು ಕೈಗೊಂಡರು. ಅದರಲ್ಲಿ ಶಿಕ್ಷಣದ ಬೆಳವಣಿಗೆಯೂ ಒಂದಾಗಿತ್ತು. ಈಗಾಗಲೇ ನಳಂದ ವಿಶ್ವವಿದ್ಯಾನಿಲಯವು ತನ್ನ ಅತ್ಯುನ್ನತವಾದ ಸ್ಥಾನವನ್ನು ತಲುಪಿದ್ದು, ಅದರಿಂದ ಪ್ರಭಾವಿತಗೊಂಡ ಮೈತ್ರಕ ದೊರೆಗಳು ನಳಂದ ವಿಶ್ವವಿದ್ಯಾನಿಲಯದಲ್ಲಿದ್ದ ಪ್ರಾಧ್ಯಾಪಕರರಾದ ಗುಣಮತಿ ಮತ್ತು ಸ್ಥಿರಮತಿ ಎಂಬ ವಿದ್ವಾಂಸರನ್ನು ಆಹ್ವಾನಿಸಿ ವಲ್ಲಭಿ ವಿದ್ಯಾಪೀಠವನ್ನು ಸ್ಥಾಪಿಸಿದರು.

ದುದ್ದ ಎಂಬ ರಾಜಕುಮಾರಿ ವಲ್ಲಭಿಯಲ್ಲಿ ಮೊತ್ತಮೊದಲು ಬೌದ್ಧ ವಿಹಾರವನ್ನು ಸ್ಥಾಪಿಸಿದವಳು ಎಂದು ತಿಳಿದುಬರುತ್ತದೆ. ಈಕೆ ಮೈತ್ರಕ ದೊರೆ ಒಂದನೇ ಧ್ರುವನ ಸೋದರಿ. ನಂತರ ಬೌದ್ಧ ಘನವಿದ್ವಾಂಸನಾದ ಆಚಾರ್ಯ ಭದಂತಸ್ಥಿರಮತಿ ವಲ್ಲಭಿಯಲ್ಲಿ ಮತ್ತೊಂದು ವಿಹಾರವನ್ನು ನಿರ್ಮಿಸಿದನು. ಇದನ್ನು 'ಶ್ರೀಬಪ್ಪದ' ಎಂದು ಕರೆಯಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಮುಂದೆ ಆಳ್ವಿಕೆಗೆ ಬಂದ ರಾಜ ಒಂದನೇ ಧಾರಸೇನನು ವಲ್ಲಭಿ ವಿದ್ಯಾಪೀಠಕ್ಕೆ ಹೇರಳವಾದ ಧನಸಹಾಯ ನೀಡಿದನು. ಇದರಿಂದ ವಲ್ಲಭಿ ವಿದ್ಯಾಪೀಠವು ಮತ್ತಷ್ಟು ಅಭಿವೃದ್ಧಿ ಸಾಧಿಸಲು ಸಾಧ್ಯವಾಯಿತು. ವಲ್ಲಭಿ ವಿದ್ಯಾಪೀಠದಲ್ಲಿದ್ದ ವಿದ್ವಾಂಸರಾದ ಗುಣಮತಿ ಮತ್ತು ಸ್ಥಿರಮತಿ ಬೌದ್ಧಧರ್ಮದ ಮೇಲೆ ಅನೇಕ ವ್ಯಾಖ್ಯಾನಗಳನ್ನು ರಚಿಸಿದರು. ಹೀಗೆ ಮೈತ್ರಕ ರಾಜರ ಪ್ರೋತ್ಸಾಹ ಹಾಗೂ ಬೌದ್ಧ ವಿದ್ವಾಂಸರುಗಳ ಪರಿಶ್ರಮದಿಂದ ವಲ್ಲಭಿ ವಿದ್ಯಾಪೀಠವು ಪ್ರಖ್ಯಾತಿ ಪಡೆಯಿತಲ್ಲದೆ, ಅದು ಸಾಮಾರು ನೂರು ಸಂಘರಾಮಗಳನ್ನು ಹೊಂದಿತ್ತು. ವಲ್ಲಭಿಯಲ್ಲಿ ಸುಮಾರು ಆರು ಸಾವಿರಕ್ಕೂ ಹೆಚ್ಚಿನ ಪುರೋಹಿತರಿದ್ದರೆಂದು ತಿಳಿದುಬರುತ್ತದೆ.

ನಳಂದ ವಿಶ್ವವಿದ್ಯಾನಿಲಯವು ಭಾರತದ ಪೂರ್ವ ಭಾಗದಲ್ಲಿದ್ದರೆ ವಲ್ಲಭಿ ವಿದ್ಯಾಪೀಠವು ಭಾರತದ ಪಶ್ಚಿಮ ಭಾಗದಲ್ಲಿ ಏಳಿಗೆಯಲ್ಲಿದ್ದಿತು. ಈ ರೀತೀಯಲ್ಲಿ ಕ್ರಿ.ಶ.. ಐದನೇ ಶತಮಾನದಲ್ಲಿಸ್ಥಾಪಿತಗೊಂಡ ವಲ್ಲಭಿ ವಿದ್ಯಾಪೀಠವು ಕ್ರಿ.ಶ. ಹನ್ನೆರಡನೇ ಶತಮಾನದವರೆವಿಗೂ ಅಸ್ತಿತ್ವದಲ್ಲಿತ್ತು. ಈ ವಿದ್ಯಾಪೀಠವು ಭಾರತದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದಿತು. ಈ ವಿದ್ಯಾಪೀಠದಲ್ಲಿ ವ್ಯಾಸಂಗ ಮುಗಿಸಿದ ಪ್ರತಿಭಾವಂತರನ್ನು ಸರ್ಕಾರಿ ಆಡಳಿತದಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತಿದ್ದಿತು. ನಳಂದ ವಿಶ್ವವಿದ್ಯಾನಿಲಯವು ಮಹಾಯಾನ ಪಂಥದ ಬೌದ್ಧಧರ್ಮ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡಿದ್ದರೆ ವಲ್ಲಭಿಯಲ್ಲಿ ಹೀನಾಯಾನ ಪಂಥಕ್ಕೆ ಪ್ರಾಧಾನ್ಯ ನೀಡಲಾಗಿತ್ತು. ನಳಂದ ವಿಶ್ವವಿದ್ಯಾನಿಲಯದಂತೆಯೇ ವಲ್ಲಭಿವಿದ್ಯಾಪೀಠವೂ ವಿದೇಶಿ ಧಾಳಿಗಳಿಂದಾಗಿ ಕಾಲಗರ್ಭದಲ್ಲಿ ಕಣ್ಮರೆಯಾಯಿತು.

## 57.3.4. ವಿಕ್ರಮಶೀಲಾ ವಿಶ್ವವಿದ್ಯಾನಿಲಯ

ಪ್ರಾಚೀನ ಭಾರತದ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಾದ ನಳಂದ ಮತ್ತು ವಲ್ಲಭಿ ವಿಶ್ವವಿದ್ಯಾನಿಲಯಗಳಂತೆ ವಿಕ್ರಮಶೀಲ ವಿಶ್ವವಿದ್ಯಾನಿಲಯವೂ ಒಂದು. ಧರ್ಮಪಾಲನೆಂಬುವವನು ಕ್ರಿ.ಶ.769-815ರ ನಡುವೆ ಇದನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಈ ವಿದ್ಯಾಲಯವು ಇಂದಿನ ಬಿಹಾರದ ಭಾಗಲ್ಪುರ ಜಿಲ್ಲೆಯ ಸಮೀಪದ ಗಂಗಾನದಿಯ ದಕ್ಷಣದ ದಂಡೆಯ ಮೇಲೆ ಸ್ಥಾಪಿತವಾಗಿತ್ತು. ಅನೇಕ ಅಂಶಗಳಲ್ಲಿ ಇದು ನಳಂದ ವಿಶ್ವವಿದ್ಯಾನಿಲಯವನ್ನು ಹೋಲುತ್ತದೆ. ಬೌದ್ಧ ತತ್ವವನ್ನು ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗುತ್ತಿತ್ತು. ವಿಕ್ರಮಶೀಲಾದಲ್ಲಿ ಆರು ಭವನಗಳಿದ್ದು ಅಷ್ಟೇ ಸಂಖ್ಯೆಯ ದ್ವಾರ ಪಂಡಿತರು, ಪ್ರಾಧ್ಯಾಪಕರುಗಳು ಅವುಗಳ ನಿರ್ವಹಣೆಯನ್ನು ಹೊಂದಿದ್ದರು. ಇಲ್ಲಿ ಹೆಚ್ಚಾಗಿ ನೇಪಾಳದ ಪಂಡಿತರಿದ್ದರು. ಬಂಗಾಳದ ದಿಪಂಕರಶ್ರೀಜಾನನೂ, ಹೊಳೆವ ನಕ್ಷತ್ರದಂತಿದ್ದ ಆಲಿಯಾಸ್ ಅತಿಸನೂ ಇಲ್ಲಿದ್ದರು. ಇವನು ಸುಮಾತ್ರ ದೇಶಕ್ಕೆ ಹೋಗಿ ಬೌದ್ಧ ಧರ್ಮವನ್ನು ಅಭ್ಯಿಸಿಸಿ ಬಂದನು. ಹನ್ನೊಂದನೇ ಶತಮಾನದಲ್ಲಿದ್ದ ನಯಪಾಲನು ಅತಿಸನ ವಿದ್ವತ್ತನ್ನು ಗುರುತಿಸಿ ವಿಕ್ರಮಶೀಲಾದ ಮುಖ್ಯಸ್ಥನನ್ನಾಗಿ ನೇಮಿಸಿದನು. ಬೌದ್ಧತತ್ವದ ಬಗ್ಗೆ ಅಪಾರ ಜ್ಞಾನ ಸಂಪಾದಿಸಿದ್ದ ಇವನು ನೇಪಾಳ ಮತ್ತು ಟಿಬೆಟ್‌ಗಳಿಗೆ ಭೇಟಿ ಇತ್ತಿದ್ದನು. ಇವನು ಮಹಾಯಾನ ಪಂಥದ ಬಗ್ಗೆ ಮತ್ತು ಬೌದ್ಧ ತಂತ್ರಶಾಸ್ತ್ರವನ್ನು ಕುರಿತು ಕೃತಿಗಳನ್ನು ರಚಿಸಿದನು. ವಿಕ್ರಮಶೀಲಾದ ಆರು ಮಂದಿ 'ದ್ವಾರ ಪಾಲಕರು'

ಅಥಾವಾ ಆರು ಮಂದಿ ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಪ್ರವೇಶ ಬಯಸುವ ವ್ಯಕ್ತಿಗಳ ಪ್ರವೇಶ ಪರೀಕ್ಷೆಯನ್ನು ನಡೆಸುತ್ತಿದ್ದರು. ಇವರಲ್ಲದೇ ಪ್ರತಿಯೊಂದು ಕಾಲೇಜಿನಲ್ಲಿ 108 ಪ್ರಾಧ್ಯಾಪಕರಿದ್ದರು. ಅವರಲ್ಲಿಯೇ ಆರು ಜನರಿದ್ದ ಒಂದು ಸಮಿತಿಯನ್ನು ಮಾಡಲಾಗಿತ್ತು. ಅದಕ್ಕೆ ಉಪಕುಲಾಧಿಪತಿಗಳು ಅಧ್ಯಕ್ಷರಾಗಿರುತ್ತಿದ್ದರು. ಈ ಸಮಿತಿಯೇ ಈ ವಿಶ್ವವಿದ್ಯಾನಿಲಯ ಆಡಳಿತ ವಿಷಯಗಳನ್ನು ನೋಡಿಕೊಳ್ಳತಿತ್ತು. ಅತ್ಯುತ್ತಮವಾದ ವಿದ್ಯಾರ್ಥಿಗಳಿಗೆ 'ಪಂಡಿತ' ಎಂಬ ಬಿರುದನ್ನು ರಾಜನು ನೀಡುತ್ತಿದ್ದನು. ಈ ವಿಶ್ವವಿದ್ಯಾನಿಲಯದ ಪ್ರಧಾನ ಗೋಡೆಗಳ ಮೇಲೆ ನಾಗಾರ್ಜುನ ಮತ್ತು ಅತಿಶರ ಚಿತ್ರಗಳನ್ನು ಬಿಡಿಸಿ ಹಾಕಲಾಗಿತ್ತು. ಈ ಚಿತ್ರಗಳು ವಿದ್ಯಾರ್ಥಿಗಳಿಗೆ ಉತ್ತೇಜನಕಾರಿಯಾಗಿದ್ದವು. ಇಲ್ಲಿಯೂ ಸಹ -ಶಿಕ್ಷಣಕ್ಕೆ ಅವಕಾಶವಿತ್ತು. ವಿಕ್ರಮಶೀಲ ವಿಶ್ವವಿದ್ಯಾನಿಲಯವು ನಳಂದಾದೊಡನೆ ಅನೇಕ ಹೋಲಿಕೆಗಳನ್ನು ಹೊಂದಿತ್ತು. ಆದರೆ ವಿಕ್ರಮಶಿಲಾದಲ್ಲಿ ನಳಂದಾಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿತ್ತು . ಹನ್ನೆರಡನೇ ಶತಮಾನದಲ್ಲಿ ಬಂದ ಮುಸ್ಲಿಂ ಧಾಳಿಕಾರರು ನಳಂದದಂತೆ ಇದನ್ನು ನಾಶಗೈದರು.

## 57.3.5. ಒದಂತಪುರಿ ಮತ್ತು ಇತರ ವಿಶ್ವವಿದ್ಯಾನಿಲಯಗಳು

ನಳಂದ ವಿಶ್ವವಿದ್ಯಾನಿಲಯದ ಸಮೀಪದಲ್ಲೇ **ಒದಂತಪುರಿ** ವಿಶ್ವವಿದ್ಯಾನಿಲಯವನ್ನು ಕ್ರಿ.ಶ. 8ನೇ ಶತಮಾನದಲ್ಲಿ ಬಂಗಾಳದ ಪಾಲಸಂತತಿಯ ದೊರೆ ಒಂದನೇ ಗೋಪಾಲನು ನಳಂದ ವಿದ್ಯಾನಿಲಯದ ಆಚಾರ್ಯರರನ್ನು ಆಹ್ವಾನಿಸಿ ಸ್ಥಾಪಿಸಿದನು ಒದಂತಪುರಿ ವಿದ್ಯಾಲಯದಲ್ಲಿ ದೊಡ್ಡ ಪುಸ್ತಕ ಭಂಡಾರವೊಂದಿದ್ದು, ವೈದಿಕ ಮತ್ತು ಬೌದ್ಧ ತತ್ವಗಳಿಗೆ ಸಂಬಂದಿಸಿದ ಹಲವಾರು ಗ್ರಂಥಗಳಲ್ಲಿದ್ದವು. ಮುಸಲ್ಮಾನರ ದಾಳಿಯಿಂದ ಇಲ್ಲಿನ ಬೌದ್ಧವಿಹಾರಗಳೊಂದಿಗೆ ಪುಸ್ತಕ ಭಂಡಾರವು ನಾಶಹೊಂದಿದುದಾಗಿ ತಿಳಿದುಬರುತ್ತದೆ.

ಒದಂತಪುರಿಯಂತೆ ಇಂದಿನ ಬಿಹಾರದಲ್ಲಿರುವ **'ಮಿಥಿಲವು'** ಹಿಂದೆ ಮಹಾನ್ ಶೈಕ್ಷಣಿಕ ಕೇಂದ್ರವಾಗಿದ್ದಿತು. ಇದರ ಮೊದಲ ಹೆಸರು ವಿದೇಹ. ಇಲ್ಲಿನ ದೊರೆ ಜನಕ ಮಹಾರಾಜನು ವಿದ್ಯಾಭಿಮಾನಿ ಮತ್ತು ಘನ ವಿದ್ವಾಂಸ ಹಾಗೂ ದಾರ್ಶನಿಕನಾಗಿದ್ದನು. ದೇಶದ ವಿವಿಧ ಭಾಗಗಳಿಂದ ವಿದ್ವಾಂಸರನ್ನು ಮತ್ತು ದಾರ್ಶನಿಕರನ್ನು ಆಹ್ವಾನಿಸಿ ಸುಧೀರ್ಘ ಚರ್ಚೆ ನಡೆಸಲಾಗುತಿತ್ತು. ಜನಕ ಮಹಾರಾಜನ ಪ್ರೋತ್ಸಾಹದಿಂದ ವಿಥಿಲ ವಿದ್ಯಾಲಯವು ಒಂದು ಪ್ರಮುಖ ಶೈಕ್ಷಣಿಕ ಕೇಂದ್ರವಾಗಿ ಪರಿಣಮಿಸತೊಡಗಿತ್ತು. ಕ್ರಿ.ಶ.ಹನ್ನೆರಡನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ ಇದರ ಕೀರ್ತಿ ಎಲ್ಲೆಡೆ ವ್ಯಾಪಿಸಿತ್ತು.

**ಮಿಥಿಲ ವಿದ್ಯಾಲಯ**ದಲ್ಲಿ ವಿದ್ಯಾರ್ಥಿಯ ವಿದ್ಯಾರ್ಜನೆಯು ಅಂತಿಮ ಘಟ್ಟದಲ್ಲಿ ಸಲಕಪರೀಕ್ಷ ಎಂಬ ಕಠಿಣ ಪರೀಕ್ಷೆಯನ್ನು ನಡೆಸಲಾಗುತ್ತಿತ್ತು. ವಿದ್ವಾಂಸರ ಪರೀಕ್ಷೆಯಲ್ಲಿ ಗೆದ್ದ ವಾಸುದೇವನೆಂಬ ವಿದ್ವಾಂಸನಿಗೆ 'ಸಾರ್ವಭೌಮ'ನೆಂಬ ಬಿರುದನ್ನು ವಲ್ಲಭಿ ವಿಶ್ವವಿದ್ಯಾನಿಲಯದಿಂದ ನೀಡಲಾಗಿತ್ತು. ಹೀಗೆ ಹಲವಾರು ವಿದ್ಯಾರ್ಥಿಗಳು ಮಿಥಿಲ ವಿದ್ಯಾಲಯದಲ್ಲಿ ಜ್ಞಾನಾರ್ಜನೆ ಮಾಡಿ ಪದವಿ ಗಳಿಸುತ್ತಿದ್ದರು. ಯಶಸ್ವಿಯಾಗಿ ಪದವಿ ಗಳಿಸಿದ ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡಿದ ಗ್ರಂಥಗಳನ್ನು ವಿದ್ಯಾಲಯದ 'ಪುಸ್ತಕಭಂಡಾರ'ದಲ್ಲಿಯೇ ಬಿಟ್ಟು, ಅಲ್ಲಿ ಜ್ಞಾನಾರ್ಜನೆಗೆ ಬರುವವರಿಗೆ ನೆರವಾಗುತ್ತಿದ್ದರು. ಮಿಥಿಲದಂತಯೇ ಉತ್ತರಭಾರತದಲ್ಲಿ ಇನ್ನೂ ಹಲವಾರು ವಿದ್ಯಾಲಯಗಳು ಸ್ಥಾಪಿತಗೊಂಡಿದ್ದು ವಿದ್ಯಾರ್ಜನೆಯನ್ನು ನೀಡುತ್ತಿದ್ದವು.

ನಳಂದ, ವಲ್ಲಭಿ, ವಿಕ್ರಮಶೀಲ, ಒದಾಂತಪುರಿ ವಿದ್ಯಾಪೀಠಗಳಂತೆ **ಕಂಚಿ ವಿಶ್ವವಿದ್ಯಾನಿಲಯವು** ದಕ್ಷಿಣ ಭಾರತದಲ್ಲಿ ಸ್ಥಾಪಿತಗೊಂಡಿದ್ದ ಹೆಸರಾಂತ ಪ್ರಾಚೀನ ವಿದ್ಯಾಕೇಂದ್ರವಾಗಿತ್ತು. ಕ್ರಿ.ಶ.ಮೂರನೇ ಶತಮಾನದಲ್ಲಿ ಈ ವಿದ್ಯಾ ಪೀಠವು ಅಸ್ತಿತ್ವಕ್ಕೆ ಬಂದಂತೆ ತಿಳಿದು ಬರುತ್ತದೆ. ಪಲ್ಲವರ ದೊರೆ ವಿಜಯ ನೃಪತುಂಗವರ್ಮನ ಕಾಲದಲ್ಲಿ ವೈದಿಕ ವಿದ್ಯಾಕೇಂದ್ರವಾಗಿ ಕಂಚಿ ಏಳಿಗೆಗೆ ಬಂದಿತು. ಈ ವಿದ್ಯಾಕೇಂದ್ರದ ಉಸ್ತುವಾರಿಗೆ ಮೂರು ಗ್ರಾಮಗಳ ಆದಾಯವನ್ನು ಮೀಸಲಿಡಲಾಗಿತ್ತು. ಕಾಲಾನಂತರ ವಿದ್ಯಾರ್ಜನೆಗೆ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಬರುತ್ತಿದ್ದಂತೆ ಇದು ಮಹಾವಿದ್ಯಾಕೇಂದ್ರವಾಗಿ ಅಭಿವೃದ್ಧಿಗೊಂಡಿತು. ಪ್ರಾಚೀನ ಕರ್ನಾಟಕದ ಕದಂಬವಂಶ ಸ್ಥಾಪಕ ಮಯೂರಶರ್ಮನು ಈ ವಿದ್ಯಾನಿಲಯದಲ್ಲಿ ಜ್ಞಾನಾರ್ಜನೆ ಮಾಡಿದನು. ನಳಂದ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಯಾಗಿದ್ದ ಧರ್ಮಪಾಲನಾದ ಬೌದ್ಧ ವಿದ್ವಾಂಸನು ಕಂಚಿಯವನು. ಮತ್ತೊಬ್ಬ ವಿದ್ವಾಂಸ ದಿಜ್ಞಾಗನು ಕೂಡ ಕಂಚಿಯಲ್ಲಿ ಕೆಲವು ಕಾಲ ವಿದ್ಯಾರ್ಜನೆಗೆ ಬಂದಿದ್ದನು. ಅಲ್ಲಿ ಸಂಸ್ಕೃತ ಸಾಹಿತ್ಯ, ವೇದಗಳು, ವ್ಯಾಕರಣ, ತರ್ಕ ಮೊದಲಾದ ವಿಷಯಗಳ ಅಧ್ಯಯನಕ್ಕೆ ಈ ವಿದ್ಯಾಲಯದಲ್ಲಿ ಪ್ರಾಧಾನ್ಯತೆ ನೀಡಲಾಗಿತ್ತು. ಕಂಚಿ ವಿದ್ಯಾಲಯದ ಮೂಲಕವೇ ಸಂಸ್ಕೃತ ಶಿಕ್ಷಣದ ಆರಂಭವಾಯಿತೆಂದು ತಿಳಿದುಬರುತ್ತದೆ. ಕಂಚಿಯಂತೆ ಮಾನ್ಯಖೇಟವೂ ಕೂಡ ದಕ್ಷಿಣ ಭಾರತದ ಪ್ರಾಚೀನ ಕಾಲದ ವಿದ್ಯಾಕೇಂದ್ರವಾಗಿತ್ತು. ಮಾನ್ಯಖೇಟವು

ರಾಷ್ಟ್ರಕೂಟರ ರಾಜಧಾನಿಯಾದರೂ ಇಲ್ಲಿ ಬ್ರಾಹ್ಮಣ ವಿದ್ವಾಂಸರು ವಿವಿಧ ವಿಷಯಗಳ ಅಧ್ಯಯನ ಮತ್ತು ಅಧ್ಯಾಪನ ಕಾರ್ಯವನ್ನು ಮಾಡುತ್ತಿದ್ದರು. ಹೀಗೆ ನಳಂದದಂತಹ ಬಹು ಪ್ರಸಿದ್ಧವಾದ ವಿಶ್ವವಿದ್ಯಾನಿಲಯದಿಂದ ಹಿಡಿದು ಮಾನ್ಯಖೇಟ, ಅಗ್ರಹಾರ, ದೇವಾಲಯಗಳಂತಹ ವಿದ್ಯಾಕೇಂದ್ರಗಳೂ ಜ್ಞಾನದಾಹ ತಣಿಸಿಕೊಳ್ಳಲು ಬಂದ ಜ್ಞಾನಾರ್ತಿಗಳಿಗೆ ವಿದ್ಯಾದಾನ ಮಾಡುತ್ತಿದ್ದವು.

ಉತ್ತರ ಭಾರತದಲ್ಲಿರುವಂತೆಯೇ ದಕ್ಷಿಣ ಭಾರತದಲ್ಲೂ ಹಲವಾರು ದೇವಾಲಯಗಳು ಮತ್ತು ಮಠಗಳು ಪ್ರಾಚೀನ ಕಾಲದಲ್ಲಿ ವಿದ್ಯಾಪ್ರಚಾರ ಕಾರ್ಯ ಮಾಡುತ್ತಿದ್ದವು. ಬೌದ್ಧರ ಸಂಘ ಅಥವಾ ವಿಹಾರಗಳ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ಮಠಗಳು ಮತ್ತು ದೇವಾಲಯಗಳು ಸ್ಥಾಪನೆಗೊಂಡವು. ರಾಷ್ಟ್ರಕೂಟ ಅರಸ ಮೂರನೇ ಕೃಷ್ಣನ ಮಂತ್ರಿ ನಾರಾಯಣನು ಬಿಜಾಪುರ ಜಿಲ್ಲೆಯ ಸಾತೊಟಗಿಯಲ್ಲಿ ತ್ರಯಿ-ಪುರಷ ಎಂಬ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯದ ಹಜಾರದಲ್ಲಿ ಸಂಸ್ಕೃತ ಕಾಲೇಜೊಂದನ್ನು ಆರಂಭಿಸಲಾಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದುದರಿಂದ ಮುಂದೆ ಸುಮಾರು ಇಪ್ಪತ್ತೇಳು ವಿದ್ಯಾರ್ಥಿನಿಲಯಗಳನ್ನು ತೆರೆಯಬೇಕಾಯಿತ್ತೆಂದು ತಿಳಿದು ಬರುತ್ತದೆ. ದಕ್ಷಿಣ ಆರ್ಕಾಟ್‌ನ ಎನ್ನಾಯಿರಮ್‌ನಲ್ಲಿಯೂ ಕೂಡ ಕ್ರಿ.ಶ.ಹನ್ನೊಂದನೇ ಶತಮಾನದಲ್ಲಿ ಒಂದು ವೈದಿಕ ಕಾಲೇಜನ್ನು ನಿರ್ವಹಣೆ ಮಾಡಲಾಗುತ್ತಿತ್ತು. ಅಲ್ಲಿನ ಅಧ್ಯಾಪಕರಿಗೆ ಅವರ ಅಂತಸ್ತು ಹಾಗೂ ವಿಷಯಗಳ ಮಹತ್ವಕೆ ತಕ್ಕಂತೆ ಆದ್ಯತೆ ನೀಡಲಾಗುತ್ತಿತ್ತು. ಹೀಗೆ ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ವಿವಿಧ ಅರಸರ ಕಾಲದಲ್ಲಿ ಅನೇಕ ಅಗ್ರಹಾರಗಳು, ಮಠಗಳು, ದೇವಾಲಯಗಳು,ಘುಟಿಕಗಳು ಮತ್ತು ಬ್ರಹ್ಮಪುರಿಗಳು, ಸಣ್ಣ ಸಣ್ಣ ವಿದ್ಯಾಕೇಂದ್ರಗಳಾಗಿದ್ದು ಜ್ಞಾನಾರ್ಥಿಗಳಿಗೆ ವಿದ್ಯಾರ್ಜನೆ ನೀಡುತ್ತಿದ್ದವು. ದಕ್ಷಿಣ ಭಾರತದಲ್ಲಿ ಕಂಚಿ ಘುಟಿಕಾಸ್ಥಾನ ಅಥವಾ ವಿದ್ಯಾಪೀಠದಂತೆ, ಬೆಳ್ಳಿಗಾಮೆ, ಬನವಾಸಿ, ಬೆಳಗಾಂ, ಮೊದಲಾದವು ಪ್ರಾಚೀನ ವಿದ್ಯಾಕೇಂದ್ರಗಳಾಗಿದ್ದವು. ಆದರೆ ಇಲ್ಲಿ ಅಂದು ಶಿಕ್ಷಣ ಸಾರ್ವತ್ರಿಕವಾಗಿರಲಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ನೆಲೆಸಿದ ವಿದ್ಯಾವಂತ ಬ್ರಾಹ್ಮಣರು ಉನ್ನತ ವರ್ಗದವರಿಗೆ ಮಾತ್ರ ಶಿಕ್ಷಣ ನೀಡುತ್ತಿದ್ದರು.

## 57.4 ಘುಟಕದ ಸಾರಾಂಶ

* ಪ್ರಾಚೀನ ಭಾರತದಲ್ಲಿದ್ದ ವಿದ್ಯಾಭ್ಯಾಸ ಪದ್ಧತಿ ಅಧ್ಯಯನಕ್ಕೆ ವಿವಿಧ ಆಕರಗಳು ಲಭ್ಯವಿದೆ.
* ಪ್ರಾಚೀನ ಭಾರತದಲ್ಲಿ ವೈದಿಕ ಮತ್ತು ಬೌದ್ಧ ಶಿಕ್ಷಣ ಪದ್ಧತಿಗಳು ಜಾರಿಯಲ್ಲಿದ್ದವು.
* ಶಿಕ್ಷಣವು ಧರ್ಮ ಹಾಗೂ ಸಾಹಿತ್ಯ ಪ್ರಧಾನವಾದುದಾಗಿದ್ದಿತು.
* ವೈದಿಕ ಶಿಕ್ಷಣವು ಬ್ರಾಹ್ಮಣರು ಹಾಗೂ ರಾಜಕೂಮಾರರಿಗೆ ಮೀಸಲಾಗಿದ್ದಿತು.
* ಬೌದ್ಧರ ಶಿಕ್ಷಣ ಕ್ರಮದಲ್ಲಿ ಎಲ್ಲಾ ಜಾತಿಮತಿಯರಿಗೂ ವರ್ಣಬೇಧವಿಲ್ಲದೆ ವಿದ್ಯೆಕಲಿಯಲು ಅವಕಾಶವಿತ್ತು.
* ವೈದಿಕ ಮತ್ತು ಬೌದ್ಧ ಶಿಕ್ಷಣ ಪದ್ಧತಿಯಲ್ಲಿ ಪ್ರಧಾನವಾಗಿ ಧಾರ್ಮಿಕ ಗ್ರಂಥಗಳ ಮತ್ತು ತತ್ವಗಳ ಬಗೆಗೆ ವಿದ್ಯಾರ್ಜನೆ ನೀಡಲಾಗುತ್ತಿತ್ತಾದರೂ, ಇತರ ವಿಷಯಗಳೂ ವಿದ್ಯಾಭ್ಯಾಸ ಕ್ರಮದಲ್ಲಿಇದ್ದವು.
* ಕಾಲಾನುಕ್ರಮೇಣ ರಾಜಮಹಾರಾಜರು ಆಶ್ರಯದಿಂದ ನಳಂದ, ವಿಕ್ರಮಾಶೀಲ,ವಲ್ಲಭಿ, ಕಂಚಿಯಂತಹ ಪ್ರಸಿದ್ಧ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದವು.
* ನಳಂದ ವಿಶ್ವವಿದ್ಯಾನಿಲಯವು ಪ್ರಾಚೀನ ಎಲ್ಲಾ ವಿದ್ಯಾನಿಲಯಗಳಿಗಿಂತ ಅತ್ಯಂತ ಪ್ರಸಿದ್ದವಾಗಿದ್ದಿತು. ಇಲ್ಲಿ ವಿದೇಶಿ ಪ್ರವಾಸಿಗರಾದ ಹೂಯನ್‌ತ್ಸಾಂಗ್ ಮತ್ತು ಇತ್ಸಿಂಗರು ಹಲವಾರು ವರ್ಷಗಳ ಕಾಲ ತಂಗಿದ್ದು ವಿದ್ಯಾರ್ಜನೆ ಮಾಡಿದರು.
* ಈ ವಿದ್ಯಾಲಯಗಳಿಗೆ ಜ್ಞಾನಾರ್ಜನೆಗೆ ಬಂದ ವಿದೇಶಿಗರು ಭಾರತೀಯ ಸಂಸ್ಕೃತಿ ದೇಶವಿದೇಶಗಳಲ್ಲಿ ಹರಡುವಂತೆ ಮಾಡಿದರು.

## 57.5 ಹೆಚ್ಚುವರಿ ಅಭ್ಯಾಸನೀಯ ಗ್ರಂಥಗಳು


| | | | |
|---|---|---|---|
| 1 | ರಂಗಸ್ವಾಮಯ್ಯ .ಜಿ.ಆರ್. | - | ಪ್ರಾಚೀನ ಭಾರತ |
| 2 | ಡಾ.ಕೆ.ಸದಾಶಿವ | - | ಪ್ರಾಚೀನ ಭಾರತದ ಇತಿಹಾಸ |
| 3 | ಭಾರತೀಯ ವಿದ್ಯಾಭವನ | - | ಅಭಿಜಾತಯುಗ(ಗುಪ್ತಯುಗ) |
| 4 | H.D.Sankalia | - | **The Nalanda University** |
| 5 | B.N.Lunia | - | **Evolution of Indian culture.** |


**ಡಾ. ಮಹಾದೇವಿ**

## ಟಿಪ್ಪಣಿಗಳು

ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

● **HEAD QUARTERS**
★ **Total Study Centres : 123**
♣ **Regional Centres : 21**
❄ **B.Ed Study Centres : 10**
✢ **M.Ed Study Centres : 06**


Feedback : improvement, revision and launching of new programmes
Multimedia learning material
Academic and other support
Evaluation - methods and modes
STUDENT
INSTRUCTIONAL SYSTEM